ಮಾನವಿಕ ಕರ್ಣಾಟಕ

ಸಂಪುಟ ೩, ಸಂಚಿಕೆ ೧

ಮೈಸೂರು
ಮೈಸೂರು ವಿಶ್ವವಿದ್ಯಾನಿಲಯ
೧೯೭೨

ಲೇಖಕರಿಗೆ ಸೂಚನೆಗಳು

೧ ಮಾನವಿಕ ಶಾಸ್ತ್ರ ವಿಷಯಗಳಿಗೆ ಸಂಬಂಧಿಸಿದ ಸ್ವತಂತ್ರ ಅಥವಾ ಅನುವಾದಿತ ಲೇಖನಗಳನ್ನು 'ಮಾನವಿಕ ಕರ್ಣಾಟಕ'ದಲ್ಲಿ ಪ್ರಕಟಿಸಲಾಗುವುದು. ಲೇಖನ ಅನುವಾದವಾಗಿದ್ದರೆ ಮೂಲ ಲೇಖಕರ ಮತ್ತು ಲೇಖನದ ಹೆಸರುಗಳನ್ನೂ ಲೇಖನದ ಆಕರವನ್ನೂ ಸೂಚಿಸಬೇಕಲ್ಲದೆ ಮೂಲ ಲೇಖಕರ ಅಥವಾ ಪ್ರಕಾಶಕರ ಸಮ್ಮತಿಯನ್ನೂ ಲೇಖನದೊಂದಿಗೆ ಕಳುಹಿಸಬೇಕು.

೨ ಲೇಖನವನ್ನು ಕಾಗದದ ಒಂದೇ ಬದಿಯಲ್ಲಿ ಸ್ಪಷ್ಟವಾಗಿ ಬರೆದಿರಬೇಕು; ಅಥವಾ ಟೈಪು ಮಾಡಿರಬೇಕು. ಲೇಖಕರು ತಮ್ಮ ಲೇಖನದೊಂದಿಗೆ ತಮ್ಮ ಸಂಕ್ಷಿಪ್ತ ಪರಿಚಯವನ್ನು ಕಳುಹಿಸಿಕೊಡಬೇಕು.

೩ ಲೇಖನಕ್ಕೆ ಆವಶ್ಯಕವಾದ ಚಿತ್ರಗಳಿದ್ದರೆ ಅವನ್ನು ಚಿತ್ರಕಾರರಿಂದ ಇಂಡಿಯನ್ ಇಂಕಿನಲ್ಲಿ ಬರೆಸಿ ಕಳುಹಿಸಿಕೊಡಬೇಕು. ಇದು ಸಾಧ್ಯವಾಗದಿದ್ದರೆ ಯಾವುದಾದರೂ ಪ್ರಕಟಿತ ಪುಸ್ತಕದಲ್ಲಿರುವ ಚಿತ್ರಗಳನ್ನು ಸೂಚಿಸಬಹುದು; ಅವುಗಳಲ್ಲಿ ಬದಲಾವಣೆಗಳೇನಾದರೂ ಆವಶ್ಯವಿದ್ದರೆ ಅವನ್ನೂ ಸೂಚಿಸಬೇಕು

೪ ಸ್ವೀಕೃತವಾಗದ ಲೇಖನಗಳನ್ನು ಹಿಂದಕ್ಕೆ ಪಡೆಯಬಯಸುವವರು ಈ ಬಗ್ಗೆ ತಿಳಿಸಬೇಕಲ್ಲದೆ ಇದಕ್ಕೆ ಸಾಕಷ್ಟು ಅಂಚೆ ಚೀಟಿ ಕಳುಹಿಸಿಕೊಡಬೇಕು.

೫ ಅಚ್ಚಾದ ಲೇಖನದ ೨೫ ಪ್ರತಿಗಳನ್ನು ಅದರ ಲೇಖಕರಿಗೆ ಒದಗಿಸಲಾಗುವುದು. ಹೆಚ್ಚು ಪ್ರತಿಗಳು ಬೇಕಾಗಿದ್ದರೆ ಮೊದಲೇ ತಿಳಿಸಬೇಕು. ಅದಕ್ಕೆ ತಗಲುವ ವೆಚ್ಚವನ್ನು ಲೇಖಕರೇ ವಹಿಸಿಕೊಳ್ಳಬೇಕು.

೬ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಿಗೆ ಸಂಬಂಧಿಸಿದಂತೆ ವಾಚಕರಿಂದ ಬರುವ ವಿಚಾರಪ್ರಚೋದಕವಾದ ಪತ್ರಗಳಿಗೆ ಸ್ವಾಗತವುಂಟು. ಇವುಗಳನ್ನು ಪ್ರಕಟಿಸುವ, ಬಿಡುವ ಅಥವಾ ಸೂಕ್ತ ಬದಲಾವಣೆ ಮಾಡುವ ಸ್ವಾತಂತ್ರ್ಯ ಸಂಪಾದಕರಿಗೆ ಸೇರಿದೆ.

೭ ಮಾನವಿಕ ವಿಷಯಗಳಿಗೆ ಸಂಬಂಧಿಸಿದ ಕನ್ನಡ ಅಥವಾ ಇಂಗ್ಲಿಷ್ ಪುಸ್ತಕಗಳನ್ನು ವಿಮರ್ಶೆಗಾಗಿ ಕಳುಹಿಸಬಯಸುವವರು ಅವುಗಳ ಎರಡು ಪ್ರತಿ ಕಳುಹಿಸಿಕೊಡಬೇಕು.

೮ ಲೇಖನಗಳನ್ನೂ ವಿಮರ್ಶೆಗಾಗಿ ಪುಸ್ತಕಗಳನ್ನೂ ಕಳುಹಿಸುವವರು ಸಂಪಾದಕರು, ಮಾನವಿಕ ಕರ್ಣಾಟಕ, ಪ್ರಸಾರಾಂಗ, ಮಾನಸ ಗಂಗೋತ್ರಿ, ಮೈಸೂರು–೫೭೦೦೦೬ ಎಂಬ ವಿಳಾಸಕ್ಕೆ ಕಳುಹಿಸಬೇಕು.

ಮಾನವಿಕ ಕರ್ಣಾಟಕ

ಸಂಪುಟ ೩ ಸಂಚಿಕೆ ೧

ನವೆಂಬರ್ ಸಂಚಿಕೆ

ಮೈಸೂರು
ಮೈಸೂರು ವಿಶ್ವವಿದ್ಯಾನಿಲಯ
೧೯೭೨

MANAVIKA KARNATAKA, Kannada quarterly of the University of Mysore. Volume 3, Number 1, November 1972. Edited by H. S. Krishnaswamy Iyengar and Dr. A. V. Narasimha Murthy

ಪ್ರಧಾನ ಸಂಪಾದಕರು

ಡಾ. ಹಾ. ಮಾ. ನಾಯಕ

ಸಂಪಾದಕರು

ಎಚ್. ಎಸ್. ಕೃಷ್ಣಸ್ವಾಮಿ ಅಯ್ಯಂಗಾರ್

ಡಾ. ಎ. ವಿ. ನರಸಿಂಹಮೂರ್ತಿ

ಪ್ರಕಾಶಕರು

ಡಾ. ಪ್ರಭುಶಂಕರ

ಡೈರೆಕ್ಟರ್, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ

ಮುದ್ರಕರು

ಎಚ್. ನರಸಣ್ಣ

ಡೈರೆಕ್ಟರ್, ಮೈಸೂರು ವಿಶ್ವವಿದ್ಯಾನಿಲಯ ಮುದ್ರಣಾಲಯ

ವಿಷಯಸೂಚಿ

ಡಾ. ಎ. ವಿ. ನರಸಿಂಹಮೂರ್ತಿ

ಡಾ. ಎಂ. ಶೇಷಾದ್ರಿ

ಮೈಸೂರಿನ ಪ್ರಾಗಿತಿಹಾಸವನ್ನು ಜ್ಞಾಪಿಸಿಕೊಂಡಾಗ ನಮಗೆ ಮೊದಲು ಹೊಳೆಯುವುದು ಡಾ. ಶೇಷಾದ್ರಿಯವರ ಹೆಸರು. ಮೊಟ್ಟಮೊದಲನೆಯ ಬಾರಿಗೆ ಈ ವಿಷಯದಲ್ಲಿ ವ್ಯವಸ್ಥಿತ ಅಧ್ಯಯನವನ್ನು ಕೈಗೊಂಡು ಬಹು ಮುಖ್ಯವಾದ ಗ್ರಂಥವನ್ನು ಪ್ರಕಟಿಸಿದವರು ಇವರು. ಈ ಗ್ರಂಥ ಮೈಸೂರಿನ ಇತಿಹಾಸಪೂರ್ವ ಸಂಸ್ಕೃತಿಗಳ ಅಧ್ಯಯನಕ್ಕೆ ನಾಂದಿಯಾಯಿತು. ಸಂಸ್ಕೃತಿ ಅಥವಾ ಇತಿಹಾಸವೆಂದರೆ ಕೇವಲ ಸಾಹಿತ್ಯಕ ಆಕರಗಳ ಅಧ್ಯಯನ ಮತ್ತು ಶಾಸನಗಳ ಸಂಶೋಧನೆ; ಮಡಕೆ ಚೂರುಗಳು ಮತ್ತು ಕಲ್ಲಿನ ಆಯುಧಗಳು ಮಾನವನ ಸಂಸ್ಕೃತಿಯ ಅಂಗಗಳೇ ಅಲ್ಲವೆಂಬ ಕಾಲವೊಂದು ಇತ್ತೀಚಿನ ವರೆಗೂ ಇತ್ತು. ಅಂಥ ಸಮಯದಲ್ಲಿ ಇತಿಹಾಸದ ವಿದ್ಯಾರ್ಥಿಗಳಾಗಿದ್ದ ಶೇಷಾದ್ರಿಯವರು ಬಹು ಧೈರ್ಯದಿಂದ ಪುರಾತತ್ವವನ್ನು ತಮ್ಮ ಸಂಶೋಧನೆಯ ವಿಷಯವನ್ನಾಗಿ ಆರಿಸಿಕೊಂಡರು. ಅವರ ಆಯ್ಕೆ ಸಾರ್ಥಕವಾಯಿತು ಮತ್ತು ಅದರೊಂದಿಗೆ ಮೈಸೂರಿನ ಪುರಾತತ್ವ ಅಭಿವೃದ್ಧಿ ಹೊಂದಿತು.

ಡಾ. ಶೇಷಾದ್ರಿಯವರು ತುಮಕೂರು ಜಿಲ್ಲೆಯ ಮಾಯಸಂದ್ರದಲ್ಲಿ 1914ರ ಅಕ್ಟೋಬರ್ 14 ರಂದು ಜನಿಸಿದರು. ತಮ್ಮ ಬಾಲ್ಯದಶೆಯನ್ನು ಇಲ್ಲಿ ಕಳೆದು ಮಹಾರಾಜ ಕಾಲೇಜಿಗೆ 1934ರಲ್ಲಿ ಸೇರಿದರು. ಇತಿಹಾಸವನ್ನು ಪ್ರಧಾನವಿಷಯವಾಗಿ ಆರಿಸಿಕೊಂಡು 1937ರಲ್ಲಿ ಬಿ.ಎ. ಡಿಗ್ರಿಯನ್ನು ಉತ್ತಮ ದರ್ಜೆಯಲ್ಲಿ ಪಡೆದು ಮೂರು ಚಿನ್ನದ ಪದಕಗಳನ್ನು ಗಳಿಸಿದರು. ಅನಂತರ ಅದೇ ಕಾಲೇಜಿನಲ್ಲಿ 1938ರಲ್ಲಿ ಎಂ.ಎ. ಪದವಿಯನ್ನು ಗಳಿಸಿಕೊಂಡರು. ಪ್ರೌಢಶಾಲೆಯೊಂದರಲ್ಲಿ ಅಧ್ಯಾಪಕರಾಗಿ ಜೀವನವನ್ನು ಪ್ರಾರಂಭಿಸಿದ ಶೇಷಾದ್ರಿಯವರು 1941ರಲ್ಲಿ ಮಹಾರಾಜ ಕಾಲೇಜಿನಲ್ಲಿ ಇತಿಹಾಸದ ಉಪನ್ಯಾಸಕರಾಗಿ ಸೇರಿಕೊಂಡರು. ಆಗ ಮಹಾರಾಜ ಕಾಲೇಜಿನ ಇತಿಹಾಸ ವಿಭಾಗದಲ್ಲಿ ಖ್ಯಾತರಾಗಿದ್ದ ಡಾ. ಎಂ. ಎಚ್. ಕೃಷ್ಣ ಅವರು ಶೇಷಾದ್ರಿಯವರ ಸುಪ್ತ ಪ್ರತಿಭೆಯನ್ನು ಗುರುತಿಸಿ, ಅವರ ಗಮನವನ್ನು ಪುರಾತತ್ವದ ಕಡೆಗೆ ತಿರುಗಿಸಿದರು. ಇದು ಡಾ. ಶೇಷಾದ್ರಿಯವರ ಜೀವನದಲ್ಲಿ ಅತ್ಯಂತ ಮಹತ್ತರವಾದ ಘಟನೆ. ಎಂ. ಎಚ್. ಕೃಷ್ಣ ಅವರು ಇತಿಹಾಸ ಪ್ರಾಧ್ಯಾಪಕರು ಮಾತ್ರವಲ್ಲದೆ ಮೈಸೂರು ಸರ್ಕಾರದ ಪುರಾತತ್ವ ಇಲಾಖೆಯ ನಿರ್ದೇಶಕರೂ ಆಗಿದ್ದರು. ಇದರಿಂದ ಶೇಷಾದ್ರಿಯವರು ಡಾ. ಕೃಷ್ಣ ಅವರೊಡನೆ ಹಳ್ಳಿಹಳ್ಳಿಗಳನ್ನು ಸುತ್ತಿ ಪುರಾತತ್ವ ವಿಷಯ ಸಂಗ್ರಹ, ಸ್ವರೂಪ ಮುಂತಾದವುಗಳಲ್ಲಿ ಆಸಕ್ತಿ ತಳೆಯಲು ಪ್ರಾರಂಭಿಸಿದರು. ಸುಮಾರು ಇದೇ ಸಮಯದಲ್ಲಿ ಅವರು ಮೈಸೂರು ಪುರಾತತ್ವ ಇಲಾಖೆಯಲ್ಲಿ ತಾಂತ್ರಿಕ ಸಹಾಯಕರಾಗಿಯೂ ಕೆಲಸ ನಿರ್ವಹಿಸಿದರು.

ಇದೇ ಸಮಯದಲ್ಲಿ ಭಾರತೀಯ ಪುರಾತತ್ವ ಇಲಾಖೆಯಲ್ಲಿ ಸರ್ ಮಾರ್ಟಿಮರ್ ವೀಲರ್ ಅವರ ನೇತೃತ್ವದಲ್ಲಿ ಪುರಾತತ್ವ ಉತ್ಖನನಗಳು ನಡೆಯುತ್ತಿದ್ದುವು. ದೇಶದ ಎಲ್ಲ ಕಡೆಗಳಿಂದಲೂ ಉತ್ಸಾಹೀ ತರುಣ ವಿದ್ವಾಂಸರನ್ನು ಆರಿಸಿ ಅವರಿಗೆ ವೈಜ್ಞಾನಿಕವಾದ ಪುರಾತತ್ವ ಉತ್ಖನನ ತಂತ್ರಗಳಲ್ಲಿ ಸಾಕಷ್ಟು ಮಾಹಿತಿ ನೀಡಿ, ಅವರು ಕಾಲಕ್ರಮದಲ್ಲಿ ಉತ್ಖನನ ನಡೆಸುವಂತೆ ಮಾಡುವ ಕಾರ್ಯಕ್ರಮ ಪ್ರಾರಂಭವಾಗಿತ್ತು. ಭಾರತದಲ್ಲಿ ವೈಜ್ಞಾನಿಕ ಉತ್ಖನನಗಳು ಆಗಷ್ಟೇ ಪ್ರಾರಂಭವಾಗಿದ್ದು, ಅವು ಅಷ್ಟು ಜನಾದರಣೀಯವಾಗಿರಲಿಲ್ಲ. ಅನೇಕ ಸ್ನೇಹಿತರ ಮಾತನ್ನೂ ಲೆಕ್ಕಿಸದೆ ತರುಣರಾದ ಶೇಷಾದ್ರಿಯವರು

ವೀಲರ್ ಅವರ ಕರೆಗೆ ಓಗೊಟ್ಟು ಸ್ಥಳದಿಂದ ಸ್ಥಳಕ್ಕೆ ಸುತ್ತಿ ಉತ್ಖನನಗಳಲ್ಲಿ ಪಾಲ್ಗೊಂಡರು. ವೀಲರ್ ಅವರು ನಡೆಸಿದ ತಕ್ಷಶಿಲೆ, ಹರಪ್ಪ, ಅರಿಕಮೇಡು ಮತ್ತು ಬ್ರಹ್ಮಗಿರಿ ಉತ್ಖನನಗಳಲ್ಲಿ ಶೇಷಾದ್ರಿಯವರು ಕೆಲಸಮಾಡಿ ಉತ್ಖನನಕ್ಷೇತ್ರದಲ್ಲಿ ಪರಿಣತರಾದರು. ಉತ್ಖನನದಲ್ಲಿ ತೋರುತ್ತಿದ್ದ ಆಸಕ್ತಿ, ನಿಖರತೆ ಮುಂತಾದವುಗಳಿಂದ ವೀಲರ್ ಅವರ ಮೆಚ್ಚಿಗೆಗೆ ಪಾತ್ರರಾದ ಕೆಲವರಲ್ಲಿ ಶೇಷಾದ್ರಿಯವರೂ ಒಬ್ಬರು.

ವೀಲರ್ ಅವರೊಡನೆ ಕೆಲಸಮಾಡಿದ ಮೇಲೆ ಪುರಾತತ್ತ್ವದ ವಿಷಯದಲ್ಲಿ ಇವರ ವ್ಯಾಮೋಹ ಹೆಚ್ಚಾಯಿತು. ಆಗಿನ ಕಾಲದಲ್ಲಿ ಲಂಡನ್ ವಿಶ್ವವಿದ್ಯಾನಿಲಯದ 'ಇನ್ಸ್‌ಟಿಟ್ಯೂಟ್ ಆಫ್ ಆರ್ಕಿಯಾಲಜಿ' ಪುರಾತತ್ತ್ವ ವಿದ್ಯಾರ್ಥಿಗಳಿಗೆ ಯಾತ್ರಾಸ್ಥಳವಾಗಿತ್ತು. ತಮ್ಮ ಜೀವಮಾನದಲ್ಲಿ ಒಂದು ಸಾರಿಯಾದರೂ ಅಲ್ಲಿಯ ಸಂಪರ್ಕವನ್ನು ಹೊಂದುವ ಕನಸನ್ನು ಕಾಣುತ್ತಿದ್ದ ಶೇಷಾದ್ರಿಯವರಿಗೆ ಬ್ರಿಟಿಷ್ ಕೌನ್ಸಿಲ್ ಸಂಸ್ಥೆಯವರು ವಿದ್ಯಾರ್ಥಿ ವೇತನವನ್ನು ಒದಗಿಸಿಕೊಟ್ಟರು. 1949ರಲ್ಲಿ ಈ ಸಂಸ್ಥೆಯನ್ನು ಸೇರಿ 1952ರ ವರೆಗೂ ಅಲ್ಲಿ ಸಂಶೋಧನ ವಿದ್ಯಾರ್ಥಿಯಾಗಿದ್ದರು. ಪುರಾತತ್ತ್ವದಲ್ಲಿ ಬಲು ದೊಡ್ಡ ವಿದ್ವಾಂಸರಾಗಿದ್ದ ಡಾ. ಗಾರ್ಡನ್ ಚೈಲ್ಡ್ ಅವರ ಮಾರ್ಗದರ್ಶನದಲ್ಲಿ ಪಿಎಚ್.ಡಿ. ಪ್ರಶಸ್ತಿ ಗಳಿಸಿದರು. ಬಹುಶಃ ಇತಿಹಾಸಪೂರ್ವ ಪುರಾತತ್ತ್ವದಲ್ಲಿ ಲಂಡನ್ನಿನ ಇನ್ಸ್‌ಟಿಟ್ಯೂಟಿನಿಂದ ಡಾಕ್ಟೊರೇಟ್ ಪಡೆದ ಭಾರತೀಯರಲ್ಲಿ ಡಾ. ಶೇಷಾದ್ರಿಯವರೇ ಪ್ರಪ್ರಥಮರೆಂದು ತೋರುತ್ತದೆ. ಲಂಡನ್ನಿನಲ್ಲಿ ಇವರು ಡಾ. ಜಾಯಿನರ್, ಕಾಡ್ರಿಂಗ್‌ಟನ್ ಮುಂತಾದವರ ಸ್ನೇಹವನ್ನು ಸಂಪಾದಿಸಿಕೊಂಡರು.

1952ರಲ್ಲಿ ಮೈಸೂರಿಗೆ ಹಿಂದಿರುಗಿದ ಶೇಷಾದ್ರಿಯವರು ಆಗ ತಾನೆ ಪ್ರಾರಂಭವಾಗಿದ್ದ ಇಂಡಾಲಜಿ ವಿಭಾಗದಲ್ಲಿ ಉಪಪ್ರಾಧ್ಯಾಪಕರಾದರು. 1956ರಲ್ಲಿ ಪ್ರೊ. ನೀಲಕಂಠಶಾಸ್ತ್ರಿಗಳು ನಿವೃತ್ತರಾಗಲು ಇಂಡಾಲಜಿ ವಿಭಾಗದ ಪ್ರಾಧ್ಯಾಪಕರೂ ಇಲಾಖೆಯ ಮುಖ್ಯಸ್ಥರೂ ಆದರು. ಮೈಸೂರು ಸರ್ಕಾರದ ಪುರಾತತ್ತ್ವ ಇಲಾಖೆಯ ನಿರ್ದೇಶಕರಾಗಿಯೂ ಅಧಿಕಾರ ವಹಿಸಿಕೊಂಡರು. 1964–65ರಲ್ಲಿ ಅಮೆರಿಕದ ಪೆನ್‌ಸಿಲ್ವೇನಿಯ ಮತ್ತು ಬಫಲೋ ವಿಶ್ವವಿದ್ಯಾಲಯಗಳಲ್ಲಿ ಸಂದರ್ಶಕ ಪ್ರಾಧ್ಯಾಪಕರಾಗಿದ್ದರು. 1974ರಲ್ಲಿ ನಿವೃತ್ತರಾಗಬೇಕಾಗಿದ್ದ ಡಾ. ಶೇಷಾದ್ರಿಯವರು 1972ರ ಜುಲೈ 25ರಂದು ಬೆಂಗಳೂರಿನಲ್ಲಿ ಹೃದಯಾಘಾತದಿಂದ ನಿಧನ ಹೊಂದಿದರು.

ಪುರಾತತ್ತ್ವ ಇತ್ತೀಚೆಗೆ ಬೆಳೆದ ಸಮಾಜ ವಿಜ್ಞಾನಗಳಲ್ಲಿ ಮುಖ್ಯವಾದ್ದು. ಡಾ. ಶೇಷಾದ್ರಿಯವರು ಇದರ ಸತ್ಯವನ್ನು ಚೆನ್ನಾಗಿ ಅರಿತಿದ್ದವರಲ್ಲಿ ಒಬ್ಬರು. 'ಪುರಾತತ್ತ್ವವೇ ಬೇರು; ಇತಿಹಾಸವೇ ಫಲ' ಎಂಬುದು ಶೇಷಾದ್ರಿಯವರ ನಂಬಿಕೆ. 'ಉತ್ಖನನಕ್ಕಾಗಿ ಉತ್ಖನನವಲ್ಲ' ಎಂಬುದು ಅವರ ಸಿದ್ಧಾಂತ. ಉತ್ಖನನದ ತಾಂತ್ರಿಕ ದೃಷ್ಟಿಯಿಂದ ಮಾತ್ರ ಅದು ಪ್ರಯೋಜನಕರವಲ್ಲ. ಹಾಗಾದಲ್ಲಿ ಅದರಿಂದ ಉಪಯೋಗವೂ ಇಲ್ಲ. ಉತ್ಖನನ ಮಾನವನ ಇತಿಹಾಸಕ್ಕೆ ಏನನ್ನು ಒದಗಿಸುತ್ತದೆ ಎಂಬುದು ಮುಖ್ಯವಾದ್ದು. ಆದ್ದರಿಂದ ಪುರಾತತ್ತ್ವದ ಅಧ್ಯಯನ ಮತ್ತು ಸಂಶೋಧನೆಗಳನ್ನು ಮಾಡುವ ಮೊದಲು, ಅವು ಇತಿಹಾಸದ ಯಾವ ಪುಟಗಳನ್ನು ರಚಿಸಲು ಅನುಕೂಲವಾಗುತ್ತವೆ ಎಂಬುದನ್ನು ತಿಳಿಯಬೇಕು. ಇಲ್ಲದಿದ್ದರೆ 'ಉತ್ಖನನ ಚಾರಿತ್ರಿಕ ದಾಖಲೆಯ ನಾಶ'ವಾಗುತ್ತದೆ. ಇದು ಶೇಷಾದ್ರಿಯವರ ಸಿದ್ಧಾಂತ. ಆದ್ದರಿಂದ ಅವರು ನಡೆಸಿದ ಉತ್ಖನನಗಳು ಕಡಿಮೆಯಾದರೂ, ಕರ್ನಾಟಕದ ಇತಿಹಾಸದ ಅಧ್ಯಯನಕ್ಕೆ ಒಂದಲ್ಲ ಒಂದು ದೃಷ್ಟಿಯಿಂದ ತಮ್ಮ ಕೊಡುಗೆಯನ್ನು ನೀಡಿವೆ ಎಂಬುದು ಸ್ಪಷ್ಟವಾಗುತ್ತದೆ. ತಿರುಮಕೂಡಲು ನರಸೀಪುರದಲ್ಲಿ ಡಾ. ಶೇಷಾದ್ರಿಯವರು 1959ರಿಂದ 1965ರ ವರೆಗೆ ಉತ್ಖನನಗಳನ್ನು ನಡೆಸಿದರು. ಅವರೇ ರಚಿಸಿದ ಉತ್ಖನನದ ವರದಿಯಲ್ಲಿ ಅವರು ಈ ಉತ್ಖನನವನ್ನು ಪ್ರಾರಂಭಿಸಿದ್ದರ ಉದ್ದೇಶವನ್ನು ಬಹು ನಿಖರವಾಗಿ ಹೇಳಿದ್ದಾರೆ1. 'ಈ ಉತ್ಖನನಗಳನ್ನು ಮಾಡಲು ಎರಡು ಉದ್ದೇಶಗಳು. ಕಾವೇರಿಯ ಮೇಲ್ದಂಡೆಯ ಸಂಸ್ಕೃತಿಗಳನ್ನು ತಿಳಿದುಕೊಳ್ಳುವುದು ಮತ್ತು ಅವನ್ನು ಇದುವರೆಗೂ ತಿಳಿದು ಬಂದಿರುವ ಸಂಸ್ಕೃತಿಗಳಿಗೆ ಹೋಲಿಸುವುದು ಮತ್ತು ಅವುಗಳ ಕಾಲಮಾನವನ್ನು ತಿಳಿಯುವುದು. ದಕ್ಷಿಣ

---

1 Dr. M. Seshadri: *Report on the excavations at T. Narasipur,* 1971, P. 3

ಭಾರತದ ಇತಿಹಾಸಪೂರ್ವಕಾಲದಲ್ಲಿ ನಿಜವಾದ ನೂತನ ಶಿಲಾಯುಗದ ಸ್ಥಿತಿ ಕಾಣಬರುವುದೇ ಇಲ್ಲವೆಂಬ ಅನೇಕ ಪುರಾತತ್ವಜ್ಞರ ಸಿದ್ಧಾಂತವನ್ನು ಪುನರ್‌ಪರಿಶೀಲಿಸುವುದು'. ಉತ್ಖನನದ ವರದಿಯನ್ನು ಓದಿದಾಗ ಅವರು ತಮ್ಮ ಗುರಿಯನ್ನು ಯಾವ ರೀತಿ ಸಾಧಿಸಿದರು ಎನ್ನುವುದು ಚೆನ್ನಾಗಿ ಅರ್ಥವಾಗುತ್ತದೆ. ನರಸೀಪುರದಲ್ಲಿ ನೂತನ ಶಿಲಾಯುಗದ ಅವಶೇಷಗಳು ಅತ್ಯಂತ ಪ್ರಾಚೀನವಾದವು. ಕ್ರಿ.ಪೂ. ಸುಮಾರು 1800ಕ್ಕೆ ಸೇರಬಹುದಾದ ಈ ಸಂಸ್ಕೃತಿ ಟ್ರಾನ್ಸಿಷನಲ್ ಎಂದು ಕರೆಯಬಹುದಾದ ಸಂಸ್ಕೃತಿಗೆ ಎಡೆ ಮಾಡಿಕೊಟ್ಟಿತು. ಅನಂತರ ಕಾಣುವುದು ಬೃಹತ್ ಶಿಲಾ ಸಮಾಧಿ ಸಂಸ್ಕೃತಿ. ಇದಾದ ಅನಂತರ ಚಾರಿತ್ರಿಕ ಯುಗದ ಪ್ರವೇಶವಾಗುತ್ತದೆ. ಈ ಸಂಸ್ಕೃತಿಗಳ ಮತ್ತು ಇಲ್ಲಿ ದೊರಕಿರುವ ಅವಶೇಷಗಳ ದೃಷ್ಟಿಯಿಂದ ಶೇಷಾದ್ರಿಯವರು ನಡೆಸಿದ ನರಸೀಪುರದ ಉತ್ಖನನ ಮತ್ತು ಅದರ ವರದಿ ದಕ್ಷಿಣ ಭಾರತ ಮಾತ್ರವಲ್ಲದೆ ಭಾರತದ ಪುರಾತತ್ವ ಅಧ್ಯಯನಕ್ಕೆ ಮಹತ್ತರ ಕೊಡುಗೆಗಳಾಗಿವೆ.

ಡಾ. ಶೇಷಾದ್ರಿಯವರು ಪೂರ್ಣಗೊಳಿಸಿದ ಮತ್ತೊಂದು ಉತ್ಖನನವೆಂದರೆ ಕೋಲಾರ ಜಿಲ್ಲೆಯ ಜಡಿಗೇನಹಳ್ಳಿಯ ಬೃಹತ್ ಶಿಲಾಸಮಾಧಿಗಳು. 1957ರಲ್ಲಿ ಇಲ್ಲಿ ಉತ್ಖನನ ನಡೆದು 1960ರಲ್ಲಿ ಇದರ ವರದಿ ಸಿದ್ಧವಾಯಿತು2. ಕರ್ಣಾಟಕದಲ್ಲಿ ನಡೆದ ಬೃಹತ್ ಶಿಲಾಸಮಾಧಿಯ ಉತ್ಖನನಗಳಲ್ಲಿ ಇದುವರೆಗೂ ಮಣ್ಣಿನ ಶವಪೆಟ್ಟಿಗೆ (ಸಾರ್ಕೊಫಾಗಸ್) ದೊರಕಿರಲಿಲ್ಲ. ಇತರ ರೀತಿಯ ಶವ ಸಮಾಧಿಗಳು ಮಾತ್ರ ಬೆಳಕಿಗೆ ಬಂದಿದ್ದುವು. ಜಡಿಗೇನ ಹಳ್ಳಿಯ ಉತ್ಖನನವಾದ ಮೇಲೆ ಮಣ್ಣಿನ ಶವಪೆಟ್ಟಿಗೆಯ ಬಳಕೆ ಇತ್ತೆಂದು ಮೊಟ್ಟಮೊದಲಬಾರಿಗೆ ಗೊತ್ತಾಯಿತು. ದಕ್ಷಿಣ ಭಾರತದ ಕುಣ್ಣತ್ತೂರು ಮುಂತಾದ ಕಡೆಗಳಲ್ಲಿ ಕಂಡು ಬಂದ, ಕಬ್ಬಿಣದ ಯುಗದ ಸಂಸ್ಕೃತಿಯನ್ನು ಹೋಲುವಂಥ ಆದರೆ ಕೆಲವಂಶಗಳಲ್ಲಿ ಅದಕ್ಕಿಂತ ಭಿನ್ನವಾದ ಸಂಸ್ಕೃತಿಯ ಪರಿಚಯವನ್ನು ಜಡಿಗೇನಹಳ್ಳಿಯ ಉತ್ಖನನಗಳು ಮಾಡಿಕೊಟ್ಟುವು.

ಶೇಷಾದ್ರಿಯವರು ಬನವಾಸಿಯಲ್ಲಿಯೂ ಉತ್ಖನನಗಳನ್ನು ಕೈಗೊಂಡಿದ್ದರು. ಅವು ಅಪೂರ್ಣವಾಗಿವೆ. ಅವರ ನೇತೃತ್ವದಲ್ಲಿ ನಡೆದ ಬನವಾಸಿಯ ಉತ್ಖನನಗಳು ಚೈತ್ಯಾಕಾರದ ಇಟ್ಟಿಗೆಯ ಕಟ್ಟಡಗಳನ್ನು ಬೆಳಕಿಗೆ ತಂದಿವೆ; ಮತ್ತು ಕ್ರಿಸ್ತಶಕೆಯ ಮೊದಲ ಶತಮಾನಗಳಿಗೆ ಸೇರಬಹುದಾದ ರೌಲೆಟೆಡ್ ವೇರ್ ಮುಂತಾದವೂ ದೊರಕಿವೆ.

ಶಿಲಾಯುಗದ ಮಾನವನ ನೆಲೆಗಳನ್ನು ಕಂಡುಹಿಡಿಯುವುದರಲ್ಲೂ ಡಾ. ಶೇಷಾದ್ರಿಯವರು ಆಸಕ್ತಿ ವಹಿಸಿದ್ದರು. ಇವರು ಮೈಸೂರು ಸಂಸ್ಥಾನದ ಎಲ್ಲ ಜಿಲ್ಲೆಗಳನ್ನೂ ಸುತ್ತಿ ನೂರಾರು ನೆಲೆಗಳನ್ನು ಬೆಳಕಿಗೆ ತಂದದ್ದೇ ಅಲ್ಲದೆ ಅವುಗಳ ಶಾಸ್ತ್ರೀಯವಾದ ಅಧ್ಯಯನ ಮಾಡಿದರು. ಇದರ ಫಲವೇ ಅವರ ಮಹಾನಿಬಂಧ.3 ಮೈಸೂರಿನ ಶಿಲಾಯುಗದ ಸಂಸ್ಕೃತಿಗಳನ್ನು ಅಧ್ಯಯನ ಮಾಡಿರುವ ಮೊಟ್ಟಮೊದಲನೆಯ ಪ್ರಯತ್ನವಿದಾದರೂ ಇದರಲ್ಲಿಯ ವಿಚಾರಸಂಗ್ರಹ ಬಹು ಪ್ರೌಢಶೈಲಿಯದು. ಶಿಲಾಯುಗ ಸಂಸ್ಕೃತಿಗಳ ಮಾನವನ ಇತಿಹಾಸವನ್ನು ತಿಳಿಯುವಾಗ ಆ ಮಾನವನಿಗಿದ್ದ ಪರಿಸರಗಳನ್ನು ತಿಳಿಯುವುದು ಅತ್ಯಾವಶ್ಯಕ. ನೆಲೆಯಿಂದ ನೆಲೆಗೆ ಹೋಗುತ್ತಿದ್ದ ಆದಿಶಿಲಾಯುಗದ ಮಾನವನ ಕಲ್ಲು ಆಯುಧಗಳು ಕೂಡ ಅಲ್ಲಿ ದೊರೆಯುವ ಕಲ್ಲನ್ನೇ ಅವಲಂಬಿಸಿರುತ್ತವೆ. ಇದನ್ನು ಚೆನ್ನಾಗಿ ಮನಗಂಡ ಡಾ. ಶೇಷಾದ್ರಿಯವರು ಶಿಲಾಯುಗ ಮಾನವನ ಪರಿಸರದ ಅಧ್ಯಯನಕ್ಕೆ ಒಂದು ಅಧ್ಯಾಯವನ್ನೇ ಮೀಸಲಾಗಿಟ್ಟಿದ್ದಾರೆ. ಅನಂತರ ಮೈಸೂರು ಸಂಸ್ಥಾನದ ಆದಿಶಿಲಾಯುಗದ ನೆಲೆಗಳನ್ನು ಗುರುತಿಸಿ ಅಲ್ಲಿ ದೊರಕುವ ಶಿಲಾಯುಧಗಳನ್ನು ಅವುಗಳ ಆಕೃತಿಯ ಮೇಲೆ ವರ್ಗೀಕರಣ ಮಾಡಿದ್ದಾರೆ. ಈ ನೆಲೆಗಳಲ್ಲಿ ಕಿಬ್ಬನಹಳ್ಳಿ ಬಹು ಮುಖ್ಯವಾದ್ದು. ಕಿಬ್ಬನಹಳ್ಳಿಯ ಆದಿಶಿಲಾಯುಗದ ಆಯುಧಗಳನ್ನು ವಿಶೇಷವಾಗಿ ಅಧ್ಯಯನ ಮಾಡಿದ ಶೇಷಾದ್ರಿಯವರು, ಅದರ ಬಗೆಗೆ ಒಂದು ಮಹತ್ವ ಲೇಖನವನ್ನು

---

2 Dr. M. Seshadri : *Report on the Jadigenahalli Megalithic excavaiians,* 1960

3 Dr. M. Seshadri : *Stone-using Cultures of Prehistoric and Proto-historic Mysore*, London 1956

ಬರೆದರು. ಇದು ಬೇರೊಂದು ಪ್ರೌಢ ಪತ್ರಿಕೆಯಲ್ಲಿ ಬೆಳಕನ್ನು ಕಂಡಿತು4. ಇದರಲ್ಲಿ ಕರ್ಣಾಟಕದ ಆದಿ ಶಿಲಾಯುಗದ ನೆಲೆಗಳ ವೈಶಿಷ್ಟ್ಯ, ಅವು ಇತರ ನೆಲೆಗಳೊಂದಿಗೆ ಹೇಗೆ ಬದಲಾಗುತ್ತವೆ, ಮುಂತಾದ ವಿಚಾರಗಳನ್ನು ನಿಖರವಾಗಿ ಚರ್ಚಿಸಿದ್ದಾರೆ.

ಭಾರತದಲ್ಲಿ ಮಧ್ಯಶಿಲಾಯುಗ ಇತ್ತೇ? ಹಾಗಿದ್ದರೆ ಯೂರೋಪಿನ ಮಧ್ಯಶಿಲಾಯುಗಕ್ಕೂ ಭಾರತದ ಮಧ್ಯಶಿಲಾಯುಗಕ್ಕೂ ಏನು ಸಂಬಂಧ?–ಎಂಬ ಪ್ರಶ್ನೆಗಳು ಬಹಳ ವರ್ಷಗಳಿಂದಲೂ ಪುರಾತತ್ವಜ್ಞರನ್ನು ಕಾಡುತ್ತಿವೆ. ಇದನ್ನು ಶೇಷಾದ್ರಿಯವರು ಚೆನ್ನಾಗಿ ಅರಿತಿದ್ದರು. ಆದ್ದರಿಂದ ಇವರು ಅನಂತರ ಇಲ್ಲಿ ಹೇರಳವಾಗಿ ದೊರೆಯುವ ಸೂಕ್ಷ್ಮಶಿಲಾಯುಧಗಳನ್ನು ಅಧ್ಯಯನ ಮಾಡಿ ಅನಂತರ ನೂತನ ಶಿಲಾಯುಗದ ಕಡೆಗೆ ತಮ್ಮ ಗಮನವನ್ನು ಹರಿಸಿದ್ದಾರೆ. ಸೂಕ್ಷ್ಮ ಶಿಲಾಯುಧಗಳು ಬೆಂಗಳೂರಿನ ಸಮೀಪದಲ್ಲಿರುವ ಜಾಲಹಳ್ಳಿಯಲ್ಲಿ ವಿಶೇಷವಾಗಿ ದೊರಕಿವೆ. ಇವನ್ನು 'ಜಾಲಹಳ್ಳಿಯ ಬೇಟೆಯ ವರ್ಗಕ್ಕೆ' ಸೇರಿದುವು ಎಂಬುದಾಗಿ ಕರೆದಿದ್ದಾರೆ. ಇವು ಶಿಲಾಯುಗದ ಮಾನವನ ಜೀವನದ ವಿಷಯದಲ್ಲಿ ವಿಶೇಷ ಬೆಳಕನ್ನು ಚೆಲ್ಲುವುದರಿಂದ ಇದೊಂದು ಮಹತ್ವಪೂರ್ಣವಾದ ಸಂಶೋಧನೆ ಎನ್ನುವುದರಲ್ಲಿ ಸಂಶಯವಿಲ್ಲ. ಕರ್ಣಾಟಕ ನೂತನ ಶಿಲಾಯುಗದ ಅಧ್ಯಯನ ಕೂಡ ಕಷ್ಟಕರವಾದ್ದು ಮತ್ತು ಸಮಸ್ಯೆಗಳಿಂದ ಕೂಡಿರುವಂಥದು. ಇಲ್ಲಿ ನಿಜವಾದ ನೂತನ ಶಿಲಾಯುಗವಿದೆಯೇ ಅಥವಾ ಮಿಶ್ರಶಿಲಾಯುಗವಿದೆಯೇ? ಹಾಗಾದಲ್ಲಿ ಅವುಗಳ ಮುಖ್ಯಲಕ್ಷಣಗಳೇನು? ಎಂಬವು ಇನ್ನೂ ಬಿಡಿಸಲಾಗದ ಪ್ರಶ್ನೆಗಳಾಗೇ ಉಳಿದಿವೆ. ನಮ್ಮಲ್ಲಿ ನೂತನ ಶಿಲಾಯುಗದ ಉಳಿಗಳು ಹೇರಳವಾಗಿ ದೊರಕಿವೆ. ಆದರೆ ಅವು ಸಾಮಾನ್ಯವಾಗಿ ಭೂಮಿಯ ಮೇಲೆ ದೊರಕಿದವುಗಳೇ ಹೊರತು ಯಾವ ಸಾಂಸ್ಕೃತಿಕ ಸ್ತರಗಳಿಗೂ ಸಂಬಂಧಿಸಿದವಲ್ಲ. ಈ ವಿಷಯದಲ್ಲಿ ಶೇಷಾದ್ರಿಯವರು ದೊರಕಿರುವ ಎಲ್ಲ ಮಾಹಿತಿಗಳನ್ನೂ ಕಲೆ ಹಾಕಿದ್ದಾರೆ. ಅನಂತರ ಬೃಹತ್ ಶಿಲಾಸಮಾಧಿ ಸಂಸ್ಕೃತಿಯನ್ನು ಇವರು ವಿಶ್ಲೇಷಿಸಿದ್ದಾರೆ. ಇದು ಬಹಳ ವಿಶದವಾಗಿ ಚರ್ಚಿತವಾಗಿದೆ, ಕರ್ಣಾಟಕ ಈ ಸಂಸ್ಕೃತಿಯಲ್ಲಿ ಎಷ್ಟೊಂದು ಶ್ರೀಮಂತವಾಗಿದೆ ಮತ್ತು ಎಷ್ಟು ವೈಶಿಷ್ಟ್ಯಪೂರ್ಣವಾಗಿದೆ ಎಂಬುದನ್ನು ಸೂಚಿಸಿದ್ದಾರೆ. ಇತ್ತೀಚೆಗೆ ಈ ದಿಶೆಯಲ್ಲಿ ಇತರ ವಿದ್ವಾಂಸರು ಮಾಡಿರುವ ಸಂಶೋಧನೆಗಳು ಡಾ. ಶೇಷಾದ್ರಿಯವರು ಇಪ್ಪತ್ತು ವರ್ಷಗಳ ಹಿಂದೆ ಮಾಡಿದ ಸೂಚನೆಗಳು ಎಷು ಸತ್ಯವಾದವು ಎಂಬುದನ್ನು ತೋರಿಸುತ್ತವೆ. ಒಟ್ಟಿನಲ್ಲಿ ಇದೊಂದು ಮಹತ್ವಪೂರ್ಣವಾದ ಗ್ರಂಥ.

ಕಾಲಕ್ರಮದಲ್ಲಿ ಡಾ. ಶೇಷಾದ್ರಿಯವರು ಇತಿಹಾಸಪೂರ್ವ ಪುರಾತತ್ವವನ್ನು ಬಿಟ್ಟು ಭಾರತೀಯ ವಾಸ್ತುಶಿಲ್ಪದ ಬಗೆಗೆ ಆಸಕ್ತಿಯನ್ನು ವಹಿಸಲು ಪ್ರಾರಂಭಿಸಿದರು. ಹೊಯ್ಸಳ ವಾಸ್ತುಶಿಲ್ಪದ ವಿಷಯದಲ್ಲಿ ಇವರಿಗೆ ಮೊದಲಿನಿಂದಲೂ ವಿಶೇಷ ಆಸಕ್ತಿಯಿತ್ತು. ಅದನ್ನೇ ಮುಂದುವರಿಸಿಕೊಂಡು, ಹೊಯ್ಸಳ ಶಿಲ್ಪಿಗಳ ವಿಷಯದಲ್ಲಿ ಸಂಶೋಧನೆಯನ್ನು ಪ್ರಾರಂಭಿಸಿದರು. ವಿಶ್ವವಿದ್ಯಾನಿಲಯ ಧನ ಸಹಾಯ ಮಂಡಳಿಯ ವತಿಯಿಂದ ಸಹಾಯವನ್ನು ಪಡೆದು 'ಹೊಯ್ಸಳ ಶಿಲ್ಪಿಗಳು' ಎಂಬ ಪ್ರಬಂಧವನ್ನು ಬರೆದರು. ಇದು ಮೈಸೂರು ವಿಶ್ವವಿದ್ಯಾನಿಲಯದ ಅರ್ಧವಾರ್ಷಿಕ ಪತ್ರಿಕೆಯಲ್ಲಿ ಅವರ ಮರಣಾನಂತರ ಪ್ರಕಟಗೊಂಡಿತು5. ಇದರಲ್ಲಿ ಪ್ರತಿಯೊಂದು ದೇವಾಲಯದಲ್ಲಿ ಕಂಡುಬಂದ ರೂವಾರಿಗಳ ಹೆಸರುಗಳನ್ನು ಪ್ರತಿಮಾಡಿ, ಪಟ್ಟಿ ಮಾಡಿ, ಇದುವರೆಗೂ ನಮ್ಮ ಗಮನಕ್ಕೆ ಬರದೆ ಇದ್ದ ಅನೇಕ ಖ್ಯಾತ ರೂವಾರಿಗಳನ್ನು ಪತ್ತೆ ಹಚ್ಚಿದರು. ಈ ರೀತಿಯ ಸಂಶೋಧನೆ ನಡೆದಿರುವುದು ಇದೇ ಮೊದಲು. ಇದಕ್ಕೆ ಮೊದಲು ಇವರು ರೂವಾರಿ ಮಲ್ಲಿತಮ್ಮನ ಬಗ್ಗೆ ಒಂದು ಲೇಖನವನ್ನು ಪ್ರಕಟಿಸಿದ್ದರು6. ಡಾ. ಶೇಷಾದ್ರಿಯವರು ಅಮೆರಿಕದಲ್ಲಿದ್ದಾಗಲೂ ಈ ವಿಷಯವನ್ನು ಮರೆತಿರಲಿಲ್ಲ. ಅಲ್ಲಿ ಹೊಯ್ಸಳ ಶಿಲ್ಪಗಳಿದ್ದ ಮ್ಯೂಸಿಯಂಗಳನ್ನೆಲ್ಲ ಸಂದರ್ಶಿಸಿ, ಆ ವಿಗ್ರಹಗಳ ಮೇಲೆ ಕಂಡು ಬಂದ ರೂವಾರಿಗಳ

---

4 Artibus Asiae

5 *Half-Yearly Journal of the Mysore University*, Vol. 25

6 *Ibid.*, Vol. 17, P. 31

ವಿಷಯವನ್ನು ಮತ್ತೊಂದು ಲೇಖನದಲ್ಲಿ ಪ್ರಕಟಿಸಿದರು7. ಈ ರೀತಿ ಇವರು ಹೊಯ್ಸಳ ರೂವಾರಿಗಳ ವಿಷಯದಲ್ಲಿ ವಿಶೇಷ ಅಧ್ಯಯನ ನಡೆಸಿದ್ದರು. ಇದೇ ರೀತಿ ಚಾಲುಕ್ಯ ವಾಸ್ತುಶಿಲ್ಪದ ರೂವಾರಿಗಳ ವಿಷಯವನ್ನು ಅಧ್ಯಯನ ಮಾಡುವ ಆಸೆ ಇವರಿಗಿತ್ತು.

ಡಾ. ಶೇಷಾದ್ರಿಯವರು ವಾಸ್ತುಶಿಲ್ಪದಲ್ಲಿ ಮಾಡಿದ ಮತ್ತೊಂದು ಮುಖ್ಯ ಸಂಶೋಧನೆಯೆಂದರೆ ಮಹಿಷಾಸುರಮರ್ದಿನಿ ಶಿಲ್ಪವನ್ನು ಕುರಿತದ್ದು. ಭಾರತೀಯ ಶಿಲ್ಪದಲ್ಲಿ ಮಹಿಷಾಸುರಮರ್ದಿನಿ ಶಿಲ್ಪ ಬಹು ಜನಾನುರಾಗಿಯಾದ್ದು. ಕ್ರಿ. ಶ. ಐದನೆಯ ಶತಮಾನದಿಂದ ಪ್ರಾರಂಭವಾಗಿ ಇತ್ತೀಚಿನವರೆಗೂ ನೂರಾರು ಮಹಿಷಾಸುರಮರ್ದಿನಿ ವಿಗ್ರಹಗಳು ಚಾಲುಕ್ಯ, ಪಲ್ಲವ, ಚೋಳ, ಹೊಯ್ಸಳ, ವಿಜಯ ನಗರ, ನಾಯಕ ಮುಂತಾದ ರಾಜಮನೆತನಗಳ ಕಾಲಗಳಲ್ಲಿ ರೂಪುಗೊಂಡವು. ಶಿಲ್ಪಶಾಸ್ತ್ರಗ್ರಂಥಗಳೂ ಮಹಿಷಮರ್ದಿನಿಯ ವಿಷಯದಲ್ಲಿ ವಿಶೇಷವಾದ ಆಸಕ್ತಿಯನ್ನು ತೋರಿದ್ದುವು. ಶಿಲ್ಪ ಒಂದೇ ಆದರೂ ಕಾಲಕಾಲವಲ್ಲಿ ಅದನ್ನು ರೂಪಿಸಿರುವ ವಿಧಾನಗಳು ವೈವಿಧ್ಯಪೂರ್ಣವಾಗಿವೆ. ಇದು ಡಾ. ಶೇಷಾದ್ರಿಯವರ ಗಮನವನ್ನು ಆಕರ್ಷಿಸಿತು. ಈ ಶಿಲ್ಪಗಳಲ್ಲಿ ಕಾಲಕಾಲಗಳಲ್ಲಿ ಏನು ಬದಲಾವಣೆಗಳಾದುವು? ಅವು ಆಗಲು ಕಾರಣಗಳೇನು? ಇವು ಶಿಲ್ಪಶಾಸ್ತ್ರಗಳಿಗನುಗುಣವಾಗಿವೆಯೆ? ಮುಂತಾದ ಜಟಿಲವಾದ ಪ್ರಶ್ನೆ ಗಳನ್ನು ಎತ್ತಿಕೊಂಡು ಅವುಗಳನ್ನು ಬಿಡಿಸಿದರು. ಇತಿಹಾಸಪೂರ್ವ ಪುರಾತತ್ವದ ಸಂಶೋಧನೆಯ ಮುಖ್ಯ ಅಂಗವಾದ 'ಆಕೃತಿಯ ವರ್ಗೀಕರಣ'ವನ್ನು ಶಿಲ್ಪದ ಅಧ್ಯಯನಕ್ಕೆ ಅಳವಡಿಸಿಕೊಂಡ ಕೀರ್ತಿ ಶೇಷಾದ್ರಿಯವರದು. ಎಲ್ಲ ಮಹಿಷಮರ್ದಿನಿ ವಿಗ್ರಹಗಳನ್ನೂ ಅವುಗಳ ಆಕೃತಿಯ ಮೇಲೆ ವರ್ಗೀಕರಿಸಿ ಅವನ್ನು ಕಾಲಾನುಕ್ರಮ ರೀತಿಯಲ್ಲಿ ಪರಿಶೀಲಿಸಿ ತಮ್ಮದೇ ಆದ ಸಿದ್ಧಾಂತವನ್ನು ಮುಂದಿಟ್ಟರು. ಈ ಲೇಖನ ಮೈಸೂರು ವಿಶ್ವವಿದ್ಯಾನಿಲಯದ ಪತ್ರಿಕೆಯಲ್ಲಿ ಪ್ರಕಟಗೊಂಡು ಅನೇಕ ಪಾಶ್ಚಾತ್ಯ ವಿದ್ವಾಂಸರ ಗಮನವನ್ನು ಸೆಳೆಯಿತು8. ಈ ರೀತಿಯಾದ ಅಧ್ಯಯನವನ್ನು ಭಾರತೀಯ ಮುಖ್ಯ ಶಿಲ್ಪ ಗಳಿಗೆ ಮಾಡಬೇಕೆಂದು ಅವರು ಅವರ ಸಹೋದ್ಯೋಗಿಗಳಿಗೆ ಸೂಚನೆ ಕೊಡುತ್ತಿದ್ದರು.

ಇತ್ತೀಚೆಗೆ ಅವರು ಚಾಲುಕ್ಯ ಕಾಲದ ಕಂಚಿನ ವಿಗ್ರಹಗಳನ್ನು ಪತ್ತೆ ಹಚ್ಚಿ ಅಮೂಲ್ಯವಾದ ಈ ವಿಗ್ರಹಗಳನ್ನು ಅಧ್ಯಯನ ಮಾಡುವುದರಲ್ಲಿ ತೊಡಗಿದ್ದರು. ಅರಳುಗುಪ್ಪೆಯ ಸಂಧ್ಯಾತಾಂಡವ9 ಮತ್ತು ಅಷ್ಟದಿಕ್ಪಾಲಕ ಮೂರ್ತಿಗಳು10, ಕೆಲವು ಗಂಗರ ಕಾಲದ ಶಿಲ್ಪಗಳು, ಗುಲ್ಬರ್ಗ ಜಿಲ್ಲೆಯ ಸನ್ನತಿಯಲ್ಲಿ ದೊರಕಿದ ಶಿಲ್ಪಗಳು11 ಮುಂತಾದವುಗಳ ವಿಷಯದಲ್ಲಿ ಲೇಖನಗಳನ್ನು ಪ್ರಕಟಿಸಿದರು.

ಡಾ. ಶೇಷಾದ್ರಿಯವರು ನಾಣ್ಯಶಾಸ್ತ್ರದಲ್ಲಿ ಆಸಕ್ತಿ ಹೊಂದಿದ್ದರು. ಬೆಂಗಳೂರಿನ ಸಮೀಪದ ವಿಮಾನ ಕಾರ್ಖಾನೆಯ ಆವರಣದಲ್ಲಿ ಅನೇಕ ಬೆಳ್ಳಿಯ ರೋಮನ್ ನಾಣ್ಯಗಳು ದೊರೆತುವು. ಇವನ್ನು ದಕ್ಷಿಣ ಭಾರತದಲ್ಲಿ ದೊರಕಿರುವ ರೋಮನ್ ನಾಣ್ಯಗಳ ಹಿನ್ನೆಲೆಯಲ್ಲಿ ಪರಿಶೀಲಿಸಿ ಒಂದು ಲೇಖನ ವನ್ನು ಪ್ರಕಟಿಸಿದರು12. ಶಾತವಾಹನರ ನಾಣ್ಯಗಳ ಬಗೆಗೂ ಸ್ವಲ್ಪ ಮಾಹಿತಿಗಳನ್ನು ಕಲೆ ಹಾಕಿದ್ದರು.

ಡಾ. ಶೇಷಾದ್ರಿಯವರು ಕನ್ನಡ ಭಾಷೆಯಲ್ಲಿ ಸರಳವಾಗಿ ಸುಲಲಿತವಾಗಿ ಬರೆಯಬಲ್ಲ ವಿದ್ವಾಂಸ ರಾಗಿದ್ದರು. ಇವರು ಬರೆದ 'ಹರಪ್ಪಾ ಸಂಸ್ಕೃತಿ' ಎಂಬ ಗ್ರಂಥ 1955ರಲ್ಲಿ ಪ್ರಕಟವಾಯಿತು. ಇದು ಬಹು ಚೊಕ್ಕ ಗ್ರಂಥ. ಹರಪ್ಪಾ ಸಂಸ್ಕೃತಿ ಅಥವಾ ಸಿಂಧೂ ನಾಗರಿಕತೆಯನ್ನು ಕುರಿತಾದ ಈ ಗ್ರಂಥದ ಎರಡನೆಯ ಆವೃತ್ತಿಯನ್ನು ಇತ್ತೀಚೆಗೆ ಸಿದ್ಧಪಡಿಸುತ್ತಿದ್ದರು. ಪ್ರಬುದ್ಧ ಕರ್ಣಾಟಕದಲ್ಲಿ ಅನೇಕ

---

7 *Ibid.*, vol. 23, p. 93

8 *Ibid.*, vol. 22, p. 1-28

9 *Artibus Asiae*

10 *Half-Yearly Journal of the Mysore University*, vol. 24, p. 70

11 *Mythic Society Journal*, Vol. 56, p. 35

12 *Archaeology*

ಲೇಖನಗಳನ್ನು ಪ್ರಕಟಿಸಿರುವ ಡಾ. ಶೇಷಾದ್ರಿಯವರಿಗೆ ಕನ್ನಡದಲ್ಲಿ ಬರೆದರೆ ಅದು ಜನಸಾಮಾನ್ಯರನ್ನೂ ಮುಟ್ಟುತ್ತದೆ ಎಂಬುದರ ಅರಿವಿತ್ತು.

ಆದರೆ ಡಾ. ಶೇಷಾದ್ರಿಯವರು ಬರೆದದ್ದು ಕಡಿಮೆ. ಮಾಡಿದರೆ ಹತ್ತಾರು ವರ್ಷಗಳ ಕಾಲ ನಿಲ್ಲತಕ್ಕಂಥ ಬರವಣಿಗೆಯನ್ನು ಮಾತ್ರ ಮಾಡಬೇಕು ಎಂಬುದು ಇವರ ಸಿದ್ಧಾಂತ. ಇದನ್ನು ಅವರು ಅವರ ಸಹೋದ್ಯೋಗಿಗಳೆಲ್ಲರಿಗೂ ಪದೇ ಪದೇ ಹೇಳುತ್ತಿದ್ದರು. ಬರೆಯುವುದನ್ನು ಪ್ರಾರಂಭಿಸಿದರೆ ಕಾಲಕ್ರಮದಲ್ಲಿ ಒಳ್ಳೆಯ ಕೃತಿ ಬರುತ್ತದೆ ಎನ್ನುವ ಅಭಿಪ್ರಾಯವನ್ನು ಒಪ್ಪುತ್ತಿರಲಿಲ್ಲ. ಹೀಗಾಗಿ ಅವರು ತಮ್ಮ ಬರವಣಿಗೆಗೆ ತಾವೇ ಮಿತಿಯನ್ನು ಹಾಕಿಕೊಂಡರು. ಅದರಿಂದಾಗಿ ಅವರಿಂದ ಆಗಬಹುದಾಗಿದ್ದ ಕೆಲಸ ಆಗಲಿಲ್ಲ. ಉಪಾಧ್ಯಾಯನಾದವನು ಮೊಟ್ಟಮೊದಲು ಮಾಡಬೇಕಾದ್ದು ವಿದ್ಯಾರ್ಥಿಗಳಿಗೆ ಕಲಿಸುವಿಕೆ. ಅವನು ಮಾಡುವ ಸಂಶೋಧನೆ ವೈಯಕ್ತಿಕವಾದ್ದು ಎಂಬುದು ಅವರ ನಂಬಿಕೆ. ಆದ್ದರಿಂದ ಬಹು ಶ್ರದ್ಧೆಯಿಂದ ವಿದ್ಯಾರ್ಥಿಗಳಿಗೆ ಪಾಠ ಹೇಳುತ್ತಿದ್ದರು. ತಮ್ಮ ಸಹೋದ್ಯೋಗಿಗಳೂ ಇದನ್ನೇ ಅನುಸರಿಸಬೇಕೆಂದು ಆಗಾಗ್ಗೆ ಹೇಳುತ್ತಿದ್ದರು.

ಕೊನೆಕೊನೆಗೆ ಅವರಿಗೆ ಜೀವನದಲ್ಲಿ ಒಂದು ವಿಧವಾದ ಅತೃಪ್ತಿ ಉಂಟಾಗಿತ್ತು ಎಂಬುದು ಅವರ ನಿಕಟವರ್ತಿಗಳೆಲ್ಲರಿಗೂ ಗೊತ್ತು. ಮಾಡಬೇಕಾದಷ್ಟು ಕೆಲಸ ಮಾಡಲಾಗಲಿಲ್ಲ; ಪ್ರಾಗೈತಿಹಾಸಿಕ ಪುರಾತತ್ತ್ವವನ್ನು ಬೆಳೆಸಲಾಗಲಿಲ್ಲ ಎಂಬ ಕೊರಗು ಅವರಲ್ಲಿತ್ತು. ಆದರೆ ರಷ್ಯಾದಲ್ಲಾಗಲಿ, ಆಫ್ರಿಕದಲ್ಲಾಗಲಿ, ಅಮೆರಿಕದಲ್ಲಾಗಲಿ, ಇಂಗ್ಲೆಂಡಿನಲ್ಲಾಗಲಿ ಶೇಷಾದ್ರಿಯವರನ್ನು ಮರೆಯದ ವಿದ್ವಜ್ಜನರಿದ್ದಾರೆ. ಏಕೆಂದರೆ ಅವರು ಮಾಡಿದ ಸ್ವಲ್ಪ ಕೆಲಸವೂ ಮಹತ್ತರವಾದ್ದು. ಹೀಗೆ ತೆರೆಮರೆಯ ಕಾಯಿಯಂತಿದ್ದ ಮೈಸೂರಿನ ಪುರಾತತ್ತ್ವಕ್ಕೆ, ಮೈಸೂರು ವಿಶ್ವವಿದ್ಯಾನಿಲಯದ ಪುರಾತತ್ತ್ವ ವಿಭಾಗಕ್ಕೆ ವಿಶೇಷ ಸೇವೆ ಸಲ್ಲಿಸಿದ ಶೇಷಾದ್ರಿಯವರು, ಪುರಾತತ್ತ್ವದ ಆದ್ಯ ಪ್ರವರ್ತಕರೆನಿಸಿಕೊಂಡು ಅಮರರಾಗಿದ್ದಾರೆ.

ಕೆ. ಎಸ್. ನಾರಾಯಣಸ್ವಾಮಿ

ಆರ್ಥಿಕ ಅಭಿವೃದ್ಧಿಯ ಮಾನವೀಯ ಮೌಲ್ಯಗಳು

ವಿಶ್ವವಿಖ್ಯಾತ ಆರ್ಥಿಕತಜ್ಞ ಗುನ್ನಾರ್ ಮಿರ್ಡಾಲರ ವಿಚಾರಗಳ ಸಂಕಲನ

ಆರ್ಥಿಕ ಬೆಳವಣಿಗೆಯಲ್ಲಿ ಮಾನವ ವ್ಯಕ್ತಿಯೇ ಕೇಂದ್ರಬಿಂದು ಎಂದು ಭಾರತದ ಮಹಾತ್ಮಾಗಾಂಧಿ ಏಕಪ್ರಕಾರವಾಗಿ ಒತ್ತಿ ಹೇಳುತ್ತಿದ್ದರು. ಸಾಮಾನ್ಯ ಜನ, ಅದರಲ್ಲೂ ಬಹುಸಂಖ್ಯಾತರಾದ ಗ್ರಾಮಜೀವಿಗಳು, ವಿವೇಕಿಗಳೂ ಕ್ರಿಯಾಶೀಲರೂ ಆಗಿ ತಮ್ಮ ಸಮಾಜವನ್ನು ಪರಿವರ್ತಿಸಿಕೊಳ್ಳುವುದರಿಂದ ಮಾನವನ ಬೆಳವಣಿಗೆ ಹೆಚ್ಚು ಸಾಧ್ಯ ಎಂದನ್ನುತ್ತಿದ್ದರು. ಗಾಂಧೀ ಶ್ರೇಷ್ಠ ಯೋಚಕರು; ವಿಚಾರಬದ್ಧ ಯೋಜನಾ ಚತುರರು. ಅವರ ಯೋಜನೆ ಸಮಗ್ರದೃಷ್ಟಿಯದು. ನೈರ್ಮಲ್ಯ ಮತ್ತು ಆರೋಗ್ಯ, ವ್ಯವಸಾಯಾಭಿವೃದ್ಧಿ ಹಾಗೂ ಪುಷ್ಟಿಕರ ಆಹಾರ, ಶಿಕ್ಷಣಕ್ಕೊಂದು ಹೊಸ ನಿರ್ದೇಶನ, ಕೇವಲ ಬೌದ್ಧಿಕತೆ ಅಲ್ಲದೆ ಜೀವನ ಮೌಲ್ಯಾಧಾರಿತವೂ ಆದ ಮೂಲಶಿಕ್ಷಣದ ಪ್ರಗತಿ, ಸಮಾನತೆಯ ಸಾಧನೆಗಾಗಿ ಭೂಮಿ ಮತ್ತು ಸಂಪತ್ತುಗಳ ಪುನರ್ವಿಂಗಡಣೆ ಇವು ಆ ಯೋಜನೆಯ ಮೂಲಾಂಶಗಳು.

ಗಾಂಧೀ ಆದರ್ಶಗಳು

ಇತ್ತೀಚಿನ ದಿನಗಳಲ್ಲಿ ನಾವು ಪುನಃ ಗಾಂಧೀ ಆದರ್ಶಗಳಿಗೆ ಮರಳಿದ್ದೇವೆ. ಆರ್ಥಿಕ ತಜ್ಞರು ಯಾವುದನ್ನು ಸರ್ವಾಂಗೀಣ ಯೋಜನೆ (ಇಂಟೆಗ್ರೇಟೆಡ್ ಪ್ಲಾನಿಂಗ್) ಎನ್ನುವರೋ ಅದು ಗಾಂಧೀಜಿಯವರು ಸದಾ ಹೇಳುತ್ತಿದ್ದ ಮಾತುಗಳ ಆಧುನಿಕ ಪುನರಾವರ್ತನೆ. ಭಾರತೀಯ ಯೋಜನೆಗಳು ನಿರೀಕ್ಷಿಸಿದಷ್ಟು ಫಲದಾಯಕವಾಗದೆ ಹೋದದ್ದು ತಮ್ಮ ರಾಷ್ಟ್ರಪಿತನ ಈ ಮೂಲ ಆದರ್ಶಗಳಿಗನುಗುಣವಾಗಿ ಅವರು ತಮ್ಮ ಯೋಜನೆಗಳನ್ನು ರೂಪಿಸಿಕೊಳ್ಳದೆ ಇದ್ದುದರಿಂದಲೇ ಎಂದು ನನ್ನ ಅಭಿಪ್ರಾಯ. ಈ ಮಾತಿನಿಂದ ನನ್ನ ಭಾರತೀಯ ಬಾಂಧವರು ಸಿಟ್ಟಾಗಬಾರದು.

ಈ ವಿಫಲತೆಯ ಜವಾಬ್ದಾರಿ ಪ್ರಧಾನವಾಗಿ ನನ್ನಂಥ ಅರ್ಥಶಾಸ್ತ್ರಜ್ಞರಿಗೇ ಸೇರಿದ್ದು. ಈ ಗುಂಪಿಗೆ ಪಾಶ್ಚಾತ್ಯ ಪೌರಸ್ತ್ಯ ಸಾಮ್ಯವಾದಿ ಎಂಬ ಭೇದವಿಲ್ಲ. ಎಲ್ಲರೂ ಸಂಕುಚಿತ ದೃಷ್ಟಿಯಿಂದ ನೋಡಿದವರೇ; ಕೇವಲ ಭೌತಿಕ ಪ್ರಗತಿ ಪ್ರತಿಪಾದಕರೇ. ಸಾಮ್ರಾಜ್ಯಶಾಹೀ ದಾಸ್ಯದಿಂದ ಬಿಡುಗಡೆ ಹೊಂದೊಡನೆ ಅನೇಕ ಹಿಂದುಳಿದ ರಾಷ್ಟ್ರಗಳಲ್ಲಿ ಯೋಜನೆಗಳ ಸಂಶೋಧನೆ ಬಿರುಗಾಳಿಯ ಬಿರುಸಿನಿಂದ ನಡೆದಾಗ ಎಲ್ಲ ಅರ್ಥಶಾಸ್ತ್ರಜ್ಞರೂ ಭೌತಿಕ ಬಂಡವಾಳ ಹೂಡಿಕೆ,ಅದರಲ್ಲೂ ಕೈಗಾರಿಕಾ ಕ್ಷೇತ್ರದಲ್ಲಿ ಮಾತ್ರ, ಮತ್ತು ಹಣವ್ಯವಸ್ಥೆ–ಹಣನೀತಿಯ ರಚನೆ, ಇವುಗಳನ್ನೇ ಕುರಿತು ಆಲೋಚಿಸಿದರು. ಈ ದೃಷ್ಟಿ ನಮ್ಮ ಹಿಂದಿನ ಅರ್ಥಶಾಸ್ತ್ರಜ್ಞರಾದ ಆಡಂ ಸ್ಮಿತ್, ಆಲ್ಫ್ರೆಡ್ ಮಾರ್ಷಲ್‌ಗಳ ದೃಷ್ಟಿಕೋಣಗಳಿಗಿಂತಲೂ

ಸಂಕುಚಿತ. ಜನತೆಯ ಸಾಮಾನ್ಯ ಮನೋಧರ್ಮ ಮತ್ತು ವಿವಿಧ ಪರಂಪರಾನುಗತ ಸಂಸ್ಥೆಗಳನ್ನು ಗಮನದಲ್ಲಿಟ್ಟುಕೊಂಡು ಶಿಕ್ಷಣದಿಂದಲೂ ಇತರ ವಿಧಾನಗಳಿಂದಲೂ ಪರಿವರ್ತನೆ ಮಾಡುವ ಅಗತ್ಯತೆಯನ್ನೂ ಸಾಧ್ಯತೆಯನ್ನೂ ಅವರು ಲೆಕ್ಕ ಹಾಕಿದ್ದರು. ವಾಸ್ತವವಾಗಿ ನಾವು ಇಂದು ಅಂದುಕೊಳ್ಳುವ ಮುನ್ನವೇ ಅವರು 'ಸಂಸ್ಥಾಶಾಸ್ತ್ರಜ್ಞರು' (ಇನ್‌ಸ್ಟಿಟ್ಯೂಷನಲ್ ಎಕಾನೊಮಿಸ್ಟ್) ಅನ್ನಿಸಿಕೊಂಡಿದ್ದರು. ಮಾರ್ಕ್ಸ್ ಮತ್ತು ಅವನ ನಿಕಟ ಅನುಯಾಯಿಗಳೂ ಈ ವರ್ಗದವರೇ.

ನಿಸರ್ಗನಿಯಮ ವಿಜ್ಞಾನಿಗಳು ಹೇಗೆ ಸ್ಥಿರಾಂಕಗಳ ಮೌಲ್ಯಗಳ ಮೇಲೆ ಬೌದ್ಧಿಕವಾಗಿ ವಿಚಾರ ಮಾಡಿ ಹಿಂದಿನ ವಾಸ್ತವಾಂಶಗಳ ಹೊಸ ಗಣಿತದಿಂದ ಹೊಸ ಸಿದ್ಧಾಂತಗಳನ್ನು ಮಂಡಿಸುತ್ತಿದ್ದರೋ ಹಾಗೆಯೇ ಅರ್ಥಶಾಸ್ತ್ರಜ್ಞರೂ ಅತ್ಯಂತ ಮುಂದುವರಿದ ಕೈಗಾರಿಕಾ ರಾಷ್ಟ್ರಗಳ ಪ್ರಗತಿಯ ಅಂಶಗಳನ್ನು ಲೆಕ್ಕಹಾಕಿ ಸಿದ್ಧಾಂತ ಮಾಡಿದರು. ಎರಡನೆಯ ಯುದ್ಧದ ಅನಂತರ 'ಹಿಂದುಳಿದ' ಪ್ರದೇಶಗಳೆನಿಸಿದ್ದ ಅನೇಕ ರಾಷ್ಟ್ರಗಳಿಗೆ ತಂಡತಂಡವಾಗಿ ಹೋದ ಶಾಸ್ತ್ರಜ್ಞರು ಆ ಪ್ರದೇಶಗಳ ವಾಸ್ತವಾಂಶಗಳ ಬಗ್ಗೆ ಯಾವ ಪೂರ್ವಭಾವೀ ಸಂಶೋಧನೆಗಳನ್ನೂ ನಡೆಸದೆ ಸಿದ್ಧಾಂತಗಳನ್ನು ಅನ್ವಯಿಸಲು ಹೊರಟುಬಿಟ್ಟರು. ಅಭಿವೃದ್ಧಿಯಲ್ಲಿ ಹಿಂದುಳಿದ ರಾಷ್ಟ್ರಗಳಲ್ಲಿ ಯೋಜನೆ ಸಿದ್ಧಪಡಿಸಲು ಈ ಹಿಂದೆ ಮತ್ತು ಈಗಲೂ ಸ್ವಲ್ಪಭಾಗ ಆರ್ಥಿಕತಜ್ಞರು ಪ್ರಧಾನವಾಗಿ ವಿಚಾರ ಮಾಡುವುದು ಬಂಡವಾಳ ಮತ್ತು ಉತ್ಪಾದನೆಯ ಸಮೀಕರಣವನ್ನಷ್ಟೆ. ಇದರಿಂದಲೇ ವಿಚಾರಮಾರ್ಗ ಸಂಕುಚಿತವಾಗಿ, ಹಣವ್ಯವಸ್ಥೆ ವಿನಿಮಯಗಳ ವ್ಯಾಪಕ್ಕೆ ಸೀಮಿತವಾಗಿ, ಭೌತಿಕ ಉತ್ಪಾದನೆಗೆ ಪ್ರಾಶಸ್ತ್ಯ ದೊರೆತು ಆರ್ಥಿಕ ಯೋಜನೆಯಲ್ಲಿಯ ಮಾನವೀಯ ಮೌಲ್ಯಗಳು ಗಣನೆಗೇ ಬರುವುದಿಲ್ಲ. ಹೆಚ್ಚು ಅಭಿವೃದ್ಧಿಹೊಂದಿದ ರಾಷ್ಟ್ರಗಳಲ್ಲೂ ಭೌತಿಕ ಬಂಡವಾಳ ಹೂಡಿಕೆ ಆರ್ಥಿಕ ಅಭಿವೃದ್ಧಿಯ ಒಂದು ಅಂಶ ಮಾತ್ರ ಎಂದು ಸೂಕ್ಷ್ಮ ಅಧ್ಯಯನದಿಂದ ಅರಿವಾಗುತ್ತಿದೆ. ಆ ರಾಷ್ಟ್ರಗಳಲ್ಲಿ ವಿಪುಲವಾದ ಸಂಖ್ಯಾಸಂಗ್ರಹಗಳಿದ್ದರೂ ಭೌತಿಕ ಯೋಜನೆಗಳಿಗೆ ಹೊರತಾದ ಆದರೂ ಆರ್ಥಿಕ ಅಭಿವೃದ್ಧಿಗೆ ಮುಖ್ಯವಾದ ಅಂಶಗಳ ಬಗ್ಗೆ ಇನ್ನೂ ಖಚಿತವಾದ ತಿಳಿವಳಿಕೆ ಸಾಧ್ಯವಾಗಿಲ್ಲ.

ಏನನ್ನು ಮರೆತಿದ್ದೇವೆ?

ಈ ಶತಮಾನದ ಮಧ್ಯಭಾಗದ ವರೆಗೆ ಈ ಅದೃಶ್ಯ ಅಂಶವನ್ನು "ಮಾನವ ಸತ್ವದ ವಿನಿಯೋಜನೆ" (ಇನ್ವೆಸ್ಟ್‌ಮೆಂಟ್ ಇನ್ ಮ್ಯಾನ್) ಅಥವಾ ಶಿಕ್ಷಣ ಕ್ರಿಯೆ ಎಂದಷ್ಟೇ ವಿವರಣೆ ಕೊಟ್ಟು ಸಾಗುತ್ತಿದ್ದರು. ಶಿಕ್ಷಣಕ್ಕೂ ಆರ್ಥಿಕ ಅಭಿವೃದ್ಧಿಗೂ ನಿಕಟಬಾಂಧವ್ಯ ಉಂಟು ಎಂಬುದೇ ಹೊಸ ವಿಚಾರ, ಹೊಸ ಸಂಶೋಧನೆ ಎನ್ನುತ್ತಿದ್ದರು. ಯುದ್ಧಪೂರ್ವ ಅರ್ಥಶಾಸ್ತ್ರರು ಇದನ್ನು ಅರಿತಿದ್ದರೂ ಅನಂತರದವರು ಶಿಕ್ಷಣ ಒಂದು ಅಂಶ ಎಂಬುದನ್ನು ಮರೆತೇ ಯೋಜಿಸುತ್ತಿದ್ದರು.

ಈ ಹೊಸ ತಜ್ಞರು ಇನ್ನೂ ಮುಂದೆ ಹೋಗಿ ಶಿಕ್ಷಣವನ್ನೂ ಒಂದು ಭೌತಿಕ ಬಂಡವಾಳಹೂಡಿಕೆಯೆಂದೇ ಪರಿಗಣಿಸುವ ತಪ್ಪು ಮಾಡಿದರು. ಬಂಡವಾಳ-ಉತ್ಪಾದನೆ ತತ್ವವನ್ನೇ ಇದಕ್ಕೂ ಪ್ರಯೋಗಿಸಿದರಾಯಿತು ಎಂದರು. ಕಾರ್ಖಾನೆಗಳಂತೆಯೇ ಶಿಕ್ಷಿತ ಜನಾಂಗವನ್ನು ಹೇರಳವಾಗಿ ತಯಾರಿಸಬಹುದೆಂಬ ಬೃಹತ್ ಯೋಜನೆಗೇ ಪ್ರಾಶಸ್ತ್ಯ ಕೊಟ್ಟರು. ಶಿಕ್ಷಣದ ಅಂತಃಸತ್ವ, ಶಿಕ್ಷಣದ ವಸ್ತು ಎಂಥದಿರಬೇಕು, ಎಂಥ ಮಾನವೀಯ ಮೌಲ್ಯಗಳನ್ನು ಬೆಳೆಸಬೇಕು ಅನ್ನುವ ಮೂಲತತ್ವವೇ ಅತ್ಯಂತ ಪ್ರಮುಖ ಬಂಡವಾಳ ಎಂಬುದನ್ನು ಮರೆತುಬಿಟ್ಟರು. ಎಲ್ಲ ಹಿಂದುಳಿದ ರಾಷ್ಟ್ರಗಳಲ್ಲೂ ಹಿಂದಿನ ವಸಾಹತುಶಾಹಿಯಲ್ಲಿ ಪ್ರಚಲಿತವಾಗಿದ್ದ ವಿದ್ಯಾಭ್ಯಾಸ ಕ್ರಮವೇ ಇದೆ. ಸಾಮ್ರಾಜ್ಯ ಹಿತಾಸಕ್ತಿಗಳನ್ನು ರಕ್ಷಿಸಲು ಹಾಗೂ ಅದರ ಆಶ್ರಯವನ್ನವಲಂಬಿಸಿ ಬೆಳೆದ ಉನ್ನತ ಮತ್ತು ಮಧ್ಯಮವರ್ಗದವರಿಗೆ ಇದು ಲಾಭದಾಯಕವೆನಿಸಿತ್ತು. ಆ ಕಾರಣದಿಂದಲೇ ಈ ದಾಸ್ಯ ಕಾರಕೂನ ಶಿಕ್ಷಣ ನಿಜವಾದ ಆರ್ಥಿಕ ಅಭಿವೃದ್ಧಿಗೆ ಮಾರಕವಾಗಿದೆ. ಶರೀರಶ್ರಮವನ್ನು ನಿರಾಕರಿಸುವ ಮನೋಭಾವ ಬೆಳೆದ ವಿದ್ಯಾವಂತರ ನಿರ್ಮಾಣವಾದುದೇ ಅದಕ್ಕೆ ಕಾರಣ.

ನೆಹರೂ ದೃಷ್ಟಿ

ಶಿಕ್ಷಣ ಕ್ರಮದ ಆಮೂಲಾಗ್ರ ಪರಿವರ್ತನೆಗೆ ನೆಹರೂ ಕರೆಯಿತ್ತಿದ್ದರು. ವಿಶ್ವದ ಇತರ ನೂತನ ಸ್ವತಂತ್ರ ರಾಷ್ಟ್ರಗಳ ನಾಯಕರೂ ಪ್ರವಾದಿಗಳೂ ಹೀಗೆಯೇ ಹೇಳಿದರು. ಆದರೆ ಶಿಕ್ಷಣಕ್ರಮ ಬದಲಾಗಲೇ ಇಲ್ಲ. ಬುದ್ಧಿಜೀವಿಗಳ ಮೇಲ್ವರ್ಗದವರ ಒತ್ತಾಯಕ್ಕೆ ಮಣಿದು ಶಾಲೆಗಳ ಅಗಾಧ ಸಂಖ್ಯೆ ಬೆಳೆಯಿತು. ಅವರದೇ ಅಧಿಕಾರಶಾಹಿ ಇದನ್ನೂ ಜಾರಿಗೆ ತಂದಿತು. ಆದಷ್ಟು ಬೇಗ ಅನಕ್ಷರತೆಯನ್ನು ನಿರ್ಮೂಲ ಮಾಡಿಬಿಡಬೇಕು ಎಂಬ ಘೋಷಣೆಯನ್ನೇ ಸರ್ಕಾರಗಳು ಮಾಡತೊಡಗಿದುವು. ಇದರಿಂದಾದ ಪರಿಣಾಮವೇನು? ವಿಶ್ವವಿದ್ಯಾಲಯಗಳು ಅನಗತ್ಯ ದೊಡ್ಡ ಪ್ರಮಾಣದಲ್ಲಿ ಬೆಳೆದು ನಿಂತುವು. ಪ್ರೌಢ ಶಾಲೆಗಳು ಅಷ್ಟು ಬೇಕಿಯಲಿಲ್ಲ. ಪ್ರಾಥಮಿಕ ವಿದ್ಯಾಭ್ಯಾಸವಂತೂ ಸಾಲದೇ ಹೋಯಿತು. ಶಿಖರದಲ್ಲಿನ ಅತ್ಯಂತ ದೊಡ್ಡ ಪೆಟ್ಟ ಅಡಿಯಲ್ಲಿಯ ಶಾಲೆಗಳಿಗಿಂತ ನೂರುಪಟ್ಟು ಹೆಚ್ಚಾದರೂ ಹೀಗೆಯೇ ಬೆಳೆಯುತ್ತಿದೆ. ಎಲ್ಲಿ ವಿದ್ಯಾಭ್ಯಾಸವೂ ಅತಿಸಾಮಾನ್ಯಜ್ಞಾನದ ಸ್ಥೂಲ ಪರಿಚಯವಾಗಿ ಪರಿಣಮಿಸಿತು. ತಾಂತ್ರಿಕ ಹಾಗೂ ವೃತ್ತಿ ಶಿಕ್ಷಣ ಕೇವಲ ಅಲ್ಪ ಪ್ರಮಾಣದಲ್ಲಿ ಅಂಚಿನಲ್ಲೇ ಉಳಿಯಿತು.

ಹಾಗೆಯೇ ವಯಸ್ಕರ ಶಿಕ್ಷಣ ಈ ದಕ್ಷಿಣ ವಿಶ್ವದ ರಾಷ್ಟ್ರಗಳಲ್ಲೆಲ್ಲಾ ಇನ್ನೂ ಕಡೆಗಣಿಸಲ್ಪಟ್ಟಿರುವುದೂ ಒಂದು ಗಂಭೀರ ಕಂಟಕ. ಆರ್ಥಿಕ ಅಭಿವೃದ್ಧಿ ಹೊಂದಬೇಕಾದ ರಾಷ್ಟ್ರಕ್ಕೆ ವಯಸ್ಕರ ಶಿಕ್ಷಣ ಅತಿಮುಖ್ಯವಾದ್ದು. ಎಲ್ಲರೂ ಅಕ್ಷರಸ್ಥರಾಗಲು, ಎಲ್ಲ ಪ್ರಾಥಮಿಕ ವಿದ್ಯಾಭ್ಯಾಸವೂ ಸಫಲವಾಗಲು ವಯಸ್ಕರ ಶಿಕ್ಷಣ ಅತಿ ವೇಗದಿಂದ ನಡೆಯಬೇಕು. ಪ್ರಾಥಮಿಕ ಶಾಲೆಗೆ ಹೋದವರೂ ಬಹುಬೇಗ ಅನಕ್ಷರಸ್ಥರಾಗಿ ಬಿಡುವ ಪರಿಸ್ಥಿತಿ ಶೋಚನೀಯ. ಅನಕ್ಷರಸ್ಥ ಸಮಾಜದಲ್ಲಿ ಅವರು ಅಲ್ಪ ಸಂಖ್ಯಾತರಾಗಿ ಬಿಡುತ್ತಾರೆ. ಪ್ರಗತಿಯ ಪ್ರಯತ್ನದಲ್ಲಿ ಮಧ್ಯೆ ಉರುಳುವುದೇ ಸಾಮಾನ್ಯವಾಗಿ ಬಿಡುತ್ತದೆ. ಈ ವಿಷಯದಲ್ಲಿ ಸಾಮ್ಯವಾದಿ ರಾಷ್ಟ್ರಗಳು ಅನುಕರಣಯೋಗ್ಯವಾಗಿವೆ. ಸಾಮ್ಯವಾದಿ ರಾಷ್ಟ್ರವಾದೊಡನೆಯೇ ಸರ್ವಪ್ರಯತ್ನದಿಂದ ಆದಷ್ಟು ಕ್ಷಿಪ್ರವಾಗಿ ಅನಕ್ಷರತೆಯನ್ನು ಅವರು ನಿರ್ನಾಮ ಮಾಡುತ್ತಾರೆ. ಈ ಕ್ರಮ ಸಾಮ್ಯವಾದ ಪ್ರಚಾರ ಎಂದಲ್ಲ; ಶುದ್ಧ ವ್ಯಾವಹಾರಿಕ ವಿವೇಕ, ಒಳ್ಳೆಯ ಒಂದು ಯೋಜನೆ.

ಶಿಕ್ಷಣದ ತಿರುಳು. ಅದರ ಕ್ರಮ, ಅದರ ಗುರಿ ಇವು ಮುಖ್ಯ. ಯಾರನ್ನು ನಾವು ಈಗ ವಿದ್ಯಾವಂತ ನಿರುದ್ಯೋಗಿಗಳು ಎನ್ನುತ್ತೇವೋ ಅವರು ಬಹುಮಟ್ಟಿಗೆ ಅಪವಿದ್ಯಾವಂತರೇ ಆಗಿರುತ್ತಾರೆ. ಅವರನ್ನು ದೇಹಶ್ರಮ ಸಹಿತ ರಚನಾತ್ಮಕ ಕೆಲಸಗಳಲ್ಲಿ ತೊಡಗಿಸಲು ಹಳ್ಳಿಗಳಿಗೆ ಕಳುಹಿಸಬೇಕೆಂಬುದು ಸುಧಾರಕರ ಕನಸು. ಅಧಿಕಾರ ಯಂತ್ರದ ಕೆಳಮಟ್ಟದ ನೌಕರಿಗಳಿಗಾಗಿ ಹಂಬಲಿಸಿ, ಸರ್ಕಾರವನ್ನು ಒತ್ತಾಯಿಸಿ ಅನುಪಯುಕ್ತವೂ ಅನಗತ್ಯವೂ ಆದ ನೌಕರ ಸಂಖ್ಯೆಯನ್ನು ಬೆಳೆಸುವುದರಲ್ಲಿ ಇವರು ತೊಡಗಿರುತ್ತಾರೆ. ಶಿಕ್ಷಣದ ಸರ್ವತ್ರ ಪರಿವರ್ತನೆಯಾಗದೆ ಆರ್ಥಿಕ ಅಭಿವೃದ್ಧಿ ಸುಗಮವಾಗದು. ಮೇಲ್ವರ್ಗದ ಬುದ್ಧಿಜೀವಿಗಳ ಜಾಗೃತಿಗಿಂತ ಹೆಚ್ಚಾಗಿ ತಳಮಟ್ಟದ ಬಹುಸಂಖ್ಯಾತರು ಎಚ್ಚರಗೊಂಡು 'ಬುಡದಲ್ಲಿನ ಒತ್ತಡ' ಹೆಚ್ಚಾದಾಗ ಮಾತ್ರವೇ ತ್ವರಿತ ವ್ಯವಸ್ಥಿತ ಅಭಿವೃದ್ಧಿ ಸಾಧ್ಯ. ಸಾಮಾನ್ಯ ಜನ ತಮ್ಮ ಹಿತಾಸಕ್ತಿಗಳನ್ನರಿತು ತಾವೇ ಕರ್ತೃತ್ವಪ್ರೇರಿತರಾಗಿ ಸಂಘಟನೆ ಮಾಡಿಕೊಂಡು ವಿವೇಕಯುತ ಸಮಾಜ ಪರಿವರ್ತನೆಗೆ ಒತ್ತಾಯ ಮಾಡಲು ಶ್ರಮವಹಿಸಬೇಕು.

ಕ್ರಿಯಾತ್ಮಕ ವಿವೇಕ

ಮತಧರ್ಮಗಳ ಅಂಧಶ್ರದ್ಧೆ ಅಥವಾ ಇನ್ನಿತರ ಭಾವುಕ ಆವೇಶಗಳಿಂದ ಪ್ರೇರಿತವಾದ ಜನತಾ ಆಂದೋಲನಗಳು ಸಾಮಾನ್ಯರ ಜೀವನೋತ್ಕರ್ಷ ಸಾಧನಗಳಾಗಲಾರವು. ಬದಲಾಗಿ ಸಾಮಾಜಿಕ ವಿಕಾಸ ಆರ್ಥಿಕ ಅಭಿವೃದ್ಧಿಗಳಿಗೆ ಅದರಿಂದ ವಿಪರೀತ ಹಾನಿಯಾಗುತ್ತದೆ. ಇಂಥ ದಂಗೆಗಳನ್ನು ದಮನ ಮಾಡಲು ಇರುವ ಒಂದೇ ಮಾರ್ಗ ಒಳ್ಳೆಯ ಶಿಕ್ಷಣ ಕ್ರಮ. ಈ ಬಗ್ಗೆ ನನ್ನ ವಿಶೇಷ ಒತ್ತಾಯಕ್ಕೆ ಕಾರಣವಿಷ್ಟೆ. ಆರ್ಥಿಕ ಅಭಿವೃದ್ಧಿಗೆ ಈ ರಾಷ್ಟ್ರಗಳಲ್ಲಿ ಅತ್ಯಗತ್ಯವಾದ ಒಂದು ಪರಿಸರ ನಿರ್ಮಾಣವಾಗಬೇಕಾದರೆ ಸಾಮಾಜಿಕ–ಆರ್ಥಿಕ ಸಮತಾ ಯೋಜನೆಗಳು ಏಕೀಭವಿಸಿ ನಡೆಯಬೇಕು. ಇವು ಪರಸ್ಪರ ವಿರೋಧ ಕ್ರಿಯೆಗಳಲ್ಲ. ಪೂರಕಗಳು. ಜನತೆಯ ಸಂಪತ್ತಿನ ನಿರ್ಮಾಣಶಕ್ತಿಯನ್ನು ಬೆಳೆಸಲು ದುಡಿಮೆಗಾರರ ಬಲ ಹೆಚ್ಚಿಸಲು ಈ ಶಿಕ್ಷಣಕ್ರಾಂತಿ ನಮ್ಮ ಯೋಜನೆಗಳ ಪ್ರಧಾನ ಅಂಗವಾಗಬೇಕು.

ಈ ದಿಶೆಯಲ್ಲಿ ಪ್ರಾಚೀನ ಸಾಂಪ್ರದಾಯಿಕ ಅರ್ಥಶಾಸ್ತ್ರಜ್ಞರಿಗಿಂತ ಹೆಚ್ಚಾಗಿ ಈಚಿನವರೇ ತಪ್ಪು ದಾರಿ ಹಿಡಿದಿದ್ದಾರೆ. ಸರ್ವಸಾಮಾನ್ಯವಾಗಿ ಸಮಾಜಸುಧಾರಣೆಗಾಗಲಿ ಶಿಕ್ಷಣವನ್ನು ಆಧುನಿಕಗೊಳಿಸುವುದಕ್ಕಾಗಲಿ ಮಾಡುವ ವೆಚ್ಚ ಯೋಜನೆಗಳ ಪ್ರಗತಿಗೆ, ಆರ್ಥಿಕ ಅಭ್ಯುದಯಕ್ಕೆ ಆತಂಕವಾಗುವ ಅನುತ್ಪಾದಕ ವೆಚ್ಚ ಎಂದೇ ನಮ್ಮ ಆರ್ಥಿಕ ತಜ್ಞರು ಇಂದಿಗೂ ಪ್ರಬಲವಾಗಿ ಪ್ರತಿಪಾದಿಸುತ್ತಾರೆ. ಇದು ನಮ್ಮ ದೌರ್ಭಾಗ್ಯ.

ಸ್ವೀಡನ್ನಿನ ಉದಾಹರಣೆ

ನನ್ನ ದೇಶವಾದ ಸ್ವೀಡನ್ನಿನಲ್ಲಿ ನಲವತ್ತು ವರ್ಷಗಳಿಂದ ಕಾರ್ಮಿಕ ಪಕ್ಷವೇ ಆಡಳಿತ ನಡೆಸುತ್ತಿದೆ. ಹೆಚ್ಚು ಹೆಚ್ಚಾಗುತ್ತಿರುವ ಸಾಮಾಜಿಕ ಸುಧಾರಣಾ ಕಾರ್ಯದಲ್ಲಿ ಅದು ಸತತವಾಗಿ ತೊಡಗುತ್ತಲೇ ಇದೆ. ಸಾಮಾಜಿಕ ಸಮಸ್ಯೆಗಳು ಯಾವಾಗಲೂ ಇದ್ದೇ ಇರುತ್ತವೆ. ಹೊಸವು ಹುಟ್ಟಿಕೊಳ್ಳುತ್ತಿರುತ್ತವೆ. ಆರ್ಥಿಕ ಅಭಿವೃದ್ಧಿಯ ಕಾರಣವಾಗಿಯೇ ಅನೇಕ ಸಮಸ್ಯೆಗಳು ಉದ್ಭವವಾಗುತ್ತವೆ. ಸಂಪ್ರದಾಯಸ್ಥ ಅರ್ಥಶಾಸ್ತ್ರಜ್ಞರೂ ಪ್ರತಿಯೊಂದು ಸುಧಾರಣೆಯ ಕಾಲಕ್ಕೂ ಆರ್ಥಿಕ ವಿಪತ್ತಿನೆಡೆಗೆ ಸಾಗುತ್ತಿದ್ದೇವೆಂದು ಎಚ್ಚರಿಕೆ ಕೊಡುತ್ತಲೇ ಇದ್ದರು. ಇಂದು ವಾಸ್ತವವಾಗಿ ಆರ್ಥಿಕ ಬೆಳವಣಿಗೆಯ ದೃಷ್ಟಿಯಿಂದ ನಮ್ಮ ದೇಶ ಅಮೆರಿಕ ಸಂಯುಕ್ತಸಂಸ್ಥಾನಕ್ಕಿಂತಲೂ ಮುಂದೆ ಹೋಗಿದೆ. ಅಸ್ತವ್ಯಸ್ತ ಅಂಕಿಅಂಶಗಳ ಮಾನದಂಡದಿಂದ ರಾಷ್ಟ್ರೀಯ ಒಟ್ಟು ಉತ್ಪನ್ನವನ್ನು ಅಳೆಯುವ ಪದ್ಧತಿಯಿಂದ ಅಮೆರಿಕದ ಪ್ರಗತಿ ಉತ್ಪ್ರೇಕ್ಷೆಗೊಂಡಿದೆ ಅಷ್ಟೆ.

ಆರ್ಥಿಕ ಸಮತೆಯ ಸುಧಾರಣೆಗಳಿಗೂ ಆರ್ಥಿಕ ಬೆಳವಣಿಗೆಗೂ ಎಷ್ಟು ನಿಕಟ ಬಾಂಧವ್ಯವುಂಟು ಎಂದು ನಮ್ಮ ದೇಶದ ಉದಾಹರಣೆ ತೋರಿಸುತ್ತದೆ. ಸಂಪತ್ಸಮೃದ್ಧಿಯ ದೇಶವೊಂದರಲ್ಲಿ ಇದು ನಿಜವಾದರೆ ಬಡತನದ ದೇಶಗಳಿಗೆ ಇದು ಇನ್ನೂ ಹೆಚ್ಚು ಅನ್ವಯವಾಗುತ್ತದೆ. ದುಡಿಮೆಗಾರರ ಉತ್ಪಾದನ ಶಕ್ತಿ ಹೆಚ್ಚಲು ಈ ಸಮಾನ ವಿತರಣೆ ಜೊತೆಯಲ್ಲಿ ಸಾಗಬೇಕು. ಈ ಸಾಮಾಜಿಕ ಬದಲಾವಣೆಯಿಂದ ಮಾತ್ರವೇ ಆ ಶಕ್ತಿ ಹೆಚ್ಚೀತು. ಶ್ರೀಮಂತ ದೇಶಗಳಲ್ಲಿ ವಸ್ತು ಬಳಕೆ ಹಾಗೂ ಜೀವನಮಟ್ಟಗಳನ್ನು ವಾಸ್ತವವಾಗಿ ಪರಿಗಣಿಸದೆ ಅವುಗಳನ್ನೇ ಆರ್ಥಿಕ ಬೆಳವಣಿಗೆಯ ಗುರಿ ಎಂದೆಣಿಸಿ ಮಾದರಿ ಯೋಜನೆಗಳು ಸಿದ್ಧವಾಗುತ್ತವೆ. ಈ ಮಾದರಿ ಹಿಂದುಳಿದ ರಾಷ್ಟ್ರಗಳಿಗೆ ಅನ್ವಯವಾದರೆ ಅದು ಅತ್ಯಂತ ಅಪಾಯಕಾರಿಯಾದೀತು. ಮುಂದರಿದ ದೇಶಗಳಲ್ಲಿ ಈಗಾಗಲೇ ಆಹಾರ, ಆರೋಗ್ಯ, ಶಿಕ್ಷಣ, ವಸತಿ ಈ ಎಲ್ಲ ಅನುಕೂಲಗಳೂ ಸರ್ವರಿಗೂ ಹೇರಳವಾಗಿ ದೊರೆಯುತ್ತಿವೆ. ಇವುಗಳನ್ನು ಹೆಚ್ಚಿಸುವ ಅವಶ್ಯಕತೆ ಅವರಿಗಿಲ್ಲ. ದುಡಿಮೆಗಾರನ ಜೀವನಾವಶ್ಯಕತೆಗಳಿಗೆ ಕೊರತೆಯಿಲ್ಲ. ಅವುಗಳ ಹೆಚ್ಚಳದ ಆಕರ್ಷಣೆಯಿಂದ ಅವನ ಉತ್ಪಾದನ ಶಕ್ತಿ ದಕ್ಷತೆಗಳನ್ನು ಅವನು ಹೆಚ್ಚಿಸಿಕೊಳ್ಳುವುದಿಲ್ಲ. ಅತ್ಯಂತ ಕೆಳಮಟ್ಟದ ವರ್ಗಗಳಿಗೂ ಅಲ್ಲಿ ವರಮಾನ ಹೆಚ್ಚು. ಸಾಮಾಜಿಕ ಭದ್ರತೆ ಉಂಟು. ಆರ್ಥಿಕ ಮುಗ್ಗಟ್ಟಿನ ಭಯ ಅವರಿಗಿಲ್ಲದಂತೆ ರಕ್ಷಣೆಯಿದೆ.

ಆದರೆ ಅಭಿವೃದ್ಧಿಯಾಗದ ರಾಷ್ಟ್ರಗಳಲ್ಲಿ ಎಲ್ಲ ಮಟ್ಟಗಳಲ್ಲಿಯೂ ಜೀವನಾವಶ್ಯಕತೆಗಳ ಅಭಾವವಿದೆ. ಉತ್ಪಾದನ ಶಕ್ತಿ ಹೆಚ್ಚಲು ಎಲ್ಲರಿಗೂ ಆವಶ್ಯಕವಸ್ತುಗಳ ಬಳಕೆಯ ಸಾಮರ್ಥ್ಯವೂ ಹೆಚ್ಚುವುದು ಇಲ್ಲಿ ಅಗತ್ಯ. ಕೆಲವು ಅಗತ್ಯವಸ್ತುಗಳು ಹೇರಳವಾಗಿ ಉತ್ಪಾದನೆಯಾಗಿ ಬಳಕೆಗೆ ಒದಗಬೇಕಾಗುತ್ತವೆ. ಆದ್ದರಿಂದಲೇ ಯೋಜನೆ ಕ್ಲಿಷ್ಟವಾಗುತ್ತದೆ. ಎಲ್ಲರಿಗೂ ಜೀವನಾವಶ್ಯಕತೆಗಳ ಸರಬರಾಯಿ ಇದೆಯೋ ಎಂಬ ಅಂಶವೂ ಇಲ್ಲಿ ಬೆಳವಣಿಗೆಯ ಒಂದು ಮುಖ್ಯ ಅಂಶ. ಯೋಜನೆಯ ಮಾದರಿ ಇದನ್ನು ಗಮನಿಸಬೇಕು. ಅಲ್ಲದೆ ವಸ್ತುಗಳ ಬಳಕೆಯ ವಿಧಾನಗಳನ್ನೂ ಪ್ರಗತಿಯ ದೃಷ್ಟಿಯಿಂದಲೇ ಬದಲಿಸಬೇಕಾಗುತ್ತದೆ. ಸಾಮಾನ್ಯವಾಗಿ ಸರ್ವರ ಕನಿಷ್ಠ ಅವಶ್ಯಕತೆಗಳಾದ ಆಹಾರ, ಆರೋಗ್ಯ, ಶಿಕ್ಷಣ, ವಸತಿಗಳನ್ನು ಗಮನಿಸಿಯೇ ಬಳಕೆಯನ್ನೂ ಉತ್ಪಾದನೆಯನ್ನೂ ನಿಯಂತ್ರಿಸುವುದು ಅವಶ್ಯಕವಾಗುತ್ತದೆ.

ಅಪವ್ಯಯವಲ್ಲ

ಸಾಮಾಜಿಕ ಸಮಾನತಾ ಸಾಧನೆ ನನ್ನ ದೃಷ್ಟಿಯಲ್ಲಿ ಅತ್ಯಗತ್ಯ. ಅದರ ವೆಚ್ಚ ಎಂದಿಗೂ ಆರ್ಥಿಕ ಹೊರೆ

ಎನಿಸಬಾರದು. ವೈಜ್ಞಾನಿಕವಾಗಿ ವಿಶ್ಲೇಷಿಸಿ ಯೋಜನೆಮಾಡಿ ಪ್ರಾಮಾಣಿಕವಾಗಿ ಜಾರಿಗೆ ತಂದಲ್ಲಿ ಅದು ವಿಪುಲ ಲಾಭದಾಯಕವಾಗುತ್ತದೆ; ಅಷ್ಟೇ ಅಲ್ಲದೆ ಆರ್ಥಿಕ ಬೆಳವಣಿಗೆಗೆ ಪ್ರಮುಖ ಸಾಧನವಾಗುತ್ತದೆ. ಒಂದು ಹಿಂದುಳಿದ ರಾಷ್ಟ್ರ ಕೈಗೊಳ್ಳಬಹುದಾದ ಆರ್ಥಿಕ ಬಂಡವಾಳ ಹೂಡಿಕೆಗಳಲ್ಲಿ ಈ ವೆಚ್ಚ ಒಂದು ಅತ್ಯಗತ್ಯ ಲಾಭದಾಯಕ ಬಂಡವಾಳ ಎಂದೇ ನನ್ನ ಅಭಿಪ್ರಾಯ. ಈ ಲಾಭ ಪಡೆಯಲು ಕಾಲಾವಕಾಶ ಹೆಚ್ಚು ಬೇಕಾಗಬಹುದು. ಹಣವಂತವರ್ಗ ಅನಗತ್ಯ ವಸ್ತುಗಳ ಬಳಕೆಯನ್ನು ಕಡಮೆ ಮಾಡಬೇಕಾದೀತು. ಜೀವನ ಸೌಲಭ್ಯಗಳನ್ನು ಹೇರಳವಾಗಿ ಪಡೆದಿರುವವರು ಬಹು ಸಂಖ್ಯಾತ ಬಡ ಬಂಧುಗಳಿಗಾಗಿ ತ್ಯಾಗಮಾಡಬೇಕಾಗಬಹುದು. ಕ್ರಮೇಣ ಒಟ್ಟು ಸಾಮುದಾಯಿಕ ಲಾಭದಲ್ಲಿ ಪಾಲ್ಗೊಳ್ಳುವುದರಿಂದ ಈ ತ್ಯಾಗ ಹೆಚ್ಚು ಭಾರವೆನಿಸಲಾಗದು. ಆರ್ಥಿಕ ಬೆಳವಣಿಗೆ, ರಾಷ್ಟ್ರೀಯ ಭಾವೈಕ್ಯ ಮತ್ತು ಸಂಘಟನೆ ಹಾಗೂ ರಾಜಕೀಯ ಸ್ಥಿರತೆ ಇವು ಒಂದೇ ಸಮಯಕ್ಕೆ ಸಾಧಿತವಾಗುವುವು.

ಭೂಸ್ವಾಮ್ಯ ಮತ್ತು ಗುತ್ತಿಗೆದಾರಿಕೆಗಳ ಸುಧಾರಣೆಯನ್ನು ದೃಷ್ಟಿಯಲ್ಲಿಟ್ಟು ನಾನು ಹೇಳುತ್ತಿದ್ದೇನೆ ಮಾನವ–ಭೂಮಿ ಬಾಂಧವ್ಯ ಪುನರ್ವ್ಯವಸ್ಥಿತವಾಗಿ ದುಡಿಮೆಗಾರ ಹೆಚು ಉತ್ಸಾಹದಿಂದ ಹೆಚ್ಚು ದಕ್ಷತೆಯಿಂದ ಶ್ರಮ ಮಾಡಿ ವ್ಯವಸಾಯವನ್ನು ಉತ್ತಮಪಡಿಸಿ ಉತ್ಪಾದನೆಯನ್ನು ಅನೇಕಪಟ್ಟು ಹೆಚ್ಚಿಸುವಂತೆ ಆಗಬೇಕು.

ಒಳ್ಳೆಯ ಆಡಳಿತ

ತೆರಿಗೆಗಳ ಅಂದಾಜು ಮತ್ತು ವಸೂಲಿಗಳ ಕ್ರಮ ದಕ್ಷತೆಯಿಂದ ನಡೆಯಬೇಕು. ಈ ಪ್ರದೇಶದ ರಾಷ್ಟ್ರಗಳಲ್ಲೆಲ್ಲ ಭ್ರಷ್ಟಾಚಾರ ನಿರ್ನಾಮವಾಗಬೇಕು. ಈ ಅವನತಿಯ ದಾರಿ ಹಿಡಿದಿರುವ ಸಮಾಜಗಳಲ್ಲಿ ಇದು ವಿಷದಂತೆ ವ್ಯಾಪಿಸಿಬಿಟ್ಟಿದೆ. ಇದರಿಂದ ದುರ್ಲಾಭ ಪಡೆಯುವವರು, ಹಣವಂತರಾಗುವವರು ರಾಜಕೀಯ ಆರ್ಥಿಕ ಸಾಮಾಜಿಕ ಕ್ಷೇತ್ರಗಳಲ್ಲಿ ಅಧಿಕಾರ ಪ್ರಭಾವವುಳ್ಳವರೇ. ಸಮಾಜನ್ಯಾಯ ದೊರೆಯಲು ಈ ಭ್ರಷ್ಟಾಚಾರ ನಿಲ್ಲಬೇಕು. ಅದಕ್ಕಿಂತ ಹೆಚ್ಚಾಗಿ ಸರ್ವ ಸಮಾನತೆಯ ಆಧಾರದ ಮೇಲೆ ಮಾನವೀಯ ಬಾಂಧವ್ಯಗಳು ಬೆಳೆದಾಗ ಆರ್ಥಿಕ ಸಂಪದಭಿವೃದ್ಧಿಯೂ ಹೆಚ್ಚೀತು.

ಶಿಕ್ಷಣ ವ್ಯವಸ್ಥೆ ಮಾರ್ಪಾಡಾಗಬೇಕಾದ್ದು ಅತ್ಯಗತ್ಯ. ಸಾಮಾನ್ಯ ಜನ ತಾವೇ ಅರಿತು ಯೋಜನೆಗಳನ್ನು ಸಫಲಗೊಳಿಸಿದಾಗ ಮಾತ್ರವೇ ಉನ್ನತಿ ಸಾಧ್ಯ. ಇದು ಪ್ರಧಾನವಾದ ಅಂಶ. ಪ್ರಭಾವಯುತ ಶಕ್ತಿಶಾಲೀ ಪರಿವರ್ತನಾಕ್ರಿಯೆ ಸಮಾಜದ ಮೇಲ್ವರ್ಗದಿಂದಲೂ ಉದಯಿಸಿ ಬರಬಹುದು. ಬುಡದಿಂದ ಸಾಮಾನ್ಯರ ಆಕಾಂಕ್ಷೆಗಳ ಒತ್ತಡ ಇದಕ್ಕೆ ಒತ್ತಾಸೆ ನೀಡದಿದ್ದರೆ ಅದು ಸಾಗದು. ಪ್ರಾಮಾಣಿಕ ಪ್ರಯತ್ನದಿಂದ ಉತ್ಸಾಹಪೂರ್ಣ ಉತ್ಥಾನ ಪ್ರವೃತ್ತಿ ಶ್ರೀಸಾಮಾನ್ಯನಲ್ಲಿ ಪ್ರಬಲವಾಗಿ ಬೆಳೆಯುವಂತೆ ಸುಧಾರಣೆಗಳು ಮೊದಲಾಗಬೇಕು.

ಪರಂಪರಾನುಗತ ಸಂಸ್ಕೃತಿ

ಪುರಾತನ ಸಂಸ್ಕೃತಿಗೂ ಆಧುನೀಕರಣಕ್ಕೂ ಯಾವುದೋ ಮೂಲಭೂತ ವಿರೋಧವಿದೆ ಎಂದು ಹಲವರ ನಂಬಿಕೆ. ಪಾಶ್ಚಾತ್ಯರಿಂದಲೋ ಸಾಮ್ಯವಾದಿಗಳಿಂದಲೋ ಆಮದಾದ ಭಾವನೆಗಳು ನಮಗೆ ಹೊಂದುವುದಿಲ್ಲ ಎಂಬ ಶಂಕೆ ಪೌರಸ್ತ್ಯರಾಷ್ಟ್ರಗಳಲ್ಲುಂಟು. ಆಧುನಿಕತೆ ಎಂದರೆ ಹೊರಗಿನಿಂದ ಆಮದು ಮಾಡಿಕೊಳ್ಳಬೇಕಾದ ವಸ್ತು ಎಂಬ ತಪ್ಪು ಕಲ್ಪನೆಯೇ ಇದಕ್ಕೆ ಕಾರಣ. ವೈಜ್ಞಾನಿಕ ಪ್ರಜ್ಞೆ ಮತ್ತು ವಿವೇಕಯುತ ತರ್ಕಬದ್ಧ ವಿಚಾರಕ್ಕೆ ಎಲ್ಲವನ್ನೂ ಒಳಪಡಿಸುವುದು ಆಧುನಿಕತೆಯ ಮುಖ್ಯ ಲಕ್ಷಣ. ಹಳೆಯ ಸಂಪ್ರದಾಯಗಳೂ ಅಷ್ಟೇ ವೈಜ್ಞಾನಿಕ ವಿಚಾರಬದ್ಧವಾಗಿರುವುದು ಸಾಧ್ಯ. ಅದನ್ನು ಗಮನಿಸಬೇಕಾದ್ದು ಅಗತ್ಯ.

ಯಾವ ರಾಷ್ಟ್ರಕ್ಕೇ ಆಗಲಿ ತನ್ನ ಇತಿಹಾಸ, ಕಲೆ, ಸಂಸ್ಕೃತಿಗಳ ಸ್ವಾಭಿಮಾನ ಅತ್ಯಮೂಲ್ಯವಾದುದು. ವೈಜ್ಞಾನಿಕ ಯೋಜನಾ ಕ್ರಮದಲ್ಲಿ ಈ ಪ್ರಾಚೀನ ಪರಂಪರೆಯನ್ನುಳಿಸಿಕೊಂಡು ರಾಷ್ಟ್ರೀಯ ಸಾಂಸ್ಕೃತಿಕ ಮಟ್ಟವನ್ನು ಹೆಚ್ಚಿಸಿಕೊಳ್ಳುವ ದೃಷ್ಟಿ ಪ್ರಧಾನ. ಯಶಸ್ವೀ ಯೋಜನೆಗಳ ಪರಿಣಾಮವಾಗಿಯೇ ಇದು

ಹೆಚ್ಚೀತು. ಜೀವನ ಸೌಲಭ್ಯಗಳನ್ನು ಹೆಚ್ಚಿಸಿಕೊಂಡು ಬಾಳುವ ಪ್ರಯತ್ನದಲ್ಲಿ ದೇಶ ಕಾಲ ಪರಿಸರಗಳ ಪರಿವೆಯಿಲ್ಲದ ಯಾವ ಪ್ರಕ್ರಿಯೆಯೂ ಸಫಲವಾಗದು. ಉದಾಹರಣೆಗೆ ಇಲ್ಲಿಯ ಮನೆಗಳ ರಚನೆ ಪಾಶ್ಚಾತ್ಯ ಚಳಿದೇಶಗಳ ಅಂಧಾನುಕರಣೆ ಆಗಬಾರದು. ನಮ್ಮ ಉಡುಪು ವಾತಾವರಣಕ್ಕನುಕೂಲಿಸುವ ವೈಜ್ಞಾನಿಕ ದೃಷ್ಟಿಯಿಂದ ನಿಯೋಜಿತವಾಗಬೇಕು. ಇವೆಲ್ಲ ನಮ್ಮ ಸಂಸ್ಕೃತಿಯ ಆಧಾರದ ಮೇಲೆ ನಿರ್ಣಯವಾಗುತ್ತವೆ. ಸ್ವತಂತ್ರ ವಿಚಾರದಿಂದ ಪ್ರಭಾವಿತವಾಗುತ್ತವೆ.

ಪರಕೀಯ ಭಾಷೆ

ಸ್ಥಳೀಯ ಭಾಷಾಭಿವೃದ್ಧಿ ಎಲ್ಲಕ್ಕಿಂತ ಹೆಚ್ಚು ಮುಖ್ಯವಾದದ್ದು. ಸಹಜವಾದ ತನ್ನದೇ ಭಾಷೆಯ ಬಳಕೆಯಿಂದಲೇ ಒಂದು ಪ್ರದೇಶದ ಜನದ ಸಾಮೂಹಿಕ ಅಭಿವೃದ್ಧಿ ಸಾಧಿಸಬೇಕು. ಒಂದೆರಡು ಪರಕೀಯ ಭಾಷೆಗಳನ್ನು ಅನೇಕರು ಕಲಿತು ಜ್ಞಾನಸಂಚಯ ಮಾಡಿಕೊಳ್ಳಬೇಕಾಗಬಹುದು. ಅದು ಎಲ್ಲ ರಾಷ್ಟ್ರಗಳಿಗೂ ಇಂದು ಅಗತ್ಯ.

ನನ್ನ ದೇಶವಾದ ಸ್ವೀಡನ್ನಿನ ಉದಾಹರಣೆಯೇ ಇದೆ. ನಾವು ಕೇವಲ ಎಂಬತ್ತು ಲಕ್ಷ ಜನರ ದೇಶ. ಆದರೂ ನಮ್ಮ ಮಾತೃಭಾಷೆಯನ್ನು ನಾವು ಬಿಟ್ಟುಕೊಡಲು ಸಿದ್ಧರಿಲ್ಲ. ನಮಗೂ ಆಧುನಿಕ ಜ್ಞಾನ ಸಂಪಾದನೆಗೆ ಪರಕೀಯ ಭಾಷೆಗಳ ಅಗತ್ಯವುಂಟು. ಆದರೆ ನಮ್ಮ ಭಾಷೆಯಲ್ಲೇ ನಾವು ಪರಸ್ಪರ ಸಂಭಾಷಿಸುವುದನ್ನು ಬಿಡುವುದು ಸಾಧ್ಯವೇ ಇಲ್ಲ. ಲಿಪಿಯ ಬಗ್ಗೆ ಅನೇಕ ಸುಧಾರಣೆಗಳು ಅವಶ್ಯಕತೆಗಳಿಗನುಗುಣವಾಗಿ ಎಲ್ಲ ರಾಷ್ಟ್ರಗಳಲ್ಲೂ ಆದಾವು. ಆದರೆ ಭಾಷೆ ಎಂದೂ ನಶಿಸಿ ಹೋಗುವುದಿಲ್ಲ. ಮಾತೃಭಾಷೆಯ ಸೌಲಭ್ಯ ಎಲ್ಲರಿಗೂ ಸಮಾನ.

ಯೋಜನೆಗಳಲ್ಲಿ ಸಾಂಪ್ರದಾಯಿಕತೆ

ನಾನೆಂದಂತೆ ಸಾಂಪ್ರದಾಯಿಕತೆಯೇ ಒಂದು ದೋಷವೇನೂ ಅಲ್ಲ. ಅನೇಕ ಸಂಪ್ರದಾಯಗಳು ತರ್ಕಬದ್ಧವಾಗಿಯೇ ಇರುತ್ತವೆ. ಜನತೆಯ ಸ್ವಾಭಾವಿಕ ವರ್ತನೆ ಸಾಮಾನ್ಯವಾಗಿ ವಿವೇಕಪೂರ್ಣವೇ ಆಗಿರುವುದನ್ನು ಗಮನಿಸಬೇಕು. ಅನುಪಯುಕ್ತ ಅಂಧಶ್ರದ್ಧೆಗಳನ್ನು ನಿರಾಕರಿಸುವುದೂ ಒಂದು ಸಾಮಾಜಿಕ ಮೌಲ್ಯವೆಂದು ವಿಚಾರಮಾಡಬೇಕು. ಜೀವನವಿಧಾನ ಸಮಾಜದ ಸರ್ವತೋಮುಖ ಅಭಿವೃದ್ಧಿಗೆ ವಿರೋಧವಾದಾಗ ಅದನ್ನು ಬದಲಿಸುವುದು ಅನಿವಾರ್ಯ. ಕೇವಲ ಸಂಪ್ರದಾಯಶರಣತೆಯೇ ವಿವೇಕವಾಗಲಾರದು. ಸಂತತವಾಗಿ ವಿಕಾಸವಾಗುತ್ತಿರುವ ಮಾನವ ಜೀವನ ಸ್ಫೂರ್ತಿ ಎಲ್ಲೂ ನಿಂತು ಕೊಳೆತು ನಾರಬಾರದು. ಅತಿಸಂತಾನದ ಕಾರಣದಿಂದ ಅನಿರೀಕ್ಷಿತ ಉತ್ಪಾತಗಳನ್ನೆದುರಿಸುವಾಗ ಸಾಂಪ್ರದಾಯಿಕತೆ ಒಂದು ಕುತ್ತವಾಗಿ ಪರಿಣಮಿಸಬಾರದು.

ನಾನು ಭೇಟಿಯಾದ ಹಲವು ಶ್ರೀಮಂತರು 'ಏಷ್ಯಖಂಡದಲ್ಲಿ ಬಡತನವೇ ಒಂದು ಶಿಷ್ಟ ಸಂಪ್ರದಾಯ' ಎನ್ನುವುದನ್ನು ಕೇಳಿ ಆಶ್ಚರ್ಯಪಟ್ಟಿದ್ದೇನೆ. ತಾವು ಸ್ವತಃ ಶ್ರೀಮಂತ ಭೋಗ ಜೀವನ ನಡೆಸುತ್ತ ಈ ಮಾತನಾಡುವುದು ಅವಿವೇಕದ ಅತಿರೇಕವೆನಿಸುತ್ತದೆ. ಅದೊಂದು ಕೆಟ್ಟ ಸಿನಿಕತೆ, ಅಷ್ಟೆ.

ಪರಮಗುರಿ

ಏಷ್ಯ ಖಂಡದ ಜನಕೋಟಿಯ ದಾರಿದ್ರ್ಯ ಕೊನೆಗಾಣಲೇಬೇಕು. ಎಲ್ಲ ಯೋಜನೆಗಳ ಪರಮಗುರಿ ಇದೇ ಆಗಬೇಕು. ಈ ಮಾರ್ಗದಲ್ಲಿ ಯಶಸ್ವೀ ಯೋಜನೆಗಳು ಕಾರ್ಯಗತವಾದ ಹಾಗೆ ಒಂದು ವಿಚಾರಪೂರ್ಣ ದಿಕ್ಕು ಸ್ಪಷ್ಟವಾದಂತೆ ಆಯಾ ರಾಷ್ಟ್ರಸಂಸ್ಕೃತಿಯ ವಿಕಾಸವ್ಯಾಪ್ತಿಯೂ ಹೆಚ್ಚಾಗುತ್ತದೆ. ಸಂಕುಚಿತವಾಗುವುದಿಲ್ಲ. ಯಾವುದನ್ನು ಏಷ್ಯದ ವಿಶಿಷ್ಟ ಜೀವನಮೌಲ್ಯಗಳು ಎನ್ನುತ್ತಾರೋ ಅದಕ್ಕೂ ವೈಜ್ಞಾನಿಕ ಯೋಜನಾಕ್ರಮಗಳಿಗೂ ಯಾವ ವಿರೋಧವೂ ಕಾಣಿಸದು.

ಜನಕೋಟಿಯ ದಾರಿದ್ರ್ಯದ ಪ್ರಧಾನ ಕಾರಣ ಜನಶಕ್ತಿಯ ಈಗಿನ ಅನುಪಯುಕ್ತತೆ, ದುಡಿಮೆಯ ಅಪಮೌಲ್ಯ. ದುಡಿಮೆ ಬಹಳ ಅಗ್ಗವಾಗುವುದನ್ನು ತಡೆಗಟ್ಟಿ ಜನತೆಯ ಅವಶ್ಯಕತೆಗಳನು

ಪೂರೈಸುವಂಥ ವಸ್ತುಗಳ ಉತ್ಪಾದನ ಯೋಜನೆಗಳು, ಜನತೆಯ ಸೇವಾಕ್ಷೇತ್ರಗಳನ್ನೂ ದೊಡ್ಡ ಪ್ರಮಾಣದಲ್ಲಿ ಹೆಚ್ಚಿಸುವ ಯೋಜನೆಗಳು, ಇವೇ ಇದಕ್ಕೆ ಪರಿಹಾರ.

ಭಾರತದ ಐದನೆಯ ಯೋಜನೆಯು (1974–79) ಉಪಗಮನ ಪತ್ರದಲ್ಲಿ ಈ ಅಂಶವನ್ನು ಮೊದಲಿಗೇ ಒತ್ತಿ ಹೇಳಿದ್ದಾರೆ. ಇಡೀ ಆರ್ಥಿಕ ರಚನೆ, ಸಮಗ್ರ ಉತ್ಪಾದನೆ ಮತ್ತು ವಿತರಣೆ ಎಲ್ಲ ಹಂತದಲ್ಲೂ ಈ ಗುರಿ ಸಾಧನೆಗೆ ಎಷ್ಟರಮಟ್ಟಿಗೆ ನಿಯಂತ್ರಿತವಾಗುವುದೋ ಕಾದು ನೋಡಬೇಕಾಗಿದೆ. ಈ ದೃಷ್ಟಿಪರಿವರ್ತನೆ ಮಾತ್ರ ಸ್ವಾಗತಾರ್ಹ.

ಈ ಮೂಲಭೂತ ಪರಿವರ್ತನೆಯ ಪರಿಣಾಮವಾಗಿ ಮೇಲ್ವರ್ಗಗಳಲ್ಲಿಯ ಭೋಗವಸ್ತುಗಳ ಬಳಕೆ ಕಡಮೆಯಾಗಬೇಕು. ಇದು ಅತ್ಯಗತ್ಯ. ಕಾರಣ, ಇದರಿಂದ ಕೆಳವರ್ಗದ ಜನಕೋಟಿಯ ಆದಾಯ ಮತ್ತು ವಸ್ತು ಬಳಕೆ ಹೆಚ್ಚುತ್ತ ಹೋಗುತ್ತದೆ.

ರಾಷ್ಟ್ರದ ಒಟ್ಟು ಉತ್ಪಾದನೆ ಹೆಚ್ಚಿಸಿ ಅನಂತರ ಎಲ್ಲವನ್ನೂ ಒಟ್ಟುಗೂಡಿಸಿ ಹಂಚಬೇಕೆನ್ನುವ ಮಾತು ಎಂದೂ ವ್ಯಾವಹಾರಿಕವಲ್ಲ ಎಂದು ನನ್ನ ನಂಬಿಕೆ. ಆರ್ಥಿಕ ಅಭಿವೃದ್ಧಿಯ ಅನಂತರ ಸಮಾನ ವಿತರಣೆಯ ಸುಧಾರಣೆ ತರುತ್ತೇವೆನ್ನುವುದೂ ಸರಿಯಲ್ಲ. ಸಾಮಾಜಿಕ ನ್ಯಾಯ ಮತ್ತು ಸಮಾನತೆಗಳ ಅನುಷ್ಠಾನವೇ ಒಂದು ಬಂಡವಾಳ ಹೂಡಿಕೆ. ಆ ಕಾರಣದಿಂದಲೇ ಜನತೆಯ ಉತ್ಪಾದನ ಶಕ್ತಿ ಹೆಚ್ಚಿ, ಸ್ವಾವಲಂಬಿ ಹಣ ವ್ಯವಸ್ಥೆ ಜಾರಿಗೆ ಬಂದೀತು. ಸ್ವಲ್ಪ ಕಾಲವಿಳಂಬವಾದರೂ ಪರಿಣಾಮದಲ್ಲಿ ಇದು ಇಡೀ ರಾಷ್ಟ್ರಕ್ಕೆ ಲಾಭದಾಯಕವಾಗಿಯೇ ತೀರುತ್ತದೆ.

ಸಣ್ಣ ಗಾತ್ರದ ಔದ್ಯೋಗೀಕರಣದಿಂದ ಪ್ರಾರಂಭವಾಗುವ ಯೋಜನೆಗಳಲ್ಲಿ ಕೇವಲ ಮೇಲ್ವರ್ಗದ ಭೋಗವಸ್ತುಗಳ ಉತ್ಪಾದನೆಯ ಗುರಿ ಎಂದೂ ಸರಿಯಲ್ಲ. ಪ್ರಾರಂಭದಿಂದಲೇ ಈ ದಿಕ್ಕು ಬದಲಾಗ ಬೇಕು. ಅದಕ್ಕಾಗಿ ಭೋಗವಸ್ತುಗಳ ಬಳಕೆಯೇ ನಿಯಂತ್ರಿತವಾಗಬೇಕಾದ್ದು ಅಗತ್ಯ. ಇದರಿಂದ ಉತ್ಪಾದನೆ ಜೀವನಾವಶ್ಯಕವಸ್ತುಗಳ ಕಡೆ ಗಮನಹರಿಯುತ್ತದೆ. ಭಾರತದಂಥ ದೇಶದಲ್ಲಿ ಈ ಪರಿಣಾಮ ವಾಗಬೇಕಾದರೆ ಪರವಾನಿಗೆಯನ್ನು ಕೊಡುವ ಪದ್ಧತಿಯನ್ನು ಆಮೂಲಾಗ್ರವಾಗಿ ಬದಲಿಸಬೇಕಾಗುತ್ತದೆ.

ಗಾಂಧೀಜಿ ಇದೇ ದೃಷ್ಟಿಯಿಂದ ಹಣವಂತರನ್ನು ಕುರಿತು ಎಚ್ಚರಿಸುತ್ತಿದ್ದರು. ಭೋಗವಸ್ತುಗಳ ಬಳಕೆಗೆ ಬಿಗಿಯಾದ ಕಡಿವಾಣ ಹಾಕಬೇಕೆಂದು ಕಡ್ಡಾಯ ಮಾಡುತ್ತಿದ್ದರು. ಸರಳ ಜೀವನ ಏಷ್ಯದ ಜೀವನವೃಷ್ಟಿಯಲ್ಲಿ ಹಾಸುಹೊಕ್ಕಾಗಿದೆ ಎಂದು ಅನ್ನಲೂಬಹುದು. ಪಾಶ್ಚಾತ್ಯರಲ್ಲಿ ಇದನ್ನು ಸಂಯಮ ಜೀವನದ ಪರಂಪರೆ ಅನ್ನುತ್ತಾರೆ.

ಎರಡು ಭೂಭಾಗಗಳಲ್ಲೂ ಈಗ ಅತ್ಯಗತ್ಯವಾದ್ದು ಅನಾವಶ್ಯಕ ವಸ್ತುಬಳಕೆಯನ್ನು ಕಡಿದು ಹಾಕುವ ಪ್ರಯತ್ನ. ಪಾಶ್ಚಾತ್ಯ ಸಮುದಾಯಗಳಲ್ಲಿ ಸಂಪತ್ಸಮೃದ್ಧಿಯ ಅಪಾರತೆಯಿಂದಲೇ ಜೀವನ ಪರಿಸರ ವಿಷಮಯವಾಗಿ ಬಾಳಿನ ಅಂತಃಸತ್ವ ಇಳಿಮುಖವಾಗಿದೆ. ಅಲ್ಲದೆ ಅನಾವಶ್ಯಕ ವಸ್ತು ಉತ್ಪಾದನೆಯ ಕ್ರಮದಿಂದ ಹಣದ ಉಬ್ಬರ ವಿಪರೀತವಾಗಿ ಮಧ್ಯಮವರ್ಗಗಳಿಗೆ ಜೀವನ ದುರ್ಭರ ವಾಗುತ್ತ ಸಾಗುತ್ತಿದೆ. ಈ ವಿಪತ್ತುಗಳಿಂದ ಪಾರಾಗಲು ಸರಳತೆ ಮತ್ತು ಭೋಗವಸ್ತುಗಳ ನಿಯಂತ್ರಣ ಅತ್ಯಗತ್ಯ. ಏಷ್ಯ ಖಂಡದಲ್ಲಾದರೋ ಅಪರಿಮಿತ ದಾರಿದ್ರ್ಯದಿಂದ ಸಾಮಾನ್ಯ ಜನರು ಮೇಲೇಳಲು ಜೀವನಾವಶ್ಯಕತೆಗಳ ಉತ್ಪಾದನೆಗೇ ಪ್ರಥಮ ಗಮನ ಕೊಡಬೇಕು. ಈ ಕಾರಣದಿಂದ ಮೇಲಣ ವರ್ಗದ ಹಣವಂತರಲ್ಲಿ ಭೋಗವಸ್ತುಬಳಕೆ ಕಡಮೆಯಾಗಿ ಉತ್ಪಾದನೆಯ ಶ್ರಮ ತಪ್ಪು ಹಾದಿಯಲ್ಲಿ ನಷ್ಟವಾಗದಂತೆ ನಿಯಂತ್ರಿಸುವುದು ಒಂದು ಸಾಮಾಜಿಕ ಆವಶ್ಯಕತೆ.

ಈ ರೀತಿಯಲ್ಲಿ ಸಮಗ್ರ ಆರ್ಥಿಕದೃಷ್ಟಿಯೇ ಬದಲಾಗಬೇಕು. ಸರ್ವಸಮಾನ ವಿತರಣ ಪದ್ಧತಿಯ ಜೊತೆಗೇ ಆರ್ಥಿಕ ಸಂಪತ್ಸಮೃದ್ಧಿಯೂ ಸಾಧಿತವಾಗುವಂತೆ ಬೇಡಿಕೆ ಹಾಗೂ ಉತ್ಪಾದನೆಗಳೆರಡೂ ಕ್ರಾಂತಿಕಾರಕವಾದ ಹೊಸ ದಿಕ್ಕಿನಲ್ಲಿ ಸಾಗುವಂತಾಗಬೇಕು.

ಕಡಿಮೆ ಅಭಿವೃದ್ಧಿ ಹೊಂದಿದ ಜಗತ್ತಿನ ಬಹುಭಾಗದಲ್ಲಿಯ ಸಾಮಾಜಿಕ ಮತ್ತು ಆರ್ಥಿಕ ಸ್ತರ ವಿನ್ಯಾಸ ಅಸಮಸ್ವರೂಪದ್ದು ಮತ್ತು ಗಡುಸಾದ್ದು. ಈ ಅಸಮತೆಯೂ ಗಡುಸೂ ದೇಶದಿಂದ ದೇಶಕ್ಕೆ ಭಿನ್ನವಾಗಿರುವುದಾದರೂ ಇಲ್ಲದಿಲ್ಲ. ಕೆಲವೇ ಕೆಲವು ದೇಶಗಳ ವಿನಾ ಉಳಿದಲ್ಲೆಲ್ಲ ಆರ್ಥಿಕ ಅಸಮತೆ ಈಚಿನ ವರ್ಷಗಳಲ್ಲಿ ಅಧಿಕವಾಗುತ್ತಿದೆಯೆಂದೇ ತೋರುತ್ತದೆ.

ಕಡಿಮೆ ಅಭಿವೃದ್ಧಿ ಹೊಂದಿದ ದೇಶಗಳ ಅಭಿವೃದ್ಧಿಸಮಸ್ಯೆಗಳಲ್ಲಿ ಸಮತೆಯ ಪ್ರಶ್ನೆ ಮೂಲಭೂತವಾದ್ದು. ಅಸಮತೆಗೂ ಎಲ್ಲ ಸಾಮಾಜಿಕ ಮತ್ತು ಆರ್ಥಿಕ ಸಂಬಂಧಗಳಿಗೂ ಸಂಬಂಧವಿದೆ. ಆದ್ದರಿಂದ ಸಾಮೂಹಿಕ ಅಭಿವೃದ್ಧಿ. ಕೃಷಿನೀತಿ. ಶಿಕ್ಷಣ ಸುಧಾರಣೆ. ತೆರಿಗೆ ಮುಂತಾದ ಎಲ್ಲ ನಿರ್ದಿಷ್ಟ ಕಾರ್ಯನೀತಿಗಳನ್ನು ಕುರಿತ ಪ್ರಶ್ನೆಗಳಲ್ಲೂ ಸಮತೆಯ ಪ್ರಶ್ನೆ ಒಂದು ಅಂಶ. ಅನೇಕ ವೇಳೆ ಅದೊಂದು ಮುಖ್ಯ ಅಂಶ.

ಈ ದೇಶಗಳ ಅಭಿವೃದ್ಧಿ ಸಮಸ್ಯೆಗಳನ್ನು ಕುರಿತ ಬರವಣಿಗೆಗಳಲ್ಲಿ ಅಥವಾ ಯೋಜನೆಯಲ್ಲಿ ಸಮತೆಯ ಪ್ರಶ್ನೆಗೆ ನ್ಯಾಯವಾಗಿ ಸಲ್ಲಬೇಕಾದ ಪ್ರಾಮುಖ್ಯವನ್ನು ನೀಡಿಲ್ಲ. ವಾಸ್ತವವಾಗಿ ಈಚಿನ ವರ್ಷಗಳಲ್ಲಿ ಈ ಪ್ರಶ್ನೆಯಿಂದ ಬಹುತೇಕ ನುಣುಚಿಕೊಳ್ಳಲಾಗಿದೆ. ಅಸಮತೆಯೂ ಅಧಿಕ ಅಸಮತೆಯ ಪ್ರವೃತ್ತಿಯೂ ಅಭಿವೃದ್ಧಿಗೆ ಅಡಚಣೆಯಾಗಿಯೂ ನಿರುತ್ಸಾಹ ಪರಿಸ್ಥಿತಿಯ ಗೋಜಲಾಗಿಯೂ ಪರಿಣಮಿಸಿದೆ. ಈ ಪ್ರವೃತ್ತಿಯನ್ನು ಬದಲಿಸಬೇಕು: ಅಭಿವೃದ್ಧಿಯ ವೇಗವನ್ನು ಹೆಚ್ಚಿಸಲು ಒಂದು ಸಾಧನವಾಗಿ ಹೆಚ್ಚು ಸಮತೆಯನ್ನು ಏರ್ಪಡಿಸಬೇಕು. ಇದು ಜರೂರಾಗಿ ಆಗಬೇಕಾದ ಕೆಲಸ[1].

—ಗುನ್ನಾರ್ ಮಿರ್ಡಾಲ್

---

1 Gunnar Myrdal : *The Challenge of World Poverty*, Penguin Books Ltd., 1971, pp. 64–65

ಸೀತಾರಾಮ ಜಾಗೀರದಾರ್, ಎಚ್. ಎಂ. ನಾಗರಾಜರಾವ್

ಸೇಊಣರ ಉಗಮ—ಒಂದು ವಿವೇಚನೆ

ಸೇಊಣರು ಅಥವಾ ದೇವಗಿರಿಯ ಯಾದವರು ಕರ್ಣಾಟಕ ಮತ್ತು ಮಹಾರಾಷ್ಟ್ರ ಪ್ರದೇಶಗಳ ಇತಿಹಾಸದಲ್ಲಿ ತಮ್ಮದೇ ಆದ ಸ್ಥಾನವನ್ನು ಪಡೆದಿದ್ದಾರೆ. ಅವರ ಇತಿಹಾಸವನ್ನು ಕುರಿತ ಕೆಲ ಉತ್ತಮ ಪುಸ್ತಕಗಳು ಈಗಾಗಲೇ ಪ್ರಕಟವಾಗಿವೆ. ಆದರೂ ಪ್ರಾರಂಭದ ಇತಿಹಾಸ ಇನ್ನೂ ಸಂಪೂರ್ಣ ತಿಳಿದಿಲ್ಲವೆಂದರೆ ತಪ್ಪಾಗದು. ವಿದ್ವಾಂಸರಲ್ಲಿ ಈ ಮನೆತನದ ಬಗೆಗೆ ಉಗಮದ ಸಂಬಂಧದಲ್ಲಿ ಏಕಾಭಿಪ್ರಾಯವಿಲ್ಲ. ಇದಕ್ಕೆ ಕಾರಣ ಉಪಲಬ್ಧವಿರುವ ಸಾಮಗ್ರಿಯಲ್ಲಿ ಏಕರೀತಿಯ ವಿವರ ದೊರೆಯದೆ ಇರುವುದು. ಸಾಹಿತ್ಯದಲ್ಲಿ ಒಂದು ಬಗೆ ಮತ್ತು ಶಾಸನದಲ್ಲಿ ಅದಕ್ಕೆ ಪೂರಕವಾದ ಸಾಕ್ಷಿ ದೊರೆತಾಗ ಏಕಾಭಿಪ್ರಾಯ ಸಾಧ್ಯ. ಸೇಊಣರ ಮನೆಯ ಇತಿಹಾಸದ ಪ್ರಾರಂಭ ಡಾ. ಭಂಡಾರ್ಕರ್, ಡಾ. ಅಳ್ತೇಕರ್ ಮತ್ತು ಡಾ. ಓಂಕಾರ ಪ್ರಸಾದ ವರ್ಮಾ ಇವರು ದೃಢಪ್ರಹಾರನಿಂದ ಎಂದು ಬರೆದಿದ್ದಾರೆ;1 ಡಾ. ಎ. ವಿ. ನರಸಿಂಹಮೂರ್ತಿಯವರು ಸುಬಾಹುವಿನಿಂದ ಎಂದು ಬರೆದಿದ್ದಾರೆ2; ಡಾ. ಪಿ. ಬಿ. ದೇಸಾಯಿಯವರ ನಿರ್ದೇಶನದಲ್ಲಿ ಹೊರಬಿದ್ದ "A History of Karnataka" ಗ್ರಂಥದಲ್ಲಿ ಲೇಖಕರು 1ನೆಯ ಸೇವುಣಚಂದ್ರನಿಂದ ಎಂದು ಬರೆದಿದ್ದಾರೆ3. ಕಾರಣ ಈ ವಿದ್ವಾಂಸರ ಪ್ರಕಾರ ಸೇಊಣರ ಇತಿಹಾಸದ ಆರಂಭ ದೃಢಪ್ರಹಾರ. ಸುಬಾಹು ಮತ್ತು 1ನೆಯ ಸೇಊಣಚಂದ್ರ ಇವರಿಂದ ಎಂಬುದು ಸುಸ್ಪಷ್ಟ. ಸೇಊಣರ ಉಗಮ ಯಾವ ಕಾಲಕ್ಕೆ, ಸೇಊಣ ದೇಶದ ವ್ಯಾಪ್ತಿ–ವಿಸ್ತಾರಗಳೆಷ್ಟು, 'ಸೇಊಣ' ಇದರ ನಿಷ್ಪತ್ತಿ ಹೇಗೆ—ಒಟ್ಟಾರೆ ಸೇಊಣರ ಪ್ರಾರಂಭದ ದೆಸೆಯನ್ನು ವಿವೇಚಿಸುವುದೇ ಈ ಲೇಖನದ ಉದ್ದೇಶ.

ಇದುವರೆಗೆ ಸೇಊಣರ ಇತಿಹಾಸವನ್ನು ನಿರೂಪಿಸುವ ಸಾಮಗ್ರಿಯಲ್ಲಿ ಸಾಹಿತ್ಯಕೃತಿಯಲ್ಲಿ ಅತಿ ಮುಖ್ಯವಾದುದು ಮತ್ತು ಸುಮಾರು ಸಂಪೂರ್ಣ ವಿವರವನ್ನು ಒದಗಿಸುವ ಕೃತಿಯೆಂದರೆ ಕ್ರಿ.ಶ. 1261–1270ರ ವರೆಗೆ ಆಳಿದ ಮಹಾದೇವನ ಮಂತ್ರಿ ಹೇಮಾದ್ರಿ ವಿರಚಿತ 'ಚತುರ್ವರ್ಗ ಚಿಂತಾಮಣಿ'. ಆತ ಈ ಗ್ರಂಥದ 'ವ್ರತಖಂಡ' ಎಂಬ ಅಧ್ಯಾಯದಲ್ಲಿ ರಾಜ ಪ್ರಶಸ್ತಿಯನ್ನು ವಿವರಿಸಿದ್ದಾನೆ4. ಹೀಗೆ ಮಾಡುವಾಗ ಆತ ಆಗಿನ ಸಂಪ್ರದಾಯದಂತೆ ಲೌಕಿಕ ಚರಿತ್ರೆಯ ಜೊತೆಗೆ ಪೌರಾಣಿಕ ವ್ಯುತ್ಪತ್ತಿಯನ್ನೂ

---

1 a) Dr. R. G. Bhandarkar : *Early History of the Deccan –Collected works of Sri R. G. Bhandarkar*, vol. III, page 145

b) Dr. A. S. Altekar : *The Yādavas of Seuna Desa in 'The early History of the Deccan* (Ed. Yazdani); page 516

c) Dr. O. P. Varma : *Yadavas and Their Times*, pp. 12 & 367

2 ಡಾ. ಎ. ವಿ. ನರಸಿಂಹಮೂರ್ತಿ : 'ಕರ್ಣಾಟಕದ ಸೇವುಣರು' ; ಪುಟ 117

3 *A History of Karnataka* : pp. 218–248

ಹೇಳಿದ್ದಾನೆ. ಎಲ್ಲವೂ ನಮಗೆ ಅತಿಮುಖ್ಯ. ಏಕೆಂದರೆ ಅದು ಆಗಿನ ಕಾಲದಲ್ಲಿದ್ದ ಹಲವು ಯಾದವ ಮನೆತನಗಳ ಮೂಲವನ್ನು ತಿಳಿಸುವಲ್ಲಿ ಸಹಾಯಕವಾಗುತ್ತದೆ. ಸೇಉಣ ಮನೆತನದ ಮೂಲವನ್ನು ತಿಳಿಸುವ ಆ ಕೃತಿಯ ಪ್ರಕಾರ ಈ ಸೇಉಣರ ಚರಿತ್ರೆ ಇಂತಿದೆ: ಸೇಉಣರು ಮೂಲತಃ ಯದುವಂಶಕ್ಕೆ ಸಂಬಂಧಪಟ್ಟವರು. ಪ್ರಾರಂಭದಲ್ಲಿ ಅವರು ಮಥುರೆಯಲ್ಲಿ ರಾಜ್ಯವನ್ನಾಳಿದರು. ಪುರಾಣಪುರುಷನಾದ ಕೃಷ್ಣನ ಕಾಲಕ್ಕೆ ದ್ವಾರಕೆ ಅವರಿಗೆ ರಾಜಧಾನಿಯಾಯಿತು. ಆ ಕೃಷ್ಣನ ಪುತ್ರ ಕಾಮ (ಪ್ರದ್ಯುಮ್ನ). ಆತನ ಪುತ್ರ ಅನಿರುದ್ಧ. ಆ ಅನಿರುದ್ಧನ ವಂಶವರಲ್ಲಿ ಅನೇಕರಾದ ಬಳಿಕ ವಜ್ರ ಜನಿಸಿದ. ಇವನು 'ಶತ ಮುಖಿ ಸಮನಾಗಿದ್ದ. ವಜ್ರನ ಪುತ್ರ ಪ್ರತಿಬಾಹು. ಪ್ರತಿಬಾಹುವಿನ ಪುತ್ರ ಸುಬಾಹು. ಸುಬಾಹುವಿನ ಸುತ ದೃಢಪ್ರಹಾರ. ದೃಢಪ್ರಹಾರ ಸುಬಾಹುವಿನ ನಾಲ್ಕು ಮಂದಿ ಮಕ್ಕಳಲ್ಲಿ ಎರಡನೆಯವನು. ತಂದೆ ಯಾದವ ಸುಬಾಹು ನಾಲ್ವರು ಸೋದರರಿಗೂ ಭೂಭಾಗವನ್ನು ಹಂಚಿಕೊಟ್ಟಿರಲು ದೃಢಪ್ರಹಾರ ತನ್ನ ರಾಜ್ಯದ ದಕ್ಷಿಣ ಭೂಭಾಗದ ಪ್ರದೇಶವಾದ ಶ್ರೀನಗರದಿಂದ ತನ್ನ ರಾಜ್ಯವನ್ನಾಳಿದ. ಬಸ್ಸೀನ್ ಶಾಸನ ಪ್ರಕಾರ ದೃಢಪ್ರಹಾರನಿಗೆ ಚಂದ್ರಾದಿತ್ಯಪುರ ರಾಜಧಾನಿ5. ಹೇಮಾದ್ರಿಯ ವಿವರದಲ್ಲಿ ಚಂದ್ರಾದಿತ್ಯ ಪುರದ ಪ್ರಸಕ್ತಿಯೇ ಇಲ್ಲದಿರುವುದು ಆಶ್ಚರ್ಯ! ಅಪರೆ ಹೇಮಾದ್ರಿ ಸೇಉಣಪುರದ ಹೆಸರನ್ನೂ ಹೇಳಿಲ್ಲ6. ಆದುದರಿಂದ ನಾವು ಹೇಮಾದ್ರಿಯ ವಿವರಣೆಯಲ್ಲಿ ಆತ ಸೇಉಣರ ರಾಜಧಾನಿಗಳ ವಿವರವನ್ನು ಕೊಡುವಲ್ಲಿ ಖಚಿತ ಹೇಳಿಕೆಗಳನ್ನಿತ್ತಿಲ್ಲವೆಂದು ಹೇಳುತ್ತೇವೆ. ಆತನ ಕಾಲಕ್ಕೆ ಸೇಉಣರಿಗೆ ದೇವಗಿರಿ ರಾಜಧಾನಿಯಾಗಿ ಅರ್ಧಶತಮಾನಕ್ಕಿಂತಲೂ ಹೆಚ್ಚಾಗಿ ಹೋಗಿತ್ತು7. ಪ್ರಾಯಃ ಈ ಒಂದು ಕಾರಣದಿಂದ ಅವನಿಗೆ ತತ್ಪೂರ್ವದ ರಾಜಧಾನಿಗಳ ನಿರೂಪಣೆ ಅವಶ್ಯಕವೆಂದು ತೋರಿರಲಿಕ್ಕಿಲ್ಲ. ಹೇಮಾದ್ರಿಯ ಕಾಲದಲ್ಲಿ ಸೇಉಣ ದೇಶದ ಅಸ್ತಿತ್ವ ದಂಡಕಾರಣ್ಯದ ಪರಿಸರದಲ್ಲಿ—ಗೋದಾವರಿಯ ತಟದಲ್ಲಿ. ಅದನ್ನೇ ಅವನು ಸ್ಪಷ್ಟವಾಗಿ ಹೇಳಿದ್ದಾನೆ:

ಅಸ್ತೀ ಮಣ್ಡಿತ ದಂಡಕ ಪರಿಸರಃ ಶ್ರೀಸೇಉಣಾಖ್ಯಃ ಪರಂ
ದೇಶಃ ಪೇಶಲವೇಶ ಭೂಷಣ ವಚೋ ಮಾಧುರ್ಯ ಧುರ್ಯಾಕೃತಿಃ।
ತಸ್ಮಿನ್ದೇವಗಿರಿಃ ಪುರೀ ವಿಜಯತೇ ತ್ರೈಲೋಕ್ಯ ಸಾರಶ್ರಿಯಾಂ
ವಿಶ್ರಾನ್ತಿಃ ಸುರಶಾಲಿ ಶೈಲ ಶಿಖರ ಸ್ಪರ್ಧಿಷ್ಣು ಸೌಧಾವಲಿಃ॥8

ಕಾರಣ ಸೇಉಣರ ಪೂರ್ವ ರಾಜಧಾನಿಗಳು. ಅವರ ದೇಶದ ವಿಸ್ತಾರ ಇತ್ಯಾದಿಗಳನ್ನರಿಯಲು ಆ ವಿವರಗಳಿಗಾಗಿ ನಾವು ಚತುರ್ವರ್ಗ ಚಿಂತಾಮಣಿಯನ್ನು ಕೈಬಿಟ್ಟು ಇತರ ಸಾಮಗ್ರಿಯನ್ನು ಅವಲಂಬಿಸ ಬೇಕಾಗಿದೆ. ಏಕೆಂದರೆ ಅವು ಆ ವಿವರಗಳನ್ನು ಒದಗಿಸುತ್ತವೆ. ಇವುಗಳಲ್ಲಿ ಮುಖ್ಯವಾದವುಗಳೆಂದರೆ

---

4 a) ರಾಜ ಪ್ರಶಸ್ತಿಯನ್ನು ಸರ್. ಆರ್. ಜಿ. ಭಂಡಾರ್ಕರ್ ಅವರು ಬೊಂಬಾಯಿ ಪ್ರಾಂತದ ಗೆಜೆಟಿಯರ್‌ದಲ್ಲಿ ಪ್ರಕಟಿಸಿದ್ದಾರೆ. *Gazetter of Bombay Presidency*, Vol. I (ii) p. 268-275

b) *Supra*, vol. III, Appendix C. p 191–198

5 *Ind. Ant.*; vol. XII: p. 121

6 *Ibid. and Ep. Ind.*; vol. XXXVI ; page 252

7 ಕ್ರಿ. ಶ 1185–93 ವರೆಗೆ ಆಳಿದ 5ನೆಯ ಭಿಲ್ಲಮನ ಕಾಲಕ್ಕೆ ದೇವಗಿರಿಯು ಸೇಉಣರಿಗೆ ರಾಜಧಾನಿಯಾಯಿತು.

8 ರಾಜಪ್ರಶಸ್ತಿಯ 2ನೆಯ ಭಾಗ: *Dr. R. G. Bhandarkar collected works*, vol. III-EHD, page 198c

ಬಸ್ಸೆನ್ ಮತ್ತು ಆಸ್ವಿ ಶಾಸನಗಳು ಹಾಗೂ ಕವಿರಾಜ ಸ್ವಯಂಭೂದೇವನ 'ಪಲುಮ ಚರಿಲು' ಎಂಬ ಗ್ರಂಥ. ಇನ್ನು ಹೇಮಾದ್ರಿ ವಿವರಿಸಿದ ಸೇಉಣ ವಂಶಾವಳಿ9 ತುಂಬ ಸರಿಯಾಗಿದೆಯೆಂದೇ ನಮಗೆ ತೋರುತ್ತದೆ. ಡಾ. ಭಂಡಾರ್ಕರ್ ಇವರ ಮಾತು : ' But it is not difficult from the account itself to determine where the legend ends and history begins'10. ಇದನ್ನೂ ನಾವು ಸ್ವೀಕರಿಸಬಹುದು. ಆದರೆ ಅವರು ಹೇಳಿದ ವಂಶಾವಳಿಯ ಪಟ್ಟಿಯನ್ನು ಸ್ವಲ್ಪ ಮಾರ್ಪಡಿಸಬೇಕು. ಅಷ್ಟೇ, ಶ್ರೀಯುತರು ದೃಢಪ್ರಹಾರನಿಂದ ಈ ರಾಜರ ವಂಶಾವಳಿಯ ಆರಂಭ ಎಂದಿರುವುದನ್ನು ನಾವು ವಜ್ರನಿಂದ ಎಂದು ಮಾರ್ಪಡಿಸಬೇಕು. ಭಂಡಾರ್ಕರವರು ಬದುಕಿದ್ದಾಗಲೇ 'ಮೇಥಿ ಶಾಸನ' ದೊರಕಿದ್ದರೆ ಖಂಡಿತವಾಗಿಯೂ ಅವರು ವಜ್ರನಿಂದ ಈ ವಂಶಾವಳಿಯ ಆರಂಭವೆಂದು ಬರೆಯುತ್ತಿದ್ದರು. ಭಂಡಾರ್ಕರ್ ಅವರ ಕಾಲಕ್ಕೆ ಸಂಗಮನೇರ್ ಶಾಸನದಲ್ಲಿ ಬರುವ ದೃಢಪ್ರಹಾರನೇ ಶಾಸನಗಳಲ್ಲಿ ಕಂಡುಬರುವ ಮೊದಲ ವ್ಯಕ್ತಿಯಾದುದರಿಂದ, ತತ್ಪೂರ್ವದ ರಾಜರ ಹೆಸರುಗಳಿಗೆ ಶಾಸನ ಆಧಾರಗಳು ಆ ಕಾಲಕ್ಕೆ ಇಲ್ಲದ್ದರಿಂದ ಶ್ರೀಯುತರು ಸೇಉಣ ವಂಶದ ಪ್ರಾರಂಭವನ್ನು ದೃಢಪ್ರಹಾರನಿಂದ ಎಂದು ಬರೆದುದು ತಪ್ಪೇನಲ್ಲ. ಆಗಿನ ಕಾಲಕ್ಕೆ ಆ ಮಾತು ಸರಿಯಾದುದೆ. ಆದರೆ ಹೊಸ ಸಾಮಗ್ರಿ ಹೊರಬಿದ್ದಾಗ ಹೊಸ ವಿಷಯಗಳನ್ನು ಸೇರಿಸುವುದು, ಹಳೆಯ ವಿಷಯಗಳನ್ನು ಪುನರ್ ವಿಮರ್ಶಿಸುವುದು ನ್ಯಾಯವೇ. ಈ ದೃಷ್ಟಿಯಿಂದ ಸೇಉಣರ ಇತಿಹಾಸವನ್ನು ಬರೆಯುವಲ್ಲಿ ಎಪಿ. ಇಂಡಿಕಾ. ಸಂಪುಟ 28ರಲ್ಲಿ ಪ್ರಕಟವಾದ 'ಮೇಥಿಶಾಸನ' ಬಹು ಮುಖ್ಯವಾಗಿದೆ. ಇದು ಹೇಮಾದ್ರಿ ಕೊಟ್ಟಿರುವಂತೆ ಸೇಉಣ ರಾಜವಂಶದ ಮೊದಲ ರಾಜನ ಹೆಸರನ್ನು ವಜ್ರನೆಂದೇ ತಿಳಿಸುತ್ತದೆ. ಅರ್ಥಾತ್ ಇದುವರೆಗೆ ನಮ್ಮ ವಿದ್ವಾಂಸರು ನೀಡಿದ ನಿರೂಪಣೆಯಲ್ಲಿಯ,. 'ದೃಢಪ್ರಹಾರ' ಈ ವಂಶದ ಮೂಲಪುರುಷನಾದ ವಜ್ರನ ತರುವಾಯ ಪಟ್ಟಕ್ಕೆ ಬಂದ ವ್ಯಕ್ತಿಯೆಂಬುದು ಖಚಿತವಾಗುತ್ತದೆ. ಶಾಸನದ ಈ ಭಾಗ ಇಂತಿದೆ:

---

9 ಯದುವಿನ ವಂಶದಲ್ಲಿ ಕೃಷ್ಣ, ಆತನ ಪುತ್ರ ಕಾಮ, ಕಾಮನ ಸುತ ಅನಿರುದ್ಧ–ಇಲ್ಲಿಗೆ ಪೌರಾಣಿಕ ವಿವರದ ಸಮಾಪ್ತಿ; ಮುಂದಿನದು ಐತಿಹಾಸಿಕ ವಿಷಯ:

ಬಭೂವ ಪ್ರದ್ಯುಮ್ನಃ ಕಿಲಕುಸುಮಧನ್ವಾ ಮಧುರಿಪೋ
ಸ್ತ್ರೀಲೋಕೇ ವಿರೋಸೌ ತನಯಮನಿರುದ್ಧಂ ಪ್ರಸುಷವೇ
ತತೋ ಭೂಭೃತ್ಪಕ್ಷ ಕ್ಷಪಣ ನಿಪುಣೇನೈವ ಮಹಸಾ
ಪರಿಸ್ಫೂರ್ಜನ್ವಜ್ರಃ ಶತಮಖಸಖಃ ಪ್ರಾದುರ ಭವತ್ ॥17॥
ವಜ್ರಸ್ಯಸೂನುಃ ಪ್ರತಿಬಾಹುರಾಸೀಕೃತಕ್ಷ್ಮಾಪತಿ ಚಕ್ರಪಾಲಃ
ತತೋಪಿ ಸಮ್ರಾಡಭವತ್ಸುಬಾಹುಃ ಪ್ರಾಸೂಚ ಸೋಯಂ ಚತುರಸ್ತನೂಜಾನ್
ತೇನತೇ ಸಾರ್ವಭೌಮೇನ ತನಯಾ ವಿನಯಾನ್ವಿತಾ। [॥18॥
ವಿಭಜ್ಯ ವಸುಧಾಚಕ್ರಂ ಚಕ್ರಿರೇ ಪೃಥಿವೀಶ್ವರಾಃ॥19॥
ಯಥಾವಿಭಾಗಂ ವಸುಧಾಮಶೇಷಾಂ ತೇಷಾಂ ತದಾ ಪಾಲಯತಾಂ ಚತುರ್ಣಾಂ
ದೃಢಪ್ರಹಾರೀ ದಿಶಿ ದಕ್ಷಿಣಸ್ಯಾಂ ಪ್ರಭುರ್ಬಭೂವ ಪ್ರಥಮಾತ್ಮನೀಯಾನ್॥20॥
ಸರ್ವೇಪಿ ಪೂರ್ವಂ ಮಥುರಾಧಿನಾಥಾಃ ಕಪ್ಣಾದಿತೋ ದ್ವಾರವತೀಶ್ವರಾಸ್ತೇ
ಸುಬಾಹು ಸೂನೋರಸು ದಕ್ಷಿಣಾಶಾ ಪ್ರಶಾಸಿನೋ ಯಾದವ ವಂಶ ವೀರಾಃ॥21॥
ತತಃ ಸ ರಾಜಾ ನಿಜರಾಜಧಾನೀಮಧ್ಯಷ್ಠಿತಃ ಶ್ರೀನಗರಂ ಗರೀಯಃ।
ಲೇ ಖೇ ಸುತಂ ಸೇಉಣ ಚಂದ್ರ ಸಂಜ್ಞಂ ಯತ್ನಂಜ್ಞಯಾ ಸೇಉಣ ದೇಶಮಾಹುಃ॥22॥
ಅಥ ಧಾಡಿಯಸೋಽಮಹೀಪತಿ ತನಯ... ಇತ್ಯಾದಿ *Supra*, Vol. III, page 193

10 *Supra*, Page 136

ವಂಶೇಸ್ಮಿನ್ವಸುದೇವ ನಂದನ ರತೀಃ ಪ್ರಾಣೇಶ ಕಾಮಾತ್ಮಜಾ(ಜಾಃ) ಖ್ಯಾತಾ
ವಜ್ರದೃಢಪ್ರಹಾರ ನೃಪತಿ(ಃ) ಸೇಉಣ್ಣ ಧಾಡಿಪ(ಪ್ಪ?) ಕೌ।
ಉಜ್ಜೈರ್ಭಿಲ್ಲಮರಾಜ ಪಾದುಗಿ ನೃಪಾ ಜಾತಾ(ಃ) ಕ್ಷಿತೇರ್ಭೂಷಣಂ
ಕ್ಷ್ಮೋಣೀಂದ್ರೋವರ ಭಿಲ್ಲಮ(ಃ) ಸಮಭವದ್ವೇಸುಗಿದೇವಾಭಿಧಃ॥11 ಇತ್ಯಾದಿ.

[ವಸುದೇವನಂದನನ ಪುತ್ರ ಕಾಮ ಹಾಗೂ ರತಿಯರ ವಂಶದಲ್ಲಿ ವಜ್ರ, ದೃಢಪ್ರಹಾರ, ಸೇಉಣ್ಣ (ಸೇಉಣ), ಧಾಡಿಪ ರಾಜರು ಖ್ಯಾತರಾದರು. ಅನಂತರ ಭಿಲ್ಲಮ, ಪಾದುಗಿ ಇವರು ಭೂಮಿಗೆ ಅಲಂಕಾರಪ್ರಾಯರಾಗಿ ಹುಟ್ಟಿದರು: (ತರುವಾಯ) ಶ್ರೇಷ್ಠನಾದ ಭಿಲ್ಲಮ, ಆತನಿಗೆ ವೇಸುಗಿ ದೇವ ಜನಿಸಿದರು...] ಹೇಮಾದ್ರಿಯ ಪ್ರಕಾರ 'ದೃಢಪ್ರಹಾರ' ಮತ್ತು 'ವಜ್ರ' ಇವರ ಮಧ್ಯೆ 'ಪ್ರತಿಬಾಹು' ಮತ್ತು 'ಸುಬಾಹು' ಎಂಬ ಇಬ್ಬರು ರಾಜರಿದ್ದುದಾಗಿ ಉಲ್ಲೇಖವಿದೆ12. ಆದ್ದರಿಂದ ಸೇಉಣ ವಂಶದ ಪ್ರಾರಂಭ ವಜ್ರನಿಂದ, ಅನಂತರ ಪ್ರತಿಬಾಹು, ಸುಬಾಹು ಹಾಗೂ ದೃಢಪ್ರಹಾರ.

ಈ ವಜ್ರ ರಾಜನ ಬಗೆಗೆ ಹೇಮಾದ್ರಿ ಹೇಳಿದ 'ವಜ್ರಃ ಶತಮುಖಸಖಃ' ಎಂಬ ಮಾತು ಬಹಳ ಮುಖ್ಯವಾದುದು. ಅದು ಅವನ ಬಹುಶಃ ಕಾಲಮಾನದ ಸ್ಥೂಲರೂಪರೇಖೆಗಳನ್ನು ಒದಗಿಸುತ್ತದೆ. 'ಶತಮುಖ' ಎಂದರೆ ಇಂದ್ರ. ಇಲ್ಲಿ ವಜ್ರ ಇಂದ್ರನ ಸಖನೆಂದರೆ ರಾಷ್ಟ್ರಕೂಟ 2ನೆಯ ಇಂದ್ರ. ಅರ್ಥಾತ್ ದಂತಿದುರ್ಗನ ತಂದೆಯಾದ ಇಂದ್ರನ ಸ್ನೇಹಿತ. ಕಾರಣ, ವಜ್ರ ಇಂದ್ರನ ಸಮಕಾಲೀನನಾಗಿ ಕ್ರಿ.ಶ.ಸು. 230–55ರಲ್ಲಿ ಆಳಿರಬಹುದು13. ದೇಓಳಿಶಾಸನದಲ್ಲಿಯ ಈ ವಜ್ರನನ್ನು ಒಂದು ವಿಶೇಷಣವಾಗಿಸಿ 'ವಜ್ರ' ಎಂಬ ಪದ ಕೇವಲ ಛಂದಸ್ಸಿನ ಸೌಕರ್ಯಕ್ಕಾಗಿ ಬಂದಿದೆ ಎಂಬ ಡಾ. ಪಿ. ಬಿ. ದೇಸಾಯಿಯವರ ಮಾತು "Dṛiḍhaprahāra is prefixed by the expression *Vajra obviously for the necessity of metre*"14 ಸರಿಯಲ್ಲ. ಈ ಸಂದರ್ಭದಲ್ಲಿ ಜೈನಕವಿ ಜಿನಪ್ರಭಸೂರಿಯ 'ವಿವಿಧ ತೀರ್ಥಕಲ್ಪ' ಗ್ರಂಥದ 'ನಾಸಿಕಕಲ್ಪ'ದಲ್ಲಿ ಬರುವ ಕಥೆಯೂ ಕುತೂಹಲಕಾರಕವಾಗಿದೆ. ಅದನ್ನು ಚರಿತ್ರೆ ಎಂದು ಒಪ್ಪುವುದಕ್ಕೆ ಸಾಧ್ಯವಿಲ್ಲವಾದರೂ ಸಂಪೂರ್ಣ ಕೈ ಬಿಡುವಂತಿಲ್ಲ. ಅದರಲ್ಲಿ ಸತ್ಯದ ಭಾಗವೂ ಕಿಂಚಿತ್ ಇದೆ. ಆ ಕಥೆ ಹೀಗಿದೆ: 'ದೀವಾಣ (ದಿವ್ಯಯಾನ–ಸಂಸ್ಕೃತ) ಮುನಿ ದ್ವಾರವತಿಯನ್ನು ದಹಿಸಿದಾಗ ಯಾದವ ರಾಜವಂಶ ಸಂಪೂರ್ಣ ನಾಶದ ಅಂಚಿನಲ್ಲಿತ್ತು. ಆಗ ಆ ಉರಿಯ ಬಾಯಿಯಿಂದ ಆ ಯಾದವ ಕ್ಷತ್ರಿಯ ವಜ್ರಕುಮಾರನ ಗರ್ಭಿಣಿ ಪತ್ನಿಯನ್ನು ಚಂದ್ರಪ್ರಭ ಸ್ವಾಮಿಯ (ತೀರ್ಥಂಕರ) ರಕ್ಷಣೆಯಲ್ಲಿದ್ದ ಮುನಿ ಸಂರಕ್ಷಿಸಿದ. ಆಕೆ ಕುಂತಿವಿಹಾರದಲ್ಲಿ ದಿನಗಳು ತುಂಬಿದ ಬಳಿಕ ಗಂಡುಮಗುವಿಗೆ ಜನ್ಮವಿತ್ತಳು. ಆ ಮಗುವಿಗೆ 'ದೃಢಪ್ರಹಾರ' ಎಂದು ಹೆಸರಿಡಲಾಯಿತು. ಅವನು ಬೆಳೆದು ಮಹಾಶೂರನಾದ: ಸಹಸ್ರಾರು ಜನರೊಂದಿಗೆ ಏಕಾಂಗಿಯಾಗಿ ಯುದ್ಧಮಾಡುವಷ್ಟು ರಣಕುಶಲಿಯಾದ. ಒಂದೊಮ್ಮೆ ಅವನಿದ್ದ ಊರಿನ ತುರುಗಳನ್ನು ಕಳ್ಳರು ತೆಗೆದುಕೊಂಡು ಹೋದರು. ಆಗ ದೃಢಪ್ರಹಾರ ಆ ಕಳ್ಳರನ್ನು ಸದೆಬಡಿದು ತುರುಗಳನ್ನು ಬಿಡಿಸಿಕೊಂಡು ಬಂದ. ಆ ನಗರದ ಬ್ರಾಹ್ಮಣರೂ ನಿವಾಸಿಗಳೂ ದೃಢಪ್ರಹಾರನ ಶೌರ್ಯಕ್ಕೆ ಮೆಚ್ಚಿ ಅವನಿಗೆ 'ತಳಾರ ಭಯ್ಯ' ಎಂಬ ಪದವಿಯನ್ನು ಇತ್ತರು. ಅನಂತರ ಆತ ಇನ್ನಷ್ಟು ಪ್ರಬಲನಾಗಿ ದೊಡ್ಡ ರಾಜನಾದ. ತಾನಿದ್ದ ಆ ನಗರದಲ್ಲಿಯ 'ಚಂದ್ರಪ್ರಭ ಸ್ವಾಮಿಯ ಜಿನಾಲಯವನ್ನು ತುಂಬ ಭಕ್ತಿಯಿಂದ ಜೀರ್ಣೋದ್ಧಾರ ಮಾಡಿದ',15 ಈ ಕತೆಯಲ್ಲಿಯ 'ವಜ್ರಕುಮಾರ' ಮತ್ತು 'ದೃಢಪ್ರಹಾರ' ಇವರು ಸೇಉಣ

11 *Ep. Ind.*, vol. XXXVIII, p. 312

12 ಪ್ರಾಯಃ ಈ ಇಬ್ಬರು ರಾಜರು 'ವಜ್ರ' ಹಾಗೂ 'ದೃಢಪ್ರಹಾರ' ಇವರ ಹಾಗೆ ಪ್ರಸಿದ್ಧರಾಗಿರಲಿಕ್ಕಿಲ್ಲ.

13 ಇದು ತಾತ್ಪೂರ್ತಿಕ ಕಾಲಮಾನ

14 *Ep. Ind.*, vol. XXVIII, p. 314

ವಂಶದ ಆರಂಭ ದಶೆಯಲ್ಲಿಯ ರಾಜರೆನ್ನುವವರಲ್ಲಿ ಸಂಶಯವಿಲ್ಲ. ಈ ಕತೆಯಲ್ಲಿಯ 'ವಜ್ರಕುಮಾರ' ಎಂಬ ಪ್ರಸಕ್ತಿ ಮಾತ್ರ ಗಮನಾರ್ಹವಾದ ವಿಷಯವಾಗಿದೆ. ವಜ್ರ ಮತ್ತು ದೃಢಪ್ರಹಾರ ಇವರು ಕ್ರಿ.ಶ.ಸು. 8 ಹಾಗೂ 9ನೆಯ ಶತಮಾನಗಳಲ್ಲಿ ಇದ್ದುದರಿಂದ ಇವರ ಹಾಗೂ 'ವಿವಿಧ ತೀರ್ಥ ಕಲ್ಪ' ಗ್ರಂಥದ ಕರ್ತೃ ಜಿನಪ್ರಭಸೂರಿಯ ಮಧ್ಯೆ ಸುಮಾರು ನಾಲ್ಕೈದು ನೂರು ವರ್ಷಗಳ ಅಂತರವಿರುವುದರಿಂದ ಕಟ್ಟು ಕತೆಗಳಿಗೆ, ವಿಷಯದ ತಿರುವು ಮುರುವಿಗೆ ತನ್ಮಿಮಿತ್ತ ಗೊಂದಲಕ್ಕೆ ಇನಿತು ಆಸ್ಪದ ಇದೆ. ಆದುದರಿಂದ 'ದೃಢಪ್ರಹಾರ' 'ವಜ್ರಕುಮಾರ' ಎಂಬುದು ಇಂತಹದೊಂದು ಗೊಂದಲವಾಗಿರಬಹುದು. 'ವಜ್ರ ಕುಮಾರ' ಎಂಬ ಮಾತಿಗೆ ವಜ್ರನ ವಂಶಜನೆಂದು ಅರ್ಥೈಸಿದರೆ ತಪ್ಪಾಗುವುದಿಲ್ಲ. ಶ್ರೀ ರಾಮಚಂದ್ರ ರಾಘವನಾದವಾಗೆ. ಮತ್ತೆ ಈ ಕಥೆಯಲ್ಲಿ ಬರುವ 'ಕುಂತಿ ವಿಹಾರ' ಇದು 'ಕೂಂಡಿ ವಿಹಾರ' ಆಗಿರ ಬಹುದು. ಇದು ಸರಿಯಾದರೆ ದೃಢಪ್ರಹಾರನ ಜನನ ಕೂಂಡಿನಾಡಿನಲ್ಲಿ16. ಒಂದೊಮ್ಮೆ ಕೂಂಡಿ 3000 17 ಎಂಬುದು ಈಗಿನ ಬಿಜಾಪುರ. ಬೆಳಗಾಂ, ಸಾಂಗಲಿ, ರಾಯಬಾಗ, ಸೋಲಾಪುರ, ಅಫಜಲ್ ಪೂರ ಮುಂತಾಗಿ ಹಲವು ಪ್ರದೇಶಗಳಲ್ಲಿ ಭೀಮಾತಟದ ಎಡಬಲವಲ್ಲಿ ಪ್ರಸರಿಸಿಕೊಂಡಿತ್ತು. ಹೇಮಾದ್ರಿಯ ಚತುರ್ವರ್ಗ ಚಿಂತಾಮಣಿಯಾಗಲಿ ಇಂದು ದೇವಗಿರಿಯ ಯಾದವರು18 ಎಂದು ಹೆಸರಾದ ಸೇಉಣರ ಶಾಸನಗಳಲ್ಲಾಗಲಿ ಈ ಸೇಉಣರು ಇದ್ದು ಆಳಿದ ರಾಜ್ಯದ ವ್ಯಾಪ್ತಿಯನ್ನು ತಿಳಿಸುವಲ್ಲಿ ಈ ಭೀಮಾ ತಟದ ಪ್ರಸಕ್ತಿಯೇ ಇಲ್ಲ. ಇನ್ನೂ ಒಂದು ಗಮನಾರ್ಹವಾದ ಅಂಶವೆಂದರೆ, ದೃಢಪ್ರಹಾರ ನಾಶಿಕ ಜಿಲ್ಲೆಯ ಭೂಭಾಗದ ಚಂದ್ರಾದಿತ್ಯಪುರಕ್ಕೆ ಬೇರೆಕಡೆಯಿಂದ ಬಂದು ನೆಲಸಿದನೆಂಬುದು. ಈ ಸಂಬಂಧದಲ್ಲಿ ಬಸ್ಸೇನ್. ಅಸ್ವಿ ಮೊದಲಾದ ಸ್ಥಳಗಳಲ್ಲಿ ದೊರಕಿದ ಶಾಸನಗಳು ಸುಮಾರು ಏಕಾಭಿಪ್ರಾಯವನ್ನೆ ಹೊಂದಿವೆ. ಆದರೆ ಹೇಮಾದ್ರಿ ಮಾತ್ರ ದೃಢಪ್ರಹಾರನ ರಾಜಧಾನಿ ಶ್ರೀನಗರ ಎಂದು ಹೇಳಿದ್ದಾನೆ. ಚಂದ್ರಾದಿತ್ಯಪುರ, ಸೇಉಣಪುರ ಇತ್ಯಾದಿಗಳನ್ನು ಆತ ಉಲ್ಲೇಖಿಸಿಲ್ಲ. ಈ ವಿಷಯವನ್ನು ಸ್ವಲ್ಪ ವಿವೇಚಿಸ ಬೇಕು.

ಇದುವರೆಗೆ ಇತಿಹಾಸಜ್ಞರಿಗೆ ಗೋಚರವಾದ ಅತ್ಯಂತ ಪುರಾತನವಾದ ಸೇಉಣ ದಾಖಲೆ ಯೆಂದರೆ ಶಾ.ಶ. 922ರಲ್ಲಿ (ಕ್ರಿ.ಶ. 1000) ಬರೆಯಲಾದ ಸಂಗಮನೇರ್ ಶಾಸನ. ಇದರಲ್ಲಿ ದೃಢ ಪ್ರಹಾರ ಯಾವ ಊರಿನಲ್ಲಿ ಇದ್ದು ರಾಜ್ಯವಾಳಿದನೆಂದು ಹೇಳಲು ಯಾವ ವಿವರವೂ ಇಲ್ಲ. ಇದಕ್ಕಿಂತ ಪುರಾತನವಾದ ದಾಖಲೆ ನಮ್ಮ ದೃಷ್ಟಿಗೆ ಬಂದಿರುವುದರಿಂದ ಅದರಲ್ಲಿಯ ವಿಷಯಗಳನ್ನು ಇಲ್ಲಿ ಚರ್ಚಿಸುವೆವು. ಆ ದಾಖಲೆಯೆಂದರೆ ಕರ್ನಾಟಕದಲ್ಲಿಯೆ ಬಾಳಿ ಬದುಕಿದ, ಕನ್ನಡದವನೇ ಆದ ಕವಿರಾಜ ಸ್ವಯಂಭುದೇವನ ಅಪಭ್ರಂಶ ಭಾಷೆಯ ಕೃತಿ 'ಪಉಮ ಚರಿಉ'. 'ಪಉಮ ಚರಿಉ'ದ 69ನೆಯ ಸಂಧಿಯ 6ನೆಯ ಕಡವಕದಲ್ಲಿ 'ಸೇಉಣ ದೇಶ'ದ ಪ್ರಸಕ್ತಿ ಬಂದಿದೆ :

> ಪುಣುಸರಿ ಭೀಮರಹಿ ಜಲೋಹ–ಘಾರ
> ಜಾ ಸೇಉಣ–ದೇಸಹೊ ಅಮಿಯ ಧಾರ॥

[ಪುನಃ ನದಿ ಭೀಮರಥಿ ವಿಪುಲ ಜಲೋಘದಿಂದ ಸೇಉಣ ದೇಶದಲ್ಲಿ ಅಮೃತಧಾರೆ (ಆಗಿ ಹರಿ ಯುತ್ತಿದೆ)] ಕವಿರಾಜ ಸ್ವಯಂಭು 8ನೆಯ ಶತಮಾನದ ಕವಿಯಾದುದರಿಂದ19 (ಕಿ.ಶ.ಸು. 750–800)

---

15 *I.A.*, vol. XII, p. 124, fn.

16 ಕೂಂಡಿನಾಡಿನಲ್ಲಿ ಚಂದ್ರಿಕಾವಾಟ, ಮುಳುಗುಂದ ಮೊದಲಾದ ಸ್ಥಳಗಳು ಜೈನರ ಧಾರ್ಮಿಕ ಕೇಂದ್ರಗಳಾಗಿದ್ದುವು. ಎ.ಪಿ. ಇಂಡಿಕಾ ಸಂಪುಟ 13ರಲ್ಲಿ ಪ್ರಕಟವಾದ ಮುಳಗುಂದ ಶಾಸನದಲ್ಲಿ ಚಂದ್ರ ಪ್ರಭಸ್ವಾಮಿಯ ಸ್ತುತಿಯಿದೆ. ಅದರ ಕಾಲ ಕ್ರಿ.ಶ. 902–3

17 ಹಲವು ಸಣ್ಣ ದೊಡ್ಡ ವಿಷಯಗಳು ಕೂಡಿ 'ಕೂಂಡಿ 3000' ಆಗಿತ್ತು.

18 ರಾಮಚಂದ್ರ (1271–1311)ನ ವರೆಗೆ ಈ ವಂಶದ ರಾಜರು ತಮ್ಮನ್ನು ಸೇಉಣರು ಎಂದು ಕರೆದುಕೊಂಡುದನ್ನು ಡಾ. ಭಂಡಾರ್ಕರ್ ಅವರು ಆತನ ಪೈಠಣ ಶಾಸನದಿಂದ ತೋರಿಸಿ ಕೊಟ್ಟಿರುವುದು ಲಕ್ಷ್ಯದಲ್ಲಿಡಬೇಕಾದ ಸಂಗತಿ. *I.A.*. Vol XIV, p. 315

ನಮಗೆ ಸೇಉಣರು 8–9ನೆಯ ಶತಮಾನಗಳಲ್ಲಿ ಭೀಮಾನದಿಯ ಎಡಬಲದ ಭೂಭಾಗದಲ್ಲಿದ್ದರೆಂಬುದು ಸುನಿಶ್ಚಿತವಾದ ವಿಷಯ. ಇನ್ನು ದೃಢಪ್ರಹಾರ ಜನಿಸಿದುದು ಕೂಂಡಿವಿಹಾರವೆಂಬುದು ಸರಿಯಾದರೆ ಆತ ಈ ಭೂಭಾಗದಿಂದ ಮೇಲಕ್ಕೆ ಗೋದಾವರಿಯ ಪ್ರದೇಶಕ್ಕೆ ಹೋಗಿ ನೆಲಸಿದನೆಂದು ಹೇಳಬಹುದು. ಆದುದರಿಂದ ದೃಢಪ್ರಹಾರನ ಅಜ್ಜನಾದ ವಜ್ರ ಈ ಕೂಂಡಿನಾಡ ಯಾವುದೋ ಭಾಗದ—ಯಾವುದು ಭೀಮಾನದಿಯ ಪರಿಸರದಲ್ಲಿದ್ದಿತೊ ಅದರ—ರಾಜನಾಗಿದ್ದನೆಂಬುದು ದೃಢವಾದ ಸಂಗತಿ. 2ನೆಯ ಇಂದ್ರನ ಕಾಲಕ್ಕೆ ಆತನ ಸಖನಾದ ಈ ವಜ್ರ ಅವನ ಹಾಗೆಯೆ ಬಾದಾಮಿಯ ಚಾಳುಕ್ಯರ ಸಾಮಂತನಾಗಿದ್ದಿರಬೇಕು. ಮುಂದೆ ರಾಷ್ಟ್ರಕೂಟರ ಕಾಲಕ್ಕೆ ಅವರ ಅಧೀನತೆಯನ್ನು ಒಪ್ಪಿಕೊಂಡಿರಬೇಕು. 3ನೆಯ ಕೃಷ್ಣನ ಕಾಲಕ್ಕೆ ಆತನ ತಮ್ಮ ಧೋರಪ್ಪ (ಧ್ರುವನಿರುಪಮ) ಎಂಬವನ ಮಗಳನ್ನು ಈ ವಂಶದ ವದ್ದಿಗ ಮದುವೆಯಾಗಿದ್ದನೆಂಬುದು ಸಂಗಮನೇರ್ ಶಾಸನದಿಂದ ಸ್ಪಷ್ಟವೇ ಇದೆ[20]. ಪಉಮಚರಿಉ ಕೃತಿಯ ಕರ್ತೃಗಳಾದ ಸ್ವಯಂಭು ಮತ್ತು ಆತನ ಪುತ್ರ ತ್ರಿಭುವನ ಸ್ವಯಂಭು ಇವರಿಗೆ ಆಶ್ರಯವನ್ನಿತ್ತಿದ್ದ ಧನಂಜಯ. ಧವಲಇ ಮತ್ತು ವಂದಇ ಇವರುಗಳಲ್ಲಿ ಧವಂದಇ ಬಹು ಗಮನಾರ್ಹವಾದ ಹೆಸರಾಗಿದೆ. ಏಕೆಂದರೆ ಇದು 'ವಂದಿಗ' ಎಂಬುದರ ಅಪಭ್ರಂಶ ರೂಪ. 'ವಂದಿಗ' ಸಂಗಮನೇರ್ ಶಾಸನದಲ್ಲಿ ಬಂದಿದ್ದು ವದ್ದಿಗನನ್ನು ಸೂಚಿಸುತ್ತದೆ. ಆದರೆ ಆ ವಂದಿಗ ಕ್ರಿ.ಶ. 950ಕ್ಕೆ ಹತ್ತಿರದಲ್ಲಿ ಇದ್ದವನಾದುದರಿಂದ ಅದಕ್ಕೂ ಮುಂಚೆ ನೂರು ವರ್ಷ ಮೊದಲು ಇದ್ದ ಇಲ್ಲಿಯ 'ವಂದಇ' ಆತನಿಂದ ಭಿನ್ನ. ಸೇಉಣರ ಹಲವು ಶಾಖೆಗಳು ಆ ಕಾಲದಲ್ಲಿ ಇದ್ದುವೆಂಬುದು ಈ ಗ್ರಂಥದಲ್ಲಿ ಬಂದಿರುವ ಕೆಲವು ಉಲ್ಲೇಖಗಳಿಂದ ಸ್ಪಷ್ಟ:

1 ಕೆಂಣಸಉ ಚವನ್ತು ವಿಕೋವಿಣರೂ
ಜಿಡ ಸಉಣಉ ಮಾಣಿಉ ದೇವರೂ॥8॥
॥ಘತ್ತಾ॥ ತಂಣಿಸುಣೆವಿ ಅಸುರವಿಮದ್ದಣೇಣ
ಮಮ್ಮೀಸಿಯ ಸೀಯ ಜಣದ್ದಣೇಣ
ಸಿಯುಲಖ್ಖಣಾ ವಲು ಪಚ್ಚಕ್ಖ ಜಹಿಂ
ಕಉಸಉಣ–ವಿಸಉಣೆಹಿಂ ಗಣ್ಣ ತಹಿಂ॥21

ಇಲ್ಲಿ ಬರುವ 'ಸಉಣರು' ಎಂದರೆ 'ಸೇಉಣರು' ಮತ್ತು ವಿಸಉಣರು' ಎಂದರೆ ವೃಷಭಧ್ವಜರು [ಅರ್ಥಾತ್ ಕಳಚುರಿಯರು?]. 'ಸಉಣ'ದ ಸಂಸ್ಕೃತ ಮೂಲ 'ಶಕುನ'-ಲಕ್ಷಣಾರ್ಥದಿಂದ ಗರುಡ ಪಕ್ಷಿ. ಇದನ್ನು ಧ್ವಜದಲ್ಲಿ ಉಳ್ಳವರು ಸೆಉಣ ಅಥವಾ ಸೇಉಣರು. ಇವರನ್ನು 'ಸೆಗುಣ' ಎಂಬ ಮಾತಿನಿಂದಲೂ ಗುರುತಿಸುವುದುಂಟು.[22] 'ಸೇವುಣ' ಇದರ ವ್ಯುತ್ಪತ್ತಿಯನ್ನು ಹೀಗೆ ತೋರಿಸಬಹುದು:

---

19 Dr. G. C. Choudhary: *Political History of Northern India form Jain Sources*, page 17

20 *Ep. Ind*, vol. II, p. 218

21 ಪಉಮಚರಿಉ, ಭಾಗ2, ಸಂಧಿ 27, ಕಡವಳ 2

22 a) Dr. O. P. Varma: *Yadavas and their Times*, page 2, fn. 1

22 Dr. G. S. Gai : *Ep. Ind.*; vol. XXXVI, page 72

ಶಕುನ (ಸಂ)
↓
↓ ಸಉಣ
(ಪ್ರಾಕೃತ ಹಾಗೂ ಅಪಭ್ರಂಶ ಭಾಷೆಗಳಲ್ಲಿ ಮೊಂದುವ ಶಾಸ್ತ್ರೀಯ ಬದಲಾವಣೆಯ ಸ್ವರೂಪ)

↓ ಸೆಉಣ
(ಶ್ರೀಸಾಮಾನ್ಯರಲ್ಲಿ ಧ್ವನಿ ವ್ಯತ್ಯಾಡಿಂದ ಆಗುವ ಪರಿವರ್ತಿತ ರೂಪ
|
[ಸೆಉಣ] > ಸೇಉಣ > ಸೇವುಣ

'ಶಕುನ'ದಲ್ಲಿಯ 'ಶ'ಕಾರ 'ಸ' ವ. 'ಕು' ಎಂಬುದು 'ಉ' ವರ್ಣದ ಸ್ವರೂಪ ತಳೆಯುವುದು ಪ್ರಾಕೃತ ಹಾಗೂ ಅಪಭ್ರಂಶ ಭಾಷೆಗಳಲ್ಲಿ ಸರ್ವೇ ಸಾಮಾನ್ಯ ನಿಯಮ23. ಇನುಸೇಉಣ ಎಂಬಲ್ಲಿಯ 'ಏ'ತ್ವ ಬರೆವಣಿಗೆಯಲ್ಲಿ 'ಎ' ಎಂಬ ಹ್ರಸ್ವ ಚಾಕ್ಷುಷ ರೂಪ ಇಲ್ಲದುದರಿಂದ ಉಂಟಾದ ರೂಪ (Epigraphical Change)24. ಸಂಸ್ಕೃತ ಮತ್ತು ಅವರಿಂದ ಹುಟ್ಟಿದ ಲಿಪಿಯಲ್ಲಿ ಹ್ರಸ್ವ 'ಎ' ಅನಾದಿಕಾಲದಿಂದಲೂ ಇಲ್ಲ. ಸೇಉಣರೂ ಗರುಡಧ್ವಜರು; ರಾಷ್ಟ್ರಕೂಟರೂ ಗರುಡ ಧ್ವಜರು. ಹಾಗಾದರೆ ಈ ಎರಡೂ ರಾಜವಂಶಗಳನ್ನು ಹೀಗೆ ಭಿನ್ನ ಭಿನ್ನವಾಗಿ ಏಕೆ ಕರೆದರು ಎಂಬ ಪ್ರಶ್ನೆ ನಮ್ಮ ಮುಂದೆ ನಿಲ್ಲುತ್ತದೆ. ಸೇಉಣರೂ ಯಾದವ ವಂಶಜರು. ರಾಷ್ಟ್ರಕೂಟರೂ ಯಾದವ ವಂಶಜರು. ಆದರೆ ಸೇಉಣರು ಕೃಷ್ಣನ ಕುಮಾರ ಮನ್ಮಥನ ವಂಶದವರು.25 ರಾಷ್ಟ್ರಕೂಟರು ಕೃಷ್ಣನ ತಮ್ಮ ಸಾತ್ಯಕಿಯ ವಂಶದವರು.26 ಪ್ರಾಯಃ ಈ ರಾಜವಂಶದವರನ್ನು ಭಿನ್ನಭಿನ್ನವೆಂದು ಗುರುತಿಸಲು ಪ್ರಾರಂಭದಲ್ಲಿ ಜನತೆ 'ಗರುಡಧ್ವಜರು'27 ಮತ್ತು 'ಸೇಉಣರು' ಎಂದು ಎರಡು ಸಮಾನಾರ್ಥ ಶಬ್ದಗಳಿಂದ ಕರೆದಿರಬಹುದು. 'ಪಉಮ ಚರಿಉ'ದಲ್ಲಿ ಚಂದ್ರಾದಿತ್ಯಪುರ ಹಾಗೂ ಅಲ್ಲಿಯ ಗರುಡಧ್ವಜರ ಪ್ರಸಕ್ತಿಯೂ ಒಂದು ರೀತಿಯಲ್ಲಿ ಬಂದಿದೆ:

ಚಂದಣ ಚಂದೋಯರ ಗರುಡದ್ಧಯ॥28

ಚಂದೋರ್ ಅಥವಾ ಚಂದೋಯರ್‌ವೇ ಚಂದ್ರಾದಿತ್ಯಪುರವಾಗಿರಬಹುದು. ಇನ್ನು ಶ್ರೀಗನರ ವಿಷಯ (ಶ್ರೀನಗರ 2500)29 ಕೂಡ ಪರ್ಯಾಯವಾಗಿ ಒಂದು ರೀತಿಯಲ್ಲಿ ಗ್ರಂಥದಲ್ಲಿ ಬಂದಿದೆ:

---

23 Introduction to Ardhamagadhi—Rules 3and 4

24 ಹಳಗನ್ನಡ ಬರೆವಣಿಗೆಯಲ್ಲಿ ಸೆಉಣ ಹಾಗೂ ಸೇಉಣ ಇವುಗಳಿಗೆ ಒಂದೇ ರೂಪ. ಇದಕ್ಕೆ ಕಾರಣ ಲಿಪಿ ನ್ಯೂನತೆ.

25 ಚತುರ್ವರ್ಗ ಚಿಂತಾಮಣಿ, ಅ. ಟಿ. 9 (ಇದೇ ಲೇಖ)

26 ರಾ. 3ನೆಯ ಕೃಷ್ಣನ ದೇವೊಲಿ ತಾಮ್ರಶಾಸನ:

ಉದ್ವಲ [ತ್ರ] ದೈತ್ಯ ಕುಲ ಕಂದಲ ಶಾಂತಿ ಹೇತು
ಸ್ತ [ತ್ರಾ] ವತಾರಮಕರೋತ್ಪುರುಷಃ ಪುರಾಣಃ
ತದ್ವಂಶಜಾ ಜಗತಿ ಸಾತ್ಯಕಿವರ್ಗ್ಗ ಭಾಜ
ಸ್ತುಂಗಾ ಇತಿ ಕ್ಷಿತಿಭುಜಃ ಪ್ರ [ಥಿ]ತಾ ವಭೂವುಃ॥ AGB–Vol. III, p. 313

27 'ಗರುಡಧ್ವಜ'ದ ಪ್ರಸಕ್ತಿ ಕಾವ್ಯಾವಲೋಕನ ಪದ್ಯ 358ರಲ್ಲಿದೆ.

28 ಪಉಮಚರಿಉ, ಭಾಗ2, ಸಂಧಿ-30, ಕಡವಕ2, ಪದ್ಯ 7

29 ಅಸ್ತಿಶಾಸನ *Ep. Ind.*, Vol. XXXVI, p. 249–56

ಲಚ್ಚಿಭುತ್ತಿತಂ ಲಚ್ಚೀಣಯರು ಪಳಸಳ
ಪಪಹರನ್ನು ಜಂ ಸುಂದರೂ ತಂ ತಂ ದೀಸಳ॥[30]

ಈ ಪದ್ಯಕ್ಕೆ ಅರ್ಥ ವಿವರಿಸುವಲ್ಲಿ 'ಲಚ್ಚೀಣಯರು' ಇದಕ್ಕೆ 'ಶ್ರೀನಗರ' ಎಂದೇ ಅರ್ಥವನ್ನು ಬರೆದಿದೆ. ಇದೂ ಗವೇಷಣಾರ್ಹವಾದ ಅಂಶವೇ. ಈ ವಿಷಯಗಳು ಪೌರಾಣಿಕವಾದುದರಿಂದ ಇವುಗಳನ್ನು ಚಾರಿತ್ರಿಕವಾಗಿ ಸಂಪೂರ್ಣ ಸ್ವೀಕರಿಸುವಂತಿಲ್ಲ; ಸಂಪೂರ್ಣ ಕೈ ಬಿಡಲೂ ಬರುವುದಿಲ್ಲ. ಅಂತು ಕವಿ ಮಾತ್ರ ಸೇಉಣ ದೇಶದ ವ್ಯಾಪ್ತಿಯ ಬಗ್ಗೆ ಹೊಸ ವಿಷಯವನ್ನು ಒದಗಿಸಿರುವನೆನ್ನುವುದು ಸತ್ಯದ ಸಂಗತಿ. ಅದೆಂದರೆ ಮೊದಲು ಸೇಉಣ ದೇಶ ಭೀಮಾನದಿಯ ಎಡಬಲದಲ್ಲಿದ್ದಿತು. ಅನಂತರ ಅದು ಗೋದಾವರೀ ತಟದಲ್ಲಿ ದೃಢಪ್ರಹಾರ ಹಾಗೂ ಆತನ ವಂಶಜರ ಮೂಲಕ ಉತ್ತರ ದಕ್ಷಿಣಗಳಲ್ಲಿ ಹಬ್ಬಿಕೊಂಡಿತು. ಎಂಬ ವಿಷಯವನ್ನು ಈ ನಾಡಿನಲ್ಲಿ ಇದ್ದ ಮಾಸವಾಡಿಯ ಸೇಉಣರ ಮತ್ತು ಬಿಜಾಪುರ ಜಿಲ್ಲೆಯ ಮುದ್ದೇಬಿಹಾಳ ತಾಲೂಕಿನ ಬಿದಿರಕುಂದೆ ಗ್ರಾಮದ ಯಾದವವಂಶದ ನಾಗವರ್ಮ್ಮರಸರ ಆಳ್ವಿಕೆಯ ಸ್ಮಾರಕಗಳಾದ ಶಿಲಾಲೇಖಗಳು ಪುಷ್ಟೀಕರಿಸುತ್ತವೆ.

ಮಾಸವಾಡಿಯ ಸೇಉಣರು ಕ್ರಿ. ಶ. ಸು. 865ರ ವೇಳೆಗೆ ದೊಡ್ಡ ಮಾಂಡಲಿಕರಾಗಿದ್ದರೆಂಬುದು ಅವರ ಶಾಸನಗಳಿಂದ ವಿದಿತವಾಗುತ್ತದೆ.[31] ಅವರ ಮೂಲಸ್ಥಾನ ಭೀಮಾತಟವೆಂಬುದನ್ನು ಈಗಾಗಲೇ ಸೂಚಿಸಿಯಾಗಿದೆ[32]. ಇನ್ನು ಬಿಜಾಪುರ ಜಿಲ್ಲೆಯ ಬಿದಿರಕುಂದೆ ಗ್ರಾಮದ ಶಾಸನದಲ್ಲಿ ಬರುವ 'ಸ್ವಸ್ತಿ ಸಮಧಿಗತ ಪಞ್ಚಮಹಾಶಬ್ದ ಮಹಾಸಾಮನ್ತಂ ಯಾದವ ನಾರಾಯಣಂ ಶ್ರೀಮನ್ನಾಗವರ್ಮರಸರುಂ'[33] ಎಂಬ ವ್ಯಕ್ತಿಯು ಕೂಡ ಸೇಉಣ ವಂಶಕ್ಕೆ ಸಂಬಂಧಪಟ್ಟಿದ್ದನೆಂದು ಹೇಳಿದರೆ ಯಾವ ತಪ್ಪಾಗದು. ಈ ಸಂಬಂಧದಲ್ಲಿ ಡಾ. ಪಿ. ಬಿ. ದೇಸಾಯಿಯ ಮಾತು 'It is noteworthy that the title 'Yadava Narayana' occurs conspicuously in the *Prasasti* of Yadavas of Devagiri'[34] ಎಂಬುದು ವಿಶೇಷ ಲಕ್ಷ್ಯದಲ್ಲಿಡಬೇಕಾದ ಸುದ್ದಿಯಾಗಿದೆ. ಬಿದಿರ ಕುಂದೆ ಇತ್ಯಾದಿ ಭೂಭಾಗ ಕೂಂಡಿನಾಡು 3000ದ ಅಂಗವಾಗಿತ್ತು. ಅದು ಭೀಮಾನದಿಯ ತಟದಿಂದ ವಿಶೇಷದೂರದಲ್ಲಿ ಇಲ್ಲ. ಮೇಲಾಗಿ ಅದು ನಾಗವರ್ಮರಸನ ರಾಜ್ಯದಲ್ಲಿ ಒಂದು ಗ್ರಾಮ. ಆತನ ರಾಜಧಾನಿ ನಮಗೆ ತಿಳಿಯದು. ಆದರೆ ಅದು ಆತನ ರಾಜ್ಯದ ಎಲ್ಲಿಯಲ್ಲೇ ಇದ್ದಿತೆಂಬುದು ಆ ಶಾಸನದಿಂದ ಸ್ಪಷ್ಟವಿದೆಯಾದುದರಿಂದ ಅದು ಕೂಡ ಹತ್ತಿರದಲ್ಲಿಯೆ ಇದ್ದಿರಬೇಕು. ಮಾಂಡಲಿಕನಾಗಿದ್ದ ಆತನ ರಾಜಧಾನಿ ಬಿದಿರಕುಂದೆಯಿಂದ ಅತ್ಯಂತ ದೂರದಲ್ಲಿದ್ದಿತು. ಎಂದು ಹೇಳಲು ನಮಗೆ ಸರಿಯೆನಿಸುವುದಿಲ್ಲ.

ಸೇಉಣರ ಮೂಲಪುರುಷ ದೃಢಪ್ರಹಾರನಲ್ಲ. ಸಂಶೋಧನೆಯಲ್ಲಿ ಹೊಸ ವಿಷಯ ಹೊರಬರುವ ವರೆಗೆ ದೃಢಪ್ರಹಾರನ ಅಜ್ಜನಾದ 'ವಜ್ರ' ರಾಜನೇ ವಂಶದ ಮೂಲಪುರುಷನೆಂದು ನಿಶ್ಚಿತವಾಗಿ ಹೇಳಬಹುದು. ಈ ಸೇಉಣರು ಆಳುತ್ತಿದ್ದ ನಾಡಿನಲ್ಲಿ ಭೀಮಾನದಿ ಅಮೃತಧಾರೆಯಾಗಿ ಹರಿಯುತ್ತಿದ್ದಿತೆಂಬುದು ಅಷ್ಟೇ ನಿಶ್ಚಿತವಾದ ವಿಷಯ. ಅಂತೆಯೇ ಸೇಉಣರು ಮೂಲತಃ ಕನ್ನಡಿಗರು ಎಂಬುದೂ ನಿಸ್ಸಂದೇಹದ ಸಂಗತಿ. ಕನ್ನಡನಾಡಿನ ವಿಸ್ತಾರ ಕವಿರಾಜಮಾರ್ಗದ ಕಾಲ ಹಾಗೂ ತತ್ಪೂರ್ವದಲ್ಲಿ ಕಾವೇರಿಯಿಂದ ಗೋದಾವರಿಯ ವರೆಗೆ ಎಂಬುದು ಸುವಿದಿತ. ಭೀಮಾನದಿಯ ಎಡಬಲದ ನಾಡಿನಲ್ಲಿ ಆ ಕಾಲದಲ್ಲಿ ಇದ್ದ ಸೇಉಣರು ಕನ್ನಡಿಗರಲ್ಲದೆ ಮತ್ತಾರು? ಮರಾಠಿ ಭಾಷೆ ಹುಟ್ಟುವ ಮುನ್ನವೆ ಇದ್ದ ಸಂತ ಜ್ಞಾನೇಶ್ವರನ 'ಕಾನಡಾ ಹೋ ವಿಠ್ಠಲ'ನ ನಾಡಿನಲ್ಲಿಯೆ ರಾಜ್ಯವಾಳಿದ ಸೇಉಣರು ಕನ್ನಡಿಗರೆ.

---

30 ಪಉಮಚರಿಉ. ಭಾಗ2, ಸಂಧಿ 45, ಕಡವಕ 4. ಪದ್ಯ 1

31 *BK. Ins.*, Vol. I, No. 11, 12, 22

32 ಮಾನವಿಕ ಕರ್ಣಾಟಕ, ಸಂ. 2, ಸಂಚಿಕೆ 2

33 *BK. Ins.*, Vol. I, No. 66

34 *Ep. Ind.*, Vol. XXVIII–p. 314

ಡಾ. ಬಿ. ಎಸ್. ಶ್ರೀಕಂಠಾರಾಧ್ಯ

ಐರೋಪ್ಯ ಆರ್ಥಿಕ ಸಮುದಾಯಕ್ಕೆ ಬ್ರಿಟನ್ನಿನ ಸೇರ್ಪಡೆ: ಕಾರಣಗಳು ಮತ್ತು ಪರಿಣಾಮಗಳು

ಐರೋಪ್ಯ ಆರ್ಥಿಕ ಸಮುದಾಯದ ಸದಸ್ಯತ್ವ ಪಡೆಯಲು ಬ್ರಿಟನ್ ಹಲವಾರು ವರ್ಷಗಳಿಂದ ನಡೆಸಿದ ಪ್ರಯತ್ನ ಇದೀಗ ಸಫಲವಾಗಿದೆ. ಬ್ರಿಟನ್ನಿನ ಸೇರ್ಪಡೆಗೆ ಅವಕಾಶ ಮಾಡಿಕೊಡಬೇಕೆಂಬುದು ನಿರ್ಧಾರವಾಗಿ 1973ರ ಜನವರಿಯಲ್ಲಿ ಈ ನಿರ್ಧಾರ ಕಾರ್ಯಗತವಾಗಬೇಕೆಂದು ತೀರ್ಮಾನಿಸಲಾಗಿದೆ. ಈ ನಿರ್ಧಾರಕ್ಕಾಗಿ ನಡೆಸಿದ ಪ್ರಯತ್ನ ಅಂತರರಾಷ್ಟ್ರೀಯ ಆರ್ಥಿಕ ಸಂಬಂಧದ ಇತಿಹಾಸದಲ್ಲಿ ವಿಶೇಷ ಸ್ಥಾನ ಪಡೆದಿದೆ. ಐರೋಪ್ಯ ಆರ್ಥಿಕ ಸಮುದಾಯಕ್ಕೆ ಬ್ರಿಟನ್ನಿನ ಸೇರ್ಪಡೆಗೆ ಸಂಬಂಧಿಸಿದ ಮಾತುಕತೆಗಳು 1961ರಲ್ಲಿ ಪ್ರಾರಂಭವಾಗಿ ಸುದೀರ್ಘವಾದ ಚರ್ಚೆ ನಡೆದು ಫ್ರಾನ್ಸ್ ಸರ್ಕಾರದ ಪ್ರಬಲ ವಿರೋಧದ ಕಾರಣದಿಂದ 1963ರಲ್ಲಿ ಮುರಿದು ಬಿದ್ದುವು. ಈ ವಿಫಲಪ್ರಯತ್ನದಿಂದ ಬ್ರಿಟನ್ನಿಗೆ ಆಶಾಭಂಗವಾದರೂ ಸಮುದಾಯಕ್ಕೆ ಸೇರಬೇಕೆಂಬ ಆಕಾಂಕ್ಷೆ ಮಾತ್ರ ಕುಗ್ಗಲಿಲ್ಲ. ಸಮುದಾಯ ಸದಸ್ಯರಾಷ್ಟ್ರಗಳ, ಅದರಲ್ಲೂ ಮುಖ್ಯವಾಗಿ ಫ್ರಾನ್ಸ್ ಸರ್ಕಾರದ ಮನೋಭಾವ ಬದಲಾವಣೆಯಾಗುವುದು ಅಗತ್ಯವಾಗಿದ್ದು ಅದಕ್ಕಾಗಿ ಬ್ರಿಟನ್ ತನ್ನ ಪ್ರಯತ್ನವನ್ನು ಮುಂದುವರಿಸುತ್ತಿತ್ತು. 1970ರ ಜುಲೈ ತಿಂಗಳಿನಲ್ಲಿ ಪುನಃ ಸಂಧಾನದ ಮಾತುಕತೆಗಳು ಪ್ರಾರಂಭವಾಗಿ ಸುದೀರ್ಘ ಚರ್ಚೆ ನಡೆಯಿತು. ಈ ಬಾರಿ ಬ್ರಿಟನ್ನಿನ ಪ್ರಯತ್ನ ಫಲಕಾರಿಯಾಗಿ ಅದರ ಸೇರ್ಪಡೆಗೆ ಅವಕಾಶ ಮಾಡಿಕೊಡುವ ನಿರ್ಧಾರವಾಯಿತು. ಆದರೆ ಬ್ರಿಟನ್ನಿನ ಸೇರ್ಪಡೆಯಿಂದ ಆ ರಾಷ್ಟ್ರವಷ್ಟೇ ಅಲ್ಲದೆ ಅದರೊಡನೆ ವ್ಯಾಪಾರ ಸಂಬಂಧವನ್ನಿಟ್ಟುಕೊಂಡಿರುವ ಹಲವಾರು ರಾಷ್ಟ್ರಗಳು ಅನೇಕ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಸದಸ್ಯತ್ವವನ್ನು ಕೊಡುವುದು ಖಚಿತವಾಗಿದ್ದರೂ ಇನ್ನೂ ಹಲವಾರು ವಿಷಯಗಳ ಮೇಲೆ ಭಿನ್ನಾಭಿಪ್ರಾಯಗಳಿದ್ದು ಬ್ರಿಟನ್ ಮತ್ತು ಸಮುದಾಯಗಳೆರಡಕ್ಕೂ ಒಪ್ಪಿಗೆಯಾಗುವ ರೀತಿಯಲ್ಲಿ ಒಪ್ಪಂದಗಳನ್ನು ಮಾಡಬೇಕಾಗಿದೆ. ಸಮುದಾಯಕ್ಕೆ ಬ್ರಿಟನ್ ಸೇರಲು ಕಾರಣಗಳು, ಸೇರ್ಪಡೆಯಿಂದ ಬ್ರಿಟನ್ ಎದುರಿಸಬೇಕಾದ ಸಮಸ್ಯೆಗಳು ಮತ್ತು ಸೇರ್ಪಡೆಯಿಂದ ಇತರ ರಾಷ್ಟ್ರಗಳ ಮೇಲೆ ಉಂಟಾಗುವ ಪರಿಣಾಮಗಳು ಮುಂತಾದುವನ್ನು ಕುರಿತ ಒಂದು ವಿಶ್ಲೇಷಣೆ ಈ ಲೇಖನದ ಉದ್ದೇಶ.

ಸಮುದಾಯಕ್ಕೆ ಬ್ರಿಟನ್ ಸೇರಲು ಕಾರಣಗಳು

ಜರ್ಮನಿ, ಫ್ರಾನ್ಸ್, ಇಟಲಿ, ಬೆಲ್ಜಿಯಂ, ನೆದರ್‌ಲೆಂಡ್ಸ್ ಮತ್ತು ಲುಕ್ಸೆಂಬರ್ಗ್ ದೇಶಗಳು 1957ರಲ್ಲಿ ಮಾಡಿಕೊಂಡ ಪ್ರಸಿದ್ಧ ರೋಂ ಒಪ್ಪಂದಕ್ಕನುಗುಣವಾಗಿ ಐರೋಪ್ಯ ಆರ್ಥಿಕ ಸಮುದಾಯ 1958ರಲ್ಲಿ ಅಸ್ತಿತ್ವಕ್ಕೆ ಬಂತು. ಆಗ ಬ್ರಿಟನ್ ಅಪೇಕ್ಷೆ ಪಟ್ಟಿದ್ದರೆ ಯಾವ ತೊಂದರೆಯೂ ಇಲ್ಲದೆ ಸಮುದಾಯದ ಸದಸ್ಯರಾಷ್ಟ್ರವಾಗಬಹುದಾಗಿತ್ತು. ಆದರೆ ಬ್ರಿಟನ್ ಅದನ್ನು ಅಪೇಕ್ಷಿಸಲಿಲ್ಲ. ಸಮುದಾಯ ಮತ್ತು ಬ್ರಿಟನ್‌ಗಳ ನಡುವೆ ಇದ್ದ ಸಂಘಟನೆಯ ನೀತಿಗೆ ಸಂಬಂಧಿಸಿದ ಭಿನ್ನಾಭಿಪ್ರಾಯಗಳು ಮತ್ತು ಐರೋಪ್ಯ ಆರ್ಥಿಕ ಸಂಘಟನೆಯ ಬಗ್ಗೆ ಬ್ರಿಟನ್ನಿಗೆ ಸದಭಿಪ್ರಾಯವಿಲ್ಲದಿದ್ದುದು ಇದಕ್ಕೆ ಪ್ರಮುಖ ಕಾರಣಗಳು.

ಸದಸ್ಯರಾಷ್ಟ್ರಗಳು ಪರಸ್ಪರ ಸುಂಕವನ್ನು ರದ್ದು ಮಾಡಿ ನಿರಾತಂಕ ವ್ಯಾಪಾರಕ್ಕೆ ಅವಕಾಶಮಾಡುವುದಷ್ಟೇ ಅಲ್ಲದೆ, ಸದಸ್ಯೇತರ ರಾಷ್ಟ್ರಗಳಿಂದ ಆಮದುಮಾಡಿಕೊಳ್ಳುವ ವಸ್ತುಗಳ ಮೇಲೆ ಸಮುದಾಯದ ಸದಸ್ಯರಾಷ್ಟ್ರಗಳೆಲ್ಲವೂ ಸಾಮಾನ್ಯ ಹೊರ ಸುಂಕವನ್ನು (ಕಾಮನ್ ಎಕ್ಸ್‌ಟರ್ನಲ್ ಟ್ಯಾರಿಫ್) ಅಂದರೆ ಒಂದೇ ದರದ ಸುಂಕವನ್ನು ವಿಧಿಸಬೇಕೆಂಬುದು ರೋಂ ಒಪ್ಪಂದಕ್ಕೆ ಸಹಿ ಹಾಕಿದ ಆರು ದೇಶಗಳು ಒಪ್ಪಿದ ನೀತಿ. ಆದರೆ ಬ್ರಿಟನ್ ಪರಸ್ಪರ ಸುಂಕ ತೆಗೆದುಹಾಕುವುದಕ್ಕೆ ಒಪ್ಪಿದ್ದರೂ ಸಾಮಾನ್ಯ ಹೊರಸುಂಕ ವಿಧಿಸಲು ಒಪ್ಪಿರಲಿಲ್ಲ. ಅಷ್ಟೇ ಅಲ್ಲದೆ ನಿರಾತಂಕ ವ್ಯಾಪಾರ ನೀತಿ ಕೈಗಾರಿಕಾ ವಸ್ತುಗಳಿಗೆ ಮಾತ್ರ ಅನ್ವಯಿಸಬೇಕೆಂಬುದು ಬ್ರಿಟನ್ನಿನ ನಿಲುವಾದರೆ. ಅದು ಕೃಷಿ ಹಾಗೂ ಕೈಗಾರಿಕಾ ವಸ್ತುಗಳಿಗೆ ಅನ್ವಯವಾಗಬೇಕು ಎಂಬುದು ಸಮುದಾಯ ರಾಷ್ಟ್ರಗಳ ನಿಲುವಾಗಿತ್ತು. ಈ ಭಿನ್ನಾಭಿಪ್ರಾಯಗಳ ಕಾರಣ ಬ್ರಿಟನ್ ಸಮುದಾಯದ ಹೊರಗುಳಿಯುವ ಮತ್ತು ತನ್ನ ಧೋರಣೆಗನುಗುಣವಾಗಿ ಪ್ರತ್ಯೇಕ ಐರೋಪ್ಯ ನಿರಾತಂಕ ವ್ಯಾಪಾರ ವಲಯವನ್ನು (ಯೂರೋಪಿಯನ್ ಫ್ರೀ ಟ್ರೇಡ್ ಏರಿಯಾ) ಸ್ಥಾಪಿಸುವ ನಿರ್ಧಾರ ಕೈಗೊಂಡಿತು. ಬ್ರಿಟನ್ನಿನೊಡನೆ ಆಸ್ಟ್ರಿಯ. ಡೆನ್ಮಾರ್ಕ್. ನಾರ್ವೆ. ಪೋರ್ಚುಗಲ್, ಸ್ವೀಡನ್ ಮತ್ತು ಸ್ವಿಟ್ಜರ್ಲೆಂಡ್‌ಗಳು ಸೇರಿ ಐರೋಪ್ಯ ನಿರಾತಂಕ ವ್ಯಾಪಾರವಲಯವನ್ನು ಸ್ಥಾಪಿಸಿದುವು. ಐರೋಪ್ಯ ನಿರಾತಂಕ ವ್ಯಾಪಾರವಲಯ ಕೇವಲ ಕೈಗಾರಿಕಾ ನಿರಾತಂಕ ವ್ಯಾಪಾರ ವಲಯವಾಯಿತು. ಹೀಗೆ ಐರೋಪ್ಯ ಆರ್ಥಿಕ ಸಮುದಾಯದಿಂದ ಬ್ರಿಟನ್ ದೂರವಾಯಿತು. ಆದರೆ ಕೆಲವೇ ವರ್ಷಗಳ ಅನಂತರ ಸಮುದಾಯಕ್ಕೆ ಬ್ರಿಟನ್ನಿನ ಸೇರ್ಪಡೆಯಾಗಬೇಕೆಂಬ ಅಭಿಪ್ರಾಯ ಬ್ರಿಟನ್ನಿನಲ್ಲಿ ಮಾತ್ರವಲ್ಲದೆ ಸಮುದಾಯದ ಕೆಲವು ರಾಷ್ಟ್ರಗಳಲ್ಲಿಯೂ ಬೆಳೆಯಿತು.

ಸಮುದಾಯಕ್ಕೆ ಬ್ರಿಟನ್ನಿನ ಸೇರ್ಪಡೆಯಾಗಬೇಕೆಂಬ ಅಭಿಪ್ರಾಯವನ್ನು ಪುಷ್ಟೀಕರಿಸಲು ತಜ್ಞರು ಕೊಟ್ಟಿರುವ ಕೆಲವು ಮುಖ್ಯ ಕಾರಣಗಳು ಈ ರೀತಿ ಇವೆ: ಮೊದಲನೆಯದಾಗಿ. ಐರೋಪ್ಯ ಆರ್ಥಿಕ ಸಂಘಟನೆ ಇನ್ನೂ ಹೆಚ್ಚು ಪ್ರಬಲವೂ ಅರ್ಥಪೂರ್ಣವೂ ಆಗಬೇಕಾದರೆ ಸಮುದಾಯಕ್ಕೆ ಬ್ರಿಟನ್ನಿನ ಸೇರ್ಪಡೆ ಅಗತ್ಯ. ಐರೋಪ್ಯ ಆರ್ಥಿಕ ಸಂಘಟನೆಯ ಮೂಲಭೂತ ಉದ್ದೇಶವಾದರೂ ಅಮೆರಿಕ ಸಂಯುಕ್ತಸಂಸ್ಥಾನಕ್ಕೆ ಸರಿಸಮವಾಗಬಲ್ಲ ಐರೋಪ್ಯ ಸಂಯುಕ್ತ ಸಂಸ್ಥಾನಗಳನ್ನು ಕಟ್ಟುವುದು ಮತ್ತು ಪಶ್ಚಿಮ ಯೂರೋಪಿನಲ್ಲಿ ಕಮ್ಯೂನಿಸಂ ವಿಸ್ತರಣೆಯನ್ನು ತಡೆಗಟ್ಟಲು ಸಂಘಟಿತ ಯತ್ನ ಮಾಡುವುದು. ಸಮುದಾಯ ಬ್ರಿಟನ್ನನ್ನೂ ಒಳಗೊಂಡಿರುವುದಾದರೆ ಈ ಉದ್ದೇಶ ಸಫಲವಾಗುವ ಸಾಧ್ಯತೆ ಹೆಚ್ಚುತ್ತದೆ. ಐರೋಪ್ಯ ಆರ್ಥಿಕ ಸಮುದಾಯದ ಸಂಸ್ಥೆಗಳನ್ನು ಬಲಗೊಳಿಸುವುದರಲ್ಲಿ ಬ್ರಿಟನ್ ವಿಶಿಷ್ಟ ಪಾತ್ರ ವಹಿಸಬಲ್ಲದು. ಈ ದೃಷ್ಟಿಯಿಂದ ಬ್ರಿಟನ್ ಸಮುದಾಯದ ಸದಸ್ಯರಾಷ್ಟ್ರವಾಗುವುದು ಒಳ್ಳೆಯದು. 1961–63ರ ಸಂಧಾನದ ಮುಂದಾಳತ್ವ ವಹಿಸಿದ್ದ ಎಡ್ವರ್ಡ್ ಹೀತ್ 1961ರ ಅಕ್ಟೋಬರ್‌ನಲ್ಲಿ ಪ್ಯಾರಿಸಿನಲ್ಲಿ ನಡೆದ ಸಭೆಯಲ್ಲಿ ಇದರ ಬಗ್ಗೆ ಹೇಳಿದ ಮಾತು ಬಹಳ ಸ್ವಾರಸ್ಯವಾಗಿದೆ. ಅವರು ಹೇಳಿದರು: 'ನಾವೆಲ್ಲರೂ ನೋಡುತ್ತಿರುವಂತೆ ಬೆದರಿಕೆಯನ್ನು ಎದುರಿಸಬೇಕಾಗಿರುವಾಗ ಯೂರೋಪು ಒಟ್ಟುಗೂಡಬೇಕು. ಇಲ್ಲವೇ ಅಳಿಯಬೇಕು. ಬ್ರಿಟನ್ ಯೂರೋಪಿನ ಒಂದು ಭಾಗವಾಗಿ ಹೊರಗೆ ನಿಲ್ಲಲಾರದು. ಇದನ್ನು ವಿವೇಚಿಸುವುದರಲ್ಲಿ ನಾವು ತಡ ಮಾಡಿದ್ದೇವೆಂದು ನೀವು ಹೇಳಬಹುದು. ಆದರೆ ನಮ್ಮ ಇತಿಹಾಸದ ಪರಿಚಯವಿರುವವರೆಲ್ಲರೂ ನಿರ್ಧಾರ ಕೈಗೊಳ್ಳುವುದು ಸುಲಭವಾಗಿರಲಿಲ್ಲವೆಂದು ತಿಳಿಯುತ್ತಾರೆ. ನಾವು ದೀರ್ಘಕಾಲ ಮತ್ತು ಜಾಗರೂಕತೆಯಿಂದ ತೂಕಮಾಡಬೇಕಾಗಿದ್ದಿತ್ತು."[1]

ಎರಡನೆಯದಾಗಿ, ಸಂಘಟನೆಯ ಮೂಲಕ ಸಮುದಾಯದ ರಾಷ್ಟ್ರಗಳು ಸಾಧಿಸಿದ ಪ್ರಗತಿ ಮತ್ತು ಇದರಿಂದಾಗಿ ಅಂತರರಾಷ್ಟ್ರೀಯ ವ್ಯಾಪಾರ ಸಂಬಂಧಗಳಲ್ಲಿ ಉಂಟಾದ ಬದಲಾವಣೆಗಳು ಬ್ರಿಟನ್ನನ್ನು ಸಮುದಾಯಕ್ಕೆ ಸೇರಲು ಪ್ರೋತ್ಸಾಹಿಸಿದುವು. 1961ರಷ್ಟು ಹಿಂದೆಯೇ, ಸಮುದಾಯ ಸ್ವಲ್ಪಮಟ್ಟಿನ ಪ್ರಗತಿಯನ್ನು ಸಾಧಿಸಿದ್ದಾಗಲೇ. ಸಮುದಾಯ ಸಾಮೂಹಿಕ ಪ್ರಯತ್ನದ ಮೂಲಕ

---

1 UWE Kitzinger: *The European Common Market and Community*; Routledge And Kegan Paul, London, 1967; P. 152

ಹೇಗೆ ಪ್ರಗತಿ ಸಾಧಿಸಿದೆ ಎಂಬುದನ್ನು ತೋರಿಸಿಕೊಟ್ಟಿರುವುದಾದ್ದರಿಂದ ಬ್ರಿಟನ್ ಕೂಡ ಈ ಪ್ರಯತ್ನದಲ್ಲಿ ಪಾಲ್ಗೊಂಡು ಐರೋಪ್ಯ ಒಕ್ಕೂಟದ ಮುನ್ನಡೆಗೆ ಕಾರಣವಾಗಬೇಕು ಎಂಬ ಆಶಯವನ್ನು ಬ್ರಿಟನ್ ವ್ಯಕ್ತಪಡಿಸಿತು. ಈ ಕಾರಣಕ್ಕೆ ಈಗ ಇನ್ನೂ ಹೆಚ್ಚಿನ ಮಹತ್ವ ದೊರಕಿದೆ. ರೋಮ್ ಒಪ್ಪಂದದ ಉದ್ದೇಶಗಳನ್ನು ಕಾರ್ಯರೂಪಕ್ಕೆ ತರುವುದರಲ್ಲಿ ಸಮುದಾಯ ಅದ್ಭುತ ಪ್ರಗತಿ ಸಾಧಿಸಿದೆ.[2] ಪರಸ್ಪರ ಸುಂಕವನ್ನು ತೆಗೆದು ಹಾಕುವ ಮತ್ತು ಸಾಮಾನ್ಯ ಹೊರಸುಂಕ ವಿಧಿಸುವ ನೀತಿಯನ್ನು ನಿಗದಿ ಮಾಡಿದ ಅವಧಿಗಿಂತ ಹದಿನೆಂಟು ತಿಂಗಳು ಮೊದಲೇ ಜಾರಿಗೆ ತರಲಾಯಿತು. ಇದರಿಂದ ಸಮುದಾಯದ ರಾಷ್ಟ್ರಗಳ ಪರಸ್ಪರ ವ್ಯಾಪಾರದಲ್ಲಿ ವಿಶೇಷ ಪ್ರಗತಿಯುಂಟಾಯಿತು; ಮತ್ತು ಈ ರಾಷ್ಟ್ರಗಳ ಆರ್ಥಿಕ ಬೆಳವಣಿಗೆ ಕ್ಷಿಪ್ರಗತಿಯಲ್ಲಿ ಮುಂದೆ ನಡೆಯಿತು. ಈ ಪ್ರಗತಿಯಲ್ಲಿ ಪಾಲ್ಗೊಳ್ಳುವ ಆಸೆ ಬ್ರಿಟನ್ನಿಗೆ ಮೂಡಿದ್ದು ಸ್ವಾಭಾವಿಕ. ಸಂಘಟನೆಯ ಮೂಲಕ ಪಶ್ಚಿಮ ಯೂರೋಪು ಸಾಧಿಸಿದ ಪ್ರಗತಿ ಬ್ರಿಟನ್ನಿನ ಅಂತರರಾಷ್ಟ್ರೀಯ ವ್ಯಾಪಾರದ ಪರಿಸ್ಥಿತಿಯ ಮೇಲೆಯೂ ಪರಿಣಾಮ ಬೀರಿತು. ಸಮುದಾಯದ ಪೈಪೋಟಿ ಶಕ್ತಿ ಹೆಚ್ಚಾದಾಗ ಹೊರಗುಳಿಯುವುದರಿಂದ ಬ್ರಿಟನ್ನಿನ ಅಂತರರಾಷ್ಟ್ರೀಯ ವ್ಯಾಪಾರಕ್ಕೆ ಪೆಟ್ಟು ಬೀಳಬಹುದೆಂಬ ಭಯ ಹುಟ್ಟಿತು. ಐರೋಪ್ಯ ಆರ್ಥಿಕ ಸಮುದಾಯ ಆರಂಭವಾದಾಗ ಮತ್ತು ಅದಕ್ಕೆ ಮೊದಲು ಬ್ರಿಟನ್ ರಾಜಕೀಯ ವಿಷಯಗಳಿಗೆ ಅಮೆರಿಕದ ಕಡೆಗೂ ವ್ಯಾಪಾರ ಮುಂತಾದ ಆರ್ಥಿಕ ವಿಷಯಗಳಿಗೆ ಕಾಮನ್‌ವೆಲ್ತ್ ರಾಷ್ಟ್ರಗಳ ಕಡೆಗೂ ತಿರುಗುತ್ತಿತ್ತು. ಈ ಧೋರಣೆ ಆಗಿನ ಪರಿಸ್ಥಿತಿಗೆ ಅನುಗುಣವಾಗಿತ್ತು, ಆದರೆ ಸಮುದಾಯ ಪ್ರಗತಿ ಸಾಧಿಸಿದಂತೆ ಬ್ರಿಟನ್ನಿನ ಒಟ್ಟು ರಫ್ತಿನಲ್ಲಿ ಸಮುದಾಯದ ಪಾಲು ಹೆಚ್ಚಿ ಕಾಮನ್‌ವೆಲ್ತ್ ರಾಷ್ಟ್ರಗಳ ಪಾಲು ಕಡಿಮೆಯಾಗುವುದು ಕಂಡುಬಂತು. ಅಂತೆಯೇ ಕಾಮನ್‌ವೆಲ್ತ್ ರಾಷ್ಟ್ರಗಳು ಸಮುದಾಯ ರಾಷ್ಟ್ರಗಳಿಂದ, ಅಮೆರಿಕ ಮತ್ತು ಜಪಾನ್ ದೇಶಗಳಿಂದ ಆಮದು ಮಾಡಿಕೊಳ್ಳುವುದನ್ನು ಹೆಚ್ಚಿಸಿ, ಬ್ರಿಟನ್ನಿನಿಂದ ಆಮದುಮಾಡಿಕೊಳ್ಳುವುದನ್ನು ಕಡಿಮೆಮಾಡಿದುವು. ಈ ಬದಲಾದ ಪರಿಸ್ಥಿತಿಯಲ್ಲಿ ಬ್ರಿಟನ್ ಹೆಚ್ಚುಹೆಚ್ಚಾಗಿ ಸಮುದಾಯದ ಕಡೆ ತಿರುಗುವುದು ಅನಿವಾರ್ಯವಾಯಿತು. ಸಮುದಾಯಕ್ಕೆ ಎದುರು ನಿಲ್ಲುವುದು ಸಾಧ್ಯವಿಲ್ಲವೆಂಬುದರ ಅರಿವಾದಾಗ, ಸಮುದಾಯಕ್ಕೆ ಸೇರ್ಪಡೆಯಾಗುವುದೇ ಒಳಿತೆಂಬ ವಿವೇಕ ಮೂಡಿತು.

ಮೂರನೆಯದಾಗಿ, ಆರ್ಥಿಕ ಸಂಘಟನೆಯನ್ನು ಸಮರ್ಥಿಸಲು ಸಾಮಾನ್ಯವಾಗಿ ಗಣನೆಗೆ ತೆಗೆದುಕೊಳ್ಳುವ ಅಂಶಗಳನ್ನೇ ಸಮುದಾಯಕ್ಕೆ ಬ್ರಿಟನ್ನಿನ ಸೇರ್ಪಡೆಗೆ ಕಾರಣಗಳನ್ನಾಗಿ ಹೇಳಲಾಗಿದೆ. ಸೇರ್ಪಡೆಯಿಂದ ಬ್ರಿಟನ್ನಿಗೆ ವಿಸ್ತೃತ ಮಾರುಕಟ್ಟೆ ದೊರಕುವುದರಿಂದ ಉತ್ಪಾದನೆಯನ್ನು ಹೆಚ್ಚಿಸಬಹುದು ಮತ್ತು ತನ್ಮೂಲಕ ಬೃಹದ್ಗಾತ್ರ ಉತ್ಪಾದನೆಯ ಉಳಿತಾಯಗಳ (ಎಕಾನಮೀಸ್ ಆಫ್ ಲಾರ್ಜ್–ಸ್ಕೇಲ್ ಪ್ರೊಡಕ್ಷನ್) ಅನುಕೂಲತೆ ಪಡೆಯಬಹುದು. ಉತ್ಪಾದನ ವೆಚ್ಚ ಕಡಿಮೆಯಾಗಿ ಜನಜೀವನ ಉತ್ತಮಗೊಳ್ಳುವುದಕ್ಕೆ ಇದು ಸಹಕಾರಿಯಾಗುತ್ತದೆ. ಬ್ರಿಟನ್ನಿನ ಆಂತರಿಕ ಮಾರುಕಟ್ಟೆ ಮತ್ತು ರಫ್ತು ಮಾರುಕಟ್ಟೆಗಳೆರಡೂ ಸೇರಿದಂತೆ ಒಟ್ಟು ಮಾರುಕಟ್ಟೆ ಸಾಕಷ್ಟು ದೊಡ್ಡದಾಗಿದ್ದು ಸಮುದಾಯದ ಹೊರಗುಳಿದರೂ ದೊಡ್ಡ ಗಾತ್ರದ ಉತ್ಪಾದನೆಯ ಉಳಿತಾಯಗಳ ಅನುಕೂಲತೆಯನ್ನು ಪಡೆಯಲು ಬ್ರಿಟನ್ನಿಗೆ ಸಾಧ್ಯವಿದೆ ಎಂಬ ಅಭಿಪ್ರಾಯವೂ ಇದೆ. ಆದರೆ ಸೇರ್ಪಡೆಯಿಂದ ಇನ್ನೂ ವಿಸ್ತೃತ ಮಾರುಕಟ್ಟೆ ದೊರಕುವುದರಿಂದ ಅನುಕೂಲ ಉಂಟೆಂಬುದನ್ನು ಅಲ್ಲಗಳೆಯುವಂತಿಲ್ಲ. ಅಂತೆಯೇ ನಿರಾತಂಕ ವ್ಯಾಪಾರಕ್ಕೆ ಅವಕಾಶವಾಗುವುದರಿಂದ ಪೈಪೋಟಿಗೆ ಅವಕಾಶ ಉಂಟಾಗಿ ಅದರಿಂದಲೂ ಉತ್ಪಾದನ ವಿಧಾನ ಉತ್ತಮಗೊಂಡು, ಉತ್ಪಾದನ ವೆಚ್ಚ ಕಡಿಮೆಯಾಗಿ ಅನುಭೋಗಿಗಳಿಗೆ ಅನುಕೂಲ ಉಂಟಾಗುತ್ತದೆ.

ನಾಲ್ಕನೆಯದಾಗಿ, ಸಮುದಾಯದ ರಾಷ್ಟ್ರಗಳು ಬ್ರಿಟನ್ನಿನ ಸೇರ್ಪಡೆಗೆ ಕೊಡುವ ಕಾರಣ, ಅದರಿಂದ ಸಮುದಾಯವನ್ನು ವಿಸ್ತರಿಸಲು ಮತ್ತು ಅದನ್ನು ಹೆಚ್ಚು ಬಲಯುತವನ್ನಾಗಿ ಮಾಡಲು

---

2 B. S. Sreekantaradhya: Whither European Economic Community?; *Southern Economist* (May 1, 1970); pp. 57-60

ಸಾಧ್ಯವಾಗುತ್ತದೆ ಎಂಬುದು. ಬ್ರಿಟನ್ನಿನ ಸೇರ್ಪಡೆಯನ್ನು ಒಪ್ಪಿದರೆ ಐರೋಪ್ಯ ನಿರಾತಂಕ ವಲಯದ ಇತರ ಕೆಲವು ಸದಸ್ಯರಾಷ್ಟ್ರಗಳೂ ಸಮುದಾಯವನ್ನು ಸೇರುವುದರಿಂದ ಸಮುದಾಯದ ವ್ಯಾಪ್ತಿ ಹೆಚ್ಚಿ ಅದರ ಬಲವರ್ಧನೆಯಾಗುತ್ತದೆ. ಅಷ್ಟೇ ಅಲ್ಲದೆ ಬ್ರಿಟನಿನ ಸೇರ್ಪಡೆಯಿಂದ ಸಮುದಾಯಕ್ಕೆ ಇನ್ನೂ ಕೆಲವು ಪ್ರಯೋಜನಗಳುಂಟು. ಬ್ರಿಟನ್ನಿನ ಪ್ರಜಾಪ್ರಭುತ್ವ ಸಂಪ್ರದಾಯ ಸಮುದಾಯದ ಸಂಸ್ಥೆಗಳ ಬೆಳವಣಿಗೆಗೆ ಸಹಾಯಕವಾಗುತ್ತದೆ. ಸ್ಟರ್ಲಿಂಗ್ ಸಮುದಾಯದ ಹಣಗಳಲ್ಲೊಂದಾಗುವುದರಿಂದ ಹಣಸಂಬಂಧಿ ವಿಷಯಗಳಲ್ಲಿ ಪ್ರಪಂಚದಲ್ಲಿ ಸಮುದಾಯದ ಪ್ರಾಬಲ್ಯ ಹೆಚ್ಚುತ್ತದೆ.

ಮೇಲೆ ಹೇಳಿರುವ ಮುಖ್ಯ ಕಾರಣಗಳಿಂದಾಗಿ ಸಮುದಾಯಕ್ಕೆ ಬ್ರಿಟನಿನ ಸೇರ್ಪಡೆಯಾಗ ಬೇಕೆಂಬುದನ್ನು ಒಪ್ಪಿ ನಿರ್ಧಾರವನ್ನು ಕೈಗೊಳ್ಳಲಾಗಿದೆ. ಆದರೆ ಬ್ರಿಟನಿನ ಸೇರ್ಪಡೆಯಿಂದ ಹಲವಾರು ಸಮಸ್ಯೆಗಳು ಉದ್ಭವಿಸುತ್ತವೆ. ಬ್ರಿಟನ್ ಮತ್ತು ಇತರ ಅನೇಕ ದೇಶಗಳು ಸಮಸ್ಯೆಗಳನ್ನು ಎದುರಿಸ ಬೇಕಾಗುತ್ತದೆ. ಆ ಸಮಸ್ಯೆಗಳನ್ನು ಈಗ ಪರಿಶೀಲಿಸೋಣ.

ಬ್ರಿಟಿಷ್ ಆಹಾರವಸ್ತುಗಳ ಬೆಲೆಗಳ ಮೇಲಿನ ಪರಿಣಾಮ

ಸಮುದಾಯಕ್ಕೆ ಬ್ರಿಟನ್ನಿನ ಸೇರ್ಪಡೆಯಿಂದ ಬ್ರಿಟಿಷ್ ಕೃಷಿಕ್ಷೇತ್ರದ ಮೇಲೆ ಮತ್ತು ಆಹಾರ ವಸ್ತುಗಳ ಬೆಲೆಗಳ ಮೇಲೆ ವಿಶೇಷ ಪರಿಣಾಮ ಉಂಟಾಗುತ್ತದೆ. ಬ್ರಿಟನ್ ಆಹಾರ ವಸ್ತುಗಳ ಮೇಲೆ ವಿಧಿಸುತ್ತಾ ಬಂದಿರುವ ಆಮದು ಸುಂಕ ಸಮುದಾಯ ರಾಷ್ಟ್ರಗಳು ವಿಧಿಸುವ ಸುಂಕದ ಮಟ್ಟಕ್ಕಿಂತ ಬಹಳ ಕಡಿಮೆ ಯಾಗಿದ್ದು. ಬ್ರಿಟಿಷ್ ಅನುಭೋಗಿಗಳು ಅಗ್ಗದ ಆಹಾರವಸ್ತುಗಳ ಬಳಕೆಗೆ ಒಗ್ಗಿಹೋಗಿದ್ದಾರೆ. ಸಮು ದಾಯವನ್ನು ಸೇರಿದ ಮೇಲೆ ಸಾಮಾನ್ಯ ಹೊರಸುಂಕವನ್ನು ವಿಧಿಸಬೇಕಾಗಿರುವುದರಿಂದ ಆಹಾರ ವಸ್ತುಗಳ ಬೆಲೆಗಳು ಏರುತ್ತವೆ. ಆಹಾರವಸ್ತುಗಳ ಬೆಲೆ ಸೇ. 18—ಸೇ. 26ರಷ್ಟು ಹೆಚ್ಚುತ್ತದೆಂದು ಒಂದು ಅಂದಾಜು ತಿಳಿಸುತ್ತದೆ. ಈ ಕಾರಣದಿಂದ ಬ್ರಿಟನಿನಲ್ಲಿ ಅನೇಕರು ಸಮುದಾಯದ ಸದಸ್ಯತ್ವವನ್ನು ವಿರೋಧಿಸುತ್ತಾರೆ. ಸಮುದಾಯಕ್ಕೆ ಸೇರುವುದರಿಂದ ಕೃಷಿ ವಸ್ತುಗಳ ಬೆಲೆಗೆ ಸರ್ಕಾರ ಬೆಂಬಲ ಕೊಡುವ ನೀತಿಯಲ್ಲೂ ವಿಶೇಷ ಬದಲಾವಣೆ ಅಗತ್ಯವಾಗುತ್ತದೆ. ಸಮುದಾಯದ ಸಾಮಾನ್ಯ ಕೃಷಿ ನೀತಿಯನ್ನು ಅಳವಡಿಸಿಕೊಳ್ಳಲು ಬ್ರಿಟನ್ನಿಗೆ ಸ್ವಲ್ಪ ಕಾಲಾವಕಾಶ ಬೇಕಾಗುತ್ತದೆ.

ಐರೋಪ್ಯ ನಿರಾತಂಕ ವ್ಯಾಪಾರ ವಲಯದ ಮೇಲಿನ ಪರಿಣಾಮ

ಬ್ರಿಟನ್ ಸಮುದಾಯವನ್ನು ಸೇರುವುದರಿಂದ ಐರೋಪ್ಯ ನಿರಾತಂಕ ವ್ಯಾಪಾರವಲಯ ಅಂತ್ಯ ಗೊಂಡಂತೆಯೇ. ಬ್ರಿಟನ್ನಿನ ಸೇರ್ಪಡೆಯ ಮಾತುಕತೆಗಳು ಪ್ರಾರಂಭವಾದಾಗಿನಿಂದಲೂ ತನ್ನ ಸೇರ್ಪಡೆ ಯಿಂದ ಐರೋಪ್ಯ ನಿರಾತಂಕ ವ್ಯಾಪಾರ ವಲಯದ ಸದಸ್ಯರಾಷ್ಟ್ರಗಳಿಗೆ ತೊಂದರೆಯಾಗದಂತೆ ವ್ಯವಸ್ಥೆ ಮಾಡುವ ಭರವಸೆಯನ್ನು ಬ್ರಿಟನ್ ಕೊಡುತ್ತ ಬಂದಿದೆ. ಆದರೆ ಈ ಸಮಸ್ಯೆಗೆ ಪರಿಹಾರ ಸುಲಭವಲ್ಲ. ಐರೋಪ್ಯ ನಿರಾತಂಕ ವ್ಯಾಪಾರ ವಲಯದ ಸದಸ್ಯ ರಾಷ್ಟ್ರಗಳ ಹಿತರಕ್ಷಣೆ ಮಾಡಬೇಕಾದರೆ ಆ ರಾಷ್ಟ್ರಗಳೂ ಬ್ರಿಟನ್ನಿನೊಡನೆ ಸಮುದಾಯವನ್ನು ಸೇರುವುದು ಒಂದು ಮಾರ್ಗ. ಆ ರಾಷ್ಟ್ರಗಳು ಸಮುದಾಯದ ಸಹಜಾತ ಸದಸ್ಯರಾಗುವಂತೆ (ಅಸೋಸಿಯೇಟ್‌ಮೆಂಬರ್ಸ್)ಮಾಡುವುದು ಮತ್ತೊಂದು ಮಾರ್ಗ. ಇವುಗಳ ಪೈಕಿ ಕೆಲವು ರಾಷ್ಟ್ರಗಳಿಗೆ ಪೂರ್ಣ ಸದಸ್ಯತ್ವ ನೀಡಿ ಸಮುದಾಯವನ್ನು ವಿಸ್ತರಿಸುವ ಪ್ರಯತ್ನ ನಡೆದಿದೆ. ಡೆನ್ಮಾರ್ಕ್ ಮತ್ತು ನಾರ್ವೇ ದೇಶಗಳಿಗೆ ಪೂರ್ಣ ಸದಸ್ಯತ್ವ ಕೊಡಬೇಕೆಂದು ನಿರ್ಣಯ ತೆಗೆದುಕೊಳ್ಳಲಾಗಿತ್ತು. ಆದರೆ ಈ ವಿವಾದದ ಮೇಲೆ ನಡೆದ ಜನಮತಗಣನೆಯಲ್ಲಿ ನಾರ್ವೆಯ ಜನ ತಮ್ಮ ದೇಶದ ಸೇರ್ಪಡೆಯನ್ನು ವಿರೋಧಿಸಿ ತೀರ್ಮಾನ ನೀಡಿದರು ಮತ್ತು ಡೆನ್ಮಾರ್ಕ್‌ನ ಜನತೆ ತಮ್ಮ ದೇಶದ ಸೇರ್ಪಡೆಯನ್ನು ಅನುಮೋದಿಸಿದರು. ಈ ಕಾರಣದಿಂದ ಡೆನ್ಮಾರ್ಕ್. ನಾರ್ವೇ. ಐರ್ಲೆಂಡ್ ಮತ್ತು ಬ್ರಿಟನ್ ಸಮುದಾಯದ ಆರು ರಾಷ್ಟ್ರಗಳೊಡನೆ ಸೇರಿ ಒಟ್ಟು ಹತ್ತು ರಾಷ್ಟ್ರಗಳನ್ನೊಳಗೊಂಡ ಐರೋಪ್ಯ ಆರ್ಥಿಕ ಸಮುದಾಯವನ್ನು ಕಟ್ಟಬೇಕೆಂಬ ನಿರ್ಧಾರವನ್ನು ಕೈ

ಬಿಟ್ಟು ನಾರ್ವೆಯನ್ನುಳಿದು ಇತರ ಒಂಬತ್ತು ರಾಷ್ಟ್ರಗಳನ್ನೊಳಗೊಂಡ ಸಮುದಾಯ ಅಸ್ತಿತ್ವಕ್ಕೆ ಬರುವುದು ಈಗ ಖಚಿತವಾಗಿದೆ. ಸಮುದಾಯಕ್ಕೆ ಸೇರುವುದರಿಂದ ನಾರ್ವೆಯ ಸಮಸ್ಯೆಗಳು ಇಮ್ಮಡಿಸುತ್ತವೆ; ಆದರೆ ಡೆನ್ಮಾರ್ಕ್‌ಗೆ ವಿಶೇಷರೀತಿಯಲ್ಲಿ ಅನುಕೂಲವಾಗುತ್ತದೆ. ಇದಕ್ಕನುಗುಣವಾಗಿಯೇ ಎರಡು ದೇಶಗಳ ಜನತೆಗಳು ಬೇರೆಬೇರೆ ನಿರ್ಧಾರ ಕೈಗೊಂಡಿದ್ದಾರೆ3. ಸಮುದಾಯವನ್ನು ಸೇರದೆ ಹೊರಗೆ ಉಳಿಯುವ ಐರೋಪ್ಯ ನಿರಾತಂಕ ವ್ಯಾಪಾರ ವಲಯದ ರಾಷ್ಟ್ರಗಳು ಹೊಸ ಸಮುದಾಯದೊಡನೆ ಅನುಕೂಲಕರವಾದ ವ್ಯಾಪಾರ ಒಪ್ಪಂದಗಳನ್ನು ಮಾಡಿಕೊಳ್ಳುವುದಕ್ಕೆ ಬ್ರಿಟನ್ ಸಹಾಯಕವಾಗಿ ತಾನು ಹಿಂದಿನಿಂದಲೂ ಕೊಡುತ್ತ ಬಂದಿರುವ ಭರವಸೆಯನ್ನು ನಡೆಸಿಕೊಡಬೇಕಾಗಿದೆ.

ಕಾಮನ್‌ವೆಲ್ತ್ ರಾಷ್ಟ್ರಗಳ ಮೇಲಿನ ಪರಿಣಾಮ

ಸಮುದಾಯಕ್ಕೆ ಬ್ರಿಟನಿನ ಸೇರ್ಪಡೆಯಿಂದ ಉದ್ಭವಿಸುವ ಸಮಸ್ಯೆಗಳ ಪೈಕಿ ಕಾಮನ್ವೆಲ್ತ್ ರಾಷ್ಟ್ರಗಳ ಮತ್ತು ಬ್ರಿಟನಿನ ವ್ಯಾಪಾರ ಸಂಬಂಧಗಳ ಮೇಲೆ ಆಗುವ ಪರಿಣಾಮ ತುಂಬ ಮಹತ್ವಪೂರ್ಣವಾದ್ದಾಗಿದೆ. ಈ ರಾಷ್ಟ್ರಗಳಿಂದ ಆಮದು ಮಾಡಿಕೊಳ್ಳುವ ಅನೇಕ ವಸ್ತುಗಳ ಮೇಲೆ ಬ್ರಿಟನ್ ತೆರಿಗೆ ವಿನಾಯತಿ ಕೊಡುತ್ತ ಬಂದಿದೆ. ಇದರಿಂದ ಈ ದೇಶಗಳ ವಿದೇಶೀ ವ್ಯಾಪಾರ ಅಭಿವೃದ್ಧಿಯಾಗುವುದಕ್ಕೆ ಸಾಧ್ಯವಾಗಿದೆ. ಬ್ರಿಟನ್ ಸಮುದಾಯವನ್ನು ಸೇರಿದ ಮೇಲೆ ಅದರ ಸಾಮಾನ್ಯ ಹೊರ ಸುಂಕದ ನೀತಿಯನ್ನು ಅನುಸರಿಸಬೇಕಾಗುವುದರಿಂದ ತೆರಿಗೆಯಿಲ್ಲದ ಕಾಮನ್ವೆಲ್ತ್ ರಾಷ್ಟ್ರಗಳ ವಸ್ತುಗಳು ಬ್ರಿಟನ್ನಿಗೆ ರಫ್ತಾಗುತ್ತಿದ್ದುದು ನಿಲ್ಲುತ್ತದೆ. ಅಭಿವೃದ್ಧಿಶೀಲ ಕಾಮನ್ವೆಲ್ತ್ ರಾಷ್ಟ್ರಗಳು ತಮ್ಮ ರಫ್ತು ಸಂಪಾದನೆ ಕಡಿಮೆಯಾದರೆ ತುಂಬ ತೊಂದರೆಗೆ ಒಳಗಾಗುತ್ತವೆ. ಸಮುದಾಯಕ್ಕೆ ತಾನು ಸೇರುವುದರಿಂದ ರಾಷ್ಟ್ರಗಳ ವಿದೇಶೀ ವ್ಯಾಪಾರದ ಮೇಲೆ ಪ್ರತಿಕೂಲ ಪರಿಣಾಮ ಉಂಟಾಗದಂತೆ ನೋಡಿಕೊಳ್ಳುವ ಭರವಸೆ ನೀಡುತ್ತ ಬಂದಿರುವ ಬ್ರಿಟನ್ ಈಗ ಅದಕ್ಕೆ ಸೂಕ್ತ ವ್ಯವಸ್ಥೆ ಮಾಡುವುದು ಅಗತ್ಯವಾಗಿದೆ.

ವಿಶ್ವಸಂಸ್ಥೆಯ ಎರಡನೆಯ ವ್ಯಾಪಾರ ಮತ್ತು ಅಭಿವೃದ್ಧಿ ಸಭೆಯಲ್ಲಿ ಕೈಗೊಂಡ ನಿರ್ಧಾರಕ್ಕನುಗುಣವಾಗಿ ಸಮುದಾಯ ಸಾಮಾನ್ಯ ರಿಯಾಯತಿ ವಿಧಾನ(ಜನರಲೈಸ್ಡ್ ಸ್ಕೀಂಆಫ್ ಪ್ರಿಫರೆನ್ಸಸ್) ಅನುಸರಿಸುತ್ತಿದೆ. ಅಭಿವೃದ್ಧಿ ಶೀಲ ರಾಷ್ಟ್ರಗಳಿಂದ ಆಮದು ಮಾಡಿಕೊಳ್ಳುವ ಕೈಗಾರಿಕಾ ವಸ್ತುಗಳಿಗೆ ಸುಂಕದಲ್ಲಿ ವಿನಾಯಿತಿ ಕೊಡುವುದೇ ಇದರ ಮುಖ್ಯ ಉದ್ದೇಶ. ಬ್ರಿಟನ್ ಕೂಡ ತನ್ನದೇ ಆದ ಸಾಮಾನ್ಯ ರಿಯಾಯಿತಿ ವಿಧಾನವನ್ನು 1972ರ ಜನವರಿಯಿಂದ ಜಾರಿಗೆ ತಂದಿದೆ. ಸಮುದಾಯಕ್ಕೆ ಸೇರಿದ ಮೇಲೆ ಅದು ಅನುಸರಿಸುತ್ತಿರುವ ಸಾಮಾನ್ಯ ರಿಯಾಯಿತಿ ವಿಧಾನವನ್ನೇ ಬ್ರಿಟನ್ ಅನುಸರಿಸಬೇಕಾಗುತ್ತದೆ. ಕಾಮನ್‌ವೆಲ್ತ್ ರಿಯಾಯಿತಿ ವಿಧಾನ ಅಂತ್ಯಗೊಂಡರೂ ಹೊಸ ಸಾಮಾನ್ಯ ರಿಯಾಯಿತಿ ವಿಧಾನಕ್ಕನುಗುಣವಾಗಿ ಕೆಲವು ವಸ್ತುಗಳು ಸುಂಕವಿಲ್ಲದೆ ಮಾರಾಟವಾಗುತ್ತವೆ. ಆದರೆ ಈ ವಿಧಾನ ಒಂದರಿಂದಲೇ ಅಭಿವೃದ್ಧಿಶೀಲ ಕಾಮನ್‌ವೆಲ್ತ್ ರಾಷ್ಟ್ರಗಳಿಗೆ ಪರಿಹಾರ ದೊರಕುವುದಿಲ್ಲ. ಆದ್ದರಿಂದ ವಿಸ್ತೃತ ಸಮುದಾಯದೊಂದಿಗೆ ಕಾಮನ್‌ವೆಲ್ತ್ ರಾಷ್ಟ್ರಗಳು ಯಾವುದಾದರೊಂದು ಸಂಬಂಧವಿಟ್ಟುಕೊಳ್ಳಲು ಅವಕಾಶ ಮಾಡಲು ಪ್ರಯತ್ನಗಳು ನಡೆಯುತ್ತಿವೆ.

ಸಮುದಾಯದೊಡನೆ ಯೋಂಡೆ ಮಾದರಿ ಒಪ್ಪಂದವನ್ನು4 (ಯೋಂಡೆ ಟೈಪ್ ಅಗ್ರೀಮೆಂಟ್) ಮಾಡಿಕೊಳ್ಳುವಂತೆ ಅಥವಾ ವ್ಯಾಪಾರ ಒಪ್ಪಂದಗಳನ್ನು ಮಾಡಿಕೊಳ್ಳುವಂತೆ ಆಫ್ರಿಕದ ಇಪ್ಪತ್ತು ಕಾಮನ್‌ವೆಲ್ತ್ ರಾಷ್ಟ್ರಗಳಿಗೆ ಬ್ರಿಟನ್ ಸೂಚಿಸಿದೆ. ಯೋಂಡೆ ಒಪ್ಪಂದದ ಪ್ರಕಾರ ಸಮುದಾಯ ರಾಷ್ಟ್ರಗಳ ವಸಾಹತುಗಳಾಗಿದ್ದ ಆಫ್ರಿಕದ ದೇಶಗಳಿಂದ ಸುಂಕವಿಲ್ಲದೆ ಅವುಗಳ ವಸ್ತುಗಳನ್ನು ಸಮುದಾಯ

---

3 ವಿವರಗಳಿಗೆ ನೋಡಿ: *The Economist,* October 7, 1972

4 Bob Tailor: How would the Commonwealth like to join the EEC ? *New Commonwealth and world Development,* Vol.50, 11/12, 1971; P. 44

ಆಮದು ಮಾಡಿಕೊಳ್ಳುತ್ತದೆ: ಸಮುದಾಯದ ವಸ್ತುಗಳನ್ನು ಈ ದೇಶಗಳು ಸುಂಕವಿಲ್ಲದೆ ಆಮದು ಮಾಡಿಕೊಳ್ಳುತ್ತವೆ. ಆದರೆ ಈ ದೇಶಗಳ ಆರ್ಥಿಕ ಅಭಿವೃದ್ಧಿಯ ದೃಷ್ಟಿಯಿಂದ ಅಗತ್ಯವೆನಿಸಿದರೆ ಸಮುದಾಯದಿಂದ ಆಮದುಮಾಡಿಕೊಳ್ಳುವ ವಸ್ತುಗಳ ಮೇಲೆ ಸುಂಕ ವಿಧಿಸುವ ಅವಕಾಶವಿದೆ. ಈ ರೀತಿಯ ಒಪ್ಪಂದ ಮಾಡಿಕೊಳ್ಳುವುದಾದರೆ ಆಫ್ರಿಕದ ಕಾಮನ್‌ವೆಲ್ತ್ ರಾಷ್ಟ್ರಗಳಿಗೆ ಬ್ರಿಟನ್ನಿನ ಸೇರ್ಪಡೆಯಿಂದ ಉಂಟಾಗುವ ಪ್ರತಿಕೂಲ ಪರಿಣಾಮಕ್ಕೆ ಪರಿಹಾರ ದೊರಕುತ್ತದೆ. ಈ ಮಾದರಿಯ ಒಪ್ಪಂದ ಕಾಮನ್‌ವೆಲ್ತ್ ರಿಯಾಯಿತಿ ವಿಧಾನಕ್ಕೆ ಬದಲಿ ವಿಧಾನವಾಗುವುದರಿಂದ ಆಫ್ರಿಕದ ಕಾಮನ್‌ವೆಲ್ತ್ ರಾಷ್ಟ್ರಗಳ ವಿದೇಶೀ ವ್ಯಾಪಾರ ಅಭಿವೃದ್ಧಿ ಹೊಂದಲು ಸಹಾಯವಾಗುತ್ತದೆ.

ಅಭಿವೃದ್ಧಿ ಹೊಂದಿದ ಕಾಮನ್‌ವೆಲ್ತ್ ರಾಷ್ಟ್ರಗಳಾದ ಕೆನಡ. ಆಸ್ಟ್ರೇಲಿಯ ಮತ್ತು ನ್ಯೂಜೀಲೆಂಡ್‌ಗಳು ಸಮುದಾಯದೊಡನೆ ವ್ಯಾಪಾರ ಒಪ್ಪಂದಗಳನ್ನು ಮಾಡಿಕೊಂಡು ತನ್ಮೂಲಕ ಬ್ರಿಟನಿಗೆ ಸಮುದಾಯದ ಸೇರ್ಪಡೆಯಿಂದ ತಮ್ಮ ವಿದೇಶೀ ವ್ಯಾಪಾರದ ಮೇಲೆ ಉಂಟಾಗುವ ಪ್ರತಿಕೂಲ ಪರಿಣಾಮಗಳಿಗೆ ಪರಿಹಾರ ಕಂಡುಕೊಳ್ಳಬಹುದೆಂದು ಬ್ರಿಟನ್ ಸೂಚಿಸಿದೆ. ಅಂತೆಯೇ ಅಭಿವೃದ್ಧಿಶೀಲ ಕಾಮನ್‌ವೆಲ್ತ್ ರಾಷ್ಟ್ರಗಳಾದ ಭಾರತ. ಪಾಕಿಸ್ತಾನ. ಬಾಂಗ್ಲಾದೇಶ. ಮಲೇಷಿಯ ಮತ್ತು ಸಿಂಗಪುರ ಸಹ ವ್ಯಾಪಾರ ಒಪ್ಪಂದಗಳ ಮೂಲಕ ಸಮಸ್ಯೆಯನ್ನು ಬಗೆಹರಿಸಿಕೊಳ್ಳಬಹುದೆಂದು ಸೂಚಿಸಲಾಗಿದೆ.

ಭಾರತದ ಮೇಲಿನ ಪರಿಣಾಮ

ಬ್ರಿಟನ್ ಭಾರತಕ್ಕೆ ಬಹು ಮುಖ್ಯವಾದ ರಫ್ತು ಮಾರುಕಟ್ಟೆ. ಕೆಲವು ಮುಖ್ಯವಸ್ತುಗಳ ರಫ್ತಿನಲ್ಲಿ ಬ್ರಿಟನ್‌ಗೆ ಹೋಗುವುದರ ಪಾಲು ಈ ರೀತಿ ಇದೆ: ಕಚ್ಚಾ ಹೊಗೆಸೊಪ್ಪು ಶೇಕಡ 48. ಟೀ ಶೇಕಡ 32. ಉಣ್ಣೆ ಹಾಸು ಶೇಕಡ 20. ಹತ್ತಿ ಬಟ್ಟೆ ಶೇಕಡ 24. ಬೀಜ ಶೇಕಡ 24. ನಾರುವಸ್ತು ಶೇಕಡ 24. ಚರ್ಮ ಶೇಕಡ 21 ಮತ್ತು ಸಕ್ಕರೆ ಶೇಕಡ 21.[5] ಬ್ರಿಟನಿಗೆ ರಫ್ತು ಮಾಡುವುದು ಬ್ರಿಟನ್ನಿನಿಂದ ಆಮದು ಮಾಡಿಕೊಳ್ಳುವುದಕ್ಕಿಂತ ಹೆಚ್ಚಾಗಿದ್ದು ಭಾರತಕ್ಕೆ ಹೆಚ್ಚು ಅನುಕೂಲಕರವಾದ ರೀತಿಯಲ್ಲಿ ಭಾರತ–ಬ್ರಿಟನ್ ವ್ಯಾಪಾರ ಸಂಬಂಧ ಬೆಳೆದಿದೆ. ಇದಕ್ಕೆ ಮುಖ್ಯ ಕಾರಣ ಕಾಮನ್‌ವೆಲ್ತ್ ರಿಯಾಯಿತಿ ವಿಧಾನಕ್ಕನುಗುಣವಾಗಿ ಭಾರತದ ಹಲವು ವಸ್ತುಗಳ ಕರಿಗೆ ವಿನಾಯಿತಿ ಮತ್ತು ಇತರ ರಿಯಾಯಿತಿಗಳನ್ನು ಪಡೆಯುತ್ತಿರುವುದು. ಸಮುದಾಯಕ್ಕೆ ಬ್ರಿಟನ್ನಿನ ಸೇರ್ಪಡೆಯಾದರೆ ಈ ಅನುಕೂಲ ಕಳೆದು ಹೋಗುವುದರಿಂದ ಭಾರತದ ರಫ್ತು ವ್ಯಾಪಾರದ ಮೇಲೆ ಆಗುವ ಪರಿಣಾಮವೇನೆಂಬುದರ ಕಡೆಗೆ ಹೆಚ್ಚು ಗಮನ ಕೊಡುವುದು ಅಗತ್ಯ. ಬ್ರಿಟನ್ನಿನ ಸೇರ್ಪಡೆಯಿಂದ ತತ್‌ಕ್ಷಣವೇ ಭಾರತದ ರಫ್ತಿನ ಮೇಲೆ ಘೋರ ಪರಿಣಾಮವಾಗುವುದಿಲ್ಲ. ಇದಕ್ಕೆ ಕಾರಣ ಈಗಾಗಲೇ ಸಮುದಾಯ ಟೀ. ಗೋಡಂಬಿ. ಅರಗು ಮುಂತಾದವುಗಳಿಗೆ ಸುಂಕ ರಿಯಾಯಿತಿಯನ್ನೂ ಸೆಣಬು ಮತ್ತು ಹತ್ತಿ ವಸ್ತುಗಳಿಗೆ ಸುಂಕ ರಿಯಾಯಿತಿಯನ್ನೂ ಕೊಟ್ಟಿದ್ದು. ಈ ವಿಧಾನವನ್ನೇ ಬ್ರಿಟನ್ ಸಹ ಅನುಸರಿಸುವುದು. ಸಾಮಾನ್ಯ ರಿಯಾಯಿತಿ ವಿಧಾನವನ್ನು ಅನುಷ್ಠಾನಕ್ಕೆ ತಂದಿರುವುದು ಮತ್ತು ಸಮುದಾಯದ ಸಾಮಾನ್ಯ ಹೊರಸುಂಕವನ್ನು ಬ್ರಿಟನ್ ತತ್‌ಕ್ಷಣವೇ ವಿಧಿಸದೆ ನಾಲ್ಕು ವರ್ಷಗಳ ಅವಧಿಯಲ್ಲಿ ನಿಧಾನವಾಗಿ ವಿಧಿಸಲು ನಿರ್ಧರಿಸಿರುವುದು. ಬ್ರಿಟನ್ನಿಗೆ ಭಾರತದ ರಫ್ತಿನ ಮೂರನೆಯ ಎರಡರಷ್ಟರ ಮೇಲೆ ಪರಿಣಾಮವಾಗುವುದಿಲ್ಲ. ಆದರೆ ಉಳಿದ ಮೂರನೆಯ ಒಂದರಷ್ಟು ರಫ್ತಿನ ಮೇಲೆ ಆಗುವ ಪರಿಣಾಮವೇ ಭಾರತಕ್ಕೆ ಸಾಕಷ್ಟು ಪ್ರತಿಕೂಲ ಉಂಟುಮಾಡುತ್ತದೆ. ಸಮುದಾಯದೊಡನೆ ವ್ಯಾಪಾರ ಒಪ್ಪಂದ ಮಾಡಿಕೊಳ್ಳುವುದರ ಮೂಲಕ ಈ ಸಮಸ್ಯೆಯನ್ನು ಬಗೆಹರಿಸಿಕೊಳ್ಳಬೇಕಾಗುತ್ತದೆ. ಇದರಲ್ಲಿ ಬ್ರಿಟನ್ ನೆರವಾಗಿ ಭಾರತದ ರಫ್ತುವ್ಯಾಪಾರಕ್ಕೆ ತೊಂದರೆಯಾಗದಂತೆ ವ್ಯವಸ್ಥೆ ಮಾಡಬೇಕಾಗಿದೆ.

ಐರೋಪ್ಯ ಆರ್ಥಿಕ ಸಂಘಟನೆಯ ಪ್ರಯತ್ನ ಮತ್ತಷ್ಟು ಬಲಗೊಳ್ಳಲು, ಬ್ರಿಟನ್ನಿನ ಅಂತರ ರಾಷ್ಟ್ರೀಯ ವ್ಯಾಪಾರ ಮತ್ತು ಆರ್ಥಿಕ ಬೆಳವಣಿಗೆ ತ್ವರಿತ ಗತಿಯಲ್ಲಿ ಉತ್ತಮಗೊಳ್ಳಲು ಮತ್ತು

---

5 *The Hindu*, October 2, 1972

ಐರೋಪ್ಯ ಆರ್ಥಿಕ ಸಮುದಾಯದ ವ್ಯಾಪ್ತಿ ಮತ್ತು ಪ್ರಭಾವ ಹೆಚ್ಚುವಂತೆ ಮಾಡಲು ಸಮುದಾಯಕ್ಕೆ ಬ್ರಿಟನಿನ ಸೇರ್ಪಡೆಯಾಗುವುದು ಅಗತ್ಯವಾಗಿದೆ. ಆದರೆ ಬ್ರಿಟನಿನ ಮೇಲೆ ಆಗುವ ಕೆಲವು ಪ್ರತಿಕೂಲ ಪರಿಣಾಮಗಳಿಗೆ ಮತ್ತು ಭಾರತ ಮತ್ತಿತರ ಕಾಮನ್‌ವೆಲ್ತ್ ರಾಷ್ಟ್ರಗಳ ಮೇಲೆ ಐರೋಪ್ಯ ನಿರಾತಂಕ ವ್ಯಾಪಾರ ವಲಯದ ರಾಷ್ಟ್ರಗಳ ಮೇಲೆ ಉಂಟಾಗುವ ಪ್ರತಿಕೂಲ ಪರಿಣಾಮಗಳಿಗೆ ಸೂಕ್ತ ಪರಿಹಾರ ಒದಗಿಸಬೇಕಾಗಿದೆ. ಬ್ರಿಟನ್ ಮತ್ತು ಸಮುದಾಯ ಇತರ ರಾಷ್ಟ್ರಗಳ ಮೇಲೆ ಉಂಟಾಗುವ ಪ್ರತಿಕೂಲ ಪರಿಣಾಮಗಳನ್ನು ಆದಷ್ಟು ಕಡಿಮೆ ಮಾಡಲು ಪ್ರಯತ್ನಿಸುತ್ತಿರುವುದು ಸ್ತುತ್ಯರ್ಹ. ಆದರೆ ಭಾರತ ಮತ್ತಿತರ ರಾಷ್ಟ್ರಗಳು ಬ್ರಿಟನಿನ ಸೇರ್ಪಡೆಯಿಂದ ಉದ್ಭವಿಸುವ ಸಮಸ್ಯೆಗಳ ಬಗ್ಗೆ ಸದಾ ಜಾಗರೂಕವಾಗಿದ್ದು ತಮ್ಮ ಅಂತರರಾಷ್ಟ್ರೀಯ ವ್ಯಾಪಾರವನ್ನು ರಕ್ಷಿಸಿಕೊಳ್ಳುವ ಪ್ರಯತ್ನ ಮಾಡಬೇಕು. ಬ್ರಿಟನ್ ಮತ್ತು ಸಮುದಾಯದ ನೀತಿಯಿಂದ ತಮ್ಮ ಅಂತರರಾಷ್ಟ್ರೀಯ ವ್ಯಾಪಾರಕ್ಕೆ ಒದಗಬಹುದಾದ ತೊಂದರೆಯನ್ನು ತಪ್ಪಿಸಲು ಸೂಕ್ತಕ್ರಮಗಳನ್ನು ಕೈಗೊಳ್ಳುವಂತೆ ಒತ್ತಡ ಹಾಕುವುದು ಅನಿವಾರ್ಯ

ಅರ್ಥಶಾಸ್ತ್ರದ ಮೇಲೆ ಹೊಸ ತಂತ್ರವಿಜ್ಞಾನದ ಅತ್ಯಂತ ಮುಖ್ಯ ಪರಿಣಾಮವೆಂದರೆ ಸಾರ್ವಜನಿಕ ನೀತಿಗೆ ಸಂಬಂಧಿಸಿದ್ದು. ಜನ ಮಾಡಬಹುದಾದ್ದಕ್ಕಿಂತ ಹೆಚ್ಚು ಶೀಘ್ರವಾಗಿ ಮತ್ತು ಪರಿಣಾಮಕಾರಿಯಾಗಿ ಯಂತ್ರಗಳು ನಾನಾ ಕೆಲಸಗಳನ್ನು ಮಾಡಬಲ್ಲವಾದರೆ. ವ್ಯಕ್ತಿ ಎಷ್ಟರ ಮಟ್ಟಿಗೆ ಮುಖ್ಯ? ತಮಗೆ ಹೆಚ್ಚಿನ ಬೆಲೆಯಿಲ್ಲವೆಂದು ಸ್ತ್ರೀಪುರುಷರು ಭಾವಿಸಲಾರಂಭಿಸಿದರೆ ಆಗ ಮಾನಸಿಕ ಮತ್ತು ಭಾವನಾತ್ಮಕ ಸಮಸ್ಯೆಗಳು ಉದ್ಭವಿಸಬಹುದು. ತಂತ್ರವಿಜ್ಞಾನವನ್ನು ಅವಲಂಬಿಸಿದ ಅರ್ಥಿಕತೆಯಲ್ಲಿ ಜನಕ್ಕೆ ಅತ್ಯುತ್ತಮವಾದ್ದು ಯಾವುದೆಂಬುದರ ಬದಲು ತಂತ್ರವಿಜ್ಞಾನಕ್ಕೆ ಅತ್ಯುತ್ತಮವಾದ್ದು ಯಾವುದೆಂಬುದರ ಮೇಲೆ ತೀರ್ಮಾನಗಳನ್ನು ಕೈಗೊಳ್ಳುವ ಅಪಾಯವಿದೆ.

ಅರ್ಥಿಕತೆಯ ಅಧಿಕತರ ಉತ್ಪಾದಕಶಕ್ತಿಯಿಂದ ಕೆಲಸ ಮತ್ತು ವಿನೋದವನ್ನು ಕುರಿತ ಮನೋಭಾವಗಳು ಬದಲಾಗುತ್ತವೆ. ವ್ಯಾಪಕವಾಗಿ ಅಧಿಕವಾದ ಉತ್ಪಾದಕತೆಯಿಂದ ಜೀವನ ವಿಧಾನದಲ್ಲಿ ಮೇಲ್ಪಾಟಾಗಲೂ ಕೆಲಸದ ಗಂಟೆಗಳಲ್ಲಿ ಬಹಳ ಇಳಿತಾಯವಾಗಲೂ ಸಾಧ್ಯವಾಗುತ್ತದೆ. ವರಮಾನ ವಿತರಣೆಯ ಹೊಸ ನಮೂನೆಗಳನ್ನು ರೂಪಿಸಬೇಕಾಗಬಹುದು.

ಹೊಸ ತಂತ್ರವಿಜ್ಞಾನದಿಂದ ಅರ್ಥಿಕ ಅಭ್ಯುದಯ ಸಾಧಿತವಾಗುವುದೆಂಬುದು ನಿಸ್ಸಂದೇಹ. ಕನಿಷ್ಠ ಪಕ್ಷ ಮುಂದುವರಿದ ದೇಶಗಳಲ್ಲಾದರೂ ನಾವು ತಿಳಿದಂಥ ದಾರಿದ್ರ್ಯವನ್ನು ಕೊನೆಗೊಳಿಸುವುದು ಸಾಧ್ಯ. ಅಧಿಕಗೊಂಡ ವರಮಾನಗಳು ಮತ್ತು ವಿರಾಮವೇಳೆಯಿಂದ ಅಮೆರಿಕ ಸಂಯುಕ್ತಸಂಸ್ಥಾನದಲ್ಲಿ ಜೀವನದರ್ಜೆ ಸುಧಾರಿಸಿದೆ. ಇನ್ನೂ ಸುಧಾರಿಸುತ್ತ ಹೋಗುತ್ತದೆ. ಹೆಚ್ಚು ಜನಕ್ಕೆ ಉತ್ತಮ ಶಿಕ್ಷಣ ಲಭ್ಯವಾಗಿದೆ. ಟೆಲಿವಿಷನ್ ಮತ್ತು ಆಕಾಶವಾಣಿಯಿಂದಾಗಿ ಲಕ್ಷಾಂತರ ಮಂದಿ ಈಗ ಶಿಕ್ಷಣ ಮತ್ತು ಮನೋರಂಜನೆಯನ್ನನುಭವಿಸಬಹುದು. ಹಲವು ತಲೆಮಾರುಗಳ ಹಿಂದೆ ಕೇವಲ ಕೆಲವೇ ಜನಕ್ಕೆ ಮಾತ್ರ ಇವು ಲಭ್ಯವಿದ್ದುವು!

— ಡೇನಿಯಲ್ ಆರ್. ಫಸ್ಫೆಲ್ಡ್[1]

---

1 Daniel R. Fusfeld : *The Age of the Economist*, Pyramid Books, New York, 1970, p. 120

ಎ. ಆರ್. ರಂಗನಾಥರಾವ್

ಅಂತರರಾಷ್ಟ್ರೀಯ ಕಾರ್ಮಿಕ ಸಂಸ್ಥೆ ಮತ್ತು ಶ್ರಮಜೀವಿಗಳ ಹಿತರಕ್ಷಣೆ

"ಬಡತನ ಪ್ರಪಂಚದಲ್ಲೆಲ್ಲಿದ್ದರೂ ಅದು ಎಲ್ಲೆಡೆಯ ಸುಖವೃದ್ಧಿಗೆ ಮಾರಕ" ಎಂಬ ತನ್ನ ಧ್ಯೇಯ ವಾಕ್ಯದಿಂದ ಮಾನವತೆಯನ್ನು ಎಚ್ಚರಿಸಿ ಅನೇಕ ರಾಷ್ಟ್ರಗಳ ದುಡಿಯುವವರ ಜೀವನವನ್ನು ಬಹುಮಟ್ಟಿಗೆ ಸುಧಾರಿಸಿ ಸಹ್ಯವಾಗಿಸಿರುವುದು ಅಂತರರಾಷ್ಟ್ರೀಯ ಕಾರ್ಮಿಕ ಸಂಸ್ಥೆಯ ಕಳೆದ ಐವತ್ತು ವರ್ಷಗಳ ಸಾಧನೆಯಾಗಿದೆ. ಈ ಸಂಸ್ಥೆಯ ಸೂತ್ರವಾಕ್ಯ ಇಂದು ಅನೇಕ ರಾಷ್ಟ್ರಗಳು ರೂಪಿಸುತ್ತಿರುವ ಸಾಮಾಜಿಕ ನ್ಯಾಯ ನಿಬಂಧನೆಗಳಿಗೆ ಪ್ರೇರಕ ಶಕ್ತಿಯಾಗಿದೆ. ಈ ಸಂಸ್ಥೆಯ ಸದಸ್ಯರಾಷ್ಟ್ರಗಳು ಇದರಿಂದ ರೂಪಿಸಲ್ಪಟ್ಟ ಅನೇಕ ಸೂತ್ರಗಳನ್ನೂ ಶಿಫಾರಸುಗಳನ್ನೂ ತಮ್ಮಲ್ಲಿಯ ಕೈಗಾರಿಕಾ ಸಾಮಾಜಿಕ ಕಾನೂನುಗಳಲ್ಲಿ ಅಳವಡಿಸಿ ಶ್ರಮಜೀವಿಗಳಿಗೆ ಸಾಮಾಜಿಕ ರಕ್ಷಣೆಯನ್ನೂ ಗೌರವಾನ್ವಿತ ಜೀವನವನ್ನೂ ಒದಗಿಸಿಕೊಡಲು ಯತ್ನಿಸುತ್ತಿವೆ.

ಈ ಸಂಸ್ಥೆ ಸಿದ್ಧಪಡಿಸಿದ ಸೂತ್ರ–ಶಿಫಾರಸುಗಳು ಸದಸ್ಯ ರಾಷ್ಟ್ರಗಳ ಮೇಲೆ ಅವನ್ನು ಸೂಕ್ತ ಕ್ರಮದಲ್ಲಿ ಜಾರಿಗೆ ತರುವ ನೈತಿಕ ಹೊಣೆಹೊರೆಸುತ್ತವೆ. ಈ ಮೂಲಕ ವಿವಿಧ ರಾಷ್ಟ್ರಗಳ ಕೈಗಾರಿಕೆ, ಕೃಷಿ, ವ್ಯಾಪಾರ. ವಾಣಿಜ್ಯ ಕ್ಷೇತ್ರಗಳ ದುಡಿಮೆಗಾರರ ಕಾರ್ಯ ಪರಿಸರಣ, ಜೀವನದ ಸ್ಥಿತಿಗತಿಗಳು ಉತ್ತಮಗೊಂಡಿವೆ. ವಿವಿಧ ರಾಷ್ಟ್ರಗಳ ಕೈಗಾರಿಕಾ ಕಾನೂನುಗಳ ಬೆಳವಣಿಗೆ, ಕಾರ್ಮಿಕ ಸಂಘಟನೆ, ಸ್ತ್ರೀ ಹಾಗೂ ಎಳೆಯ ಕೆಲಸಗಾರರ ರಕ್ಷಣೆ, ವೇತನ ವಿತರಣೆ, ಸಮಾಜ ರಕ್ಷಣೆಯ ಯೋಜನೆಗಳು, ಅಪಘಾತ ನಿವಾರಣೆ, ನೊಂದವರಿಗೆ ಪರಿಹಾರ, ಕೈಗಾರಿಕಾ ಸುರಕ್ಷತಾ ನಿಯಮಗಳು ಮತ್ತು ಸುರಕ್ಷತಾ ಪರಿಮಾಣ ನಿಷ್ಕರ್ಷೆ ಇವೇ ಮೊದಲಾದ ಹತ್ತಾರು ಕ್ಷೇತ್ರಗಳಲ್ಲಿ ಅಂತರರಾಷ್ಟ್ರೀಯ ಕಾರ್ಮಿಕ ಸಂಸ್ಥೆ ಪ್ರಭಾವ ಬೀರಿದೆ. ಈ ಪ್ರಭಾವವೇ ಇಂದು ನಮ್ಮ ಉದ್ದಿಮೆ ತನ್ನ ಹಿಂದಿನ ಕ್ರೂರ ವ್ಯಾಪಾರಿ ಪ್ರವೃತ್ತಿಯನ್ನು ತೊಡೆದು ಉದಾರ ಮಾನವೀಯತೆಯತ್ತ ಸಾಗಲು ಕಾರಣ.

ಸಂಸ್ಥೆಯ ಹುಟ್ಟು ಬೆಳವಣಿಗೆ

ಈ ಸಂಸ್ಥೆಯ ಜನನ ಒಂದನೆಯ ಮಹಾಯುದ್ಧದ ಅನಂತರ ವಿಶ್ವಶಾಂತಿಗಾಗಿ ರೂಪುಗೊಂಡ 'ಲೀಗ್ ಆಫ್ ನೇಷನ್ಸ್'ನ ಆಶ್ರಯದಲ್ಲಿ 1919ರಲ್ಲಿ ಆಯಿತೆಂದೆನಿಸಿದರೂ ವಾಸ್ತವವಾಗಿ ಇಂತಹದೊಂದು ಸಂಸ್ಥೆಯ ರಚನೆಗಾಗಿ ಯತ್ನ ಹತ್ತೊಂಬತ್ತನೆಯ ಶತಮಾನದಲ್ಲೇ ಕೆಲವು ಉದಾರ ಮನೋಭಾವದ ಉದ್ಯಮಿಗಳು ಮತ್ತು ರಾಜಕಾರಣಿಗಳಿಂದ ಆಗಿತ್ತು. 1819ರಲ್ಲಿ ಇಂಗ್ಲೆಂಡಿನ ರಾಬರ್ಟ್ ಓವೆನ್‌ನನ ಪ್ರಯತ್ನದಿಂದಾಗಿ ಮೊಟ್ಟ ಮೊದಲ ಬಾರಿಗೆ ಬ್ರಿಟಿಷ್ ಪಾರ್ಲಿಮೆಂಟು ಕಾರ್ಖಾನೆಗಳ ಕಾಯಿದೆಯನ್ನು ಜಾರಿಗೆ ತಂದಿತು. ಕಾಯಿದೆಯ ಪ್ರಕಾರ ಮಕ್ಕಳಿಗೆ ಹನ್ನೆರಡು ಗಂಟೆಗಳಿಗಿಂತ ಹೆಚ್ಚು ದುಡಿತವನ್ನು ನಿಷೇಧಿಸಲಾಯಿತು–ಎಂದರೆ ಅಂದಿನ ಕಾರ್ಮಿಕರ ಪರಿಸ್ಥಿತಿಯ ಘೋರತೆಯ ಅನುಭವವಾಗುತ್ತದೆ. ರಾಬರ್

ಓವನನೇ ಇಂದು ಪ್ರಚಲಿತವಿರುವ 'ಸಮಾಜವಾದ' ಎಂಬ ಪದವನ್ನು ಮೊತ್ತಮೊದಲು ಉಪಯೋಗಿಸಿದ ನೆಂಬ ಪ್ರತೀತಿಯೂ ಉಂಟು. ಸರ್ಕಾರಗಳಿಗೆ ಕಾರ್ಮಿಕರ ಶೋಷಣೆಯನ್ನು ತಪ್ಪಿಸಲು ಸೂಕ್ತ ವಾದ ಜಾಗತಿಕ ಕಾನೂನನ್ನು ಜಾರಿಗೆ ತರಬೇಕೆಂದು 1847ರಲ್ಲಿ ಲೆ ಗ್ರಾಂಡೇ ಎಂಬಾತ ಇಂಗ್ಲೆಂಡ್, ಫ್ರಾನ್ಸ್, ಪ್ರಷ್ಯಾ ಸರ್ಕಾರಗಳನ್ನು ಪ್ರಾರ್ಥಿಸಿದ್ದ. ತರುವಾಯ 'ಮಾರ್ಕ್ಸ್' ಮತ್ತು 'ಎಂಗೆಲ್ಸ್' ಸಾರಿದ ಕಮ್ಯುನಿಸ್ಟ್ ಪ್ರಣಾಳಿಕೆ ಈ ದಿಕ್ಕಿನಲ್ಲಿ ಬಹು ಪ್ರಭಾವಶಾಲಿ ಪ್ರಯತ್ನವಾಗಿ ಪ್ರಪಂಚದ ರಾಜಕೀಯ ಹಾಗೂ ಸಾಮಾಜಿಕ ವಿಚಾರಧಾರೆಯನ್ನೇ ತೀವ್ರವಾಗಿ ಬದಲಾಯಿಸಿತು. ಇಂಗ್ಲೆಂಡಿನಲ್ಲಿ 1864ರಲ್ಲಿ ಮಾರ್ಕ್ಸ್ ಸ್ಥಾಪಿಸಿದ ಅಂತರರಾಷ್ಟ್ರೀಯ ಶ್ರಮಜೀವಿಗಳ ಸಂಘ ಜಾಗತಿಕ ಕಾರ್ಮಿಕ ಸಂಘಟನೆಗೆ ನಾಂದಿಯಾಯಿತು. ಇದೇ ಮೊದಲ "ಇಂಟರ್ ನ್ಯಾಷನಲ್" ಎಂದು ಖ್ಯಾತಿವೆತ್ತ ಸಂಘಟನೆ. 1878ರಲ್ಲಿ ಎರಡನೆಯ ಅಂತರರಾಷ್ಟ್ರೀಯವೂ 1889ರಲ್ಲಿ ಮೂರನೆಯ ಅಂತರರಾಷ್ಟ್ರೀಯವೂ ಸೇರಿದ್ದುವು. ತರುವಾಯ 1901ರಲ್ಲಿ ನಡೆದ ಅಂತರರಾಷ್ಟ್ರೀಯ ಕಾರ್ಮಿಕ ಕಾನೂನು ಪರಿಷತ್ತಿನ ಫಲವಾಗಿ ಬಾಸ್ಲೆಯಲ್ಲಿ ಅಂತರರಾಷ್ಟ್ರೀಯ ಕಾರ್ಮಿಕ ಕಚೇರಿಯೊಂದು ಸ್ಥಾಪಿತವಾಯಿತು; ಹಾಗೂ ಇದು ಸ್ತ್ರೀಯರಿಗೆ ರಾತ್ರಿ ಪಾಳಿ ನಿಷೇಧ ಗೊಳಿಸಬೇಕೆಂಬ ಮೊತ್ತಮೊದಲನೆಯ ಸಂಪ್ರದಾಯ ಸೂತ್ರ ವನ್ನು ರೂಪಿಸಿತು. ಇಂದಿನ ಅಂತರರಾಷ್ಟ್ರೀಯ ಕಾರ್ಮಿಕರ ಸಂಸ್ಥೆಯ ಬೀಜಾಂಕುರವಾದ್ದು ಆಗಲೇ ಎಂದು ಹೇಳಬಹುದು. ಈ ಅಂತರ ರಾಷ್ಟ್ರೀಯ ಕಾರ್ಮಿಕ ಕಚೇರಿ ಒಂದನೆಯ ಮಹಾ ಯುದ್ಧದ ಗಂಡಾಂತರದಿಂದಾಗಿ ಅಲ್ಪಾಯುವಾಗಿ. 1919ರಲ್ಲಿ 'ವರ್ಸೇಲ್ಸ್' ಶಾಂತಿ ಒಪ್ಪಂದವನ್ವಯ ಕಾರ್ಮಿಕರ ಉದ್ಯೋಗ ಸ್ಥಿತಿಗತಿಗಳನ್ನು ಅಂತರ ರಾಷ್ಟ್ರೀಯ ಮಟ್ಟದಲ್ಲಿ ಪರಿಶೀಲಿಸಲು ಒಂದು ಸಮಿತಿಯ ನೇಮಕದಿಂದ ಮಹಾಯುದ್ಧದ ಮುಂಚೆ ಸ್ಥಗಿತಗೊಂಡಿದ್ದ ಪ್ರಯತ್ನ ಮತ್ತೆ ಜೀವ ತಾಳಿತು. ಅಂತರರಾಷ್ಟ್ರೀಯ ದೃಷ್ಟಿಯಿಂದ ಕಾರ್ಮಿಕರ ಸ್ಥಿತಿಗತಿಗಳನ್ನು ಸುಧಾರಿಸಲು ಒಂದು ಖಾಯಂ ವ್ಯವಸ್ಥೆ ಯನ್ನು ರೂಪಿಸುವುದು ಈ ಸಮಿತಿಗೆ ಒಪ್ಪಿಸಲಾದ ಕಾರ್ಯ. ಇದರ ಫಲವಾಗಿಯೇ 1919ರ ಏಪ್ರಿಲ್ 11ರಂದು ಇಂದಿನ ಅಂತರ–ರಾಷ್ಟ್ರೀಯ ಕಾರ್ಮಿಕ ಸಂಸ್ಥೆಯ ಉದಯವಾಯಿತು. ಹೀಗೆ ಎರಡು ಮಹಾಯುದ್ಧಗಳ ಅಗ್ನಿಪರೀಕ್ಷೆಯಿಂದ ಹೊರ ಬಂದು ಅನೇಕ ಜಾಗತಿಕ ಅಲ್ಲೋಲ–ಕಲ್ಲೋಲ ಗಳನ್ನೆದುರಿಸಿ ನಿಂತಿರುವ ಈ ಸಂಸ್ಥೆ, ಸಮೂಹಸೌಖ್ಯ ವಿಶ್ವಶಾಂತಿಯಲ್ಲಿ ಇನ್ನೂ ನಂಬಿಕೆ ಕಳೆದು ಕೊಳ್ಳದಿರುವ ಜನಕ್ಕೆ ಮತ್ತು ಆ ದಿಕ್ಕಿನಲ್ಲಿ ಪ್ರಯತ್ನಿಸುತ್ತಿರುವ ಅನೇಕ ರಾಷ್ಟ್ರ ಸಂಸ್ಥೆ ವ್ಯಕ್ತಿಗಳಿಗೆ ದಾರಿದೀವಿಗೆಯಾಗಿದೆ.

ಸಂಸ್ಥೆಯ ಧ್ಯೇಯ, ಕಾರ್ಯ

ಈ ಸಂಸ್ಥೆಯ ಧ್ಯೇಯಧೋರಣೆಗಳು ಇದರ ಸಂವಿಧಾನದ ಪ್ರಸ್ತಾವನೆ ಮತ್ತು ಅನೇಕ ಘೋಷಣೆಗಳಲ್ಲಿ ವ್ಯಕ್ತವಾಗಿದೆ.

ಸಾಮಾಜಿಕ ನ್ಯಾಯದ ಮೂಲಕ ಮಾತ್ರವೇ ಶಾಶ್ವತ ವಿಶ್ವಶಾಂತಿ ಸಾಧ್ಯ ಎಂಬ ದೃಢ ನಂಬಿಕೆ ಯುಳ್ಳ ಈ ಸಂಸ್ಥೆಯ ಪ್ರಣಾಳಿಕೆ ಕಾರ್ಮಿಕರ ಬಗ್ಗೆ ತನಗಿರುವ ಕಳಕಳಿಯನ್ನು ಹೀಗೆ ವ್ಯಕ್ತಪಡಿಸಿದೆ: "ವಿಶ್ವದಲ್ಲಿ ಎಲ್ಲ ಕಡೆಯೂ ಕಾರ್ಮಿಕರ ಶೋಷಣೆ, ಅನ್ಯಾಯ ಹೆಚ್ಚುತ್ತಿರುವಾಗ ಮತ್ತು ಜನತೆ ಅತೀವ ಕಷ್ಟಗಳಿಗೆ ಗುರಿಯಾಗಿ ಸಾರ್ವತ್ರಿಕ ಅಶಾಂತಿ ಇಡೀ ಜಗತ್ತನ್ನೇ ಆವರಿಸಿ ಶಾಂತಿ ಸುವ್ಯವಸ್ಥೆಗೆ ಮಾರಕವಾಗಿ ಬೆಳೆಯುತ್ತಿರುವುದರಿಂದ ಈ ಸ್ಥಿತಿಗತಿಗಳನ್ನು ಅತಿಶೀಘ್ರದಲ್ಲಿ ನಿವಾರಿಸಬೇಕಾದ ಅವಶ್ಯಕತೆ ಇಂದು ಹೆಚ್ಚಾಗಿದೆ ಮತ್ತು ಇದು ಮಾನವ ಜನಾಂಗದ ಜೀವ–ಉಳಿವಿನ ಪ್ರಶ್ನೆಯಾಗಿದೆ. ಕಾರ್ಮಿಕ ಜನಾಂಗದ ಹಿತಸಾಧನೆಗಾಗಿ ಅನೇಕ ಪ್ರಯತ್ನಗಳನ್ನು ತ್ವರಿತವಾಗಿ ಮಾಡಬೇಕಾದ ಅವಶ್ಯಕತೆ ಎಂದಿಗಿಂತಲೂ ಇಂದು ಅಧಿಕವಾಗಿದೆ, ಅನಿವಾರ್ಯವಾಗಿದೆ. ಈ ದಿಕ್ಕಿನಲ್ಲಿ ಸಾಧಿಸಬೇಕಾದ ಕೆಲವು ಸುಧಾರಣೆಗಳು ಇವು: ಕೆಲಸದ ವೇಳೆಯ ನಿಗದಿ, ನಿರುದ್ಯೋಗ ನಿವಾರಣೆ, ಕೆಲಸಗಾರರನ್ನು ಒದಗಿಸುವ ಬಗ್ಗೆ ನೀತಿ, ನಿಯಮಗಳು, ಜೀವನಕ್ಕೆ ತಕ್ಕ ವೇತನ, ಕಾಯಿಲೆ, ಅಪಘಾತಗಳು ಮತ್ತು ಅಂಗವಿಕಲತೆ ಇವುಗಳ ವಿರುದ್ಧ ರಕ್ಷಣೆ, ಎಳೆಯರು ಮತ್ತು ಮಹಿಳಾ ಕಾರ್ಮಿಕರ ರಕ್ಷಣೆ, ಸಮಾನ ಕೆಲಸಗಳಿಗೆ ಸಮಾನ ವೇತನ ನಿಯಮ, ಸಂಘ ಸ್ವಾತಂತ್ರ್ಯ, ತಾಂತ್ರಿಕ ಶಿಕ್ಷಣ ಮತ್ತು ತರಬೇತು. ಈ ದಿಕ್ಕಿನಲ್ಲಿ ಯಾವುದೊಂದು ರಾಷ್ಟ್ರ ಪ್ರವೃತ್ತ

ವಾಗಿದ್ದರೂ ಅದು ಬೇರೆ ರಾಷ್ಟ್ರದ ಪ್ರಗತಿಗೆ ಕುಂಠಕ ಎಂಬುದೂ ಈ ಸಂಸ್ಥೆಯ ಅರಿವು. ಸಂವಿಧಾನದ ಪ್ರಸ್ತಾಪನೆಯಲ್ಲದೆ ಈ ಸಂಸ್ಥೆಯ ಧ್ಯೇಯಗಳನ್ನು ಒತ್ತಿ ಹೇಳುವ ಇನ್ನೊಂದು ದಾಖಲೆಯೆಂದರೆ, ಫಿಲಡೆಲ್ಫಿಯ ನಗರದಲ್ಲಿ 1944ರಲ್ಲಿ ಸೇರಿದ್ದ 26ನೆಯ ಅಂತರರಾಷ್ಟ್ರೀಯ ಕಾರ್ಮಿಕ ಪರಿಷತ್ತಿನ ಘೋಷಣೆ. ಈ ಚಾರಿತ್ರಿಕ ಸಮ್ಮೇಳನದಲ್ಲೇ "ಬಡತನ ಎಲ್ಲಿದ್ದರೂ ಸಾರ್ವತ್ರಿಕ ಸಮೃದ್ಧಿಗೆ ಮಾರಕ" ಎಂಬ ಸತ್ಯಸತ್ವದ ಅರಿವನ್ನು ಜಗತ್ತಿಗೆಲ್ಲ ಸಾರಿದ್ದು. ಈ ಪರಿಷತ್ತಿನಲ್ಲಿ ಅಂಗೀಕೃತವಾದ ಕೆಲವು ನಿರ್ಣಯ ಗಳು 'ಫಿಲಡೆಲ್ಫಿಯ ಘೋಷಣೆಗಳು' ಎಂದು ಪ್ರಸಿದ್ಧವಾಗಿವೆ. ಅವು ಸಂಸ್ಥೆಯ ಧ್ಯೇಯಗಳನ್ನು ಪ್ರತಿಪಾದಿಸುತ್ತವೆ. ಆ ಘೋಷಣೆಗಳು ಇವು:

1 ಕಾರ್ಮಿಕ ಒಂದು ವಸ್ತುವಲ್ಲ.
2 ವಾಕ್ ಸ್ವಾತಂತ್ರ್ಯ ಮತ್ತು ಸಂಘ ಸ್ವಾತಂತ್ರ್ಯವಿಲ್ಲದೆ ಪ್ರಗತಿ ಸಾಧ್ಯವಿಲ್ಲ.
3 ಬಡತನದ ವಿರುದ್ಧ ಹೋರಾಟ ಅವಿರತವಾಗಿ ಸಾಗಬೇಕು ಮತ್ತು ಬಡತನವನ್ನು ಜಯಿಸಲು ಅಂತರರಾಷ್ಟ್ರೀಯ ಸಹಕಾರವಿರಬೇಕು. ಇದು ಸಫಲವಾಗಲು ರಾಷ್ಟ್ರ ಸರ್ಕಾರಗಳು, ಮಾಲೀಕರು, ಕಾರ್ಮಿಕರು ಸಮಾನ ಸ್ಥಾನದಲ್ಲಿದ್ದು ಪ್ರಜಾಸತ್ತಾತ್ಮಕ ವಿಧಾನಗಳಿಂದ ಎಲ್ಲರ ಕಲ್ಯಾಣ ಸಾಧಿಸಲು ಪ್ರಯತ್ನ ಮಾಡಬೇಕು.

ಈ ಪರಿಷತ್ತು ವಿಶ್ವಕಾರ್ಮಿಕ ಸಂಸ್ಥೆಯ ಪ್ರಣಾಳಿಕೆಯಲ್ಲಿ ಅಪಾರ ನಂಬಿಕೆಯನ್ನು ವ್ಯಕ್ತಪಡಿಸುತ್ತ ಸಾಮಾಜಿಕ ನ್ಯಾಯದಿಂದಲೇ ಶಾಂತಿ ಸಾಧ್ಯ ಮತ್ತು ಅದನ್ನು ಸಾಧಿಸಲು ಪ್ರತಿ ಮಾನವನಿಗೂ ಜನಾಂಗ ಜಾತಿ ಮತಗಳ ಭೇದವಿಲ್ಲದೆ ತನ್ನ ಭೌತಿಕ ಹಾಗೂ ಆತ್ಮೋನ್ನತಿಯನ್ನು ಹೊಂದಲು ಪೂರ್ಣವ್ಯಕ್ತಿ ಸ್ವಾತಂತ್ರ್ಯ ಆರ್ಥಿಕ ಸುರಕ್ಷೆ ಮತ್ತು ಸಮಾನ ಅವಕಾಶಗಳ ಹಕ್ಕು ಇರಬೇಕು ಎಂದು ಸಾರಿ, ಈ ಮೂಲಕ ಮಾನವನ ಏಳಿಗೆಯನ್ನು ಸಾಧಿಸಬೇಕೆಂದು ಸದಸ್ಯ ರಾಷ್ಟ್ರಗಳಿಗೆ ಕರೆ ನೀಡಿತು. ಇದರೊಂದಿಗೆ ಸದಸ್ಯ ರಾಷ್ಟ್ರಗಳು:

1 ತಮ್ಮ ಜನತೆಗೆ ಪೂರ್ಣ ಉದ್ಯೋಗ ಮತ್ತು ಜೀವನ ಮಟ್ಟದ ಸುಧಾರಣೆ,
2 ಸಮಾಜಕ್ಕೆ ತಮ್ಮಿಂದಾಗಬಹುದಾದ ಸೇವೆಯನ್ನು ಅತ್ಯುತ್ತಮವಾಗಿ ಸಲ್ಲಿಸಲು ಪ್ರತಿವ್ಯಕ್ತಿಗೂ ಅವನ ಅಭಿರುಚಿ, ನೈಪುಣ್ಯಗಳಿಗೆ ತಕ್ಕಂತೆ ಉದ್ಯೋಗ ಮತ್ತು ತನ್ಮೂಲಕ ಉದ್ಯೋಗತೃಪ್ತಿಯನ್ನೊದಗಿಸಿ ಕೊಡುವುದು,
3 ಪ್ರಗತಿಯ ಪೂರ್ಣ ಪ್ರಯೋಜನವನ್ನು ಕಾರ್ಮಿಕರಿಗೆ, ಹಾಗೂ ಜನತೆಗೆ ಒದಗಿಸಿ ಕೊಡುವ ಜವಾಬ್ದಾರಿ,
4 ಉದ್ಯಮದಲ್ಲಿ ಕಾರ್ಮಿಕರ ಸಂಘಟನೆ ಸಾಮೂಹಿಕ ಚೌಕಾಸಿಯ ಮನ್ನಣೆ, ಉದ್ಯೋಗ ದಕ್ಷತೆಯನ್ನು ಉತ್ತಮಗೊಳಿಸುವುದರಲ್ಲಿ ಮತ್ತು ಸಾಮಾಜಿಕ ಹಾಗೂ ಆರ್ಥಿಕ ವ್ಯವಸ್ಥೆಯನ್ನು ರೂಪುಗೊಳಿಸುವುದರಲ್ಲಿ ಕಾರ್ಮಿಕ–ಮಾಲೀಕರ ಪೂರ್ಣ ಸಹಕಾರ,
5 ಸಾಮಾಜಿಕ ರಕ್ಷಣೆಯ ವ್ಯವಸ್ಥೆಯ ಮೂಲಕ ಆವಶ್ಯಕತೆ ಇರುವವರಿಗೆಲ್ಲ ಕನಿಷ್ಟ ವೇತನ ಹಾಗೂ ವೈದ್ಯಕೀಯ ಸೌಲಭ್ಯದ ವ್ಯವಸ್ಥೆ,
6 ಎಲ್ಲ ಉದ್ಯೋಗಿಗಳಿಗೂ ಆರೋಗ್ಯ ಹಾಗೂ ಜೀವರಕ್ಷಣೆಗೆ ತಕ್ಕ ವ್ಯವಸ್ಥೆ,
7 ಶಿಶು ಮಂಗಲ ಮತ್ತು ಮಾತೃ ಸಂರಕ್ಷಣೆಯ ವ್ಯವಸ್ಥೆ,
8 ಎಲ್ಲ ಉದ್ಯೋಗಿಗಳಿಗೂ ಸತ್ವಯುತ ಆಹಾರ, ಮನೆ ಮತ್ತು ಮನೋರಂಜನೆಯ ಸಾಂಸ್ಕೃತಿಕ ಚಟುವಟಿಕೆಗಳಿಗೆ ಅವಕಾಶ
9 ಸರ್ವರಿಗೂ ವಿದ್ಯಾಭ್ಯಾಸ ಮತ್ತು ಉದ್ಯೋಗಕ್ಕೆ ಸಮಾನ ಅವಕಾಶಗಳನ್ನು ಒದಗಿಸಿಕೊಡಲು ಕಾರ್ಯತತ್ಪರರಾಗಬೇಕಾದ ಅಗತ್ಯ ಇವನ್ನು ಗಮನಿಸಬೇಕು.

ಇವು ಕೇವಲ ಭಾವನಾ ಪೂರ್ಣ ಸಂವೇದನೆ ಅಥವಾ ಈಡೇರಲಾಗದ ಆಸೆಯಾಗಿ ಉಳಿಯದೆ ಅನೇಕ ರಾಷ್ಟ್ರಗಳ ಸಾಮಾಜಿಕ ಮತ್ತು ಕೈಗಾರಿಕಾ ಕಾನೂನಿನ ಬೆಳವಣಿಗೆಗೆ ಭದ್ರ ಬುನಾದಿಯಾಗಿವೆ

ಎಂಬುದು ಈ ಸಂಸ್ಥೆಯ ಸಾರ್ಥಕ ಸೇವೆಗೆ ಸಾಕ್ಷಿಯಾಗಿದೆ. ಇಂದು ಭಾರತದಲ್ಲಿನ ಕೈಗಾರಿಕಾ ಶಾಸನಗಳಿಗೆ ಪ್ರೇರಕಶಕ್ತಿ ಇದುವರೆಗೂ ಉಲ್ಲೇಖಿಸಿರುವ ಹಲವಾರು ನಿಯಮಗಳೇ ಎಂಬುದು ನಿರ್ವಿವಾದ.

ಸಂಸ್ಥೆಯ ಆಡಳಿತ ವ್ಯವಸ್ಥೆ

ಅಂತರರಾಷ್ಟ್ರೀಯ ಕಾರ್ಮಿಕ ಸಂಸ್ಥೆ ಕೆಳಕಂಡ ಅಂಗಸಂಸ್ಥೆಗಳ ಮೂಲಕ ತನ್ನ ಕಾರ್ಯ ನಿರ್ವಹಿಸುತ್ತದೆ:

1 ವಿಶ್ವಕಾರ್ಮಿಕ ಪರಿಷತ್ತು,
2 ಆಡಳಿತ ಮಂಡಳಿ,
3 ಅಂತರರಾಷ್ಟ್ರೀಯ ಕಾರ್ಮಿಕ ಕಚೇರಿ.

ವರ್ಷಕ್ಕೊಮ್ಮೆ ಯಾವರೂ ಸೇರುವ ಕಾರ್ಮಿಕ ಪರಿಷತ್ತು ಅಂತರರಾಷ್ಟ್ರೀಯ ಸಾಮಾಜಿಕ ನಿಯಮಗಳನ್ನು ಅನೇಕ ಸೂತ್ರ ಶಿಫಾರಸುಗಳ ಮೂಲಕ ನಿಷ್ಪಾದಿಸುತ್ತದೆ. ಈ ಪರಿಷತ್ತು ತ್ರಿಪಕ್ಷೀಯವಾದ್ದು. ಇದರಲ್ಲಿ ಸರ್ಕಾರ, ಕಾರ್ಮಿಕ ಹಾಗೂ ಮಾಲೀಕರ ಪ್ರತಿನಿಧಿಗಳಿರುತ್ತಾರೆ.

ಆಡಳಿತ ಮಂಡಳಿಯೂ ತ್ರಿಪಕ್ಷೀಯವಾದ್ದು. ಇದು 40 ಸದಸ್ಯರನ್ನೊಳಗೊಂಡಿರುತ್ತದೆ. ಇದರಲ್ಲಿ 20 ಸ್ಥಾನಗಳು ವಿವಿಧ ರಾಷ್ಟ್ರಗಳ ಸರ್ಕಾರಗಳಿಗೆ ಮೀಸಲಾಗಿದ್ದು ಮಿಕ್ಕ 20ರಲ್ಲಿ ಕಾರ್ಮಿಕ ಮಾಲೀಕರಿಗೆ ಸಮಾನ ಪ್ರಾತಿನಿಧ್ಯವಿರುತ್ತದೆ.

20 ಸರ್ಕಾರಿ ಸ್ಥಾನಗಳಲ್ಲಿ 10 ಸ್ಥಾನಗಳು ಕೈಗಾರಿಕೆಯಲ್ಲಿ ಮುಂದುವರೆದಿರುವ ರಾಷ್ಟ್ರಗಳಿಗೆ ಮೀಸಲಾಗಿರುತ್ತದೆ. ಇವು ಸಂಸ್ಥೆಯ ಖಾಯಂ ಸದಸ್ಯ ರಾಷ್ಟ್ರಗಳು. ಇವುಗಳ ಪೈಕಿ ಭಾರತವೂ ಒಂದು. ಮಿಕ್ಕ ಹತ್ತು ಸ್ಥಾನಗಳಿಗೆ ವಿಶ್ವಸಂಸ್ಥೆಯ ಸದಸ್ಯರಾಷ್ಟ್ರಗಳಿಂದ ಚುನಾವಣೆ ಆಗುತ್ತದೆ.

ಅಂತರರಾಷ್ಟ್ರೀಯ ಕಾರ್ಮಿಕ ಕಚೇರಿ ಅದರ ಹೆಸರೇ ಸೂಚಿಸುವಂತೆ ಸಂಸ್ಥೆಯ ಕಾರ್ಯ ನಿರ್ವಾಹಕ ಕಚೇರಿಯಾಗಿರುತ್ತದೆ.

ಸಂಸ್ಥೆ ನಿರ್ವಹಿಸುವ ಕಾರ್ಯ, ಕಾರ್ಮಿಕ ಸಮಸ್ಯೆಯ ಬಗ್ಗೆ ವಿವರ ಸಂಗ್ರಹಣೆಯಿಂದ ಹಿಡಿದು ಜಗತ್ತಿನ ಎಲ್ಲ ಕಾರ್ಮಿಕರ ಪರವಾಗಿ ವಿವಿಧ ರಾಷ್ಟ್ರಗಳ ಸರ್ಕಾರಗಳೊಂದಿಗೆ ಸಹಕರಿಸಿ ಆ ರಾಷ್ಟ್ರಗಳು ಪಡೆಯಬಯಸುವ ತಜ್ಞ ಮತ್ತು ಸಲಹಾಸೇವೆಯನ್ನು ಒದಗಿಸುವುದನ್ನೊಳಗೊಂಡು ಹತ್ತಾರು ಬಗೆಯದು. ಎಲ್ಲಕ್ಕಿಂತ ಹೆಚ್ಚಾಗಿ ಎಲ್ಲ ಶ್ರಮಜೀವಿಗಳ ಬಗ್ಗೆ ಸರ್ಕಾರ ಜನತೆಗಳಲ್ಲಿ ಸಹಾನುಭೂತಿ ಮತ್ತು ಸಹಾಯಕ ಮನೋಭಾವ ರೂಪಿಸಲು ಪ್ರಯತ್ನಿಸುತ್ತದೆ. ಮತ್ತು ಆ ಮೂಲಕ ಅವರ ಸ್ಥಿತಿಗತಿಗಳನ್ನು ಸುಧಾರಿಸುತ್ತದೆ.

ಈ ಸಂಸ್ಥೆ ಕ್ರೋಡೀಕರಿಸಿರುವ ಅಂತರರಾಷ್ಟ್ರೀಯ ಕಾರ್ಮಿಕ ನಿಬಂಧನೆಗಳು, ಸೂತ್ರ ಶಿಫಾರಸುಗಳು ಎಲ್ಲೆಡೆಯ ಶ್ರಮಜೀವಿಗಳ ಕಲ್ಯಾಣವನ್ನು ಸಾಧಿಸಿದೆ.

ಕಾರ್ಮಿಕ ಸೂತ್ರಗಳು

ಈ ಸಂಸ್ಥೆ ರೂಪಿಸಿರುವ ನಿಯಮಗಳಲ್ಲಿ ಸದಸ್ಯರಾಷ್ಟ್ರಗಳಲ್ಲಿ ಅವನ್ನು ಜಾರಿಗೆ ತರುವ ನೈತಿಕ ಜವಾಬ್ದಾರಿಯನ್ನು ಹೊರಿಸುವ ಸಂಪ್ರದಾಯ ಸೂತ್ರಗಳು ಬಹುಮುಖ್ಯ. ಶಿಫಾರಸುಗಳು ಸದಸ್ಯ ರಾಷ್ಟ್ರಗಳು ತಾವು ಜಾರಿಗೆ ತರಬೇಕಾಗಿರುವ ಕಾರ್ಮಿಕ ಶಾಸನಗಳ ನಿರೂಪಣೆಗೆ ಅಗತ್ಯವಾದ ಕನಿಷ್ಠ ಪರಿಮಾಣಗಳನ್ನು ಒದಗಿಸಿಕೊಡಬಲ್ಲವೆ. ಈ ಸೂತ್ರ ಶಿಫಾರಸುಗಳನ್ನು ಒಪ್ಪಿಕೊಳ್ಳುವ ರಾಷ್ಟ್ರಗಳ ಕಾನೂನಿನಲ್ಲಿ ಇವುಗಳಿಗಿಂತ ಪ್ರಯೋಜನಕಾರಿಯಾದ ಅಂಶಗಳು ಇದ್ದರೆ ಇವನ್ನು ಜಾರಿಗೆ ತರಬೇಕಾಗಿಲ್ಲವೆಂಬ ಅಂಶವೂ ಉಂಟು. ಹೀಗೆ ತನ್ನ ಯಾವುದೇ ನಿಯಮಾವಳಿಯಿಂದಲೂ ಕಾರ್ಮಿಕರಿಗೆ ಅನ್ಯಾಯವಾಗಬಾರದೆಂದು ಈ ಸಂಸ್ಥೆ ಎಚ್ಚರಿಕೆ ವಹಿಸಿದೆ.

ಕಳೆದ 50 ವರ್ಷಗಳಲ್ಲಿ ಈ ಸಂಸ್ಥೆ ನೂರಾರು ಸೂತ್ರ ಶಿಫಾರಸುಗಳನ್ನು ರಚಿಸಿದೆ. ಇವು ಅರ್ಥ ರಹಿತ ಆದರ್ಶಗಳಾಗದೆ ಒಂದು ಉತ್ತಮ ಸಮಾಜ ವ್ಯವಸ್ಥೆಗೆ ಅನಿವಾರ್ಯವಾಗಿವೆ. ಅನೇಕ ರಾಷ್ಟ್ರಗಳ ರಾಜಕೀಯ–ಸಾಮಾಜಿಕ ಸ್ವಾಸ್ಥ್ಯಕ್ಕೆ ಇವು ಅಡಿಗಲ್ಲಾಗಿವೆ. ಈ ಸೂತ್ರ–ಶಿಫಾರಸುಗಳಲ್ಲಿ ಕೆಲವನ್ನು ಪರಿಶೀಲಿಸಿದರೆ ಈ ಸಂಸ್ಥೆ ಕಾರ್ಮಿಕ ಕಲ್ಯಾಣಕ್ಕೆ ಸಲ್ಲಿಸುತ್ತಿರುವ ಸೇವೆಯು ಅರಿವಾಗುತ್ತದೆ.

1 ಉದ್ಯೋಗ ಸೇವಾ ಸೂತ್ರ (ಉಚಿತ ಸಾರ್ವಜನಿಕ ಉದ್ಯೋಗಾನ್ವೇಷಣೆ ಸೇವೆ): ಈ ಸೂತ್ರದನ್ವಯ ಸರ್ಕಾರಗಳು ತನ್ನ ಜನತೆಗೆ ಉದ್ಯೋಗವನ್ನೊದಗಿಸಲು ಬೇಕಾದ ಸಾರ್ವಜನಿಕ ಸೇವಾ ವ್ಯವಸ್ಥೆಯನ್ನು ರೂಪಿಸಬೇಕು. ಇದರ ಫಲವೇ ಇಂದು ನಾವು ರಾಷ್ಟ್ರದಾದ್ಯಂತ ಕಾಣುವ ಉದ್ಯೋಗವಿನಿಮಯ ಕೇಂದ್ರಗಳು.

2 ಅಂಗವಿಕಲರಿಗೆ ಉದ್ಯೋಗ: ಈ ಸೂತ್ರದಂತೆ ಪ್ರತಿ ಸದಸ್ಯ ರಾಷ್ಟ್ರವೂ ಅಂಗವಿಕಲರಿಗೆ ಸೂಕ್ತವಾದ ತರಬೇತು ಮತ್ತು ಉದ್ಯೋಗಾವಕಾಶ ಒದಗಿಸಿಕೊಡಬೇಕು.

3 ವೇತನ ವಿವರಣೆ: ಈ ಸೂತ್ರಕ್ಕನುಗುಣವಾಗಿ ಪ್ರತಿರಾಷ್ಟ್ರವೂ ಕೆಲಸಗಾರರಿಗೆ ಅವರ ವೇತನವನ್ನು ಹಣದ ರೂಪದಲ್ಲಿ ದೊರಕಿಸಿಕೊಡಲು ಕಡ್ಡಾಯ ಕಾಯಿದೆ ಮಾಡಬೇಕು ಮತ್ತು ಅವರ ವೇತನವನ್ನು ಹಣದರೂಪದಲ್ಲಿ ದೊರಕಿಸಿಕೊಡಲು ಕಡ್ಡಾಯ ಕಾಯಿ ಮಾಡಬೇಕು ಮತ್ತು ವೇತನ ಕೆಲಸಗಾರರಿಗೆ ನೇರವಾಗಿ ಪಾವತಿಯಾಗಬೇಕು. ಇದರಿಂದ ಮೇಸ್ತ್ರಿ ದಳ್ಳಾಳಿಗಳ ಹಾವಳಿ ಕಮ್ಮಿಯಾಗಿ ದುಡಿಯುವವರಿಗೆ ಅವರ ದುಡಿತದ ಪೂರ್ಣ ಪ್ರತಿಫಲ ದೊರಕುವ ಭರವಸೆಯಿದೆ. ವೇತನ ನಿಯತಕಾಲದಲ್ಲಿ ಪಾವತಿಯಾಗಬೇಕೆಂದೂ ವೇತನದಲ್ಲಿ ಕಾನೂನಿನ ಪರಿಮಿತಿಗೆ ಒಳಪಟ್ಟಿದ್ದಲ್ಲದೇ ಬೇರೆ ಯಾವ ಕಾರಣದಿಂದಲೂ ಕಡಿತ ಮಾಡತಕ್ಕದ್ದಲ್ಲವೆಂದೂ ವಿಧಿಸಲಾಗಿದೆ.

4 ಕನಿಷ್ಠ ವೇತನ: ಸದಸ್ಯ ರಾಷ್ಟ್ರಗಳು ಕನಿಷ್ಠ ವೇತನವನ್ನು ಜಾರಿಗೆ ತರಬೇಕೆಂದು ಸೂತ್ರ ಕರೆ ನೀಡುತ್ತದೆ.

5 ಕೆಲಸದ ವೇಳೆ: ದಿನಕ್ಕೆ 8 ಗಂಟೆಗಳು ಹಾಗೂ ವಾರಕ್ಕೆ ಒಟ್ಟು 48 ಗಂಟೆಗಳು ಮಾತ್ರ ದುಡಿತದ ಅವಧಿ ಎಂದು ಈ ನಿಯಮ ಸಾರುತ್ತದೆ. ಇದು ಇಂದು ನಮ್ಮಲ್ಲಿಯ ಕಾರ್ಖಾನೆ, ಗಣಿಗಳು, ವ್ಯಾಪಾರ ವಾಣಿಜ್ಯ ಸಂಸ್ಥೆಗಳ ಕಾನೂನುಗಳಲ್ಲಿ ಅಡಕವಾಗಿದೆ.

6 ಮಕ್ಕಳು: ಹದಿನೈದು ವಯಸ್ಸಿನ ಒಳಗಿನ ಮಕ್ಕಳನ್ನು ದುಡಿತಕ್ಕೆ ಹಾಕುವುದನ್ನು ಈ ನಿಯಮ ನಿಷೇಧಿಸುತ್ತದೆ. ಹದಿನೈದರಿಂದ ಹದಿನೆಂಟು ವಯಸ್ಸಿನ ಪ್ರಾಯದವರನ್ನು ಕಡ್ಡಾಯ ವೈದ್ಯಕೀಯ ಪರೀಕ್ಷೆಗೊಳಪಡಿಸಬೇಕು ಮತ್ತು ಅವರ ದೈಹಿಕ ಸ್ಥಿತಿ ಉದ್ಯೋಗಕ್ಕೆ ಸೂಕ್ತವಾಗಿದೆಯೆಂದು ವೈದ್ಯಕೀಯ ಅಭಿಪ್ರಾಯವಿದ್ದರೆ ಮಾತ್ರ ಅವರನ್ನು ಕೆಲಸಕ್ಕೆ ಹಚ್ಚಬೇಕು ಎಂದು ಈ ನಿಯಮಗಳು ವಿಧಿಸುತ್ತವೆ.

7 ಸ್ತ್ರೀಯರು: ಸ್ತ್ರೀಯರಿಗೆ ರಾತ್ರಿ ಪಾಳಿಯ ನಿಷೇಧ ಹಾಗೂ ಮಾತೃತ್ವದ ನಿರೀಕ್ಷಣೆಯಲ್ಲಿರುವವರಿಗೆ ರಜಾ ಸೌಲಭ್ಯ ಮತ್ತು ಪರಿಹಾರ ವೇತನ, ವೈದ್ಯಕೀಯ ಸಹಾಯ ಒದಗಿಸಿಕೊಡಬೇಕೆಂದು ವಿಧಿಯಿದೆ.

ಭಾರತ ಮತ್ತು ಅಂತರರಾಷ್ಟ್ರೀಯ ಕಾರ್ಮಿಕ ಸಂಸ್ಥೆ

ಅಂತರರಾಷ್ಟ್ರೀಯ ಕಾರ್ಮಿಕ ಸಂಸ್ಥೆಯೊಡನೆ ಭಾರತದ ಸಂಬಂಧ ಅದರ ಹುಟ್ಟಿನಿಂದಲೂ ಅಂದರೆ 1919ರಿಂದಲೂ ಉಂಟು. 1919ರ ವಿಶ್ವಕಾರ್ಮಿಕ ಪರಿಷತ್ತಿಗೆ ಭಾರತ ಒಂದು ತ್ರಿಪಕ್ಷ ಪ್ರತಿನಿಧಿ ಮಂಡಳಿಯನ್ನು ಕಳಿಸಿತ್ತು. ಅಂದಿನಿಂದಲೂ ಭಾರತ ಈ ಸಂಸ್ಥೆಯ ಖಾಯಂ ಸದಸ್ಯ ರಾಷ್ಟ್ರವಾಗಿದೆ. ಅಖಿಲ ಭಾರತೀಯ ಕಾರ್ಮಿಕ ಕಾಂಗ್ರೆಸ್ಸಿನ ಜನನವೂ ಈ ತ್ರಿಪಕ್ಷ ಪ್ರತಿನಿಧಿಗಳನ್ನು ಕಳುಹಿಸುವ ವಿಷಯದಲ್ಲೆದ್ದ ವಿವಾದದಿಂದಲೇ ಆಯಿತು ಮತ್ತು ಅದು ಭಾರತದಲ್ಲಿ ಕಾರ್ಮಿಕ ಆಂದೋಳನಕ್ಕೆ ನಾಂದಿಯಾಯಿತು.

ಇದುವರೆಗೂ ಭಾರತ ಅಂತರರಾಷ್ಟ್ರೀಯ ಕಾರ್ಮಿಕ ಸಂಸ್ಥೆಯ ಸುಮಾರು ಸಂಪ್ರದಾಯ ಸೂತ್ರಗಳನ್ನು ಸ್ಥಿರೀಕರಿಸಿ ಅವನ್ನು ತನ್ನ ವಿವಿಧ ಕಾರ್ಮಿಕ–ಕೈಗಾರಿಕಾ ಕಾಯಿದೆಗಳಲ್ಲಿ ಅಳವಡಿಸಿದೆ. ಅವುಗಳ ಪೈಕಿ ಕೆಲವನ್ನು ಇಲ್ಲಿ ಉದಾಹರಿಸಬಹುದು: 1 ಕೆಲಸದ ವೇಳೆ (ಕೈಗಾರಿಕೆ) ನಿಯಮ 1919. 2 ರಾತ್ರಿಯ ಪಾಳಿ (ಮಹಿಳೆಯರು) ನಿಯಮ 1919. 3 ಕನಿಷ್ಠ ವೇತನ (ಕೈಗಾರಿಕೆ) ನಿಯಮ 1919. 4 ಕಾರ್ಮಿಕರ ಪರಿಹಾರ (ಉದ್ಯೋಗ ಸಂಬಂಧ) ನಿಯಮ 1925. 5 ಗಣಿ ಸುರಂಗದಲ್ಲಿ ಕೆಲಸ (ಸ್ತ್ರೀಯರಿಗೆ ನಿಷೇಧ) ನಿಯಮ 1835. 6 ಉದ್ಯೋಗ ಸೇವಾನಿಯಮ 1948. 7 ಸಮಾನವೇತನ ನಿಯಮ 1951. 8 ಕಾರ್ಮಿಕ ತನಿಖಾ ನಿಯಮಗಳು 1947.

ಇವುಗಳಲ್ಲದೆ ಅನೇಕ ಸೂತ್ರಗಳನ್ನು ಭಾರತ ವಿಧಿಯುಕ್ತವಾಗಿ ಸ್ಥಿರೀಕರಿಸದಿದ್ದರೂ ಆ ಸೂತ್ರಗಳನ್ನೊಳಗೊಂಡ ಅನೇಕ ಕಾನೂನುಗಳನ್ನು ಮಾಡಿದೆ. ಉದಾಹರಣೆಗೆ ಸಾಮಾಜಿಕ ರಕ್ಷಣೆಯ ಸೂತ್ರಗಳಿಂದ ಪ್ರೇರಿತವಾದ, ಕೆಲಸಗಾರರ ರಾಜ್ಯ ವಿಮಾಯೋಜನೆ. ಹಾಗೆಯೇ ಭವಿಷ್ಯನಿಧಿ ನಿವೃತ್ತಿ ವೇತನ. ಅಪಘಾತ ಪರಿಹಾರ ಮುಂತಾದ ವಿಷಯಕವಾದ ಅನೇಕ ಕಾನೂನುಗಳು ಇವೆ. ಕೆಲಸಗಾರರ ರಾಜ್ಯ ವಿಮಾಯೋಜನೆಯೂ ಅಂತರರಾಷ್ಟ್ರೀಯ ಕಾರ್ಮಿಕ ಸಂಸ್ಥೆಯ ತಜ್ಞರಿಂದಲೇ ರೂಪಿಸಲ್ಪಟ್ಟದ್ದು. ವಾರದ ರಜಾ ದಿನದ ಬಗ್ಗೆ ಇರುವ ಸೂತ್ರ ಕಾರ್ಖಾನೆ. ಗಣಿ ಕಾಯಿದೆಗಳಲ್ಲಿ ಅಳವಡಿಸಲ್ಪಟ್ಟಿದೆ. ಮಾತೃತ್ವ ಸಂರಕ್ಷಣಾ ಸೂತ್ರ ಮಾತೃತ್ವ ಸಹಾಯಕವಿಧಿಯಾಗಿ ಕಾನೂನಾಗಿದೆ.

ಕೈಗಾರಿಕಾ ಬಾಂಧವ್ಯಕ್ಕೆ ಸಂಬಂಧಪಟ್ಟ ಸಂಘ ಸ್ವಾತಂತ್ರ್ಯ. ಸಾಮೂಹಿಕ ಚೌಕಾಸಿ ಕೈಗಾರಿಕಾ ವಿವಾದಗಳ ಪಂಚಾಯಿತಿ ಮುಂತಾದವು ಕೈಗಾರಿಕಾ ವಿವಾದ ಕಾಯಿದೆ ಮತ್ತು ಕಾರ್ಮಿಕ ಸಂಘಗಳ ಕಾಯಿದೆಯಲ್ಲಿ ವ್ಯಕ್ತವಾಗಿದೆ.

ಇದುವರೆಗೆ ವಿವೇಚಿಸಿದ್ದನ್ನು ಓದಿದರೆ ಈ ಸಂಸ್ಥೆ ಕೇವಲ ಕೈಗಾರಿಕಾ ಕಾರ್ಮಿಕರನ್ನು ಮಾತ್ರ ಗಣನೆಗೆ ತೆಗೆದುಕೊಂಡು ಹೊಲ–ಗದ್ದೆಗಳಲ್ಲಿ ದುಡಿಯುವ ರೈತರನ್ನು ಮರೆತಿದೆ ಎಂಬ ಅಭಿಪ್ರಾಯ ಬರುವುದು ಸಹಜ. ಆದರೆ ಸಂಸ್ಥೆ ತನ್ನ ಮೊದಲ ದಿನಗಳಲ್ಲಿ ಚಾರಿತ್ರಿಕ ಕಾರಣಗಳಿಂದಾಗಿ ಕೈಗಾರಿಕಾ ಕಾರ್ಮಿಕರ ಬಗ್ಗೆ ಹೆಚ್ಚು ಕಳಕಳಿ ತೋರಿದ್ದರೂ 1947ರಲ್ಲಿ ನಡೆದ ಏಷ್ಯಾ ಸಮ್ಮೇಳನದಲ್ಲಿ ರೈತರ ಹಿತದ ಬಗ್ಗೆ ತನಗಿರುವ ಕಾತರವನ್ನು ಈ ಕೆಳಕಂಡ ವಾಕ್ಯಗಳಲ್ಲಿ ವ್ಯಕ್ತಪಡಿಸಿತು. "ಪ್ರಪಂಚದಲ್ಲಿ ಅರ್ಧಕ್ಕೂ ಹೆಚ್ಚು ಸಂಖ್ಯೆಯಿರುವ ಗ್ರಾಮೀಣ ಉತ್ಪಾದಕರ ಸಾಮಾಜಿಕ. ಆರ್ಥಿಕ ಸಮಸ್ಯೆಗಳನ್ನು ಬಗೆಹರಿಸದಿದ್ದರೆ ವಿಶ್ವ ಶಾಂತಿ ಕನಸೇ ಆದೀತು." ಈ ದೃಷ್ಟಿಯನ್ನಿಟ್ಟುಕೊಂಡು ಸಂಸ್ಥೆ ಈ ದಿಕ್ಕಿನಲ್ಲಿ ಕಾರ್ಯೋನ್ಮುಖವಾಗಿದೆ.

ಈ ನಡುವೆ ಕಾರ್ಮಿಕರ ಮನಸ್ಸನ್ನು ಕಲಕಿರುವ ಮತ್ತೊಂದು ಅಂಶವೆಂದರೆ ಯಾಂತ್ರೀಕರಣ. ದಿನೇ ದಿನೇ ತಂತ್ರಜ್ಞತೆಯಲ್ಲಿ ಮುನ್ನುಗ್ಗುತ್ತಿರುವ ಮಾನವ ಜನಾಂಗ ಅತಿ ಯಾಂತ್ರೀಕರಣದಿಂದ ನಿರುದ್ಯೋಗ ಸಂಖ್ಯೆಯನ್ನು ಹೆಚ್ಚಿಸುತ್ತಿದೆ ಎಂಬ ಭಯ ವಿಶ್ವದ ಪ್ರತಿ ಕಾರ್ಮಿಕ ಸಂಘಕ್ಕೂ ಉಂಟು. ಅಂಕೆಯಿಲ್ಲದೆ ಬೆಳೆಯುತ್ತಿರುವ ಜನಸಂಖ್ಯೆಗೆ ಹೆಚ್ಚು ಉತ್ಪಾದಕತೆಯ ಅವಶ್ಯಕತೆ ಇದ್ದರೂ ಈ ಯಾಂತ್ರೀಕರಣದ ಹುಚ್ಚು ವೇಗದಲ್ಲಿ ಮಾನವ ತನ್ನ ಅಳಿವನ್ನೇ ತಂದುಕೊಳ್ಳಬಹುದಾದ ಪರಿಸ್ಥಿತಿಯೂ ಇದೆ. ಈ ಬಗ್ಗೆ ಅಂತರರಾಷ್ಟ್ರೀಯ ಕಾರ್ಮಿಕ ಸಂಸ್ಥೆಯ ಅಭಿಪ್ರಾಯವೇನೆಂಬ ಕುತೂಹಲ ಉಂಟಾಗುವುದು ಸಹಜ. ಹೆಚ್ಚಿನ ಉತ್ಪಾದಕತೆಗೆ ಯಾಂತ್ರಿಕರಣ ಅವಶ್ಯಕ ಎಂದು ಒಪ್ಪಿಕೊಂಡರೂ ಹೆಚ್ಚಿನ ನಿರುದ್ಯೋಗ ಇರುವಲ್ಲಿ ಇದು ಸಲ್ಲದು ಮತ್ತು ಅಂತಹ ರಾಷ್ಟ್ರಗಳಲ್ಲಿ ಯಾಂತ್ರೀಕರಣ ಎಷ್ಟೇ ಅವಶ್ಯಕವಿದ್ದರೂ ಅದು ಜನತೆಯ ಕಣ್ಣೀರಿನ ಕಾರಣವಾಗಬಾರದೆಂದು ಈ ಸಂಸ್ಥೆ ಅಭಿಪ್ರಾಯಪಟ್ಟಿದೆ.

ಬಹುಜನದ ಹಿತದ ಮತ್ತು ಬಹುಜನಸುಖದ ಸಾಧನೆಗೆ ಯತ್ನಿಸುತ್ತಿರುವ ಈ ಸಂಸ್ಥೆ ಮಾನವತೆಯ ಕೃತಜ್ಞತೆಗೆ ಪಾತ್ರವಾಗಿದೆ. ರಾಷ್ಟ್ರಗಳನ್ನು ಸಂಪದ್ಭರಿತವಾಗಿ ಮಾಡುತ್ತಿರುವ ದುಡಿಯುವ ಜನರ ಜೀವನವನ್ನು ಸುಖಕರವನ್ನಾಗಿ ಮಾಡುತ್ತಿರುವ ಕಾರ್ಮಿಕ ಶಕ್ತಿಗೆ ಸಾರ್ವಜನಿಕ ಹಾಗೂ ಸರ್ಕಾರದ ರಕ್ಷೆಯನ್ನು ಒದಗಿಸಿ ಕೊಡುವ ದಿಕ್ಕಿನಲ್ಲಿ ಈ ಸಂಸ್ಥೆಯ ಪ್ರಯತ್ನ ಸ್ತುತ್ಯ. ಅಂತೆಯೇ ಈ ಸಂಸ್ಥೆ ತನ್ನ ಸ್ಥಾಪಕರ ಆಶೋತ್ತರಗಳನ್ನು ಈಡೇರಿಸುವುದರಲ್ಲಿ ಬಹುಮಟ್ಟಿಗೆ ಸಫಲಗೊಂಡಿದೆ ಎಂಬುದು ನಿರ್ವಿವಾದ.

ಡಾ. ಬಿ. ಜಿ. ಎಲ್. ಸ್ವಾಮಿ

ಕೊಂಗು ದೇಶದ ರಾಜರು

ಪಶ್ಚಿಮ ಗಂಗವಂಶದ ಚರಿತ್ರೆ ಇನ್ನೂ ಅರೆಗತ್ತಲೆಯಲ್ಲೇ ಮುದುಗಿದೆಯೆಂಬುದನ್ನು ಒತ್ತಿ ಹೇಳಬೇಕಾಗಿಲ್ಲ. ಈಚೀಚೆಗೆ ನಡೆದಿರುವ ಅಧ್ಯಯನ ಪ್ರಯತ್ನಗಳು ಸ್ವಲ್ಪ ಬೆಳಕು ಚೆಲ್ಲಿವೆಯಾದರೂ[1] ಹೊಸ ಹೊಸ ಸಮಸ್ಯೆಗಳೂ ಸಂದೇಹಗಳೂ ತೀವ್ರವಾದ ಅಭಿಪ್ರಾಯಭೇದಗಳೂ ಅನಿವಾರ್ಯವಾಗಿ ತಲೆಯೆತ್ತಿವೆ. ಇತ್ತೀಚೆಗೆ ಉತ್ತರ ಆರ್ಕಾಟು ಜಿಲ್ಲೆಯಲ್ಲಿ ದೊರೆತಿರುವ ಕೆಲವು ವೀರಗಲ್ಲು ಲಿಪಿಗಳ ಆಧಾರದ ಮೇಲೆ ನಾಗಸಾಮಿಯವರು[2] ಬಹು ಸಾಹಸದ ಮಾತುಗಳನ್ನಾಡಿದ್ದಾರೆ: "ಈಗ ದೊರೆತಿರುವ ಕೆಲವು ಶಿಲಾಶಾಸನಗಳಲ್ಲಿ ಕೊಂಗಣಿ ಅರಸರೂ ಗಂಗ ಅರಸರೂ ಉಕ್ತರಾಗಿದ್ದಾರೆ. ಒಂದೇ ಶಿಲಾಶಾಸನದಲ್ಲಿ ಇಬ್ಬರೂ ಉಕ್ತರಾಗಿರುವುದರಿಂದ ಇವರಿಬ್ಬರೂ ಒಂದೇ ವಂಶಕ್ಕೆ ಸೇರಿದವರಲ್ಲ ಎಂದು ಬಗೆಯಬಹುದು. ಚರಿತ್ರಕಾರರು ಕೊಂಗುಣಿ ಅರಸರನ್ನೂ ಗಂಗ ಅರಸರನ್ನೂ ಒಂದೇ ಬಳಗದವರೆಂದು ಬಗೆಯುವುದು ಬಳಕೆ. ದುರ್ವಿನೀತ. ದೂವಿನೀತ, ಮಾಧವವರ್ಮನ್, ಶ್ರೀ ಪುರುಷನ್, ಶ್ರೀಮಾರನ್ ಮೊದಲಾದವರು ಕೊಂಗುಣಿಯಾದಿರಾಜರು ಎಂದು ಕರೆಯಲ್ಪಡುತ್ತಾರೆ. ಗಂಗರು ತಮಿಳುನಾಡಿನ ಒಂದು ಭಾಗವನ್ನು ಆಳಿದ ಸಾಮಂತರೆಂದೂ ತಮಿಳು ಅರಸರು ಎಂದೂ ಇದರಿಂದ ತಿಳಿದು ಬರುತ್ತದೆ"–ಹೀಗೆ ಒಂದು ಹೊಸ ವಾದವನ್ನು ಹೂಡಿದ್ದಾರೆ. ಈ ಪರಿಸ್ಥಿತಿಯಲ್ಲಿ ಗಂಗವಂಶದ ಚರಿತ್ರೆಗೆ ಸಂಬಂಧಿಸಿದ ಪ್ರತ್ಯಕ್ಷ–ಪರೋಕ್ಷ ಆಧಾರಗಳೆಲ್ಲವನ್ನೂ ಒಟ್ಟಾಗಿ ಕೂಡಿಸಿ ತುಲನೆ ಮಾಡಬೇಕಾಗಿದೆ; ಹೊಸ ಆಕರಗಳನ್ನು ಹುಡುಕಬೇಕಾಗಿದೆ; ಹಳೆಯ ದಾಖಲೆಗಳನ್ನು ಪುನಃ ಪರೀಕ್ಷೆಗೊಳಪಡಿಸಬೇಕಾಗಿದೆ; ಗಂಗರ ಸುತ್ತು ಮುತ್ತಲಿನ ರಾಜ್ಯಗಳ ರಾಜಮನೆತನಗಳ ಚರಿತ್ರೆಯೊಡನೆ ತುಲನೆ ಮಾಡಬೇಕಾಗಿದೆ.

1

ಅನಾಮಕನೊಬ್ಬನಿಂದ ರಚಿತವಾದ 'ಕೊಂಗುದೇಶ ರಾಜಾಕ್ಕಳ್' ಎಂಬ ಸಣ್ಣ ಪುಸ್ತಕದಲ್ಲಿ ಗಂಗ ಪೀಳಿಗೆಗೆ ಸಂಬಂಧಿಸಿದ ಭಾಗವೊಂದು ಅಡಕವಾಗಿದೆ. ಈ ಪುಸ್ತಕವನ್ನು ಸಂಪಾದಿಸಿರುವ ರಾಮನಾಥಂ ಚೆಟ್ಟಿಯಾರ್[3] ಅವರ ಮುನ್ನುಡಿಯಿಂದ ಕೆಲವು ಭಾಗಗಳನ್ನು ಇಲ್ಲಿ ಪೀಠಿಕೆಯಾಗಿ ಆಯ್ದುಕೊಡಬಹುದು:

---

1 ಲಕ್ಷ್ಮೀನಾರಾಯಣರಾವ್ ಮತ್ತು ಪಂಚಮುಖಿ: ಕರ್ನಾಟಕ ಅರಸುಮನೆತನಗಳು: ಬಾಗಿ. ಎ. ಆರ್. The origin of the western Gangas—*Journal of Indian History*, vol. 30, p. 181 ; ಶ್ರೀಕಂಠಶಾಸ್ತ್ರಿ : *The early Gangas of Talkad* ; ಮಹಾಲಿಂಗಂ —*Journal of Indian History*, vol. 30, p. 318

2 ನಾಗಸಾಮಿ, ಆರ್.: ಚೆಂಗಂ ನಡುಕಲ್ಲುಗಳು (ತಮಿಳು), State Archaeological Dept., Tamil Nadu, 1972.

3 ಕೊಂಗುದೇಶರಾಜಾಕ್ಕಳ್ (ಸಂಪಾದಿತ) Madras Govt. Oriental Manuscript Library, Madras, 1950

"ಈ ಗ್ರಂಥ ಯಾವಾಗ ಯಾರಿಂದ ರಚಿತವಾಯಿತು ಎಂದು ಹೇಳಲಾಗದು. ಇದರ ಶೈಲಿ ಸಾಧಾರಣವಾದ್ದು. ಜನಸಾಮಾನ್ಯರು ಸುಲಭವಾಗಿ ಅರಿಯಬಹುದಾದ ಆಡುವ ತಮಿಳು ಮಾತಿನಲ್ಲಿ ರಚಿತವಾಗಿದೆ. ಆದ್ದರಿಂದ ಇದನ್ನು ಬರೆದಾತ ಪ್ರಖ್ಯಾತನಾದ ಕವಿ ಅಲ್ಲ. ಬಹುಶಃ ರಾಜ್ಯಾಡಳಿತದ ನೌಕರಿಯಲ್ಲಿದ್ದ ರಾಯಸಿಗನಾಗಿರಬಹುದು. ತಮಿಳು ಶೈಲಿಯನ್ನು ನೋಡಿದರೆ 200 ವರ್ಷಗಳ ಹಿಂದೆ ಪ್ರಚಾರದಲ್ಲಿದ್ದ ನುಡಿಯಂತೆ ಕಾಣುತ್ತದೆ. ಉತ್ತರ(ಪ್ರದೇಶ)ದಿಂದ ಬಂದವನೊಬ್ಬಾತ (ಇಲ್ಲಿಯ) ಚರಿತ್ರೆಯನ್ನು ತಿಳಿಯಬಯಸಿ ರಾಯಸಿಗನೊಬ್ಬನನ್ನು ಹುಡುಕಿ ಅವನಿಂದ ಬರೆಯಿಸಿದಂತೆ ಕಾಣುತ್ತದೆ.

"ಶೈಲಿ ಹೀಗಿರುವುದಾದರೂ ಇದರಲ್ಲಿ ಕಾಣಬರುವ ಸುದ್ದಿಗಳು ಬಹು ಮುಖ್ಯವಾಗಿವೆ. ಅನೇಕ ದೇವಾಲಯಗಳಲ್ಲಿರುವ ಶಾಸನಾಧಾರಗಳ ಹಿನ್ನೆಲೆಯಲ್ಲಿ ಸಮಾಚಾರಗಳನ್ನು ಸಂಗ್ರಹಿಸಿ ವರಸೆಯಾಗಿ ಪೋಣಿಸಿ ರಚಿತವಾಗಿರುವ ಗುಣವನ್ನು (ಇಲ್ಲಿ) ಕಾಣಬಹುದಾಗಿದೆ. ಆದ್ದರಿಂದ ಈ ಕೃತಿಯ ಮೂಲ ಕರ್ತನಾದವನು ಬಹು ಮುತುವರ್ಜಿಯಿಂದ ವಿಷಯಶೇಖರಣೆ ಮಾಡಿ ರಚಿಸಿರಬೇಕು.

"ವಂಶ ಮೂಲಗಳನ್ನು ಕುರಿತು ಹೇಳುವಾಗ ಪುರಾಣ ಸುದ್ದಿಗಳು ಕಲೆತಿರುವುದಾದರೂ ವೃತ್ತಾಂತಗಳನ್ನು ತಿಳಿಸುವಾಗ ನಿಜಾಂಶಗಳು ಉಕ್ತವಾಗಿವೆ. ಇದರಿಂದ (ಈ ಗ್ರಂಥವನ್ನು) ಚರಿತ್ರಕಾರರು ಒಂದು ಆಧಾರವೆಂದು ಮೇಲ್ಪಂಕ್ತಿಯಾಗಿಟ್ಟುಕೊಂಡಿದ್ದಾರೆ."

* * * *

"ಪೂರ್ವಕಾಲದಲ್ಲಿ, ಎಂದರೆ ಸಂಘಕಾಲದಲ್ಲಿ4. ಕೊಂಗನಾಡನ್ನು ಕೊಂಗರು ಎಂಬ ರಾಜರು ಆಳಿಕೊಂಡಿದ್ದರು. ಆ ಕಾಲದಲ್ಲಿಯೇ ಕೆಲವು ಸಾಮಂತರಾಜರೂ ಅಲ್ಲಲ್ಲಿ ಮಲೆಕೋಟೆಗಳನ್ನು ಅರಮನೆಗಳನ್ನಾಗಿಸಿಕೊಂಡು ಆಳಿದರು. ಅವರು ವೇಳಿರ್ ಎಂದು ಪರಿಚಿತರಾಗಿದ್ದಾರೆ. ಕಾಡಾಗಿದ್ದು ವಾಸಯೋಗ್ಯವಲ್ಲದ ಪ್ರದೇಶಗಳಲ್ಲಿ ಇರುಳರು ವಸತಿಯಿದ್ದರು. ಅವರು ಪಡಿ ಎಂಬ ಕಿರುಪೂರುಗಳನ್ನು ಕಟ್ಟಿಕೊಂಡಿದ್ದರು. ಅವರ ಮುಖ್ಯಸ್ಥರ ಹೆಸರುಗಳಿಂದಲೇ ಆ ಪಡಿಗಳು ಹೆಸರಾಂತುವು. ಈ ಇರುಳರ ತಲೆಯವರು ಆಳಿದ ಸಂಗತಿಯನ್ನು 'ಚೋಳನ್ ಪೂರ್ವ ಪಟ್ಟಯಂ' ಎಂಬ ಕೈಬರಹದ ಪ್ರತಿ ತಿಳಿಸುತ್ತದೆ.

"ಬಳಿಕ ಕಾವ್ಯನಾಟಕಗಳಿಂದ ಈ ನಾಡನ್ನು ಕೋಶರು ಆಳಿದರು (ಎಂದು ತಿಳಿಯುತ್ತದೆ) (ಶಿಲಪ್ಪದಿಕಾರಂ). ಕೋಶರು ಒಂದು ಬಗೆಯ ಅರಸುವಂಶದವರು. ಅವರಲ್ಲಿ ಅಧಿಕಮಾನ ತಗಡೂರಿನಲ್ಲಿಯೂ(ಧರ್ಮಪುರ, ಸೇಲಂ ಜಿಲ್ಲೆ), ಆಯ್ (ವಂಶಿಗ) ಆಗ್ನೇಯ ಪ್ರದೇಶದಲ್ಲಿಯೂ, ಕುಮಣನ್ (ವಂಶಿಗ) ದಕ್ಷಿಣ ಭಾಗದಲ್ಲಿಯೂ, ಮಲೆಕೋಟೆಗಳಿಂದ ಆಳಿದರು. ಈ ಸಂಗತಿಗಳು ಸಂಘಕಾವ್ಯಗಳು ಮೊದಲಾದ ತಮಿಳು ಕೃತಿಗಳಿಂದ ತಿಳಿದುಬರುತ್ತವೆ.

"ಅವರನ್ನು ಹಿಂಬಾಲಿಸಿ ಬಂದ ಅರಸುವಂಶಗಳನ್ನು ಕುರಿತು ಈ 'ಕೊಂಗುದೇಶ ರಾಜಾಕ್ಕಳ್' ಕೃತಿ ತಿಳಿಸುತ್ತದೆ.

"ಅವರಲ್ಲಿ ಕಡೆಯ ಅರಸ ಕೊಂಗುಣಿ ಧರ್ಮ ಮಹಾದಿರಾಯ, ಶಕ 101ರಲ್ಲಿ ಆಳಿದ. ಕಾವೇರಿಯ ಉತ್ತರ ತೀರದಲ್ಲಿರುವ ತಲಕಾಡಿನಲ್ಲಿ ಅವನ ಬಳಿಕ ಬಂದ ಅರಸರು ಆಳಿದರು. ಹೀಗೆ ಆಳಿದ ಅರಸರ ಸಂಖ್ಯೆ 20. ಕಡೆಯ ಅರಸ ರಾಜಮಲ್ಲ ದೇವ (ಶಕ 816) . ಇವನೊಂದಿಗೆ ಗಂಗ ಕುಲ ಮುಗಿಯಿತು."

* * * *

"ತಲಕಾಡಿನಿಂದ ಆಳಿದ ಗಂಗ ಸಂತತಿಯಲ್ಲಿ ಕೆಲವು ಅರಸರು ಜೈನರಾಗಿದ್ದರು. ಜೈನ ಗುರುಗಳಿಗೆ ಅನೇಕ ಗ್ರಾಮಗಳನ್ನು ಧರ್ಮವಾಗಿ ಕೊಟ್ಟಿದ್ದಾರೆ. ಹೀಗೆ ಧರ್ಮಮಾಡಿದ ಒಂದು ಗ್ರಾಮಕ್ಕೆ ಕೊಂಗಣಿ ವರಂ ಪಶತಿ(ಬಸದಿ) ಎಂದು ಹೆಸರು. ಬಸದಿ ಎಂದರೆ ಜೈನರ ಬಿಡದಿ.

---

4 ಸಂಘಕಾಲವೆಂಬುದು (ಚಂಗ ಕಾಲಂ) ಕ್ರಿ.ಶ. 1ನೆಯ ಶತಮಾನದಿಂದ 3ನೆಯ ಶತಮಾನದ ವರೆಗಿನ ಕಾಲಪ್ರಮಾಣವೆಂದೂ, ಹಳೆಯ ತಮಿಳು ಸಾಹಿತ್ಯ (ಚಂಗಂ ಇಲಕ್ಕಿಯಂ) ಈ ಕಾಲದಲ್ಲಿ ಹುಟ್ಟಿತೆಂದೂ ತಮಿಳರು ನಂಬಿಕೊಂಡಿದ್ದಾರೆ. ಇತರರು ನಂಬಬೇಕಾದ ಅಗತ್ಯವೇನೂ ಇಲ್ಲ.

"ಕೊಂಗಣಿವರ್ಮನೆಂಬ ಹೆಸರನ್ನು ಈ ವಂಶದ ಅರಸರಲ್ಲಿ ಕೆಲವರು ಕೊಂಡಿದ್ದಾರೆ. 'ಕೊಂಗಣಿ' ಎಂಬ ಹೆಸರು ಹೇಗೆ ಬಳಕೆಗೆ ಬಂದಿತೆಂಬುದು ತಿಳಿಯದು. ಈ ವಂಶದ 16ನೆಯ ಅರಸ ದುರ್ವಿನೀತ. ಇವನು ಕಿರಾತಾರ್ಜುನೀಯವೆಂಬ ಸಂಸ್ಕೃತ ಕಾವ್ಯಕ್ಕೆ ಟೀಕೆ ಬರೆದನಂತೆ.

"ಇವನ ಕಾಲದಲ್ಲಿಯೇ ಗುಣಾಢ್ಯನೆಂಬೊಬ್ಬ ಕವಿ ಬೃಹತ್ಕಥಾ ಎಂಬ 'ಪೆರುಂಗತೆ'ಯನ್ನು ಪೈಶಾಚಿ ಭಾಷೆಯಲ್ಲಿ ಬರೆದನಂತೆ. ಅದನ್ನು ಕೊಂಗುವೇಳಿರ್ (ಎಂಬಾತ)ತಮಿಳು ಕಾವ್ಯವಾಗಿ ಬರೆದಿದ್ದಾನೆ. ಈ ಅರಸರಲ್ಲಿ ಕೆಲವರು ಮಂತ್ರವಾದವನ್ನು ಅರಿತವರು. ಕೆಲವರು 14 ವಿದ್ಯೆಗಳನ್ನು ಕಲಿತವರು."

2

'ಕೊಂಗುದೇಶ ರಾಜಾಕ್ಕಳ್' ಕೃತಿಯನ್ನು (ಅಚ್ಚಾಗುವುದಕ್ಕೆ ಮೊದಲೇ) ರೆ. ಟೇಲರ್ ಇಂಗ್ಲಿಷಿಗೆ ಅನುವಾದ ಮಾಡಿ ಪ್ರಕಟಿಸಿದರು5. ಇದಕ್ಕೂ ಹಿಂದೆಯೇ ತಯಾರಾಗಿದ್ದ ಇಂಗ್ಲಿಷ್ ಅನುವಾದದ ಹಸ್ತಪ್ರತಿಯೊಂದು ಲಂಡನಿನ 'ಇಂಡಿಯ ಆಫೀಸ್'ನಲ್ಲಿ ಇದ್ದುದಾಗಿಯೂ, ಈ ಪ್ರತಿಯ ಆಧಾರದ ಮೇಲೆ ಪ್ರೊ. ಡಾಸನ್ ಅವರು ಭೌಗೋಳಿಕ ವಿಮರ್ಶನ ಲೇಖನವೊಂದನ್ನು ಬರೆದು ಪ್ರಕಟಿಸಿದ್ದಾಗಿಯೂ ತಿಳಿದು ಬಂದಿದೆ6. ಇವರಿಬ್ಬರು ಉಪಯೋಗಿಸಿಕೊಂಡ ಆಕರಗಳು ಬೇರೆ ಬೇರೆ; ಅಲ್ಲಲ್ಲಿ ಅಲ್ಪಸ್ವಲ್ಪ ವ್ಯತ್ಯಾಸಗಳು ತೋರುವುದು ಸಹಜವೇ.

ಟೇಲರ್ ಅವರ ಭಾಷಾಂತರ ಪ್ರಕಟವಾಗಿರುವ ಪತ್ರಿಕೆ ಈಗ ದೊರೆಯುವುದೂ ಕಷ್ಟ. ತಮಿಳಿನಿಂದ ಇಂಗ್ಲಿಷಿಗೆ ಅನುವಾದ ಮಾಡುವ ಪ್ರಯತ್ನದಲ್ಲಿ ಅನಿವಾರ್ಯವಾಗಿ ಎದುರಾಗುವ ತೊಡಕುಗಳೂ ತನ್ಮೂಲಕ ಉಂಟಾಗುವ ಸಂದೇಹಗಳೂ ಅಸ್ಪಷ್ಟತೆಗಳೂ ಅವರ ಭಾಷಾಂತರದಲ್ಲಿ ಅಲ್ಲಲ್ಲಿ ಸೇರಿಕೊಂಡಿವೆ. ತಮಿಳು–ಕನ್ನಡ ಅನುವಾದದ ಭಾಷಾಬಾಂಧವ್ಯ ದೃಷ್ಟಿಯಿಂದ ಇಂಥ ನ್ಯೂನತೆಗಳನ್ನು ತಕ್ಕ ಮಟ್ಟಿಗೆ ಹೊರಗಾಗಿಸುವುದು ಸಾಧ್ಯ. ಮೂಲದಲ್ಲಿರುವ ನಿರೂಪಣ ಶೈಲಿಯನ್ನೆ ಪ್ರಸ್ತುತ ಅನುವಾದದಲ್ಲಿ ಕಾಣಬಹುದಾದರೂ, ವಿಷಯಕ್ಕೆ ಹೆಚ್ಚು ಗಮನವನ್ನು ಕೊಡಲಾಗಿದೆ.

ಕೊಂಗುನಾಡಿನ ಚರಿತ್ರೆಯ ಪುನರ್ರಚನೆಯಲ್ಲಿ ತೊಡಗಿದ ಆರೋಗ್ಯಸ್ವಾಮಿ7ಯವರು 'ಕೊಂಗು ದೇಶ ರಾಜಾಕ್ಕಳ್' ಕೃತಿಯನ್ನು ಮುಖ್ಯಾಧಾರವಾಗಿ ಉಪಯೋಗಿಸಿಕೊಂಡಿದ್ದಾರೆ. ಅವರು ಈ ಕೃತಿಯಲ್ಲಿ ಕಾಣುವ ಸಂಗತಿಗಳ ಚಾರಿತ್ರಿಕತೆಯನ್ನು ಸಮರ್ಥನೆ ಮಾಡಿಕೊಂಡಿರುವ ರೀತಿ 'ಪೆರ್ಚಿನಿಂ ಮೇರೆವರೆ'ದ ಪ್ರಯತ್ನವಾಯಿತೇನೋ ಎಂಬ ಸಂದೇಹಕ್ಕೆ ಎಡೆಗೊಡುತ್ತದೆ. ಈ ವಿಷಯವಾಗಿ ಜ್ಞೇಯಪ್ರಧಾನವಾದ ತುಲನೆ ನಡೆಯಬೇಕಾಗಿದೆ.

ಗಂಗವಂಶದ ಚರಿತ್ರೆಯನ್ನು ಶಾಸ್ತ್ರ ರೀತಿಯಿಂದ ಅಧ್ಯಯನ ಮಾಡುವ ವಿದ್ಯಾರ್ಥಿಗಳಿಗೆ ಈ ಕೃತಿ ನಿರ್ಲಕ್ಷ್ಯ ಮಾಡಲಾಗದ ಆಧಾರವಾಗಿದೆಯೆಂದು ತಿಳಿದಿದ್ದೇನೆ.

3

ಅನುವಾದ

ಕಾಣ್ವಾಯನ ಗೋತ್ರದಲ್ಲಿ ಗಂಗರ ಕುಲದಲ್ಲಿ ಹುಟ್ಟಿದ ಶ್ರೀಮತ್ ಕೊಂಗುಣೀವರ್ಮ ಧರ್ಮ ಮಹಾಧಿರಾಯ ಕೊಂಗದೇಶಕ್ಕೆ ವಿಜಯಸ್ಕಂದಪುರದಲ್ಲಿ ಪಟ್ಟಾಭಿಷೇಕ ಮಾಡಿಕೊಂಡು ರಾಜ್ಯವನ್ನು

---

5 W. Taylor: Translation of Kongudesarajakkal—*Madras Journal of Literature and Science,* vol. 14, p. 166

6 Journal of the Royal Asiatic Society, vol. VII. (ಈ ಮೂಲ ನನಗೆ ದೊರಕಿಲ್ಲ.)

7 The Kongu Country; Madras University, Madras, 1956

ಸಂರಕ್ಷಿಸಿದ. ಆ ರಾಜ ಶತ್ರುರಾಜರೊಡನೆ ಜಯ ಗಳಿಸಲು ಹೋದಾಗ ತನ್ನ ಕತ್ತಿಯಿಂದ ಒಂದು ಕಲ್ಲನ್ನು ಕಡಿದು. ಆ ಕಲ್ಲನ್ನು ಕಡಿದಂತೆಯೇ ಶತ್ರುರಾಜರನ್ನು ಕಡಿದು ಜಯಗಳಿಸುತ್ತೇನೆಂದು ಪ್ರತಿಜ್ಞೆ ಮಾಡಿಕೊಂಡು ಹೋಗಿ. ಇವನಿಗೆ ಶತ್ರುಗಳಾಗಿದ್ದವರನ್ನು ಕೊಂದು ಹಾಕಿ. ಶತ್ರುವಲ್ಲದವರ ಕೈಯಿಂದ ಕಪ್ಪವನ್ನು ತೆಗೆದುಕೊಂಡು ಒಳ್ಳೆಯ ರಾಜ್ಯಸಂಪತ್ತನ್ನು ಪಡೆದ. ಇವನು ಮಾಡಿದ ಧರ್ಮ (ಕಾರ್ಯಗಳು) ಹೇಗೆಂದರೆ. ತನ್ನ ವಂಶವಾದ ಗಂಗಕುಲದಲ್ಲಿ ನಡೆಯುವ ಪಾಪಕೆಲಸಗಳ ಅಂಧಕಾರಕ್ಕೆ ಆ ರಾಜ ಆಕಾಶದಲ್ಲಿ ಬೆಳಕನಿತ್ತಿರುವ ಸೂರ್ಯನಂತಿರುವನು. ಅಧಿಕ ಸಂಪತ್ತನ್ನು ಪಡೆದವನಾದ್ದರಿಂದ ಅವನಿಗೆ ಶ್ರೀಮತ್ ಎಂದು ಮೊದಲನೆಯ ಹೆಸರುಂಟಾಯಿತು. ಮಿಗಿಲಾದ ಧರ್ಮದೊಂದಿಗೆ ರಾಜನೀತಿ ಪಾಲಿಸಿದವನಾದ್ದರಿಂದ ಧರ್ಮ ಮಹಾಧಿರಾಯನೆಂಬ ಹೆಸರು ಕಡೆಯಲ್ಲಿ ಸಂದಿತು. ಸಂಪತ್ತು, ಧರ್ಮ, ಕೊಂಗುದೇಶದ ಪಟ್ಟ. ಇವುಗಳಿಂದ ಶ್ರೀಮತ್ ಕೊಂಗುಣಿವರ್ಮ ಧರ್ಮ ಮಹಾಭಿಷೇಕ ಶಕವರ್ಷ 111ಪ್ರಮೋದೂತ (ವರ್ಷದಲ್ಲಿ ನಡೆಯಿತು).

ಆ ರಾಜನ ಪುತ್ರನಾದ ಶ್ರೀಮನ್ ಮಾಧವಮಹಾಧಿರಾಯ ವಿಜಯಸ್ಕಂದಪುರದಲ್ಲಿ ಕೊಂಗುರಾಜ್ಯ ಪಟ್ಟಾಭಿಷೇಕವನ್ನು ಮಾಡಿಕೊಂಡು ತನ್ನ ತಂದೆಗಿಂತಲೂ ಮಿಗಿಲಾಗಿ ರಾಜ್ಯವನ್ನು ರಕ್ಷಿಸಿ. ಅನೇಕ ವಿದ್ಯೆಗಳ ಮೂಲಕ ನೀತಿಮಾರ್ಗವನ್ನು ಅರಿತು. ರಾಜ್ಯಭಾಗ್ಯವನ್ನು ಪಡೆದು ವಿದ್ವಾನ್‌ಗಳು. ಕವೀಶ್ವರರು ಯಾಚಕಜನರು. ಇವರಿಗೆ ಅನೇಕ ದ್ರವ್ಯ, ವಸ್ತುಮೊದಲಾದವನ್ನು ಕೊಟ್ಟು ಕಲ್ಪವೃಕ್ಷಸಮನಾಗಿ, ಕೇಳಿದ್ದನ್ನು ಕೊಡುವವನೆಂದು ಲೋಕದಲ್ಲಿ ಮಿಗಿಲಾದ ಕೀರ್ತಿಯನ್ನು ಪಡೆದು ರಾಜ್ಯಪಾಲನೆ ಮಾಡಿದ. ಇದರಿಂದ ಶ್ರೀಮಾನ್ ಮಾಧವಮಹಾಧಿರಾಯನೆಂದು ಕೀರ್ತಿ ಪಡೆದ.

ಅವನ ಮಗ (ಶ್ರೀಮತ್ ಹರಿವರ್ಮ ಮಹಾಧಿರಾಯ) ವಿಜಯಸ್ಕಂದಪುರದಲ್ಲಿ ಕೊಂಗುದೇಶ ಪಟ್ಟಾಭಿಷೇಕವನ್ನು ಮಾಡಿಕೊಂಡು. ಕರ್ಣಾಟಕ ದೇಶಕ್ಕೆ ಒಳಿಯ ಪಟ್ಟಣವಾಗಿರುವ ತಳವನಪುರದಲ್ಲಿಯೂ ಇದ್ದುಕೊಂಡು. ಕರ್ಣಾಟಕ ರಾಜ್ಯವನ್ನೂ ರಕ್ಷಿಸುತ್ತ. ಸಾಮದಾನಭೇದದಂಡ ಈ ನಾಲ್ಕು ಉಪಾಯಗಳ ಮೂಲಕ ಅನೇಕರಾಜರ ಕೈಲಿ ಕಪ್ಪ ತೆಗೆದುಕೊಂಡು. ನಾಲ್ಕು ಸಮುದ್ರ ಮಧ್ಯದಲ್ಲಿರುವ ದೇಶಗಳಲ್ಲಿ ಮಹಾಶೂರನೆಂದು ಕೀರ್ತಿಪಡೆದು ಲಕ್ಷ್ಮಿಯೊಂದಿಗೆ ಕೂಡಿರುವ ಶ್ರೀಮನ್ (ಹರಿ)ಗಿಂತಲೂ ಅಧಿಕ ಸಂಪತ್ತನ್ನು ಗಳಿಸಿದ್ದುದರಿಂದ ಶ್ರೀಮತ್ ಹರಿವರ್ಮ ಮಹಾಧಿರಾಯನೆಂಬ ಹೆಸರನ್ನು ಗಳಿಸಿ. ಅನೇಕ ಜನರಿಗೆ ಭೂದಾನ ಮೊದಲಾದ ಧರ್ಮಗಳನ್ನು ಮಾಡಿದ. ಭೂದಾನ ಮಾಡಿದ ಕಾಲ ಶಕವರ್ಷ 210. ಫಾಲ್ಗುಣ ಮಾಸ. ಶುಕ್ಲಪಕ್ಷ*ದಲ್ಲಿ ತಗಡೂರು ಎಂಬ ಗ್ರಾಮವನ್ನು ತಲೈಕ್ಕಾಡು (ತಲಕಾಡು) ಪೇಟೆಯಲ್ಲಿ ಮೊದಲೇ ವಲಸೆಯಿದ್ದ ಸಿಪಾಯಿಗಳಿಗೆ ಮೂರು ಭಾಗವೂ. ಆ ಗ್ರಾಮದ ಮೂಲಸ್ಥಾನೇಶ್ವರ ಸ್ವಾಮಿಯನ್ನು ಪೂಜೆಮಾಡುವ ಬ್ರಾಹ್ಮಣನಿಗೆ ಒಂದು ಭಾಗವೂ ಭೂದಾನ ಮಾಡಿ ಕೊಟ್ಟನು.

ಅವನ ಮಗ ವಿಷ್ಣುಗೋಪ ಮಹಾಧಿರಾಜ ತಳವನಪುರವೆಂಬ ತಲಕಾಡು ಪಟ್ಟಣದಲ್ಲಿ ಪಟ್ಟಾಭಿಷೇಕ ಮಾಡಿಕೊಂಡು ಚತುರಂಗ ಸೇನೆಗಳೊಡನೆ ದಕ್ಷಿಣ ದಿಕ್ಕನ್ನು ಜಯಿಸಿ ಬಹು ಶೂರನೆಂದು ಕೀರ್ತಿ ಪಡೆದು. ಪರೋಪಕಾರ. ಬ್ರಾಹ್ಮಣಪೂಜೆ, ಗುರುಪೂಜೆ ಮೊದಲಾದ ಧರ್ಮಗಳನ್ನೆಸಗಿ, ರಾಜ್ಯದಲ್ಲಿ ವಿಷ್ಣು ದೇವಾಲಯಗಳನ್ನು ಕಟ್ಟಿಸಿ ಹರಿಭಕ್ತಿಯಿಂದ ಇದ್ದದ್ದರಿಂದ ವಿಷ್ಣುಗೋಪ ಮಹಾರಾಯನೆಂದು ಅಧಿಕ ಕೀರ್ತಿವಂತನಾದ. ಅವನ ಕೈಕೆಳಗೆ ಕೊಂಗು ದೇಶವೂ ಕರ್ನಾಟಕ ದೇಶವೂ ಇದ್ದುವು.

ಆ ವಿಷ್ಣುಗೋಪ ಮಹಾಧಿರಾಯನಿಗೆ ಪುತ್ರ ಸಂತಾನವಾಗಲಿಲ್ಲವಾದ್ದರಿಂದ ಅದೇ ವಂಶದಲ್ಲಿ (ಹುಟ್ಟಿದ) ಮಾಧವ ಮಹಾಧಿರಾಯನೆಂಬ ಒಂದು ಮಗುವನ್ನು ಬೆಳೆಯಿಸಿಕೊಂಡು ಅವನಿಗೆ ತಳವನಪುರದಲ್ಲಿ ಪಟ್ಟಾಭಿಷೇಕ ಮಾಡಿದ; ಇವನು ತಂದೆಗಿಂತಲೂ ಅಧಿಕ ರೀತಿಯಲ್ಲಿ ರಾಜ್ಯಪಾಲನೆ ಮಾಡಿಕೊಂಡು ಕೆಲವು ಕಾಲವಿದ್ದ.

ಇದರ ಬಳಿಕ ವಿಷ್ಣುಗೋಪ ಮಹಾಧಿರಾಯನಿಗೆ ಕೃಷ್ಣವರ್ಮ ಮಹಾಧಿರಾಯನೆಂಬ ಮಗ

---

*ಪಾಠಭೇದ—ಪೌರ್ಣಮಿ, ಬೃಹಸ್ಪತಿವಾರ

ಹುಟ್ಟಿದ್ದರಿಂದ. ಈ ಮಗನಿಗೆ ತಳವನಪುರದಲ್ಲಿ ಪಟ್ಟಾಭಿಷೇಕವನ್ನು ಮಾಡಿ ಹಿಂದಿದ್ದ ಮಾಧವ ಮಹಾಧಿರಾಯನಿಗೆ ಮಳೆಯು ತಪ್ಪಲು ಸಮೀಪದಲ್ಲಿದ್ದ ಕೆಲವು ಪ್ರದೇಶಗಳನ್ನು ಬಿಟ್ಟು (ಕೊಟ್ಟು) ಆ ರಾಜ್ಯಕ್ಕೆ, ಅಧಿಪತಿಯಾಗಿದ್ದನು. (ಇತ್ತ) ಈ ಕೃಷ್ಣವರ್ಮ ಮಹಾಧಿರಾಯ ಕೊಂಗು ಕರ್ನಾಟಕ ದೇಶಗಳಲ್ಲಿ ಬಹುನೀತಿಯಿಂದ ರಾಜ್ಯ ಪರಿಪಾಲನೆ ಮಾಡಿ, ಈಶ್ವರ ಭಕ್ತನಾಗಿ ತಳವನಪುರದಲ್ಲಿ ಕೆಲವು ಶಿವಲಿಂಗ ಪ್ರತಿಷ್ಠೆ ಮಾಡಿ ಆ ದೇವಾಲಯಗಳಿಗೆ ಭೂಮಿಗಳನ್ನು ಬಿಟ್ಟುಕೊಟ್ಟು, ಈ ಕಲಿಯುಗದಲ್ಲಿ ಉಂಟಾಗಿರುವ ಪಾಪವೆಂಬ ಕಾಡಿಗೆ ಅಗ್ನಿಯಾಗಿದ್ದುಕೊಂಡು. ತಂದೆಗಿಂತಲೂ ಮೇಲಾದ ನೀತಿಯೊಡನೆ ರಾಜ್ಯಪಾಲನೆ ಮಾಡಿದ.

ಈ ರಾಜನಿಗೆ ಮಗನಿಲ್ಲದಿದ್ದುದ್ದರಿಂದ ಆ ಕೃಷ್ಣವರ್ಮ ಮಹಾಧಿರಾಯನ ಬಳಿಕ ರಾಜ್ಯಭಾರ ಅದೇ ವಂಶಕ್ಕೆ ಸೇರಿದ ಪರಿಕುಲತ್ತಿ ರಾಯನ (ಪರಿಕುಲಾದ್ರಿರಾಯ) ಮಗ ದಿಂಡೀಕರರಾಯನ ವಶದಲ್ಲಿದ್ದಿತು.

ಅದರ ಬಳಿಕ ಮಂತ್ರಿ ಸೇನಾಪತಿ ಮೊದಲಾದವರು ಯೋಚನೆ ಮಾಡಿ ಕೃಷ್ಣವರ್ಮ ಮಹಾಧಿರಾಯನ ತಂಗಿಯ ಮಗನಾದ ಶ್ರೀಮತ್ ಕೊಂಗಣೀ ಮಹಾಧಿರಾಯನಿಗೆ ಕೊಂಗುದೇಶ, ಕರ್ನಾಟಕ ದೇಶ ಇವೆರಡು ದೇಶಗಳಿಗೂ ರಾಜನಾಗಿರುವಂತೆ ತಳವನಪುರದಲ್ಲಿ ಪಟ್ಟಾಭಿಷೇಕವನ್ನು ಮಾಡಿಸಿದರು. ಆ ಕೊಂಗಣೀ ಮಹಾಧಿರಾಯ ಅನೇಕ ವಿದ್ಯೆಗಳನ್ನೂ ಅನೇಕ ಭಾಷೆಗಳನ್ನೂ ತಿಳಿದವನಾಗಿ ಬಹು ದೇಶಗಳನ್ನು ಜಯಿಸಿ ಕಪ್ಪ ತೆಗೆದುಕೊಂಡು, ಹಿಂದಿನ ರಾಜರು ನಡೆಯಿಸಿದ ಧರ್ಮ(ಕಾರ್ಯ)ಗಳಿಗಿಂತಲೂ ಅಧಿಕವಾಗಿ ನಡೆಯಿಸಿ ಪರಿಪಾಲನೆ ಮಾಡಿದ. ಆಗ ಹರಿಶ್ಚಂದ್ರ ಡಿಂಡೀಕರರಾಯನ ವಶದಲ್ಲಿ ಕೊಂಚ ರಾಜ್ಯಭಾಗವಿದ್ದಿತು. ಅದರಲ್ಲಿದ್ದ ಆಲೂರಿನ ಸಮೀಪದಲ್ಲಿ ಪರೋಳ ಕೇಳೂರು(?) ಎಂಬ ಗ್ರಾಮವನ್ನು ಅವನ ಸರ್ದಾರನ ಹೆಂಡತಿಗೆ ದಾನ ಮಾಡಿದ.

ಅವನ ಮಗ ದುರ್ವಿನೀತರಾಯ ತಳವನಪುರದಲ್ಲಿ ಪಟ್ಟಾಭಿಷೇಕ ಮಾಡಿಕೊಂಡು ಕೊಂಗ ಕರ್ನಾಟಕದೇಶಗಳನ್ನು ರಕ್ಷಿಸಿಕೊಂಡು ಅನೇಕ ಮಂತ್ರಶಾಸ್ತ್ರಗಳನ್ನು ಓದಿ, ಮಂತ್ರಸಿದ್ಧಿಯಿಂದ ಶತ್ರು ರಾಜರೊಡನೆ ಯುದ್ಧಮಾಡುವಾಗ ಮಂತ್ರಬಲದಿಂದ ಹೂಂಕಾರ ಮಾಡಿದಾಗ ಶತ್ರುಸೇನೆಗಳೆಲ್ಲ ಆಯುಧಗಳನ್ನು ಕೈಲಿ ಹಿಡಿದಿರುವ ಹಾಗೆಯೇ (ನಿಂತುಬಿಟ್ಟು) ಯುದ್ಧಮಾಡಲು ತಿಳಿಯದೆ ನಿಲ್ಲುತ್ತಿದ್ದರು. ಪ್ರಳಯಕಾಲದ ಯಮನಂತೆ* (ದುರ್ವಿನೀತನು) ಶತ್ರುರಾಜರಿಗೆ ಕಾಣಿಸುತ್ತಿದ್ದ. "ಹದಿನೈದು ಮೇರೆಗಳ ಪ್ರಜೆಗಳನ್ನು ನೀತಿಯಿಂದ ಪರಿಪಾಲಿಸುತ್ತಿದ್ದ**. ಕಿರಾತಾರ್ಜುನೀಯದ ಹದಿನೈದು ಸರ್ಗಗಳಿಗೆ ಟೀಕೆಯನ್ನು ಬರೆದ. ಕೇರಳ ಪಾಂಡ್ಯ ಚೋಳ ದ್ರಾವಿಡ ಆಂಧ್ರ ಕಲಿಂಗದೇಶ ಮೊದಲಾದ ಇನ್ನೂ ಅನೇಕ ದೇಶಗಳನ್ನು ಜಯಿಸಿ ಕಪ್ಪ ತೆಗೆದುಕೊಂಡ. ಬೇರೆ ಶತ್ರುರಾಜರು ಅವನ ಬಳಿ ಬರುವುದಕ್ಕೆ ಭಯಪಡುತ್ತಿದ್ದ ಕಾರಣದಿಂದ ಅವನಿಗೆ ದುರ್ವಿನೀತರಾಯನೆಂಬ ಹೆಸರು ಪ್ರಸಿದ್ಧವಾಯಿತು.

ಅವನ ಮಗ ಮುಷ್ಕರರಾಯ§ ತಳವನಪುರದಲ್ಲಿ ಪಟ್ಟಾಭಿಷೇಕ ಮಾಡಿಕೊಂಡು ತನ್ನ ತಂದೆ ದುರ್ವಿನೀತರಾಯನಿಗಿಂತಲೂ ಧನುರ್ವಿದ್ಯೆ ಮಂತ್ರಶಾಸ್ತ್ರಗಳಲ್ಲಿ ನಿಪುಣತೆಯನ್ನು ಪಡೆದು, ತಂದೆ ಜಯಗಳಿಸಿದ್ದ ರಾಜ್ಯಗಳಿಂದ ಕಪ್ಪ ತೆಗೆದುಕೊಂಡ. ಸಕಲ ಶತ್ರು ರಾಜರೂ (ತನ್ನ) ಪಾದದಲ್ಲಿ ಬೀಳುವಂತೆ ಮಾಡಿಕೊಂಡು, ಬ್ರಾಹ್ಮಣಾದಿಗಳಿಗೆ ಧರ್ಮವಿಘ್ನ(?) ಮಾಡಿದನಾದ್ದರಿಂದ ಲೋಕದಲ್ಲಿ ಬಿಜ್ಜಮಜ್ಜರಾಯ§§ನೆಂಬ ಹೆಸರು (ಇವನಿಗೆ) ಪ್ರಸಿದ್ಧಿಯಾಯಿತು.

ಅವನ ಮಗ ತ್ರಿವಿಕ್ರಮರಾಯ ತಳವನಪುರದಲ್ಲಿ ಪಟ್ಟಾಭಿಷೇಕ ಮಾಡಿಕೊಂಡು ಲೋಕದಲ್ಲಿ ಉಂಟಾಗಿರುವ ಅರವತ್ತನಾಲ್ಕು ವಿದ್ಯೆಗಳಲ್ಲಿ ಹದಿನಾಲ್ಕು ವಿದ್ಯೆಗಳನ್ನು ಅರಿತು, ಸಾಮ ದಾನ ಭೇದ

---

* ಪಾಠಭೇದ—ರುದ್ರನಂತೆ

** ಈ ವಾಕ್ಯ ಟಾಯ್ಲರ್ ಅನುವಾದದಲ್ಲಿದೆ: ರಾಮನಾಥಂ ಚೆಟ್ಟಿಯಾರರ ಸಂಪಾದನೆಯಲ್ಲಿಲ್ಲ.

† ಪಾಠಭೇದ—ಪುಷ್ಕರರಾಯ

†† ಪಾಠಭೇದ—ಬ್ರಹ್ಮಹರಿರಾಯ

ದಂಡ ಈ (ಚತುರ್ವಿಧ ಉಪಾಯ)ಗಳ ಮೂಲಕ ಅನೇಕ ದೇಶಗಳನ್ನು ಕೈವಶ ಮಾಡಿಕೊಂಡು (ಅವುಗಳಿಂದ) ಕಪ್ಪ ತೆಗೆದುಕೊಂಡು, ಆಗಾಗ್ಗೆ ರಾಜನೀತಿಯನ್ನು ವಿಚಾರಿಸಿಕೊಂಡು, ದುಷ್ಟ (ನಿಗ್ರಹ ಶಿಷ್ಟ ಪರಿಪಾಲನೆ) ಮಾಡಿಕೊಂಡು ರಾಜ್ಯರಕ್ಷಣೆ ಮಾಡಿದ.

ಅವನ ಮಗ ಭೂವಿಕ್ರಮರಾಯ ತಳವನಪುರದಲ್ಲಿ ಪಟ್ಟ ವರ್ಷ ಶಾಲಿವಾಹನ ಶಕ ವರ್ಷ 461 ಸಿದ್ಧಾರ್ಥಿ ವರ್ಷ ಪಟ್ಟಾಭಿಷೇಕ ಮಾಡಿಕೊಂಡು. ಕೊಂಗುದೇಶ. ಕರ್ನಾಟಕ ದೇಶಗಳನ್ನು ರಕ್ಷಿಸಿಕೊಂಡು, ತನ್ನ ತಂದೆ ವಿಸಗಿದ್ದ ಧರ್ಮಗಳನ್ನು ಪಾಲಿಸಿಕೊಂಡು. ಅನೇಕ ದೇಶಗಳಲ್ಲಿ ಜಯ ಗಳಿಸಿ, ಅನೇಕ ಆನೆಗಳನ್ನು ಸಂಪಾದಿಸಿಕೊಂಡು ಗಜಪತಿ ಎಂಬ ನಾಮಪ್ರಸಿದ್ಧಿಯನ್ನು ಪಡೆದು, ಆನೆಯ ಕೊಂಬುಗಳಿಂದ (ದಂತ) ಆಯುಧಗಳನ್ನು ತಯಾರಿಸಿಕೊಂಡು. ತನ್ನ ವಂಶದಲ್ಲಿ ಹಿಂದೆ ಜಯಗಳಿಸಿದ್ದ ದೇಶಗಳಲ್ಲಿ ಕಪ್ಪ ತೆಗೆದುಕೊಂಡಿದ್ದ. (ಕೆಲವು ಕಾಲ ಕಳೆದ ಬಳಿಕ) ಆ ದೇಶದ ರಾಜರು ಇವನಿಗೆ ಕಪ್ಪ ಸಲ್ಲಿಸದೆ ಹೋದ್ದರಿಂದ (ತನ್ನ ವಶದಲ್ಲಿದ್ದ) ಚದುರಂಗ ಸೇನೆಗಳೊಡನೆ ಯುದ್ಧಕ್ಕೆ ಹೋಗಿ ಚೋಳ ಪಾಂಡ್ಯ ಆಂಧ್ರ ಕಲಿಂಗ ವರಾಟ* ಮಹಾರಾಷ್ಟ್ರಕ ದೇಶ ಮೊದಲಾದವನ್ನು ಗೆದ್ದು ಕಪ್ಪ ತೆಗೆದುಕೊಂಡನಾದ್ದರಿಂದ ಭೂವಿಕ್ರಮರಾಯನೆಂದು ಕೀರ್ತಿ ಪಡೆದು. ತಳವನಪುರದ ಕೋಟೆಯನ್ನು ಚೆನ್ನಾಗಿ ಕಟ್ಟಿ ಅನೇಕ ಧರ್ಮಗಳನ್ನು ಮಾಡಿ ದೇವಾಲಯಗಳ(ಲ್ಲಿ) ಪೂಜೆ ವರ್ಧಿಸಿ ರಾಜ್ಯವನ್ನು ರಕ್ಷಿಸಿದ.

ಅವನ ಮಗ ಕೊಂಗಣೀ ಮಹಾಧಿರಾಯ ನವ(ರತ್ನ ಖಚಿತ)ವಾದ(ಸಿಂಹಾಸನದಲ್ಲಿ ರತ್ನಗಳ) ಕಾಂತಿಯಿಂದ ಶೋಭಾಯಮಾನವಾಗಿದ್ದುಕೊಂಡು ಧರ್ಮನೀತಿಯಿಂದ ರಾಜ್ಯಪಾಲನೆ ಮಾಡುತ್ತ ತನ್ನ ಅಣ್ಣ**ನನ್ನು ಸೇನಾಧಿಪತಿಯಾಗಿಟ್ಟುಕೊಂಡು. ಆ ವಲ್ಲಭಾಗ್ಯರಾಯ§ ತಮ್ಮನ ಮಾತಿನಂತೆ ಚೆನ್ನಾಗಿ (ರಾಜ್ಯಪಾಲನೆಯನ್ನು) ನಡೆಯಿಸಿಕೊಂಡು. ದೇಶದೇಶಗಳಿಗೆ ಹೋಗಿ ಕಪ್ಪ ತೆಗೆದುಕೊಂಡು, ಅನೇಕ ಶತ್ರುಗಳೊಡನೆ ಹೋರಾಡಿ ಜಯಿಸಿ. ಕೊಂಗ ಕರ್ನಾಟ ದೇಶಗಳ ರಾಜನಾಗಿ ಪರಿಪಾಲನೆ ಮಾಡಿದ. ಅವನ ಮಗ ರಾಜಗೋವಿಂದರಾಯ ತಳವನಪುರದಲ್ಲಿ ಪಟ್ಟಾಭಿಷೇಕ ಮಾಡಿಕೊಂಡು. ಗಂಗವಂಶಕ್ಕೆ ನಿರ್ಮಲನಾಗಿ(ದ್ದುಕೊಂಡು). ಒಳ್ಳೆಯ ನೀತಿಮಾರ್ಗವನ್ನು ಅರಿತು ರಾಜ್ಯವನ್ನು ರಕ್ಷಿಸಿದ. ಧನುರ್ವಿದ್ಯೆಯಲ್ಲಿ ಪರಶುರಾಮನಿಗೆ ಸಮಾನ. ಭಾಗ್ಯದಲ್ಲಿ ದೇವೇಂದ್ರನಿಗೆ ಸಮಾನ. ಬಹುಪರಾಕ್ರಮರಾಗಿದ್ದ ರಾಜರ ಕಿರೀಟಮಾಲೆಗಳೆಲ್ಲ ತನ್ನ ಪಾದದಲ್ಲಿ ಬೀಳುವಂತೆ ಮಾಡುವವನು. ಕತ್ತಿ ಬಾಣ ಮೊದಲಾದ ಧನುಸ್ಸುಗಳನ್ನು ಹಿಡಿದು ಶತ್ರುರಾಜರನ್ನು ಜಯಿಸಿ ಅನೇಕ ಜನರನ್ನೂ ವೈವಸ್ವತ ಪಟ್ಟಣಕ್ಕೆ ಕಳುಹಿಸುವವನು. ಲಿಂಗಧಾರಿ ಮತದಲ್ಲಿ ಬಹು ಪ್ರೀತಿಯಿಟ್ಟಿದ್ದವನು. ಆದ್ದರಿಂದ ಅವನಿಗೆ ನಂದಿವರ್ಮನೆಂಬ ಹೆಸರು ಪ್ರಸಿದ್ಧವಾಯಿತು. ಅವನು ಕೆಲವು ಕಾಲ ಮುಕುಂದ ಪಟ್ಟಣದಲ್ಲಿದ್ದು(ಕೊಂಡು) ರಾಜ್ಯಭಾರ ಮಾಡಿದ.

ಅವನ ತಮ್ಮ ಶಿವಕಾಮರಾಯನೆಂಬುವನು ತಳವನಪುರದಲ್ಲಿ ಪಟ್ಟಾಭಿಷೇಕ ಮಾಡಿಕೊಂಡು ದೇವಬ್ರಾಹ್ಮಣರ (ವಿಷಯದಲ್ಲಿ) ಬಹು ಭಕ್ತಿಯಿಂದ (ನಡೆದುಕೊಂಡು), ನೀತಿಶಾಸ್ತ್ರವನ್ನು ಓದಿ. ರಾಜ್ಯಪರಿಪಾಲನೆ ಮಾಡಿದ. ಅವನು ಭೂದಾನ ಮಾಡಿದ್ದು ಮುಕುಂದ ಪಟ್ಟಣದಿಂದ ರಾಜ್ಯ ಪರಿಪಾಲನೆ ಮಾಡುತ್ತಿದ್ದಾಗ—ಶಾಸನದ ಕಾಲ ಶಾಲಿವಾಹನ ಶಕವರ್ಷ ವಸ್ತು*ಶಕವರ್ಷ 591** ಮಾಘ ಮಾಸ. ಉತ್ತರಾಯಣ. ಶತ್ರುರಾಜಸಿಂಹರಿಗೆ ಶಿವಮಹಾರಾಜ ಗಂಡಭೇರುಂಡನಾಗಿದ್ದ. ದ್ರಾವಿಡ ದೇಶ(ದಲ್ಲಿರುವ) ನೆಟ್ಟೂರಿನಲ್ಲಿ ವೇದಶಾಸ್ತ್ರವನ್ನು ಅರಿತು ಸುಗುಣಶಾಲಿಯಾಗಿದ್ದ ವಿಷ್ಣುವಿನ ಕುಮಾರ ವಾಜಪೇಯನಿಗೆ ಉಲಿಯೂರು. ಓವಳಿವೇಳಿ (ಓವಳಿಹಳ್ಳಿ)(ಯನ್ನು) ಸರ್ವಮಾನ್ಯವಾಗಿ ದಾನಕೊಟ್ಟ. ಹೀಗೆ ಇನ್ನೂ ಅನೇಕ ಧರ್ಮಗಳನ್ನು ಮಾಡಿದ.

---

* ಪಾಠಭೇದ—ವರಾದ

** "ಸೋದರ ಮಾವನ ಮಗ ಅಥವಾ ಚಿಕ್ಕಪ್ಪನ ಮಗ ಎಂದು ನಿರ್ದೇಶನ"—ಟಾಯ್‌ಲರ್

† ಪಾಠಭೇದ—ಪಲ್ಲವಾಚ್ಯರಾಯ

* ಪಾಠಭೇದ—ಗ್ರಹಪಾಣ್ಯುದಮ್

** ಪಾಠಭೇದ—ಪ್ರಮೋದೂತ ಸಂವತ್ಸರ

ಅವನ ಮಗ ಪೃಥಿವೀ ಕೊಂಗಣೀ ಮಹಾಧಿರಾಯ ತಳವನಪುರದಲ್ಲಿ ಪಟ್ಟಕಟ್ಟಿಕೊಂಡು ಕರ್ಣಾಟಕದೇಶವನ್ನು ರಕ್ಷಿಸುತ್ತ, ತನ್ನ ಸೇನಾಧಿಪತಿಯಾದ ಶ್ರೀಪುರುಷರಾಯನಿಗೆ ವಿಜಯಸ್ಕಂದಪುರದಲ್ಲಿ ಹನ್ನೆರಡು ಗ್ರಾಮಗಳನ್ನು ಕೊಟ್ಟು, ಅವನು ಅಲ್ಲಿದ್ದುಕೊಂಡು ಶತ್ರುರಾಜರೊಡನೆ ಯುದ್ಧಮಾಡಿ ಜಯಿಸಿ ರಾಜನಿಗೆ ಸಂತೋಷ ತಂದದ್ದರಿಂದ, ಅವನಿಗೆ ಶೌರ್ಯಾಭರಣ ನರೇಂದ್ರ ಸೇನಾಧಿಪತಿ ಎಂಬ ಹೆಸರನ್ನಿಟ್ಟು ಭೂಮಿಯನ್ನು (ದಾನ) ಕೊಟ್ಟ ವಿವರ ಶಾಲಿವಾಹನ ಶಕವರ್ಷ 668...

ಪ್ರಭವವರ್ಷ ಚೈತ್ರ...ಶುಕ್ಲ ಪಕ್ಷ ಪಂಚಮಿ ಅಶ್ವಿನಿ ನಕ್ಷತ್ರ ಸೋಮವಾರದಂದು ಶ್ರೀ ಪುರುಷ ರಾಯ ಸೇನಾಧಿಪತಿಯು ವಿಜಯಸ್ಕಂದಪುರಕ್ಕೆ ಸೇರಿದ, ಘಟ್ಟದ ಮೇಲಿರುವ ಹನ್ನೆರಡು ಗ್ರಾಮಗಳೊಂದಿಗೆ ವಿಜಯಸ್ಕಂದಪುರವನ್ನೂ ಧರ್ಮವಾಗಿ ಪಡೆದ. ಅದಕ್ಕೆ ಸಾಕ್ಷಿ ತನ್ನ ಕುಲದಲ್ಲಿ ಹುಟ್ಟಿದ ಮಂತ್ರಿ ರಾಜಕುಮಾರರು, ದೈವಸಾಕ್ಷಿ ಮಲ್ಲಿಕಾರ್ಜುನಸ್ವಾಮಿ—ಹೀಗೆ ದಾನವಾಗಿ ಕೊಟ್ಟ.

ಅವನು ಬಹು ಅಲಂಕಾರದೊಡನೆ (ರಾರಾಜಿಸುತ್ತಿದ್ದದ್ದರಿಂದಲೂ) ನಿತ್ಯವೂ (ಅವನ) ಅರಮನೆ ಮಂಗಳಕರವಾಗಿದ್ದದ್ದರಿಂದಲೂ, ಅವನಿಗೆ ಶಿವಮಹಾರಾಜನೆಂಬ ಹೆಸರು ದತ್ತವಾಗಿ, ಸಂತೋಷದಿಂದ ರಾಜ್ಯವನ್ನು ರಕ್ಷಿಸಿದ.

ಅವನ ತಮ್ಮ ವಿಜಯಾದಿತ್ಯರಾಯನ ಮಗ ರಾಜಮಲ್ಲದೇವರಾಯ ತಳವನಪುರದಲ್ಲಿ ಪಟ್ಟಾಭಿಷೇಕ ಮಾಡಿಕೊಂಡು, ಕರ್ಣಾಟಕ ದೇಶ ಕೊಂಗುದೇಶಗಳನ್ನು ಆಳಿದ. ಅವನು ರೂಪದಲ್ಲಿ ಮನ್ಮಥನಂತೆ, ಮೇರುಪರ್ವತದಂತೆ, ದಯೆಯಲ್ಲಿ ರಾಮನಂತೆ. ಈ ಬಗೆಯ ಅನೇಕ ಗುಣಗಳೊಂದಿಗೂ ಬಹುಪರಾಕ್ರಮದೊಂದಿಗೂ ದ್ರಾವಿಡದೇಶಕ್ಕೆ ಹೋಗಿ, ಕಾಂಚಿಪಟ್ಟಣದಲ್ಲಿರುವ ದ್ರಾವಿಡರಾಜರನ್ನು ಜಯಿಸಿ, ಚೋಳರಾಜನೊಡನೆ ಯುದ್ಧಮಾಡಿ ಅವನನ್ನು ಭಯಪಡಿಸಿ, ಬಳಿಕ ಅವನೊಡನೆ ಸ್ನೇಹ ಬೆಳಸಿ, ಗಂಗಕುಲಕ್ಕೆ ಕೀರ್ತಿತಂದು ರಾಜ್ಯಪಾಲನೆ ಮಾಡಿದ.

ಅವನ ಮಗ ಕಂದದೇವ ಮಹಾರಾಯ ತಳವನಪುರದಲ್ಲಿ ಪಟ್ಟಾಭಿಷೇಕ ಮಾಡಿಕೊಂಡು ಸಕಲ ರಾಜರ ಬಿರುದನ್ನು ಗಳಿಸಿ ದ್ರಾವಿಡದೇಶದಲ್ಲಿ ಕಪ್ಪ ತೆಗೆದುಕೊಂಡು ಚೋಳಪಾಂಡ್ಯರಾಜರೊಡನೆ ಸ್ನೇಹ ಬೆಳೆಯಿಸಿ ರಾಜ್ಯಪಾಲನೆ ಮಾಡಿದ.

ಅವನ ಮಗ ಸತ್ಯವಾಕ್ಯರಾಯ ತಳವನಪುರದಲ್ಲಿ ಪಟ್ಟಾಭಿಷೇಕ ಮಾಡಿಕೊಂಡು ರಾಜ್ಯಗಳಲ್ಲಿ ದುಷ್ಟ(ನಿಗ್ರಹ ಶಿಷ್ಟಪರಿಪಾಲನೆ) ಮಾಡುತ್ತ ದೇಶ (ಪಾಲನೆ)ಯಲ್ಲಿ ಸತ್ಯವನ್ನು ತಪ್ಪದೆ ನೀತಿಯಿಂದ ನಡೆದುಕೊಂಡು ಸತ್ಯವಾಕ್ಯರಾಯನೆಂದು ಲೋಕದಲ್ಲಿ ಕೀರ್ತಿಯನ್ನು ಸಂಪಾದಿಸಿದ.

ಅವನ ತಮ್ಮ ಗುಣದುತ್ತಮರಾಯ ತಳವನಪುರದಲ್ಲಿ ಪಟ್ಟಕಟ್ಟಿಕೊಂಡು ಕೊಂಗು ಕರ್ನಾಟಕ ದೇಶಗಳನ್ನು ಅತ್ಯಂತ ನೀತಿಯೊಡನೆ (ಪರಿಪಾಲಿಸುತ್ತ) ತನ್ನ ವಂಶದಲ್ಲಿ ಮಾಡಿದ ಧರ್ಮ(ಕಾರ್ಯ)ಗಳನ್ನು ರಕ್ಷಿಸುತ್ತ, ಇತರ ರಾಜರೊಂದಿಗೆ ಸ್ನೇಹ ಬೆಳೆಯಿಸಿಕೊಂಡು ರಾಜ್ಯವನ್ನಾಳಿದ.

ಅವನ ತಮ್ಮ ರಾಜಮಲ್ಲದೇವರಾಯ ತಳವನಪುರದಲ್ಲಿ ಪಟ್ಟಾಭಿಷೇಕ ಮಾಡಿಕೊಂಡು ಸಕಲ ರಾಜರ ಬಿರುದನ್ನು ಸಂಪಾದಿಸಿ, ಯುದ್ಧಕ್ಕೆ ಪಾಂಡ್ಯರಾಜ ಬಂದಾಗ ಅವನಿಗೆ ಅಪಜಯವನ್ನುಂಟಾಗಿಸಿ, ಸಕಲರಾಜರಲ್ಲೂ ತನಗೆ ಸಮನಾದ ಬಲಶಾಲಿಯಿಲ್ಲವೆಂಬ ಕೀರ್ತಿಯನ್ನು ಸಂಪಾದಿಸಿ ತನ್ನ ಅಣ್ಣನನ್ನು ವಿಜಯಸ್ಕಂದಪುರದಲ್ಲಿರಿಸಿ ರಾಜ್ಯಪಾಲನೆ ಮಾಡಿದ. ಆಗ ಅವನ ಅಣ್ಣ ಗುಣದತ್ತಮಾರಾಯ ಮಾಡಿದ ಧರ್ಮದ ವಿವರ ಶಾಲಿವಾಹನ ಶಕವರ್ಷ 800.

ವಿಕಾರಿವರ್ಷ = 303 ಆಣಿ ಮಾಸ ಗುರುವಾರ ಪೌರ್ಣಮಿ ಪುನರ್ವಸು ನಕ್ಷತ್ರದಲ್ಲಿ 7 ವಿಷ್ಣು ಗುಹಾಲಯವೆಂಬ ಸೈನ್ಯದೇವರ್, ನವಗ್ರಹ, ಬಲಿಪೂಜೆ ಮೊದಲಾದ ಧರ್ಮಕ್ಕೆ ಕೊಂಗಣ ಕುಳೀಶ್ವರ ಭಗವಂತರ ಶಿಷ್ಯ, ಅವನ ಶಿಷ್ಯ ದೇಶಸೋಮ ಭಗವಂತ, ಅವನ ಶಿಷ್ಯ ಅಘೋರ ಸೋಮಭಗವಂತ—ಅವನ ಶಿಷ್ಯ ಶಶಿಭೂಷಣ ಮಹಾಮುನಿ—ಇವನಿಗೆ ತಲೆಕಾಡುನಾಡು, ವದಕರೆನಾಡು, ವೀರ ಅಳ್ಳಿ (ವೀರಹಳ್ಳಿ)ಯೆಂಬ ಗ್ರಾಮವನ್ನು ಸರ್ವಮಾನ್ಯವಾಗಿ ಧರ್ಮಮಾಡಿದ.

ಇದಾದ ಬಳಿಕ ಉಭಯ ಕಾವೇರಿಯ ಮಧ್ಯದಲ್ಲಿ ಪಶ್ಚಿಮ ರಂಗನಾಯಕರ ಸೇವೆ—ಬಹುಕಾಲದ ಹಿಂದೆ ಗೌತಮರಿಂದ ಪೂಜೆಗೊಂಡಿದ್ದ ಸ್ಥಲ—(ನಿಂತುಹೋಗಿ) ಈ ಸ್ಥಲವು ವನವಾಗಿ ಬಿಟ್ಟು (ಹೋಗಿದ್ದದ್ದರಿಂದ) ತಿರುಮಲಯ್ಯನೆಂಬುವನು ರಂಗನಾಯಕರ ದೇವಾಲಯವನ್ನು ಕಟ್ಟಿಸಿ, ಕೊಂಚ ಪ್ರಾಕಾರ

ವನ್ನೂ ಕಟ್ಟಿ, ಶ್ರೀರಂಗಪುರ[8]ವೆಂಬ ಹೆಸರನ್ನಿಟ್ಟು, ಆ ದೇವಾಲಯದ ಪಶ್ಚಿಮಕ್ಕೆ ತನ್ನ ಹೆಸರನ್ನಿಟ್ಟು, ತಿರುಮಲೆ ದೇವರೆಂಬ ಒಂದು ವಿಷ್ಣು ಪ್ರತಿಷ್ಠೆ ಮಾಡಿ ಈ ಎರಡು ದೇವಾಲಯಗಳಿಗೂ ಪೂಜೆ ಮೊದಲಾದ ಧರ್ಮ(ಕಾರ್ಯ)ಗಳನ್ನು ನಡೆಯಿಸಿಕೊಂಡು ಬಂದ. ಶಕವರ್ಷ 816 ಆನಂದವರ್ಷ, ವೈಶಾಖ ಮಾಸ ಶುಕ್ಲಪಕ್ಷ ಸಪ್ತಮಿ, ಶುಕ್ರವಾರ.

ಅನುಬಂಧ

‘ಕೊಂಗುದೇಶದ ರಾಜರು’ ಕೃತಿಯಲ್ಲಿ ನಮೂದಿಸಲಾಗಿರುವ ಗಂಗರ ವಂಶಾವಳಿ

1 ಕೊಂಗುಣಿವರ್ಮ
↓
2 ಮಾಧವ
↓
3 ಹರಿವರ್ಮ
↓
4 ವಿಷ್ಣುಗೋಪ
↓

5 ಮಾಧವ (ದತ್ತುಪುತ್ರ) | 6 ಕೃಷ್ಣವರ್ಮ | ಮಗಳು (ಹೆಸರು ತಿಳಿಯದು)

6 ಕೃಷ್ಣವರ್ಮ
↓
7 ಡಿಂಡೀಕರರಾಯ (ಉರುಫ್ ಹರಿಶ್ಚಂದ್ರ)
↓
9 ದುರ್ವಿನೀತ
↓
10 ಮುಷ್ಕರ
↓
11 ತ್ರಿವಿಕ್ರಮ
↓
12 ಭೂವಿಕ್ರಮ
↓
ವಲ್ಲಭಾಗ್ಯ ↓ | 13 ಕೊಂಗಣಿ III

ಮಗಳು (ಹೆಸರು ತಿಳಿಯದು)
↓
8 ಕೊಂಗಣಿ II

---

8 ಇದು ಮೈಸೂರಿನ ಬಳಿಯ ಶ್ರೀರಂಗಪಟ್ಟಣವಿರಬಹುದೆಂದು ಟಾಯ್‌ಲರ್ ಅಭಿಪ್ರಾಯಪಡುತ್ತಾರೆ.

↓

14 ಗೋವಿಂದ　　15 ಶಿವಕಾಮ

↓

ಮಗ

(ಹೆಸರು ತಿಳಿಯದು)

↓

16 ಪೃಥಿವೀ ಕೊಂಗಣಿ　　ವಿಜಯಾದಿತ್ಯ

↓

17 ರಾಜಮಲ್ಲ

↓

18 ಕಂದ(ಗಂಡ)ದೇವ

↓

19 ಸತ್ಯವಾಕ್ಯ　　20 ಗುಣದುತ್ತಮ　　21 ರಾಜಮಲ್ಲ II

ಈ ದಿವಸಗಳಲ್ಲಿ ಭೌತವಿಜ್ಞಾನ ನಮ್ಮ ಮುಂದೆ ದೃಶ್ಯ ಪರಂಪರೆಯೊಂದರ ಸುರುಳಿ ಬಿಚ್ಚಿದೆ. ಆರಂಭದಲ್ಲಿ ಇದು ನಮ್ಮ ಮುತ್ತಾತಂದಿರಿಗೆ ಪಾಷಂಡತನವೆಂದೇ ತೋರುತ್ತಿತ್ತು. ಅವರ ದೃಷ್ಟಿಯಲ್ಲಿ ಅದು ನಂಬಿಕೆಯ ತಳಹದಿಯನ್ನೇ ಅಲುಗಿಸಿತು. ಆದರೆ ನಮಗಾದರೋ, ಅದು ಹೆಚ್ಚು ವಿಶಾಲವೂ ಹೆಚ್ಚು ಸಮಂಜಸವೂ ಆದ ಪೀಠದ ಮೇಲೆ ಜ್ಞಾನವನ್ನು ಸ್ಥಾಪಿಸಿದೆ. ವಿಜ್ಞಾನ ಕೋಟ್ಯಂತರ ವರ್ಷಗಳ ಲೆಕ್ಕದಲ್ಲಿ ಕಾಲವನ್ನು ಪರಿಗಣಿಸುತ್ತದೆ; ಆಕಾಶವನ್ನು ಅನಂತಕ್ಕೆ ವಿಸ್ತರಿಸುತ್ತದೆ. ವ್ಯಾಪಕತರವಾದ ದೃಷ್ಟಿ, ನಮ್ಮ ಪ್ರಜ್ಞೆಯ ಒಂದು ಭಾಗ. ಆಗಿದೆ. ಅದನ್ನು ನಿರೀಕ್ಷಿಸಿದಷ್ಟು ನಮ್ಮನ್ನು ನಾವು ಚೆನ್ನಾಗಿ ಅರಿತುಕೊಳ್ಳಬಲ್ಲೆವು. ಪುರಾತತ್ವ ಇದನ್ನೇ ಕಿರಿದಾದ ಕ್ಷೇತ್ರವೊಂದರಲ್ಲಿ ಮಾಡುತ್ತಿದೆ. ಕೆಲವು ಸಾವಿರ ವರ್ಷಗಳಿಗೆ ಪರಿಮಿತವಾದ ಅವಧಿಯೊಂದನ್ನು ಕುರಿತು ಅದು ವಿಚಾರಿಸುತ್ತದೆ. ಅದರ ವಿಷಯ ವಿಶ್ವವಲ್ಲ, ಮಾನವಕುಲವೂ ಅಲ್ಲ; ಅದರ ವಿಷಯ ಆಧುನಿಕ ಮಾನವ. ನಾವು ಅಗೆಯುತ್ತೇವೆ: ಈ ಮಡಕೆ ಈ ತಟ್ಟೆ ಈ ಮಣಿ ಈ ಆಯುಧಗಳ ಬಗ್ಗೆ ಹೇಳುತ್ತೇವೆ. ಇವು ಕ್ರಿ. ಪೂ. 3000 ಅಥವಾ 4000ದಷ್ಟು ಹಳೆಯವೆನ್ನುತ್ತೇವೆ. ಅವಕ್ಕೆಷ್ಟು ವಯಸ್ಸಾಗಿದೆಯೆಂದು ನೋಡುಗ ಉದ್ಗರಿಸುತ್ತಾನೆ. ಹಳೆಯವೆಂಬ ಕಾರಣದಿಂದಲೇ ಅವನ್ನು ಆತ ಮೆಚ್ಚುತ್ತಾನೆ. ಅವುಗಳ ಬಗ್ಗೆ ನಿಜವಾದ ಕುತೂಹಲ ಇರತಕ್ಕದ್ದು ಅವು ಹೊಸವೆಂಬ ಅಂಶದಲ್ಲಿ. ಕೇವಲ ವಯಸ್ಸೇ ಅಳತೆಗೋಲಾಗುವುದಾದರೆ, ಡಿನೊ-ಸಾರಿನ ಫಾಸಿಲು ಮೊಟ್ಟೆಯೊಂದಿಗೆ ಹೋಲಿಸಿದಾಗ ನಾವು ನೆಲದಿಂದ ಹೊರತೆಗೆಯುವ ಎಲ್ಲವೂ ಅಮುಖ್ಯ. ಅಂದ ಹಾಗೆ, ಮಾನವಕುಲದ ಜೀವನವನ್ನು ನಾವು ಭೂವೈಜ್ಞಾನಿಕ ಯುಗಗಳಲ್ಲಿ ಗಣನೆ ಮಾಡಬೇಕಾಗಿರುವಾಗ ಅದರಲ್ಲಿ ಆರು ಸಾವಿರ ವರ್ಷ ಯಾವ ಲೆಕ್ಕ? ಬಹುತೇಕ ನಮ್ಮಂತೆಯೇ ಇದ್ದ ಮಾನವರ ಇತಿಹಾಸದ ಮೇಲೆ, ಇಂದಿನ ನಾಗರಿಕತೆಯೊಂದಿಗೆ ಹೆಣೆದುಕೊಂಡ ಒಂದು ನಾಗರಿಕತೆಯ ಮೇಲೆ ಅದು ಬೆಳಕು ಚೆಲ್ಲುವುದೆಂಬುದೇ ಪುರಾತತ್ವ ಸಾಮಗ್ರಿಯ ಪ್ರಾಮುಖ್ಯ1.

—ಲಿಯೊನಾರ್ಡ್ ವುಲ್ಲಿ

---

1 Wolley, Leonard, Sir : Digging up the Past : *Archaeology* (Ed. Samuel Rapport and Helen wright); Washington Square Press, Inc., New York (1964); p. 29

ಪಿ. ಕೆ. ಪಾಟೀಲ್

ಗ್ರಂಥಪಾಲ ಮತ್ತು ಗ್ರಂಥಾಲಯದ ವಿವಿಧ ನಿರ್ಣಯಕಾರಿ ನಿಕಾಯಗಳು

ಬೋಧನೆಗೆ ಅನುಗುಣವಾಗಿ ಹಾಗೂ ಪೂರಕವಾಗಿ ಗ್ರಂಥಾಲಯ ಸೇವೆ ನಡೆಯುವಂತೆ ಶಿಕ್ಷಣ ಸಂಸ್ಥೆಗಳ ಗ್ರಂಥಾಲಯಗಳನ್ನು ರೂಪಿಸಿ ಸ್ಥಾಪಿಸಲಾಗಿದೆ. ವಿಶ್ವವಿದ್ಯಾನಿಲಯ ಹಾಗೂ ಕಾಲೇಜು ಆಡಳಿತಕ್ಕೆ ಸೇರಿದವರೆಲ್ಲ ಈ ವಿಷಯವನ್ನು ಗ್ರಹಿಸಿ ಕಾರ್ಯತಃ ಅಂಗೀಕರಿಸಿದರೆ ಶಿಕ್ಷಣ ಕ್ಷೇತ್ರದಲ್ಲಿ ವಿಶ್ವವಿದ್ಯಾನಿಲಯ ಮತ್ತು ಕಾಲೇಜು ಗ್ರಂಥಾಲಯಗಳ ಅಂತಸ್ತನ್ನು ಸ್ಪಷ್ಟವಾಗಿ ನಿರ್ಧರಿಸಬಹುದು. ವಾಸ್ತವಿಕವಾಗಿ ಜ್ಞಾನ ಮತ್ತು ಅಭಿಪ್ರಾಯಗಳ ರಕ್ಷಣೆ, ಬೋಧನೆಯ ಮೂಲಕ ಜ್ಞಾನ ಪಾರೇಷಣ, ಸಂಶೋಧನೆಯ ಮೂಲಕ ಜ್ಞಾನವಿಸ್ತರಣ. ಗ್ರಂಥ ಪ್ರಕಾಶನ, ವಿಸ್ತರಣಸೇವೆ ಮತ್ತು ವಿವರಣೆ–ಇವು ಪ್ರೌಢ ಶಿಕ್ಷಣ ಸಂಸ್ಥೆಗಳ ಸ್ಥಾಪನೆಯ ಗುರಿ. ವಿಶ್ವವಿದ್ಯಾನಿಲಯದ ಇಲ್ಲವೆ ಕಾಲೇಜಿನ ಶೈಕ್ಷಣಿಕ ಮಧ್ಯವರ್ತಿ ಸಂಸ್ಥೆಯಾದ ಗ್ರಂಥಾಲಯ ಈ ಸಾಮಾನ್ಯ ಗುರಿಗಳನ್ನು ಸಾಧಿಸುವ ಬಗ್ಗೆ ಹೊಂದಿರುವ ಸ್ಥಾನವನ್ನು ಈ ಉಲ್ಲೇಖ ಸೂಚಿಸುತ್ತದೆ:

"ವಿಶ್ವವಿದ್ಯಾನಿಲಯ ತನ್ನ ಮುಖ್ಯ ಅಂಗವಾದ ಗ್ರಂಥಾಲಯವನ್ನು ಹೇಗೆ ಪರಿಗಣಿಸುತ್ತದೆ ಎಂಬುದರಿಂದ ಅದರ ಗುಣಲಕ್ಷಣ ಮತ್ತು ದಕ್ಷತೆಯನ್ನು ತಿಳಿಯಬಹುದು. ಒಂದು ವಿಶ್ವವಿದ್ಯಾನಿಲಯವನ್ನು ಸಜ್ಜುಗೊಳಿಸುವ ಸಂದರ್ಭದಲ್ಲಿ ಗ್ರಂಥಾಲಯವನ್ನು ನಡೆಸಲು ಪೂರ್ಣ ನೆರವು ನೀಡುವುದು ಆದ್ಯಕೆಲಸ ಹಾಗೂ ಅತ್ಯಗತ್ಯ ಎಂದು ನಾನು ಭಾವಿಸುತ್ತೇನೆ. ಯುಕ್ತರೀತಿ ವ್ಯವಸ್ಥೆಗೊಂಡ ಗ್ರಂಥಾಲಯ ಬೋಧನೆ ಮತ್ತು ಅಧ್ಯಯನಗಳಿಗೆ ನೆರವಾಗುವುದಲ್ಲದೆ ಸಂಶೋಧನೆಗೆ ಸಹ ಅಗತ್ಯ. ಸಂಶೋಧನೆಗಳಿಲ್ಲದೆ ಮಾನವನ ಜ್ಞಾನವನ್ನು ಹೆಚ್ಚಿಸಲು ಸಾಧ್ಯವಿಲ್ಲ."[1]

ಗ್ರಂಥಾಲಯಗಳ ಪ್ರಾಮುಖ್ಯವನ್ನು ಕೊಠಾರಿ ಆಯೋಗ ಇದೇ ರೀತಿ ಬಹು ಸ್ಪಷ್ಟವಾಗಿ ಒತ್ತಿ ಹೇಳಿದೆ.[2,3]

ಇಷ್ಟೇ ಅಲ್ಲದೆ, 'ಓದುವ ಅಭ್ಯಾಸ ತೀರ ಕಡಿಮೆ; ಅದನ್ನು ಸಾಧ್ಯವಾದ ಎಲ್ಲ ವಿಧಾನಗಳಲ್ಲಿ ಹೆಚ್ಚಿಸಬೇಕು"; ಗ್ರಂಥಾಲಯವನ್ನು ಉಪಯುಕ್ತವಾಗಿ. ಸುಲಭವಾಗಿ ಹಾಗೂ ಉತ್ತೇಜಕವಾಗಿ ಬಳಸಿಕೊಳ್ಳಲು ಅನುಕೂಲವಾದ ಪರಿಸರವನ್ನು ಏರ್ಪಡಿಸುವುದು ಅಗತ್ಯ; "ಮನೋರಂಜನೆ, ಆತ್ಮಶೋಧನೆ, ವ್ಯಕ್ತಿತ್ವ ಹಾಗೂ ಬುದ್ಧಿಬೆಳವಣಿಗೆಗಾಗಿ ವಾಚನವನ್ನು ಉತ್ತೇಜಿಸುವ ಪರಿಸ್ಥಿತಿಗಳಲ್ಲಿ" ವಿದ್ಯಾರ್ಥಿಗಳನ್ನು

---

1 U.K.: U.G.C. *Report*, 1221

2 India: Ministry of Education: *Report of the Education Commission* 1964–66, New Delhi, p. 436

3 ಅದೇ, p. 288

ಮತ್ತು ವಿದ್ವಾಂಸರನ್ನು ಆಕರ್ಷಿಸಲು ಉತ್ತಮ ಬೌದ್ಧಿಕ ಪರಿಸರವನ್ನು ಒದಗಿಸಲು ಪ್ರಯತ್ನಗಳಾಗಬೇಕು ಎಂದು ಕೊಠಾರಿ ಆಯೋಗ ವರದಿಮಾಡಿದೆ. (ವರದಿ ಪುಟ: 288)

ಪ್ರಥಮತಃ ಗ್ರಂಥಪಾಲ ಗ್ರಂಥಾಲಯದ ಪ್ರಮುಖ ಆಡಳಿತಾಧಿಕಾರಿಯಾಗಿದ್ದು ಇಡೀ ವಿಶ್ವವಿದ್ಯಾನಿಲಯಕ್ಕೆ ಅಥವಾ ಕಾಲೇಜಿಗೆ ಸೇವೆ ಸಲ್ಲಿಸುತ್ತಾನೆ. ಆತ ಈ ಸಂಸ್ಥೆಗಳ ಎಲ್ಲ ಸದಸ್ಯರೊಂದಿಗೆ ಎಲ್ಲ ಕಾಲಗಳಲ್ಲೂ ನಿಕಟ ಸಂಪರ್ಕ ಹೊಂದಿ ಕಾರ್ಯೋನ್ಮುಖನಾಗಬೇಕು. ಆಡಳಿತ, ವ್ಯವಹಾರ, ಶಿಕ್ಷಣ, ಸೇವೆ ಮತ್ತು ಸಂಶೋಧನೆ–ಈ ವಿಷಯಗಳ ಬಗ್ಗೆ ಗ್ರಂಥಪಾಲ ಹಾಗೂ ಅವನ ಸಿಬ್ಬಂದಿ ಸಂಬಂಧ ಹೊಂದಬಹುದಾದ 33 ವಿವಿಧ ವಿಶ್ವವಿದ್ಯಾನಿಲಯಗಳ, ವಿಶ್ವವಿದ್ಯಾಲಯೇತರ ಸಂಸ್ಥೆಗಳ, ಮಧ್ಯವರ್ತಿ ಸಂಸ್ಥೆಗಳ ಮತ್ತು ವ್ಯಕ್ತಿಗಳ ಪಟ್ಟಿಯನ್ನು ವಿಲ್ಸನ್ ಹಾಗೂ ಟಾಬರ್ ಕೊಡುತ್ತಾರೆ. ಮಾದರಿ ಕಾಲೇಜಿನ ಆಡಳಿತ ವ್ಯವಸ್ಥೆ ಅಷ್ಟು ಸಂಕೀರ್ಣವಾಗಿಲ್ಲವಾಗಿ ಅವರ ಪಟ್ಟಿಯ ವಿವರಗಳು ವಿಶ್ವವಿದ್ಯಾಲಯದ ಪಟ್ಟಿಯ ವಿವರಗಳಲ್ಲಿ ಅರ್ಧಮಾತ್ರ ಇವೆ.

1917–19ರ ಕಲ್ಕತ್ತ ವಿಶ್ವವಿದ್ಯಾಲಯದ ಶಿಫಾರಸುಗಳು ಈ ರೀತಿ ಇವೆ: "ವಿಶ್ವವಿದ್ಯಾಲಯದ ಗ್ರಂಥಪಾಲ ಬಹು ಮುಖ್ಯ ಆಡಳಿತಾಧಿಕಾರಿಯಾಗಿರಬೇಕು: ಅವನ ಅಂತಸ್ತು ವಿಶ್ವವಿದ್ಯಾಲಯದ ಪ್ರಾಧ್ಯಾಪಕರ ಅಂತಸ್ತಿಗೆ ಸಮನಾಗಿದ್ದು ವಿಶ್ವವಿದ್ಯಾಲಯದ ಉಚ್ಚಶಿಕ್ಷಣ ನಿಕಾಯದಲ್ಲಿ ಅವನು ಸ್ಥಾನಪಡೆದಿರಬೇಕು. ಆತ ತನ್ನ ಗ್ರಂಥಾಲಯವನ್ನು ನಿಯಂತ್ರಿಸುವುದಲ್ಲದೆ, ವೆಚ್ಚಗಳು ಪರಸ್ಪರ ಪ್ರಸರಿಸಿಕೊಳ್ಳುವುದರಿಂದ ಆಗುವ ಅನಗತ್ಯ ನಷ್ಟ ಹಾಗೂ ದ್ವಿಪ್ರಯೋಜಕತೆಯನ್ನು ತಡೆಯಲು. ಅದರಲ್ಲೂ ವಿಶಿಷ್ಟವಾಗಿ ಬೆಲೆಬಾಳುವ ನಿಯತಕಾಲಿಕೆಗಳ ಬಗ್ಗೆ ಅಂತಹ ನಷ್ಟವನ್ನು ತಡೆಯಲು ಕಾಲೇಜು ಗ್ರಂಥಪಾಲರುಗಳಿಗೆ ಸಲಹೆ ನೀಡುವುದು ಮೊದಲಾದ ಉಪಯುಕ್ತ ಕೆಲಸಗಳನ್ನು ಸಹ ನಿರ್ವಹಿಸಬಹುದು.4"

ವಿಶ್ವವಿದ್ಯಾಲಯ ಅಥವಾ ಕಾಲೇಜು ಗ್ರಂಥಾಲಯದ ಮುಖ್ಯ ಆಡಳಿತಾಧಿಕಾರಿಯಾದ ಗ್ರಂಥಪಾಲನಿಗೆ ಸಾಮಾನ್ಯವಾಗಿ ಮೂರು ಪ್ರಮುಖ ಕರ್ತವ್ಯಗಳನ್ನು ವಹಿಸಲಾಗುತ್ತದೆ. ಅವು ಇಂತಿವೆ: 1 ಆಡಳಿತ ಕರ್ತವ್ಯಗಳು. 2 ಶೈಕ್ಷಣಿಕ ಕರ್ತವ್ಯಗಳು. 3 ವಿದ್ವಾಂಸರಿಗೆ ಮಾರ್ಗದರ್ಶನ.

ಈ ಕರ್ತವ್ಯಗಳ ಆಧಾರದ ಮೇಲೆ ವಿವಿಧ ನಿರ್ಣಯಕಾರಿ ಸಮಿತಿಗಳೊಡನೆ ಗ್ರಂಥಪಾಲನಿಗಿರುವ ಸಂಬಂಧವನ್ನು ನಿರ್ಧರಿಸಬಹುದು.

ಕುಲಪತಿಗಳು ಹಾಗೂ ಪ್ರಿನ್ಸಿಪಾಲರುಗಳು ಗರಿಷ್ಠ ಸ್ಥಾನಗಳಲ್ಲಿರುವ ಜವಾಬ್ದಾರಿ ಹೊತ್ತ ಅಧಿಕಾರಿಗಳಾಗಿದ್ದಾರೆ. ಈ ಅಧಿಕಾರಿಗಳಿಗೆ ಅವರ ನಿಯಂತ್ರಣದಲ್ಲಿರುವ ಸಂಸ್ಥೆಗಳ ಸಾಮಾನ್ಯಾಡಳಿತಕ್ಕೆ ಸಂಬಂಧಿಸಿದ ದಿನವಹಿ ಕೆಲಸಗಳನ್ನು ವಹಿಸಿರುವುದಲ್ಲದೆ ಶೈಕ್ಷಣಿಕ ಕಾರ್ಯಕ್ರಮಗಳ ಮೇಲ್ವಿಚಾರಣೆಯನ್ನು ಸಹ ವಹಿಸಲಾಗಿದೆ. ಈ ಅಧಿಕಾರಿಗಳ ಆರಂಭಶಕ್ತಿ ಹಾಗೂ ಕ್ರಿಯಾಶಕ್ತಿಗಳು ಕಾರ್ಯನೀತಿಯ ಬಗ್ಗೆ ಕೈಗೊಳ್ಳುವ ಅನೇಕ ನಿರ್ಣಯಗಳಿಗೆ ಆಧಾರವಾಗಿವೆ.

ಕಾರ್ಯನೀತಿಯ ನಿರ್ಣಯಗಳು ಆದಷ್ಟು ಬೇಗ ಕಾರ್ಯಗತವಾಗಬೇಕಾದರೆ ಆಡಳಿತ ಪ್ರಮುಖರ ಹಾಗೂ ಗ್ರಂಥಾಲಯದಲ್ಲಿ ಆಡಳಿತ ಜವಾಬ್ದಾರಿ ಹೊತ್ತ ಗ್ರಂಥಪಾಲರುಗಳ ನಡುವೆ ಸಾಮರಸ್ಯ ಮತ್ತು ಉತ್ತಮ ಸಂಪರ್ಕವಿರಬೇಕಾದ್ದು ಅಗತ್ಯವೆಂದು ಹೇಳಬೇಕಾಗಿಲ್ಲ. ಈ ಪ್ರಮುಖರು ಕಾಲೇಜುಗಳಲ್ಲಾದರೆ ಪ್ರಿನ್ಸಿಪಾಲರಾಗಿದ್ದಾರೆ: ವಿಶ್ವವಿದ್ಯಾನಿಲಯವಾದರೆ ಕುಲಪತಿಗಳಾಗಿದ್ದಾರೆ.

ಆಡಳಿತಾಧಿಕಾರಿಯಾಗಿ ಗ್ರಂಥಪಾಲ ಗ್ರಂಥಾಲಯ ಸಿಬ್ಬಂದಿಯನ್ನು ನೇಮಿಸಲು ಹೊಣೆಹೊತ್ತ ಇಲಾಖೆಗಳು, ಗ್ರಂಥಗಳೇ ಮೊದಲಾದುವನ್ನು ಕೊಳ್ಳುವ ಇಲಾಖೆ ಮತ್ತು ಕಟ್ಟಡ ನಿರ್ಮಿಸುವ ಲೋಕೋಪಯೋಗಿ ಇಲಾಖೆ–ಇವುಗಳೊಂದಿಗೆ ಸಂಪರ್ಕವಿಟ್ಟು ಕೆಲಸಮಾಡಬೇಕು: ಗ್ರಂಥಾಲಯವನ್ನು ಸುಸೂತ್ರವಾಗಿ ನಡೆಸಲು ಜಾಗರೂಕತೆ ವಹಿಸಿ ಸೂಕ್ತ ಕಾರ್ಯವಿಧಾನಗಳನ್ನು ರೂಪಿಸಬೇಕು; ಗ್ರಂಥಾಲಯವನ್ನು ಉಪಯೋಗಿಸಿಕೊಳ್ಳುವವರ ಹಿತದೃಷ್ಟಿಯಿಂದ ಗ್ರಂಥಾಲಯದ ಆಡಳಿತವನ್ನು ಮಿತವ್ಯಯದೊಂದಿಗೆ ದಕ್ಷತೆಯಿಂದ ನಿರ್ವಹಿಸಬೇಕು.

ಶಿಕ್ಷಕನ ಪಾತ್ರದಲ್ಲಿ ಗ್ರಂಥಪಾಲ ಶೈಕ್ಷಣಿಕ ಸಿಬ್ಬಂದಿಯ ನೆರವಿನೊಡನೆ ಕೆಲಸಮಾಡಬೇಕು;

---

4 Calcutta University Commission, 1917–19, *Report*, p. 284

ಅದರಲ್ಲೂ ವಿಶೇಷವಾಗಿ ಶಿಕ್ಷಣಸಂಸ್ಥೆಗಳ ಉದ್ದೇಶದೃಷ್ಟಿಯಿಂದ ಗ್ರಂಥಾಲಯಕ್ಕೆ ಬೇಕಾದ ಗ್ರಂಥಗಳೇ ಮೊದಲಾದ ಸಂಪನ್ಮೂಲಗಳ ಆಯ್ಕೆ ಮತ್ತು ಗ್ರಂಥಾಲಯದ ವ್ಯವಸ್ಥೆಯ ಬಗ್ಗೆ ಅವರೊಡನೆ ಸಮಾಲೋಚಿಸಿ ಕೆಲಸಮಾಡಬೇಕು; ಪಠ್ಯಕ್ರಮ ರಚನೆ, ಶಿಕ್ಷಣ ವಿಧಾನ ಹಾಗೂ ಬಹುಮುಖ್ಯವಾಗಿ ವಿದ್ಯಾರ್ಥಿಗಳು ಗ್ರಂಥಾಲಯವನ್ನು ಬಳಸಿಕೊಳ್ಳುವ ವಿಷಯ—ಇವುಗಳನ್ನು ಪೂರ್ಣವಾಗಿ ತಿಳಿದಿರಬೇಕು.

ಗ್ರಂಥಪಾಲ ಹಾಗೂ ಆತನ ಔದ್ಯೋಗಿಕ ಸಿಬ್ಬಂದಿ ಮಾರ್ಗದರ್ಶಕರಾಗಿ ವಿದ್ವಾಂಸರಿಗೆ, ಸಂಶೋಧಕರಿಗೆ ಹಾಗೂ ಶಿಕ್ಷಣ ವಿಭಾಗಗಳಿಗೆ ವೈಯಕ್ತಿಕ ಸೇವೆಯನ್ನು ಸಲ್ಲಿಸುತ್ತಾರೆ. ಹೀಗೆ ಸಂಶೋಧನ ಕಾರ್ಯದಲ್ಲಿ ಗ್ರಂಥಪಾಲ ಅವರಿಗೆ ಸಹಾಯಕನಾಗಿರುವುದಲ್ಲದೆ ಗ್ರಂಥಗಳ ಪಟ್ಟಿ ಹಾಗೂ ವಿವಿಧ ವಿಷಯಗಳನ್ನು ಸಹ ಒದಗಿಸುತ್ತಾನೆ. ಸಾರ್ವತ್ರಿಕ ಶಿಕ್ಷಣದಲ್ಲಿ ವಾಚನ ಮೌಲ್ಯವನ್ನು ಬಲ್ಲ ಗ್ರಂಥಪಾಲ ಶೈಕ್ಷಣಿಕ ಉದ್ದೇಶಗಳಿಗೇ ಅಲ್ಲದೆ ಸಾರ್ವಜನಿಕ ಉಪಯೋಗಕ್ಕಾಗಿಯೂ ಗ್ರಂಥಾಲಯ ಸೇವೆಯನ್ನು ವಿಸ್ತರಿಸಲು ಪ್ರಯತ್ನಿಸುತ್ತಾನೆ.

ವಿಶ್ವವಿದ್ಯಾನಿಲಯ ಹಾಗೂ ಕಾಲೇಜುಗಳ ಕ್ಷೇತ್ರದಲ್ಲಿ ಗ್ರಂಥಪಾಲನ ಸ್ಥಾನಮಾನಗಳ ಅಂಗೀಕಾರ ವಿವಿಧ ನಿರ್ಣಯಕಾರಿ ಸಮಿತಿಗಳಲ್ಲಿ ಆತ ಸ್ಥಾಪಿಸಿಕೊಳ್ಳುವ ಸಂಬಂಧದ ಮೇಲೆ ನೇರ ಪ್ರಭಾವ ಬೀರುತ್ತದೆ. ಗ್ರಂಥಪಾಲರು ಆಡಳಿತವರ್ಗಕ್ಕೆ ಸೇರಿದವರೆ ಅಥವಾ ಶಿಕ್ಷಣ ವರ್ಗಕ್ಕೆ ಸೇರಿದವರೆ ಎಂಬುದು ಬಹುಮುಖ್ಯವಾಗಿ ಪರಿಗಣಿಸಬೇಕಾದ ವಿಷಯ. ಗ್ರಂಥಪಾಲರು ಶಿಕ್ಷಣ ವ್ಯವಸ್ಥೆಯ ಸಂಘಟಿತ ಅಂಗ ಹಾಗೂ ಶಿಕ್ಷಣಕ್ರಮದಲ್ಲಿ ಅವರದು ಪ್ರಮುಖ ಪಾತ್ರ ಎಂಬ ವಿಷಯ ಪ್ರಗತಿಶೀಲ ಶಿಕ್ಷಣ ಸಂಸ್ಥೆಗಳಲ್ಲಿ ನಿಸ್ಸಂದೇಹವಾಗಿ ಅಂಗೀಕೃತವಾಗಿದೆ. ಹೀಗೆ ಅವರ ಅಂತಸ್ತು ಅಂಗೀಕಾರವಾಗುವುದರಿಂದ ಗ್ರಂಥಾಲಯ ಪರಿಪೂರ್ಣ ಸ್ಥಾನವನ್ನು ಪಡೆದುಕೊಳ್ಳುತ್ತದೆ.

ಭಾರತದಲ್ಲಿ. ವಿಶ್ವವಿದ್ಯಾಲಯಗಳು ಹಾಗೂ ಕಾಲೇಜುಗಳು ರಚಿಸಿರುವ ನಿಬಂಧನೆಗಳು ಹಾಗೂ ನಿಯಮಗಳಲ್ಲಿ ಗ್ರಂಥಪಾಲರು ಶಿಕ್ಷಣ ವರ್ಗಕ್ಕೆ ಸೇರಿದವರೆಂದು ಪರಿಗಣಿತರಾಗಿಲ್ಲ. ಇದರ ಪರಿಣಾಮವಾಗಿ ಗ್ರಂಥಪಾಲನ ನೇಮಕಕ್ಕೆ ಅಗತ್ಯವಾದ ಉಚ್ಚ ಅರ್ಹತೆಗಳು ಹಾಗೂ ಇತರ ಶಿಕ್ಷಣ ವರ್ಗದ ಎಲ್ಲ ಹಕ್ಕು ಬಾಧ್ಯತೆಗಳು ಗ್ರಂಥಪಾಲನ ವಿಷಯದಲ್ಲಿ ನಿಗದಿಯಾಗದಿರುವುದು ಎದ್ದು ಕಾಣುತ್ತದೆ. ತರಗತಿಯ ಬೋಧನೆಗೆ ಮಾತ್ರ ಸೀಮಿತವಾಗದ ಶಿಕ್ಷಣ ಸಿಬ್ಬಂದಿಯ ಬಗ್ಗೆ ಧಾರಾಳ ಅರ್ಥ ನೀಡಬೇಕಾಗಿದೆ. ಶೈಕ್ಷಣಿಕ ಸಂಸ್ಥೆಯ ಶೈಕ್ಷಣಿಕ ಹಾಗೂ ಸಂಶೋಧನ ಚಟುವಟಿಕೆಗಳಲ್ಲಿ ನೇರವಾಗಿ ಹಾಗೂ ವಾಸ್ತವಿಕವಾಗಿ ಸಂಬಂಧಿಸಿದವರನ್ನೆಲ್ಲ ಶಿಕ್ಷಣ ಸಿಬ್ಬಂದಿಯೆಂದು ಪರಿಗಣಿಸುವುದು ಆಧುನಿಕ ಪ್ರವೃತ್ತಿ. ಉದಾಹರಣೆಗೆ, ಇಲಿನಾಯ್ ವಿಶ್ವವಿದ್ಯಾಲಯ ಅದರ ಪರಿನಿಯಮಗಳಲ್ಲಿ 'ಶೈಕ್ಷಣಿಕ' ಪದದ ವ್ಯಾಪ್ತಿಯನ್ನು ಈ ರೀತಿ ಹೇಳುತ್ತದೆ:

"ಶೈಕ್ಷಣಿಕ ಕಾರ್ಯಕ್ರಮಗಳನ್ನು ನಡೆಸುವ ಶೈಕ್ಷಣಿಕ ಸಿಬ್ಬಂದಿಯಲ್ಲಿ ಬೋಧಕ ವರ್ಗ, ಸಂಶೋಧನ ವರ್ಗ, ಡೀನರು, ಶಿಕ್ಷಣ ಇಲಾಖೆಯ ನಿರ್ದೇಶಕರು, ಹೈಸ್ಕೂಲು ಸಂದರ್ಶಕರು, ಗ್ರಂಥಪಾಲರು ಹಾಗೂ ಅಧ್ಯಕ್ಷರು ನೇಮಕ ಮಾಡುವಂಥ ಸಿಬ್ಬಂದಿವರ್ಗದ ಇತರ ಸದಸ್ಯರು ಇರತಕ್ಕದ್ದು."

ನನ್ನ ಅಭಿಪ್ರಾಯದಲ್ಲಿ, ವಿಶ್ವವಿದ್ಯಾಲಯದ ಪರಿನಿಯಮಗಳಲ್ಲಿ ಅಥವಾ ಅಧ್ಯಾದೇಶಗಳಲ್ಲಿ ವಿಶ್ವವಿದ್ಯಾಲಯದ ಹಾಗೂ ಕಾಲೇಜುಗಳ ಗ್ರಂಥಪಾಲರ ಅಂತಸ್ತು, ಜವಾಬ್ದಾರಿ ಹಾಗೂ ಸಾಮಾನ್ಯ ಕರ್ತವ್ಯಗಳನ್ನು ಸ್ಪಷ್ಟವಾಗಿ ವಿವರಿಸುವ ನಿರ್ದಿಷ್ಟ ನಿಯಮಗಳಿರಬೇಕು. 1950ಕ್ಕೆ ಹಿಂದೆ ವಿಶ್ವವಿದ್ಯಾಲಯಗಳು ಹಾಗೂ ಕಾಲೇಜುಗಳು ಯಾವ ವಿಶಿಷ್ಟ ನಿಯಮಗಳನ್ನೂ ರಚಿಸಲಿಲ್ಲ. ಆ ತರುವಾಯ ಕೆಲವು ವಿಶ್ವವಿದ್ಯಾಲಯಗಳು ಅವುಗಳ ಸಂವಿಧಾನಗಳಲ್ಲಿ ಗ್ರಂಥಾಲಯವನ್ನು ವಿಶ್ವವಿದ್ಯಾಲಯದ ಒಂದು ಪ್ರಾಧಿಕಾರವೆಂದು ಹಾಗೂ ಗ್ರಂಥಪಾಲನನ್ನು ವಿಶ್ವವಿದ್ಯಾಲಯದ ಪರಿನಿಯತ ಅಧಿಕಾರಿಗಳಲ್ಲಿ ಒಬ್ಬನೆಂದು ಪರಿಗಣಿಸಿವೆ. 1958ರ ಕೃಷಿ ವಿಶ್ವವಿದ್ಯಾಲಯ ಅಧಿನಿಯಮದ (1950ರ ಉತ್ತರ ಪ್ರದೇಶದ ಅಧಿನಿಯಮದ) ಮೇರೆಗೆ ರಚಿಸಲಾದ ಸಂವಿಧಿಗಳು ಇದಕ್ಕೆ ನಿದರ್ಶನ. 1965ರ ದೆಹಲಿ ವಿಶ್ವವಿದ್ಯಾಲಯ ಗ್ರಂಥಾಲಯದ ಸಂಬಂಧವಾದ ತನ್ನ ಸರ್ವೇಕ್ಷಣೆಯಲ್ಲಿ ಕಾರ್ಲ್ ಎಂ. ವೈಟ್ ಈ ಅಭಿಪ್ರಾಯವನ್ನು ಪುಷ್ಟೀಕರಿಸಿದ್ದಾರೆ:

"ವಿಶ್ವವಿದ್ಯಾಲಯ ಸರ್ಕಾರದ ಮೂಲ ಶಾಸನವಾದ ಪರಿನಿಯಮಗಳು ಶಿಕ್ಷಕರ ಹಾಗೂ ಸಂಶೋಧಕರ ಕರ್ತವ್ಯಗಳು ನಡೆಯಲು ಅನುಕೂಲ ಕಲ್ಪಿಸುವಂತೆಯೇ ಗ್ರಂಥಾಲಯದ ಕರ್ತವ್ಯಗಳು ನಡೆಯಲು ಅನುಕೂಲ ಕಲ್ಪಿಸಬಹುದು ಹಾಗೂ ಆ ದೃಷ್ಟಿಯಿಂದ ಪರಿನಿಯಮಗಳಲ್ಲಿ ಒಂದು ವಿಭಾಗವನ್ನು ರಚಿಸಿ ಕಾನೂನುಗಳನ್ನು ಏರ್ಪಡಿಸಬಹುದು."5

ಇಷ್ಟೇ ಅಲ್ಲದೆ ಗ್ರಂಥಾಲಯದ ದಕ್ಷ ಆಡಳಿತಕ್ಕಾಗಿ ಅದರ ಕಾರ್ಯನೀತಿಯ ಬಗ್ಗೆ ಸ್ಪಷ್ಟವಾಗಿ ವಿಧಾಯಕವಾದ ನಿಯಮಗಳನ್ನು ರಚಿಸುವುದು ಪೂರ್ವಭಾವಿ ಅಗತ್ಯಕ್ರಮವೆಂದು ವಿಶ್ವವಿದ್ಯಾಲಯ ಹಾಗೂ ಕಾಲೇಜು ಗ್ರಂಥಾಲಯಗಳ ಆಡಳಿತ ತಜ್ಞರು ಶಿಫಾರಸು ಮಾಡಿದ್ದಾರೆ.6

ನಮ್ಮ ರಾಜ್ಯದಲ್ಲಿ ಎರಡು ಬಗೆಯ ಕಾಲೇಜುಗಳಿವೆ: ಒಂದು ಬಗೆಯ ಕಾಲೇಜುಗಳು ಖಾಸಗಿಯಾಗಿ ಏರ್ಪಟ್ಟು, ಖಾಸಗಿ ವ್ಯವಸ್ಥಾಪಕ ಸಂಘಗಳಿಂದ ನಿಯಂತ್ರಿತವಾಗಿವೆ. ಮತ್ತೊಂದು ಬಗೆಯವು ಶಿಕ್ಷಣ ಇಲಾಖೆಯ ಆಡಳಿತ ಘಟಕಗಳ ಮೂಲಕ ಸರ್ಕಾರದ ನೇರ ನಿಯಂತ್ರಣಕ್ಕೊಳಪಟ್ಟಿವೆ. ಖಾಸಗಿ ಕಾಲೇಜುಗಳಿಗೆ ಸಹ ಸರ್ಕಾರ ಶೇಕಡ 80ರಷ್ಟು ಹಣವನ್ನು ಸಹಾಯಧನವಾಗಿ ನೀಡುವುದರಿಂದ ಅವು ಶಿಕ್ಷಣ ಇಲಾಖೆಯ ನಿರ್ದೇಶಕರ ಪರಿಶೋಧನೆಗೆ ಒಳಪಟ್ಟಿರುತ್ತವೆ. ಆದರೆ ಸರ್ಕಾರ ಮತ್ತು ವಿಶ್ವವಿದ್ಯಾಲಯಗಳು ವಿಧಿಸುವ ಅರ್ಹತೆಗಳಿಗನುಸಾರವಾಗಿ ಶಿಕ್ಷಕರನ್ನು ಹಾಗೂ ಶಿಕ್ಷಕೇತರ ಸಿಬ್ಬಂದಿಯನ್ನು ನೇಮಿಸಿಕೊಳ್ಳುವ, ಮತ್ತು ಉಪಕರಣಗಳನ್ನು ಹಾಗೂ ವಸ್ತುಗಳನ್ನು ಕೊಳ್ಳುವ ಬಗ್ಗೆ ಗೊತ್ತುಪಡಿಸಿರುವ ನಿಯತಕ್ರಮಗಳನ್ನು ಅನುಸರಿಸುವ ಸ್ವಾತಂತ್ರ್ಯ ಅವುಗಳಿಗೆ ಇದೆ. ಇಂಥ ಕಾಲೇಜುಗಳ ಆಡಳಿತ ಮತ್ತು ನಿಯಂತ್ರಣಗಳನ್ನು ಸಾಮಾನ್ಯವಾಗಿ ಕಾರ್ಯಕಾರಿ ಸಮಿತಿ ಇಲ್ಲವೆ ಆಡಳಿತ ಮಂಡಲಿ ನಿರ್ವಹಿಸುತ್ತದೆ. ಈ ಆಡಳಿತ ಸಮಿತಿ ಶೈಕ್ಷಣಿಕ ಕಾರ್ಯಕ್ರಮಗಳ ಹೊರತು ಇತರ ವಿಷಯಗಳಲ್ಲಿ ಮುಖ್ಯ ನೀತಿ ನಿರ್ಧಾರಕ ಸಮಿತಿಯಾಗಿರುತ್ತದೆ. ವಿಶ್ವವಿದ್ಯಾಲಯ ಕಾಲೇಜುಗಳಿಗೆ ಮನ್ನಣೆ ನೀಡಿ ಶಿಕ್ಷಣಕ್ರಮ, ಪರೀಕ್ಷೆ, ಹಾಜರಿ, ಪದವಿ ನೀಡಿಕೆ ಇತ್ಯಾದಿ ವಿಚಾರಗಳನ್ನು ಕ್ರಮಗೊಳಿಸುತ್ತದೆ. ವಿಶ್ವವಿದ್ಯಾಲಯದ ಅಧ್ಯಯನ ಮಂಡಲಿ ಮತ್ತು ಶಿಕ್ಷಣ ಪರಿಷತ್ತು ವಿಶ್ವವಿದ್ಯಾಲಯದ ಮನ್ನಣೆ ಪಡೆದ ಕಾಲೇಜುಗಳಿಗೆ ಸಾಮಾನ್ಯವಾಗಿ ಅನ್ವಯವಾಗುವ ಶೈಕ್ಷಣಿಕ ಕಾರ್ಯಕ್ರಮಗಳನ್ನು ಗೊತ್ತುಮಾಡಿ ನಿಯಮಗಳನ್ನು ಹಾಗೂ ನಿಬಂಧನೆಗಳನ್ನು ರಚಿಸುತ್ತವೆ. ಶೈಕ್ಷಣಿಕ ಕಾರ್ಯಕ್ರಮಗಳು ವಿವಿಧ ಶಿಕ್ಷಣಗಳಿಗೆ ಸಂಬಂಧಿಸಿದ ಆಯಾ ಅಧ್ಯಯನ ಮಂಡಲಿಗಳಿಂದ ರೂಪುಗೊಳ್ಳಬೇಕು. ಈ ಅಧ್ಯಯನ ಮಂಡಲಿಗಳನ್ನು ಸಿಂಡಿಕೇಟ್ ಸಭೆ ಪರಿನಿಯಮಗಳ ನಿಬಂಧನೆಗಳ ಮೇರೆಗೆ ರಚಿಸುತ್ತದೆ. ಶೈಕ್ಷಣಿಕ ಕಾರ್ಯಕ್ರಮಗಳನ್ನು ಅಕಡೆಮಿಕ್ ಕೌನ್ಸಿಲಿನ ಮುಂದೆ ಮಂಡಿಸುವುದಕ್ಕೆ ಮುಂಚೆ ಶಿಕ್ಷಣ ವಿಭಾಗಕ್ಕೆ ಒಪ್ಪಿಸಬೇಕು. ಶಿಕ್ಷಣ ಪರಿಷತ್ತು ವಿಶ್ವವಿದ್ಯಾಲಯದ ಹಾಗೂ ಕಾಲೇಜುಗಳ ಎಲ್ಲ ಶಿಕ್ಷಣ ಹಂತಗಳಲ್ಲಿ ಶೈಕ್ಷಣಿಕ ಶ್ರೇಷ್ಠತೆಯನ್ನು ರಕ್ಷಿಸಿಕೊಂಡು ಬರುವುದಕ್ಕೆ ಸಂಬಂಧಿಸಿದ ಎಲ್ಲ ವಿಷಯಗಳನ್ನೂ ಕ್ರಮಗೊಳಿಸುವ ಬಹುಮುಖ್ಯ ಸಂಸ್ಥೆಯಾಗಿದೆ.

ಗ್ರಂಥಪಾಲ ಶಿಕ್ಷಣ ಪರಿಷತ್ತಿನ ಅಧಿಕಾರತಃ ಸದಸ್ಯನಾಗಿರುವ ಬಗ್ಗೆ ಕೆಲವು ವಿಶ್ವವಿದ್ಯಾಲಯಗಳಲ್ಲಿ ನಿಬಂಧನೆಗಳಿವೆ. ಬಹುಮಟ್ಟಿಗೆ ಇದೊಂದು ಸ್ವಾಗತಾರ್ಹ ವಿಷಯ. ಗ್ರಂಥಪಾಲ ಪರಿನಿಯತ ಅಕಡೆಮಿಕ್ ಕೌನ್ಸಿಲಿನ ಸದಸ್ಯನಾಗಿ ಪ್ರಿನ್ಸಿಪಾಲರು ಹಾಗೂ ವಿಭಾಗಗಳ ಮುಖ್ಯರೊಡನೆ ಅದರ ನೀತಿ ನಿರ್ಣಯಗಳಲ್ಲಿ ಭಾಗವಹಿಸುತ್ತಾನೆ. ಇದರಿಂದ ಹೊಸ ಶಿಕ್ಷಣಗಳನ್ನು ಪ್ರಾರಂಭಿಸುವುದೇ ಮೊದಲಾದ ಶೈಕ್ಷಣಿಕ ಚಟುವಟಿಕೆಗಳಿಗೆ ಅನುಗುಣವಾಗಿ ಕಾರ್ಯನಿರ್ವಹಿಸಲು ಗ್ರಂಥಪಾಲನಿಗೆ ಅವಕಾಶ ಲಭಿಸುತ್ತದೆ.

---

5 White, Carl, M : *A Survey of University of Delhi Library*, 1965 ; p. 28

6 Guy, R. Lyle : *The Administration of the College Library* ; H. W. Wilson, New York, 1947, p. 39–40

ಈ ಕಾರ್ಯಕಲಾಪಗಳ ಜೊತೆಗೆ, ವಿಶ್ವವಿದ್ಯಾಲಯದ ಗ್ರಂಥಪಾಲ ದಕ್ಷನೂ ಉಪಾಯ ಕೌಶಲವುಳ್ಳವನೂ ಆಗಿರುವುದಾದರೆ ಗ್ರಂಥಾಲಯದ ಸಂಪನ್ಮೂಲಗಳ ಬಲ ಹಾಗೂ ದುರ್ಬಲಗಳನ್ನು ಶಿಕ್ಷಣ ಸಮುದಾಯಕ್ಕೆ ತಿಳಿಸಲು ಸಮರ್ಥನಾಗುತ್ತಾನೆ; ಆ ಮೂಲಕ ವಿವಿಧ ಶಿಕ್ಷಣಗಳಿಗೆ ಗೊತ್ತುಪಡಿಸಿರುವ ಗ್ರಂಥಗಳನ್ನು ಹಾಗೂ ಇತರ ವಾಚನವಸ್ತುಗಳನ್ನು ಕ್ರಮಗೊಳಿಸಲು ಅವನಿಗೆ ಸಾಧ್ಯವಾಗುತ್ತದೆ.

ಹೊಸ ಶಿಕ್ಷಣಗಳನ್ನು ಹಾಗೂ ಅಧ್ಯಯನಗಳನ್ನು ಪ್ರಾರಂಭಿಸುವ ವಿಷಯವೇ ಅಲ್ಲದೆ, ವಿಶ್ವವಿದ್ಯಾಲಯದ ಅಧಿಕಾರವ್ಯಾಪ್ತಿಗೆ ಸೇರಿದ ಕಾಲೇಜಿಗೆ ತಾತ್ಕಾಲಿಕವಾಗಿ ಅಥವಾ ಸ್ಥಿರವಾಗಿ ಮನ್ನಣೆ ನೀಡುವ ಬಗ್ಗೆ ಅಂತಿಮ ತೀರ್ಮಾನಕ್ಕೆ ಬರಲು ಮನ್ನಣೆ ನೀಡಿಕೆ ಸಮಿತಿ ತನ್ನ ವರದಿಯನ್ನು ಅಕಾಡೆಮಿಕ್ ಕೌನ್ಸಿಲಿನ ಮುಂದೆ ಮಂಡಿಸುತ್ತದೆ. ಇಲ್ಲಿ ಸಹ, ಆ ಕೌನ್ಸಿಲಿನ ಸದಸ್ಯನಾಗುವ ವಿಶ್ವವಿದ್ಯಾಲಯದ ಗ್ರಂಥಪಾಲ, ಕಾಲೇಜಿಗೆ ಮನ್ನಣೆ ನೀಡುವುದಕ್ಕೆ ಮುಂಚಿತವಾಗಿ, ಆ ಕಾಲೇಜಿನ ಗ್ರಂಥಾಲಯ ಹೇಗೆ ವ್ಯವಸ್ಥೆಗೊಳ್ಳಬೇಕು ಎಂಬ ಬಗ್ಗೆ ಹಲವು ಮಾದರಿಗಳನ್ನು ಹಾಗೂ ಗುಣಮಟ್ಟಗಳನ್ನು ಕೌನ್ಸಿಲಿನ ಇತರ ಸದಸ್ಯರಿಗೆ ತಿಳಿಸಬಹುದು. ವಿವಿಧ ಕಾಲೇಜುಗಳನ್ನು ಪರಿಶೀಲಿಸಲು ಭೇಟಿಕೊಡುವ ಮನ್ನಣೆ ನೀಡಿಕೆ ಸಮಿತಿಯ ಸದಸ್ಯನನ್ನಾಗಿ ವಿಶ್ವವಿದ್ಯಾಲಯದ ಗ್ರಂಥಪಾಲನನ್ನೂ ನೇಮಿಸುವುದು ಮತ್ತೂ ಫಲಯುತವಾದ ಕ್ರಮ. ಮನ್ನಣೆ ನೀಡಿಕೆ ಸಮಿತಿ ದೊರಕಬಹುದಾದ ಗ್ರಂಥಾಲಯ ಸಂಪನ್ಮೂಲಗಳ ಹಾಗೂ ಗ್ರಂಥಾಲಯ ಸೇವೆಯ ಬಗ್ಗೆ ಗಮನ ನೀಡಬೇಕಾಗಿದ್ದರೂ ಈ ವರೆಗೆ ಅನೇಕ ಸಂದರ್ಭಗಳಲ್ಲಿ ಕಾಲೇಜು ಗ್ರಂಥಾಲಯಗಳ ಮಾದರಿ ಹಾಗೂ ಗುಣಮಟ್ಟಗಳ ಬಗ್ಗೆ ಸಾಕಷ್ಟು ಆಸಕ್ತಿ ಪ್ರಕಟವಾಗಿಲ್ಲ. ಈ ಕಾರಣದಿಂದ ನಿರೀಕ್ಷಿತ ವಿಧಾನದಲ್ಲಿ ಗ್ರಂಥಾಲಯಗಳು ಮುಂದುವರಿಯದೆ ಇಡೀ ಶಿಕ್ಷಣ ವ್ಯವಸ್ಥೆಯಲ್ಲಿ ಅವುಗಳಿಗೆ ಸಲ್ಲಬೇಕಾದ ಸ್ಥಾನ ದೊರೆತಿಲ್ಲ.

ಕಾಲೇಜುಗಳ ಆಡಳಿತಕ್ರಮದಲ್ಲಿ ಖಾಸಗಿ ಹಾಗೂ ಸರ್ಕಾರಿ ಆಡಳಿತಗಳಿಗೊಳಪಟ್ಟ ಎರಡು ಮಾದರಿಯ ಕಾಲೇಜುಗಳಿರುವುದನ್ನು ನಾವು ಈಗಾಗಲೆ ಗಮನಿಸಿದ್ದೇವೆ. ಸಾಮಾನ್ಯ ಸಂದರ್ಭಗಳಲ್ಲಿ ಖಾಸಗಿ ಕಾಲೇಜುಗಳ ಆಡಳಿತ, ಕಾರ್ಯನಿರ್ವಾಹಕ ಸಮಿತಿ ಅಥವಾ ಆಡಳಿತ ಮಂಡಲಿಯ ನಿಯಂತ್ರಣಕ್ಕೆ ಒಳಪಟ್ಟಿರುತ್ತದೆ; ಸರ್ಕಾರಿ ಕಾಲೇಜುಗಳ ಇಡೀ ಆಡಳಿತ, ಕಾಲೇಜು ಶಿಕ್ಷಣ ನಿರ್ದೇಶಕರ ನಿಯಂತ್ರಣದಲ್ಲಿದೆ. ನಾನು ತಿಳಿಸಿರುವಂತೆ ಖಾಸಗಿ ಕಾಲೇಜುಗಳ ಪೈಕಿ ಹಲವು ಸರ್ಕಾರದಿಂದ ಧನಸಹಾಯಪಡೆಯುತ್ತಿವೆ; ಈ ಕಾರಣದಿಂದ ಸ್ವಾಭಾವಿಕವಾಗಿಯೇ ಗ್ರಂಥಾಲಯವನ್ನು ಅಭಿವೃದ್ಧಿಗೊಳಿಸುವುದು, ಅದನ್ನು ನಡೆಸಲು ಬೇಕಾದ ಸಿಬ್ಬಂದಿ—ಈ ವಿಷಯಗಳ ಬಗ್ಗೆ ಸರ್ಕಾರದ ಹಂತದಲ್ಲಿಯೇ ನಿರ್ಣಯಗಳಾಗುತ್ತವೆ: ಗ್ರಂಥಾಲಯದ ಸ್ವರೂಪ ಹಾಗೂ ಗುಣಮಟ್ಟಗಳನ್ನು ಸರ್ಕಾರವೇ ನಿರ್ಧರಿಸುತ್ತದೆ.

ಒಂದು ಕಾಲೇಜನ್ನು ನಡೆಸಲು ಅಗತ್ಯವಾದ ವೆಚ್ಚದ ಬಾಬ್ತುಗಳು ಅನೇಕ ಇರುವುದರಿಂದ ಧನಸಹಾಯ ನೀಡಿಕೆಯಲ್ಲಿ ಗ್ರಂಥಾಲಯಗಳ ಬಗ್ಗೆ ಗಮನ ಹೆಚ್ಚಾಗಿ ಕೇಂದ್ರೀಕೃತವಾಗುವುದಿಲ್ಲ. ಗ್ರಂಥಾಲಯ ಸೇವೆಗಳ ಬಗ್ಗೆ ಸಲಹೆ ನೀಡುವ ತಜ್ಞರ ಮಂಡಲಿ ಇಲ್ಲದಿರುವುದರಿಂದ ಈ ಪರಿಸ್ಥಿತಿ ಒದಗಿದೆ. ವಿಶ್ವವಿದ್ಯಾಲಯ ಹಾಗೂ ಕಾಲೇಜುಗಳ ಗ್ರಂಥಾಲಯ ಸೇವೆಯನ್ನು ಉತ್ತಮಗೊಳಿಸುವ ಎಲ್ಲ ವಿಚಾರಗಳ ಬಗ್ಗೆ ಸಲಹೆ ಹಾಗೂ ಶಿಫಾರಸುಗಳನ್ನು ಮಾಡಲು ವಿಶ್ವವಿದ್ಯಾಲಯ ಮತ್ತು ಕಾಲೇಜುಗಳ ಅನುಭವ ಪಡೆದ ಗ್ರಂಥಪಾಲಕರನ್ನೊಳಗೊಂಡ ತಜ್ಞರ ಸಮಿತಿಯನ್ನು ಸರ್ಕಾರ ನೇಮಿಸುವುದಾದರೆ ಈ ಪರಿಸ್ಥಿತಿಯನ್ನು ಸ್ವಲ್ಪಮಟ್ಟಿಗೆ ಸುಧಾರಿಸಬಹುದು.

ಕಾಲೇಜಿನ ಗ್ರಂಥಪಾಲ ಪ್ರತ್ಯಕ್ಷವಾಗಿ ಇಲ್ಲವೆ ಪರೋಕ್ಷವಾಗಿ ಕಾಲೇಜಿನ ಎಲ್ಲ ಚಟುವಟಿಕೆಗಳಿಗೂ ಸಂಬಂಧಿಸಿರುವುದರಿಂದ ಕಾಲೇಜು ಆಡಳಿತದ ಬಗ್ಗೆ ಹಾಗೂ ಕಾಲೇಜನ್ನು ಸುಸೂತ್ರವಾಗಿ ನಡೆಸಿಕೊಂಡು ಬರುವ ಬಗ್ಗೆ ಕಾಲೇಜು ರಚಿಸುವ ಎಲ್ಲ ಸಮಿತಿಗಳಲ್ಲಿ ಆತ ಸದಸ್ಯನಾಗಿರಬೇಕು. ಪ್ರಸ್ತುತ ಗ್ರಂಥಾಲಯ ಸಮಿತಿಗಳನ್ನು ಏರ್ಪಡಿಸಿರುವ ಕಾಲೇಜುಗಳು ಬಹಳ ವಿರಳ. ಕಾಲೇಜು ಗ್ರಂಥಪಾಲ ತನ್ನ ವೈಯಕ್ತಿಕ ಅನುಭವ ಹಾಗೂ ಅರ್ಹತೆಗಳಿಂದ ಕಾಲೇಜಿನ ಗ್ರಂಥಾಲಯವನ್ನು ನಡೆಸುವ ಬಗ್ಗೆ ತಾನು ಎದುರಿಸಬೇಕಾದ ಸಮಸ್ಯೆಗಳನ್ನು ಆಡಳಿತಾಧಿಕಾರಿಗಳ ಮುಂದಿಡಲು ಪ್ರಯತ್ನಿಸುತ್ತಾನೆ. ಅವನ ಬೇಡಿಕೆಗಳು ಸಮಿತಿಯ ಲಕ್ಷಣ ಹಾಗೂ ರಚನೆಯನ್ನವಲಂಬಿಸಿರುತ್ತವೆ. ಗ್ರಂಥಾಲಯ ಸಮಿತಿ

ಸಾಧ್ಯವಾದಷ್ಟು ಮಟ್ಟಿಗೆ ಕನಿಷ್ಠ ಆಡಳಿತಾಧಿಕಾರವನ್ನೂ ಗರಿಷ್ಠ ಸಲಹೆ ನೀಡುವ ಅಧಿಕಾರವನ್ನೂ ಹೊಂದಿರಬೇಕೆಂಬುದು ಅಂಗೀಕೃತ ಸೂತ್ರ. ಗ್ರಂಥಾಲಯದಿಂದ ಪ್ರಯೋಜನ ಹೊಂದುವ ಸಕಲರ ಅನುಕೂಲದೃಷ್ಟಿಯಿಂದ ಗ್ರಂಥಾಲಯ ಸಮಿತಿಯಲ್ಲಿ ಕಾರ್ಯನೀತಿಯ ನಿರ್ಣಯಗಳನ್ನು ಕೈಗೊಂಡ ತರುವಾಯ ಅವನ್ನು ರೂಢಿಗೆ ತರುವ ಕೆಲಸವನ್ನು ಗ್ರಂಥಪಾಲನಿಗೇ ಬಿಡಬೇಕು. ಗ್ರಂಥಪಾಲ ತನ್ನ ತಜ್ಞ ಅಭಿಪ್ರಾಯವನ್ನು ನೀಡಿ ನಿರ್ಣಯಗಳನ್ನು ಮಾಡುವ ಬಗ್ಗೆ ತನ್ನ ಪ್ರಭಾವವನ್ನು ಬೀರಬೇಕು.

ಗ್ರಂಥಾಲಯ ಸಮಿತಿಯಲ್ಲಿ ಸದಸ್ಯನಾಗಿರುವುದರ ಜೊತೆಗೆ ಗ್ರಂಥಪಾಲ ಈ ಮುಂದೆ ಕಾಣಿಸಿರುವ ಇತರ ಸಮಿತಿಗಳಲ್ಲಿ ಸಹ ಸದಸ್ಯನಾಗಿರಬೇಕು: 1 ಗ್ರಂಥಾಲಯ ಕಟ್ಟಡ ಸಮಿತಿ. 2 ಸಂಶೋಧನ ಸಮಿತಿ. 3 ಪಠ್ಯಕ್ರಮ ರಚನಾ ಸಮಿತಿ. 4 ಶಿಕ್ಷಣ ಪರಿಷತ್ತು, ಇತ್ಯಾದಿ.

ಇಂಥ ಸಮಿತಿಗಳಲ್ಲಿ ಆತ ಸದಸ್ಯನಾಗುವುದರಿಂದ, ಗ್ರಂಥಾಲಯದ ಪರೋಕ್ಷಾಭಿವೃದ್ಧಿಗೆ ಅಗತ್ಯವಾದ ಎಲ್ಲ ವಿಷಯಗಳ ಬಗ್ಗೆ ತನ್ನ ಅಭಿಪ್ರಾಯಗಳನ್ನು ವ್ಯಕ್ತಪಡಿಸಬಹುದು. ಗ್ರಂಥಾಲಯದ ಅಭಿವೃದ್ಧಿಗಾಗಿ ದ್ರವ್ಯಸಹಾಯವನ್ನು ಪಡೆದುಕೊಳ್ಳುವುದಲ್ಲದೆ ಆತ ಗ್ರಂಥಾಲಯದ ಮೇಲ್ಪಾಟಿನ ಕಾರ್ಯಕ್ರಮಗಳ ಸಂಬಂಧದಲ್ಲಿ ಶಿಕ್ಷಣ ಹಾಗೂ ಆಡಳಿತಾಧಿಕಾರಿಗಳ ಬೆಂಬಲವನ್ನು ಸಹ ಪಡೆಯಬೇಕು.

ವಿಶ್ವವಿದ್ಯಾಲಯ ಹಾಗೂ ಕಾಲೇಜುಗಳ ಗ್ರಂಥಾಲಯಗಳನ್ನು ನಡೆಸಲು ನೇಮಿಸಿಕೊಳ್ಳುವ ಸಿಬ್ಬಂದಿಯ ಸ್ವರೂಪ ಮತ್ತು ಗುಣಮಟ್ಟದ ಮೇಲೆ ಗ್ರಂಥಾಲಯದ ಬಲ ಅಥವಾ ಬಲಹೀನತೆ ನಿಂತಿದೆ. ಆದ್ದರಿಂದ, ವಿಶ್ವವಿದ್ಯಾಲಯದ ಗ್ರಂಥಪಾಲನಾಗಲಿ, ಕಾಲೇಜಿನ ಗ್ರಂಥಪಾಲನಾಗಲಿ ಆಯ್ಕೆ ಸಮಿತಿಯಲ್ಲಿ ಸದಸ್ಯನಾಗಿದ್ದು ಗ್ರಂಥಾಲಯಕ್ಕೆ ಅರ್ಹತೆ ಹೊಂದಿದ ಅಭ್ಯರ್ಥಿಗಳು ನೇಮಕವಾಗುವ ಬಗ್ಗೆ ತನ್ನ ಪ್ರವೀಣ ಸಲಹೆಯನ್ನು ನೀಡಬೇಕು.

ಭಾರತದ ವಿವಿಧ ವಿಶ್ವವಿದ್ಯಾಲಯಗಳು ಅವುಗಳಿಗೆ ಸಂಬಂಧಿಸಿದ ವಿಶ್ವವಿದ್ಯಾಲಯ ಅಧಿನಿಯಮಗಳ ಮೇರೆಗೆ ಸ್ಥಾಪನೆಯಾಗಿವೆ. ವಿಶ್ವವಿದ್ಯಾನಿಲಯಗಳಲ್ಲಿ ಉನ್ನತದ ಆಡಳಿತವನ್ನು ಕುಲಪತಿಗೆ ವಹಿಸಿದೆ. ಕುಲಪತಿ ತನ್ನ ಸರದಿಯಲ್ಲಿ ವಿಶ್ವವಿದ್ಯಾಲಯದ ಆಡಳಿತ ಸಂಸ್ಥೆಯಾದ ಸಿಂಡಿಕೇಟ್ ಸಭೆಯ ಕಾರ್ಯನೀತಿಗೆ ಸಂಬಂಧಪಟ್ಟ ನಿರ್ಣಯಗಳನ್ನು ರೂಪಿಸಲು ರಿಜಿಸ್ಟ್ರಾರ್ ಹಾಗೂ ಬರ್ಸಾರ್ (ದ್ರವ್ಯಾಧಿಕಾರಿ) ಇವರ ನೆರವನ್ನು ಪಡೆದುಕೊಳ್ಳುತ್ತಾರೆ. ಸಿಂಡಿಕೇಟ್ ಸಭೆಯ ನಿರ್ಣಯಗಳು ಗ್ರಂಥಾಲಯ ಸೇವೆಗಳ ಮೇಲೆ ನೇರವಾಗಿ ಅಥವಾ ಪರೋಕ್ಷವಾಗಿ ಪ್ರಭಾವಬೀರುತ್ತವೆ. ಆದ್ದರಿಂದ ರಿಜಿಸ್ಟ್ರಾರ್ ಹಾಗೂ ಬರ್ಸಾರ್‌ಗಳಂಥ ಪರಿಮಿತ ಅಧಿಕಾರಿಗಳನ್ನು ನೇಮಿಸುವಂತೆಯೇ ಗ್ರಂಥಪಾಲನನ್ನು ಸಹ ಅದರ ಪದನಿಮಿತ್ತ ಸದಸ್ಯನನ್ನಾಗಿ ನೇಮಿಸಬೇಕು. ನನಗೆ ತಿಳಿದ ಮಟ್ಟಿಗೆ ಯಾವ ವಿಶ್ವವಿದ್ಯಾಲಯವೂ ವಿಶ್ವವಿದ್ಯಾಲಯದ ಗ್ರಂಥಪಾಲನ ಬಗ್ಗೆ ಅಂಥ ವ್ಯವಸ್ಥೆ ಮಾಡಿ ಸಿಂಡಿಕೇಟ್ ಸಭೆಯಂಥ ನೀತಿ ನಿರ್ಧಾರಕ ಸಂಸ್ಥೆಯೊಡನೆ ಆತ ನೇರ ಸಂಬಂಧವನ್ನು ಹೊಂದುವಂತೆ ಮಾಡಿಲ್ಲ. ಪರಿಮಿತ ನಿಯಮಗಳಿಂದ ವಿಶ್ವವಿದ್ಯಾಲಯದ ಗ್ರಂಥಪಾಲನನ್ನು ವಿಶ್ವವಿದ್ಯಾಲಯದ ಪ್ರಾಧಿಕಾರಿಗಳಲ್ಲಿ ಒಬ್ಬನನ್ನಾಗಿ ನೇಮಿಸಿ ಆತನ ಕರ್ತವ್ಯಗಳನ್ನು ಹಾಗೂ ಜವಾಬ್ದಾರಿಗಳನ್ನು ಸ್ಪಷ್ಟಗೊಳಿಸಿದಾಗ ಮಾತ್ರವೇ ಅಂಥ ವ್ಯವಸ್ಥೆ ಸಾಧ್ಯವಾಗುತ್ತದೆ. ವಿಶ್ವವಿದ್ಯಾಲಯದ ವಿವಿಧ ಕಾರ್ಯಕಲಾಪಗಳನ್ನು ನಡೆಸಲು ಸಿಂಡಿಕೇಟ್ ಸಭೆ ರಚಿಸುವ ಕಟ್ಟಡ ಸಮಿತಿ, ಪ್ರಕಾಶನ ಸಮಿತಿ, ಪಠ್ಯೇತರ ಚಟುವಟಿಕೆಗಳ ಸಮಿತಿ–ಇವೇ ಮೊದಲಾದ ಸಮಿತಿಗಳಲ್ಲಿ ಗ್ರಂಥಪಾಲನಿಗೆ ಸ್ಥಾನ ದೊರಕಬೇಕು. ಗ್ರಂಥಾಲಯಕ್ಕೆ ದ್ರವ್ಯ ಸಹಾಯ ನೀಡುವ ವಿಷಯವನ್ನು ಗ್ರಂಥಪಾಲ ಆ ಸಮಿತಿಗಳಲ್ಲಿ ಪ್ರತಿನಿಧಿಸಿ ನಿಜವಾದ ಅರ್ಥದಲ್ಲಿ ತಾನು ಸಹ ವಿಶ್ವವಿದ್ಯಾಲಯದ ಆಡಳಿತದಲ್ಲಿ ಪಾಲುಗೊಳ್ಳಬಹುದು.

ಎಲ್ಲ ಸಮಿತಿಗಳ ಪೈಕಿ ವಿಶ್ವವಿದ್ಯಾಲಯದ ಆಯವ್ಯಯ ಪತ್ರವನ್ನು ಅಂಗೀಕರಿಸುವ ಹಾಗೂ ಅದಕ್ಕೆ ತಿದ್ದುಪಡಿಗಳನ್ನು ತರುವ ಸಮಿತಿಯೇ ಬಹುಮುಖ್ಯ ನಿರ್ಣಯಕಾರಿ ಸಮಿತಿಯಾಗಿದೆ. ಆ ಸಮಿತಿಯ ಸದಸ್ಯನಾಗಿ ಗ್ರಂಥಪಾಲ ನಿರಂಕುಶವಾಗಿ ಅಧಿಕಾರ ದುರುಪಯೋಗವಾಗುವುದನ್ನು ತಪ್ಪಿಸಿ ದ್ರವ್ಯ ಸಂಬಂಧವಾದ ತನ್ನ ಸಲಹೆಗಳನ್ನು ಸಮಿತಿ ಅಂಗೀಕರಿಸುವಂತೆ ಮಾಡಬಹುದು. ತಾತ್ಕಾಲಿಕ ಆಯವ್ಯಯ ವಿವರಗಳನ್ನು ತಯಾರಿಸಿ ಒಪ್ಪಿಸುವಂತೆ ವಿವಿಧ ಅಧಿಕಾರಿಗಳನ್ನು ಕೋರುವುದು ಅನೇಕ ಶಿಕ್ಷಣಸಂಸ್ಥೆಗಳ ರೂಢಿಯಾಗಿದೆ. ಆಯವ್ಯಯ ವರದಿ ಬಂದ ತರುವಾಯ ಶಿಕ್ಷಣ ಸಂಸ್ಥೆಯ ಇಡೀ ಆಯ

ವ್ಯಯವನ್ನು ಅಂತಿಮವಾಗಿ ಮಂಜೂರು ಮಾಡುವುದಕ್ಕೆ ಮುಂಚೆ ಅನುಮೋದನೆ, ನಿರಾಕರಣೆ ಅಥವಾ ತಿದ್ದುಪಡಿಗಳ ವಿಷಯದಲ್ಲಿ ಕಾರ್ಯನೀತಿಯ ಕೇಂದ್ರೀಕರಣ ಸಾಮಾನ್ಯವಾಗಿ ಪ್ರಭಾವ ಬೀರುತ್ತದೆ. ವಿಶ್ವವಿದ್ಯಾಲಯದ ಗ್ರಂಥಾಲಯವನ್ನು ನಡೆಸಲು ತಗಲುವ ವೆಚ್ಚ ಬಹುಮಟ್ಟಿಗೆಹೆಚ್ಚಿರುವುದರಿಂದಲೂ, ಅನೇಕ ಗ್ರಂಥಾಲಯಗಳು ಅಭಿವೃದ್ಧಿಗೊಳ್ಳುವ ಹಂತದಲ್ಲಿರುವುದರಿಂದಲೂ ನಿರ್ಣಯಕಾರಿ ಸಮಿತಿಯಲ್ಲಿ ವಿಶ್ವವಿದ್ಯಾಲಯದ ಗ್ರಂಥಪಾಲ ಸ್ಥಾನ ಹೊಂದುವುದಾದರೆ ಆತ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಸಹಜವಾಗಿಯೂ ತನ್ನ ಪಾಲಿನ ಕೆಲಸವನ್ನು ನಿರ್ವಹಿಸಬಹುದು.

ಹಲವಾರು ನಿರ್ಣಯಕಾರಿ ಸಮಿತಿಗಳಲ್ಲಿ ಗ್ರಂಥಪಾಲ ನಿರ್ವಹಿಸುವ ಕರ್ತವ್ಯಗಳಿಗೆ ಸಂಬಂಧಿಸಿದ ಎಲ್ಲ ಅಂಶಗಳನ್ನೂ ವಿವರಿಸಲು ಸಾಧ್ಯವಿಲ್ಲ. ಮೇಲೆ ಸೂಚಿಸಿರುವ ಸಲಹೆಗಳು ಕೇವಲ ಆದರ್ಶನೀಯ, ಕಾರ್ಯಸಾಧ್ಯವಲ್ಲದವು ಎಂದು ಹೇಳಬಹುದು. ಆದರೆ, ಕೆಲವು ಸಾಮಾನ್ಯ ತತ್ತ್ವಗಳು ಗ್ರಂಥಾಲಯವನ್ನು ದಕ್ಷತೆಯಿಂದ ನಡೆಸಲು ಸಹಾಯಕವಾಗಿವೆ. ಆದ್ದರಿಂದ, ವಿಶ್ವವಿದ್ಯಾಲಯ ಹಾಗೂ ಕಾಲೇಜು ಗ್ರಂಥಾಲಯಗಳ ಆಡಳಿತ ಮತ್ತು ನಿಯಂತ್ರಣಗಳ ಬಗ್ಗೆ ಎದುರಿಸಬೇಕಾದ ಸಮಸ್ಯೆಗಳನ್ನು ಹಾಗೂ ವಿವಿಧ ನಿರ್ಣಯಕಾರಿ ಸಮಿತಿಗಳೊಂದಿಗೆ ಗ್ರಂಥಪಾಲ ಹೊಂದಬಹುದಾದ ಸಂಬಂಧವನ್ನು ತಿಳಿಸುವುದೇ ಗ್ರಂಥಪಾಲನ ಕೆಲಸಗಳನ್ನು ಕುರಿತ ಈ ಲೇಖನದ ಉದ್ದೇಶ.

ನಿರ್ಣಯಕಾರಿ ಸಮಿತಿಗಳೊಂದಿಗೆ ಹಾಗೂ ವ್ಯಕ್ತಿಗಳೊಂದಿಗೆ ಸೂಕ್ತ ಸಂಬಂಧವನ್ನು ಸ್ಥಾಪಿಸಿಕೊಳ್ಳುವ ಬಗ್ಗೆ ಗ್ರಂಥಪಾಲ ಸಾಮಾನ್ಯವಾಗಿ ಎದುರಿಸಬೇಕಾದ ಸಮಸ್ಯೆಗಳನ್ನು ತಿಳಿಯಲು ಈ ಮುಂದಿನ ವಿಷಯಗಳನ್ನು ಪರಿಗಣಿಸುವುದು ಅಗತ್ಯ:

1 ಗ್ರಂಥಪಾಲನ ಹಾಗೂ ಇತರ ನಿರ್ಣಯಕಾರಿ ಸಮಿತಿಗಳ ನಡುವಣ ಸಂಬಂಧ ವ್ಯಕ್ತಿಗಳ ಮನಬಂದ ಪ್ರವೃತ್ತಿಗೆ ತುತ್ತಾಗದಂತೆ ಮಾಡಬೇಕಾದರೆ ಗ್ರಂಥಾಲಯ ಕಾರ್ಯನೀತಿಯ ಬಗ್ಗೆ ಪರಿನಿಯಮ, ಅಧ್ಯಾದೇಶ ಹಾಗೂ ನಿಯಮಗಳಲ್ಲಿ ಸಂಯೋಜಿತವಾಗಿರುವ ಸ್ಪಷ್ಟವಾದ ಹಾಗೂ ಸ್ಥಾಪಿತವಾದ ಅಧಿನಿಯಮ ಅತ್ಯಗತ್ಯ.

2 ಗ್ರಂಥಾಲಯ ಸಮಿತಿ ಏರ್ಪಟ್ಟಿರುವ ಕಡೆಗಳಲ್ಲಿ ಅದು ಪರಿಣಾಮಕಾರಿಯಾಗಿ ಕೆಲಸ ನಡೆಸುವಂತೆ ಗ್ರಂಥಪಾಲ ಪ್ರಯತ್ನಿಸಬೇಕು. ಈ ನಿರ್ಣಯಕಾರಿ ಸಮಿತಿಯೊಡನೆ ಗ್ರಂಥಪಾಲನ ಸಂಬಂಧ ಬಹುಮಟ್ಟಿಗೆ ಆ ಸಮಿತಿಯ ರಚನೆ, ಕಾಲಾವಧಿ ಹಾಗೂ ಕರ್ತವ್ಯಗಳನ್ನು ಮತ್ತು ಅದು ಎಷ್ಟು ಸಲ ಸಭೆ ಸೇರುತ್ತದೆ ಎಂಬುದನ್ನು ಅವಲಂಬಿಸಿದೆ.

3 ವಿಶ್ವವಿದ್ಯಾಲಯ ಹಾಗೂ ಕಾಲೇಜು ಗ್ರಂಥಾಲಯಗಳಲ್ಲಿ ಹಲವು ವಿವಿಧ ಅಭಿವೃದ್ಧಿ ಹಂತಗಳಿದ್ದು ಅವುಗಳಿಗೆ ಅಪಾರ ಹಣ ಅಗತ್ಯವಿದೆ. ಗ್ರಂಥಪಾಲ ಗ್ರಂಥಾಲಯದ ಪ್ರಮುಖ ಆಡಳಿತಾಧಿಕಾರಿಯಾಗಿರುವುದರಿಂದ ಗ್ರಂಥಾಲಯಕ್ಕೆ ವಸ್ತುಗಳನ್ನು ಮತ್ತು ಸಲಕರಣೆಗಳನು ಕೊಳ್ಳಲು ಬೇಕಾದ ಹಣವನ್ನು ಆಯವ್ಯಯಪತ್ರದಲ್ಲಿ ಒದಗಿಸುವ ಬಗ್ಗೆ ಮಾಡುವ ನಿರ್ಣಯಗಳಲ್ಲಿ ಆತ ಯುಕ್ತ ಪಾತ್ರ ವಹಿಸಬೇಕು. ಬಜೆಟ್ಟಿನಲ್ಲಿ ನೀಡುವ ಹಣವನ್ನು ವಿನಿಯೋಗಿಸಲು ಆತನಿಗೆ ಸಾಕಷ್ಟು ಸ್ವಾತಂತ್ರ್ಯವಿರಬೇಕು.

4 ಗ್ರಂಥಾಲಯ ಸಿಬ್ಬಂದಿಗೆ ವಹಿಸುವ ಕೆಲಸಗಳಲ್ಲಿ ವೃತ್ತಿನಿರತರ ಕೆಲಸಗಳು. ವೃತ್ತ್ಯೇತರ ಕೆಲಸಗಳು ಎಂಬ ಸ್ಪಷ್ಟ ವಿಭಜನೆ ಇರಬೇಕು. ಗ್ರಂಥಾಲಯ ಸಿಬ್ಬಂದಿವರ್ಗದವರು ತಮ್ಮ ಸಂಶೋಧನಾತ್ಮಕ ವೃತ್ತಿ ಸಾಧನೆಗಳೊಡನೆ ಶಿಕ್ಷಣ ಸಿಬ್ಬಂದಿಯವರ ಸ್ಥಾನಮಾನಗಳನ್ನೇ ತೌಲನಿಕವಾಗಿ ಹೊಂದಿರಬೇಕು. ವಿಶ್ವವಿದ್ಯಾಲಯಗಳ ಗ್ರಂಥಾಲಯಗಳಲ್ಲಿ ಸೇವೆ ಸಲ್ಲಿಸುತ್ತಿರುವ ಗ್ರಂಥಪಾಲರು ಕೊನೆಯ ಪಕ್ಷ ವೇತನ ಸಂಬಂಧದಲ್ಲಾದರೂ ಶಿಕ್ಷಣ ಸಿಬ್ಬಂದಿಯ ಸ್ಥಾನಮಾನಗಳನ್ನು ಹೊಂದಿದ್ದಾರೆ. ಆದರೆ ಕೆಲವು.ಸಂದರ್ಭಗಳಲ್ಲಿ, ಕಾಲೇಜಿನ ಗ್ರಂಥಪಾಲರು ವೇತನ ಹಾಗೂ ಅಂತಸ್ತಿನ ವಿಷಯಗಳಲ್ಲಿ ಆಡಳಿತ ಹಾಗೂ ಬೋಧನ ಸಿಬ್ಬಂದಿಗಿಂತ ಕಡಿಮೆಯಾಗಿದ್ದರೆ ಇಲ್ಲವೆ ಶಿಕ್ಷಣ ಕ್ಷೇತ್ರದ ತರಬೇತು ಸಿಬ್ಬಂದಿಯ ದರ್ಜೆಗೆ ಒಂದಷ್ಟು ಮೇಲಿದ್ದಾರೆ. ಇಂಥ ಪರಿಸ್ಥಿತಿಗಳಲ್ಲಿ ಕಾಲೇಜಿನ ಗ್ರಂಥಪಾಲರು ನಿರ್ಣಯಕಾರಿ ಸಮಿತಿಗಳೊಡನೆ ಯುಕ್ತ ಸಂಬಂಧವನ್ನು ಕಲ್ಪಿಸಿಕೊಳ್ಳಲು ಅಸಮರ್ಥರಾಗಿದ್ದಾರೆ.

5 ನಿರ್ಣಯಕಾರಿ ಸಮಿತಿಗಳಲ್ಲಿ ಭಾಗವಹಿಸುವ ಮೂಲಕ ವಿಶ್ವವಿದ್ಯಾಲಯ ಹಾಗೂ ಕಾಲೇಜುಗಳ ಶಿಕ್ಷಣ ಕಾರ್ಯಕ್ರಮಗಳನ್ನು, ನಿಜಕ್ಕೂ ಶಿಕ್ಷಣದ ಮಧ್ಯವರ್ತಿ ಸಂಸ್ಥೆಯಾದ ಗ್ರಂಥಾಲಯದೊಡನೆ

ಔಪಚಾರಿಕವಾಗಿ ಹಾಗೂ ಅನೌಪಚಾರಿಕವಾಗಿ ಎಷ್ಟರ ಮಟ್ಟಿಗೆ ಸಂಘಟಿಸಬಹುದು? ಗ್ರಂಥಾಲಯ ಚಟುವಟಿಕೆಗಳಲ್ಲಿ ಮುಂದಾಳುತನ ಎಲ್ಲಿ ಉಗಮಿಸುತ್ತದೆ ಹಾಗೂ ಗ್ರಂಥಾಲಯಕ್ಕೆ ಶಿಕ್ಷಣ ಸಿಬ್ಬಂದಿಯ ಸಹಕಾರ ಎಷ್ಟರಮಟ್ಟಿಗೆ ಅಗತ್ಯ?

6 ಗ್ರಂಥಾಲಯ ಆಡಳಿತವನ್ನು ಗ್ರಂಥಪಾಲನಿಗೆ ವಹಿಸುವುದರಿಂದ ಆತ ತನ್ನ ವಿವಿಧ ಕರ್ತವ್ಯಗಳನ್ನು ಹಾಗೂ ಹೊಣೆಗಾರಿಕೆಗಳನ್ನು ನಿರ್ವಹಿಸುವುದರಲ್ಲಿ ತನಗೆ ನೆರವು ನೀಡಬಲ್ಲ ದಕ್ಷ ಸಿಬ್ಬಂದಿಯನ್ನು ಆರಿಸಿಕೊಳ್ಳಲು ಅವಕಾಶ ಹೊಂದಿರಬೇಕು.

7 ಅಭಿವೃದ್ಧಿ ಯೋಜನೆಗಳನ್ನು ಕಾರ್ಯಗತ ಮಾಡಲು ತನ್ನ ಅಧೀನ ಸಿಬ್ಬಂದಿಯ ಸಹಕಾರ ಗ್ರಂಥಪಾಲನಿಗೆ ಅಗತ್ಯ: ಗ್ರಂಥಪಾಲನಿಗೂ ಆತನ ಅಧೀನ ಸಿಬ್ಬಂದಿಗೂ ಇರುವ ಸಂಬಂಧ ಗ್ರಂಥಾಲಯದ ಮತ್ತೊಂದು ಅಂಶವಾಗಿದೆ. ಇಲ್ಲಿ ಸಹ. ಮುಖ್ಯ ಗ್ರಂಥಪಾಲ ಪ್ರಮುಖ ಪಾತ್ರ ವಹಿಸಿ ಗ್ರಂಥಾಲಯದ ಆಂತರಿಕ ಆಡಳಿತದ ಬಗ್ಗೆ ಸಮಿತಿಗಳನ್ನು ರಚಿಸಿ ಬಲಯುತವಾದ ಮುಖಂಡತ್ವವನ್ನು ಸ್ಥಾಪಿಸಬೇಕಾಗಿದೆ.

ದುರದೃಷ್ಟವಶಾತ್. ಯಾವುದೇ ಆಗಲಿ ನಿರ್ದಿಷ್ಟ ತೀರ್ಮಾನಕ್ಕೆ ಬರಲು. ವಿಶ್ವವಿದ್ಯಾನಿಲಯ ಹಾಗೂ ಕಾಲೇಜು ಗ್ರಂಥಾಲಯಗಳ ಆಡಳಿತಕ್ಕೆ ಹೊಂದಿಕೊಂಡಿರುವ ಸಂಪ್ರದಾಯ ಮತ್ತು ಕಾರ್ಯ ವಿಧಾನಗಳ ಬಗ್ಗೆ ಸಾಕಷ್ಟು ಅಂಕಿ-ಅಂಶಗಳು ದೊರಕುವಂತಿಲ್ಲ. ಯುಕ್ತವಾದ ರೂಢಿಗಳನ್ನು ಹಾಗೂ ಕಾರ್ಯ ವಿಧಾನಗಳನ್ನು ರೂಪಿಸಲು ಅಂಥ ಅಂಕಿ-ಅಂಶ ವಿವರಗಳು ವೈಜ್ಞಾನಿಕ ವಿಧಾನದಲ್ಲಿ ಸಂಗ್ರಹವಾಗಬೇಕು. ಆ ಬಗ್ಗೆ ವೃತ್ತಿನಿರತ ಗ್ರಂಥಪಾಲರು. ಗ್ರಂಥವಿಜ್ಞಾನ ಶಾಲೆಗಳು ಹಾಗೂ ವಿಶ್ವವಿದ್ಯಾಲಯ ಧನಸಹಾಯ ಆಯೋಗ ಗ್ರಂಥಪಾಲ ವೃತ್ತಿಯ ಅಭಿವೃದ್ಧಿಗಾಗಿ ಅಧ್ಯಯನ ನಡೆಸಬೇಕು.

ಮೇಲೆ ತಿಳಿಸಿರುವ ಉದ್ದೇಶಗಳ ಸಾಧನೆ ಗ್ರಂಥಪಾಲರಿಂದಲೇ ಸಾಧ್ಯವಾಗದು. ಗ್ರಂಥಾಲಯವನ್ನು ತರಗತಿ ಬೋಧನೆಗೆ ಭಿನ್ನವಾಗಿ. ಶಿಕ್ಷಣದ ಮುಖ್ಯ ಮಧ್ಯವರ್ತಿ ಸಂಸ್ಥೆಯನ್ನಾಗಿ ಪರಿವರ್ತಿಸುವುದರಲ್ಲಿ ರಚನಾತ್ಮಕ ಹಾಗೂ ಕ್ರಿಯಾತ್ಮಕ ಕಾರ್ಯಕ್ರಮಗಳ ಮೂಲಕ ಗ್ರಂಥಪಾಲರು ತಮ್ಮ ಶೈಕ್ಷಣಿಕ ಸಾಧನೆ. ಶ್ರದ್ಧೆ. ಗ್ರಂಥಾಲಯದ ಶೈಕ್ಷಣಿಕ ಪಾತ್ರದಲ್ಲಿ ದೃಢನಂಬಿಕೆ—ಇವುಗಳನ್ನು ವ್ಯಕ್ತಪಡಿಸಿದರೆ ಮಾತ್ರವೇ. ತಮಗೆ ಸಲ್ಲಬೇಕಾದ ಗೌರವ ಹಾಗೂ ಮನ್ನಣೆಗಳಿಗೆ ಅವರು ಪಾತ್ರರಾಗುತ್ತಾರೆ. ಇದು ಸಫಲವಾಗಬೇಕಾದರೆ ಗ್ರಂಥಾಲಯ ಕುಲಪತಿಗಳ. ಪ್ರಿನ್ಸಿಪಾಲರ ಹಾಗೂ ಶಿಕ್ಷಣ ವಿಭಾಗಗಳ ನೆರವನ್ನು ಮತ್ತು ಮುಖ್ಯವಾಗಿ ಯಾವ ವಿದ್ಯಾರ್ಥಿಗಳ ಸಲುವಾಗಿ ಗ್ರಂಥಾಲಯ ರಚನೆಯಾಗಿ ಸ್ಥಾಪಿತವಾಗಿದೆಯೋ ಆ ಎಲ್ಲ ವಿದ್ಯಾರ್ಥಿಗಳ ಸಹಕಾರವನ್ನೂ ಪಡೆದುಕೊಳ್ಳಬೇಕು.

(ಅನುವಾದ: ವಿ. ಜಿ. ಕೃಷ್ಣಮೂರ್ತಿ)

ವಿಲ್ಯಂ ಮೂಡಸ್ತಾ

ಭಾಷಾಸ್ವರೂಪ

ದಿನನಿತ್ಯ ಸೇವಿಸುವ ಆಹಾರ, ಕುಡಿಯುವ ನೀರು, ಉಸಿರಾಡುವ ಗಾಳಿ, ಇವುಗಳ ಬಗ್ಗೆ ಶ್ರೀಸಾಮಾನ್ಯರು ವಿವೇಚಿಸುವುದು ಕಡಿಮೆ; ಅದರಂತೆ ದಿನನಿತ್ಯ ಆಡುವ ಭಾಷೆಯನ್ನು ಕುರಿತೂ. ಸಾಮಾನ್ಯದೃಷ್ಟಿಗೆ ಸಾಮಾನ್ಯವಾದ ಇವು ವೈಜ್ಞಾನಿಕ ದೃಷ್ಟಿಗೆ ಅಸಾಮಾನ್ಯವೆಂಬುದಕ್ಕೆ ಅವುಗಳ ಬಗ್ಗೆ ನಡೆಯುವ ವೈಜ್ಞಾನಿಕ ವಿವೇಚನೆಗಳೇ ಸಾಕ್ಷಿ.

ಪ್ರಪಂಚದಲ್ಲಿರುವ ಜೀವಿಗಳಲ್ಲಿ ಸ್ಥೂಲವಾಗಿ ಸಸ್ಯ ಹಾಗೂ ಪ್ರಾಣಿವರ್ಗಗಳು ಕಂಡುಬಂದರೆ ಮಾನವವರ್ಗ ಆ ಎರಡನ್ನೂ ಒಳಗೊಂಡ ಮತ್ತೊಂದು ವಿಶಿಷ್ಟ ಜೀವಿವರ್ಗ. ಮಾನವ ಸಸ್ಯಗಳಂತೆ ಬೆಳೆಯಬಲ್ಲ. ಪ್ರಾಣಿಗಳಂತೆ ಪಂಚೇಂದ್ರಿಯಗಳ ಅನುಭವಗಳನ್ನು ಪಡೆಯಬಲ್ಲ. ಇಷ್ಟೇ ಅಲ್ಲ, ಇವೆರಡೂ ವರ್ಗಗಳಿಗೂ ಅಸಾಧ್ಯವಾದ ಭಾಷಾಸಾಧನದ ಮೂಲಕ ತನ್ನ ಅನುಭವಗಳನ್ನು ಸಾಂಕೇತಿತವಾಗಿ, ಸ್ಪಷ್ಟವಾಗಿ ಇತರರಿಗೆ ತಿಳಿಸಬಲ್ಲ; ಅಂತೆಯೇ ಪರರ ಅನುಭವಗಳನ್ನು ತಿಳಿಯಬಲ್ಲ.

ಮನಸ್ಸುಳ್ಳ ಜೀವಿಯೇ ಮನುಷ್ಯ. ಆತ ಇತರ ಪ್ರಾಣಿಗಳಂತೆ ಗುಂಪುಜೀವಿ ಅಲ್ಲ; ಅವನು ಸಮಾಜಜೀವಿ. ಮಾನವ ವಿಚಾರಮಾಡುವಲ್ಲಿ ತನ್ನ ಬಗ್ಗೆಯೂ, ತನ್ನ ವೈವಿಧ್ಯಮಯ ಪರಿಸರದ ಬಗ್ಗೆಯೂ ಆಸಕ್ತಿ ತೋರಿಸುತ್ತಾನೆ. ತತ್ಫಲವಾಗಿ ತಾನು ಪರಿಪೂರ್ಣ ಜೀವಿಯಲ್ಲ, ಒಂದು ಅಪೂರ್ಣ ಜೀವಿಯೆಂದು ತಿಳಿದುಕೊಳ್ಳುತ್ತಾನೆ. ಕಾರಣ ಪರಿಪೂರ್ಣತೆಯತ್ತ ಸಾಗಲು ಪ್ರಯತ್ನಿಸುತ್ತಾನೆ. ಈ ಯತ್ನದಲ್ಲಿ ತನ್ನ ಶಾರೀರಿಕ, ಮಾನಸಿಕ, ಸಾಮಾಜಿಕ, ಆಧ್ಯಾತ್ಮಿಕ ಆವಶ್ಯಕತೆಗಳ ಅರಿವೂ ಆತನಿಗಿದೆ. ಇವನ್ನು ಪೂರೈಸಲು ಇತರರ ಬೆಂಬಲದ ಅಗತ್ಯವೂ ಆತನಿಗೆ ತಿಳಿದಿದೆ. ಆದ್ದರಿಂದ ತನ್ನ ಆಗುಹೋಗುಗಳನ್ನು, ಆಶೆ ಆಕಾಂಕ್ಷೆಗಳನ್ನು, ಬೇಕು ಬೇಡಗಳನ್ನು, ತುಡಿತ–ಮಿಡಿತಗಳನ್ನು ಪರರಿಗೆ ತಿಳಿಸಿ ಅವರ ಸಹಕಾರವನ್ನು ಪಡೆಯಲು, ಹಾಗೆಯೇ ಇತರರನ್ನು ತಿಳಿದುಕೊಳ್ಳಲು ಮಾನವ ಒಂದು ವಿಶಿಷ್ಟವಾದ ಸಂಪರ್ಕಸಾಧನವನ್ನು ರಚಿಸಿಕೊಂಡು ಪ್ರಾಣಿವರ್ಗದಲ್ಲಿ ಅದ್ವಿತೀಯನಾಗಿ ಮೆರೆಯುತ್ತಾನೆ. ಈ ಸಾಧನವೇ ಭಾಷೆ.

ಭಾಷೆ ಉಸಿರಿನ ಕೂಸಲ್ಲ. ಅದು ಮಾನವ ಬುದ್ಧಿಯ ಕೂಸು. ಉಸಿರಾಡುವ ಪ್ರಾಣಿಗಳೆಲ್ಲವೂ ಮಾತನಾಡಲಾರವು. ಉಸಿರಾಡುವ ಬುದ್ಧಿಜೀವಿಯಾದ ಮಾನವ ಮಾತ್ರ ಮಾತನಾಡಬಲ್ಲ. ಕಾರಣ ಭಾಷೆ ಮಾನವಬುದ್ಧಿಯ ಕೊಡುಗೆ. ಅಂತೆಯೇ ಅದರ ದ್ಯೋತಕ. ಭಾಷೆಯಿಂದಾಗಿ ಮಾನವ ಬರಿಯ ಬುದ್ಧಿಶಕ್ತಿಯುಳ್ಳ ಪ್ರಾಣಿ ಆಗಿ ಉಳಿಯದೆ, ಮಾತನಾಡುವ ಪ್ರಾಣಿಯೂ ಆಗಿದ್ದಾನೆ. ಇದನ್ನು ಚೆನ್ನಾಗಿ ಅರಿತುಕೊಂಡು ಹಾಕೆಟ್ ಎಂಬ ಭಾಷಾವಿಜ್ಞಾನಿ "ಭಾಷೆ ಮಾನವ ಜನಾಂಗದ ಅತ್ಯಮೂಲ್ಯವಾದ ಏಕೈಕ ಸೊತ್ತು" ಎಂದು ಹೇಳಿದ್ದಾನೆ.

ಭಾಷೆಯನ್ನಾಡುವುದು ಸುಲಭ. ಆದರೆ ಅದನ್ನು ವ್ಯಾಖ್ಯಾನಿಸುವುದು ಅಷ್ಟು ಸುಲಭವಲ್ಲ. ಪಂಡಿತರನೇಕರು ಈ ದಿಸೆಯಲ್ಲಿ ದುಡಿದು, ತಮ್ಮತಮ್ಮ ರೀತಿಯಲ್ಲಿ ವ್ಯಾಖ್ಯೆಯನ್ನಿತ್ತಿದ್ದಾರೆ. ಬ್ಲಾಕ್, ಟ್ರೇಗರ್ ಇವರು ಕೊಟ್ಟ ವ್ಯಾಖ್ಯೆ ಇಂದು ಬಹುಮತ ಪಡೆದಿದೆ. ಅವರ ಪ್ರಕಾರ ಭಾಷೆ ಎಂಬುದು "ಪರಸ್ಪರ ಸಾಮಾಜಿಕ ಜೀವನಕ್ಕಾಗಿ ಬಳಸುವ ಯಾದೃಚ್ಛಿಕ, ಉಚ್ಚಾರಣಾತ್ಮಕ ಧ್ವನಿ ಸಂಕೇತಗಳ ವ್ಯವಸ್ಥೆ."

ಪ್ರಪ್ರಥಮವಾಗಿ ಭಾಷೆಯೆಂಬುದು ಸಂಕೇತಗಳ ಒಂದು ವ್ಯವಸ್ಥೆ. ಭಾಷೆ ಭಾಷೆಗಳಲ್ಲಿ ಒಂದು ಕ್ರಮ. ರಚನೆ, ಯೋಜನೆಯನ್ನು ಕಾಣುತ್ತೇವೆ. ಭಾಷೆಯಲ್ಲಿರುವುದು ಸಂಕೇತಗಳ ವ್ಯವಸ್ಥೆ. ಸಂಕೇತ ಯಾವುದರದೋ ಒಂದು ಪ್ರತಿನಿಧಿ. ರಾಷ್ಟ್ರಧ್ವಜ ರಾಷ್ಟ್ರವನ್ನು ಪ್ರತಿನಿಧಿಸುವಂತೆ ಭಾಷಾಸಂಕೇತಗಳು ನಮ್ಮ ಮನಸ್ಸಿನಲ್ಲಿರುವ ಆಲೋಚನೆಗಳನ್ನು ಪ್ರತಿನಿಧಿಸುತ್ತವೆ.

ಭಾಷೆಯಲ್ಲಿ ಕಂಡುಬರುವ ವ್ಯವಸ್ಥೆಗೆ. ನಿಯಮಬದ್ಧತೆಗೆ ಒಂದು ಉದಾಹರಣೆಯನ್ನು ಇಲ್ಲಿ ಕೊಡಬಹುದು. ಕನ್ನಡದಲ್ಲಿ ಬಹುವಚನಕ್ಕೆ ಅನೇಕ ರೂಪಗಳಿವೆ. ಅವು ಕೂಡ ಒಂದು ನಿಯಮಕ್ಕೊಳಗಾಗಿಯೇ ಬಳಸಲ್ಪಡುತ್ತವೆ. /-ಗಳ್/ ಎಂಬುದು ಅಮಹತ್‌ಲಿಂಗ ಮತ್ತು ವಿಶಿಷ್ಟನಾಮರೂಪ ಗಣದ ಪ್ರಕೃತಿಗಳ ಮುಂದೆಯೂ /-ದಿರ್/ ಎಂಬುದು ನಾಂತ್ಯ ಬಂಧುವಾಚಕ ಪ್ರಕೃತಿಗಳ ಮುಂದೆಯೂ /-ಅಂದಿರ್/ ನಾಂತ್ಯವಲ್ಲದ ಬಂಧುವಾಚಕ ಪ್ರಕೃತಿಗಳ ಮುಂದೆಯೂ /-ರು/ ಇತರೆಡೆಗಳಲ್ಲಿಯೂ ಬರುತ್ತವೆ. ಆನೆಗಳು. ಮಂತ್ರಿಗಳು. ಅಕ್ಕಂದಿರು. ಅತ್ತೆಯಂದಿರು. ಹುಡುಗರು......

ಭಾಷೆಯೆಂಬುದು ಉಚ್ಚಾರಣಾತ್ಮಕ ಧ್ವನಿ ಸಂಕೇತಗಳ ವ್ಯವಸ್ಥೆ

ಸಂಕೇತಗಳಲ್ಲಿ ಹಲವಾರು ವಿಧ. ಹಾವಭಾವ: ಚಿತ್ರಪಟ: ಬಾವುಟ: ಕೆಂಪು ಅಥವಾ ಹಸುರು ಬೆಳಕು; ಬರಹ–ಇವೆಲ್ಲ ದೃಶ್ಯಸಂಕೇತಗಳು. ಡೋಲುಬಡಿತ. ಕಹಳೆನಾದ. ಸೈರನ್‌ಕೂಗು. ಘಂಟಾನಾದ, ಶಿಳ್ಳು. ಮೋರ್ಸ್ ಕೋಡ್ ಮುಂತಾದವು ಶ್ರವಣ ಸಂಕೇತಗಳು. ಮಾನವ ತನ್ನ ಆಲೋಚನೆ. ಚಿಂತನೆಗಳ ಅಭಿವ್ಯಕ್ತಿಗೆ ತನ್ನ ಧ್ವನ್ಯಂಗಗಳಿಂದ ಹುಟ್ಟಿಸುವ ನಾದಗಳು ಉಚ್ಚಾರಣಾತ್ಮಕ ಧ್ವನಿಗಳು. ಈ ಧ್ವನಿ ಸಂಕೇತಗಳೇ ಭಾಷಾ ಸಂಕೇತಗಳು. ಉಳಿದವುಗಳು ಭಾಷಾ ಸಂಕೇತಗಳಲ್ಲ.

ಭಾಷೆಯೆಂಬುದು ಯಾದೃಚ್ಛಿಕ ಉಚ್ಚಾರಣಾತ್ಮಕ ಧ್ವನಿ ಸಂಕೇತಗಳ ವ್ಯವಸ್ಥೆ

ಯಾದೃಚ್ಛಿಕವೆಂದರೆ ಇಚ್ಛೆಯನ್ನು ಅವಲಂಬಿಸಿರುವುದು ಎಂದು ಅರ್ಥ. ಭಾಷಾ ಸಂಕೇತಗಳಲ್ಲಿ ಅರ್ಥ ಅನಾದಿಯಿಂದ ಹುದುಗಿರುವುದಿಲ್ಲ. ಅವು ಕಾಲ. ಸಂಸ್ಕೃತಿ–ಪರಿಸರಗಳನ್ನು ಹೊಂದಿಕೊಂಡು ಅರ್ಥವನ್ನು ಪಡೆದುಕೊಳ್ಳುತ್ತವೆ. /g ⊃ d/ಎಂಬ ಧ್ವನಿ ಮೊತ್ತಕ್ಕೆ ಇಂಗ್ಲಿಷರು ದೇವರು (god) ಎಂಬ ಅರ್ಥವನ್ನು ಕಲ್ಪಿಸಿದರೆ ಕೊಂಕಣರು 'ಬೆಲ್ಲ' ಎಂಬರ್ಥವನ್ನು ಕಲ್ಪಿಸಿದ್ದಾರೆ. ಒಂದೇ ವಸ್ತುವನ್ನು ಸೂಚಿಸಲು ಬೇರೆ ಬೇರೆ ಸಮಾಜದವರು ಬೇರೆ ಬೇರೆ ಸಂಕೇತಗಳನ್ನು ಆರಿಸಬಹುದು. 'ದನ' ಎಂಬ ಪ್ರಾಣಿಗೆ ತುಳುವರು 'ಪೆತ್ತ' ಎಂದೂ ಕೊಂಕಣರು 'ಗಾಯ್' ಎಂದೂ ಇಂಗ್ಲಿಷರು "cow" ಎಂದೂ ಭಿನ್ನ ಭಿನ್ನ ಭಾಷಾ ಸಂಕೇತಗಳನ್ನು ಆರಿಸಿದುದನ್ನು ಗಮನಕ್ಕೆ ತರಬಹುದು. ಆದ್ದರಿಂದಲೇ ಭಾಷಾ ಸಂಕೇತಗಳು ಯಾದೃಚ್ಛಿಕವೆನ್ನುವುದು.

ಒಂದೇ ವಸ್ತುವನ್ನು ನಿರ್ದೇಶಿಸುವಲ್ಲಿ ಭಾಷಾ ಸಂಕೇತಗಳನ್ನು ಆರಿಸುವಾಗ ಅಥವಾ ಒಂದೇ ಧ್ವನಿಮೊತ್ತಕ್ಕೆ ವಿವಿಧ ಅರ್ಥಗಳನ್ನು ಕಲ್ಪಿಸುವಾಗ ಸಮಾಜದ ವ್ಯಕ್ತಿಗಳು ಸಾಮಾನ್ಯವಾಗಿ ಒಂದೆಡೆ ಸೇರಿ ನಿರ್ಣಯಿಸುವದಿಲ್ಲ. ಅವೆಲ್ಲ ಲೋಕರೂಢಿಯಿಂದಲೇ ಸಹಜವಾಗಿ ಸಮಾಜದಲ್ಲಿ ನಡೆಯುವ ಪ್ರಕ್ರಿಯೆಗಳು.

ಭಾಷೆ ಒಂದು ರಚನೆ. ಈ ರಚನೆ ಎರಡು ರೀತಿ. ಒಂದು ಸಾಂದ್ರ, ಇನ್ನೊಂದು ಅಸಾಂದ್ರ. ಯಾವ ರಚನೆಯನ್ನು ಆಂತರಿಕವಾಗಿ ಬೆಳೆಯಿಸಲು ಅಸಾಧ್ಯವೋ ಅದೇ ಸಾಂದ್ರರಚನೆ. /ನಾಯಿಗಳು/ ಎಂಬ ರಚನೆಯ ಒಳಗೆ ಅರ್ಥಾತ್ ಪ್ರಕೃತಿ (ಸ್ಟೆಂ) ಮತ್ತು ಪ್ರತ್ಯಯಗಳ ನಡುವೆ ಯಾವ ಭಾಷಾ ಸಂಕೇತವನ್ನು ಸೇರಿಸಲಿಕ್ಕಾಗದು. ಕಾರಣ ಅದು ಸಾಂದ್ರ ರಚನೆ (ಟೈಟ್ ಕನ್ಸ್‌ಟ್ರಕ್ಷನ್). ಯಾವ ರಚನೆಯನ್ನು ಆಂತರಿಕವಾಗಿ ಬೆಳೆಯಿಸಲು ಸಾಧ್ಯವೋ ಅದು ಅಸಾಂದ್ರ ರಚನೆ (ನಾನ್‌ಟೈಟ್ ಕನ್ಸ್‌ಟ್ರಕ್ಷನ್). /ನಾಯಿಬಾಲ/ಎಂಬ ರಚನೆಯನ್ನು /ನಾಯಿಯ ಬಾಲ/. /ನಾಯಿಯ ಡೊಂಕು ಬಾಲ/ ಇತ್ಯಾದಿಯಾಗಿ ಬೆಳೆಯಿಸುವುದು ಸಾಧ್ಯ.

ಭಾಷಾರಚನೆಯನ್ನುಂಟುಮಾಡುವ ಘಟಕಗಳನ್ನೂ ಆಕೃತಿಮಾ (ಮಾರ್ಫೀಂ)ಗಳೆಂದು ಕರೆಯುತ್ತಾರೆ. ವೈದೃಶ್ಯ ಪ್ರಸಾರದಲ್ಲಿರುವ ಅರ್ಥವುಳ್ಳ ಅತ್ಯಲ್ಪ ಬಹುರೂಪಿ ಘಟಕವೇ ಆಕೃತಿಮಾ.

ಒಂದೇ ಪರಿಸರದಲ್ಲಿ ಎರಡು ಭಾಷಾ ಘಟಕಗಳು ಅರ್ಥಭಿನ್ನತೆಯನ್ನುಂಟುಮಾಡಿದರೆ ಅವು ವೈದೃಶ್ಯ ಪ್ರಸಾರದಲ್ಲಿವೆ ಎನ್ನುತ್ತೇವೆ. ಭಾಷಾಘಟಕಗಳ ನೆರೆಹೊರೆಯೇ ಅವುಗಳ ಪರಿಸರ. ಯಾವ ಘಟಕವನ್ನು ಇನ್ನೂ ಒಡೆದರೆ ಅರ್ಥಹೀನವಾಗುತ್ತದೆಯೋ ಅದೇ ಅತ್ಯಲ್ಪ ಘಟಕ. ಪರಿಸರಗಳನ್ನು ಹೊಂದಿಕೊಂಡು ಬೇರೆ ಬೇರೆ ರೂಪಗಳನ್ನು ಹೊಂದಬಲ್ಲ ಘಟಕಗಳೇ ಬಹುರೂಪಿ ಘಟಕ.

/ನಾಯಿಗಳು/ ಎಂಬ ರಚನೆಯನ್ನು ಒಡೆದರೆ ನಮಗೆ /ನಾಯಿ/ ಮತ್ತು /ಗಳು/ ಎಂಬ ಅತ್ಯಲ್ಪ ಹಾಗೂ ಅರ್ಥವುಳ್ಳ ಎರಡು ಘಟಕಗಳು ದೊರಕುತ್ತವೆ. ಅವುಗಳಿಗೆ /ಬಂತು/ ಎಂಬ ಪರಿಸರವನ್ನು ನಾವು ಕಲ್ಪಿಸಿದಾಗ /ನಾಯಿ/ ಎಂಬುದಕ್ಕೆ ಒಂದರ್ಥ ಬಂದರೆ ಅದೇ ಅರ್ಥ /ಗಳು/ ಎಂಬುದಕ್ಕೆ ಬರಲಾರದು. ಕಾರಣ /ನಾಯಿ/ ಮತ್ತು /ಗಳು/ ವೈದೃಶ್ಯ ಪ್ರಸಾರದಲ್ಲಿರುವ ಅತ್ಯಲ್ಪ ಘಟಕಗಳು. /ನಾಯಿಗಳು/ ಎಂಬುದನ್ನು ಅಮಹತ್ ನಾಮರೂಪ+ ಬಹುವಚನವೆಂದು ವಿಶ್ಲೇಷಿಸಿದರೆ ಅಲ್ಲಿ ಎರಡು ಆಕೃತಿಮಾಗಳಿವೆ: 1 ಅಮಹತ್ ನಾಮರೂಪ, 2 ಬಹುವಚನ ಪ್ರತ್ಯಯ.

ಅಮಹತ್ ಆಕೃತಿಮಾ ನಾಯಿ, ಬೆಕ್ಕು, ಕುರಿ ಮುಂತಾಗಿ ಹಲವಾರು ರೂಪಗಳಿಂದ ವ್ಯಕ್ತವಾಗಬಹುದು. ಬಹುವಚನ ಪ್ರತ್ಯಯ ಪರಿಸರವನ್ನು ಹೊಂದಿಕೊಂಡು /ರು, ಅಂದಿರು, ದಿರು, ಗಳು/ ಮೊದಲಾದ ರೂಪಗಳಿಂದ ವ್ಯಕ್ತವಾಗಬಹುದು. ಈ ಕಾರಣದಿಂದ ಆಕೃತಿಮಾ ಬಹುರೂಪಿ. ನಿರ್ದಿಷ್ಟ ಪರಿಸರದಲ್ಲಿ ಬರುವ ಆಕೃತಿಮಾದ ರೂಪವೇ ಉಪಾಕೃತಿಮಾ. ಅದು ಸದಾ ಏಕರೂಪಿ. ಹೀಗೆ /ರು, ಅಂದಿರು, ದಿರು, ಗಳು/ ಇವೆಲ್ಲ ಉಪಾಕೃತಿಮಾಗಳು. ಅವುಗಳ ಮೊತ್ತ 'ಬಹುವಚನವೆಂಬುದು ಆಕೃತಿಮಾ. ಅದು ಬಹುರೂಪಿ. ಅದನ್ನು ಅತ್ಯಂತ ಪ್ರಸಾರವುಳ್ಳ ರೂಪದಿಂದ ಸಾಂಕೇತಿಸಬಹುದು. ಆಕೃತಿಮಾವನ್ನು [ ]ಆವರಣದಲ್ಲಿಡುವದು ರೂಢಿ. [ಬಹುವಚನ] /ರು, ಅಂದಿರು, ದಿರು, ಗಳು/ ಅಥವಾ [ರು]/ ಅಂದಿರು, ದಿರು, ಗಳು, ರು/ ಇವು ಉಪಾಕೃತಿಮಾಗಳು.

ಭಾಷೆಯಲ್ಲಿ ಸ್ವತಂತ್ರವಾಗಿ ಬಳಸತಕ್ಕ ರೂಪಗಳು ಮುಕ್ತಾಕೃತಿಮಾಗಳು, ಉಳಿದವು ಬದ್ಧಾಕೃತಿಮಾಗಳು. /ನಾಯಿ, ಮರ, ಹುಡುಗ.../ ಇವು ಮುಕ್ತಾಕೃತಿಮಾಗಳು. /ರು, ಗಳು, ಅಂದಿರು/ ಇವು ಬದ್ಧಾಕೃತಿಮಾಗಳು.

ಆಕೃತಿಮಾ ಅರ್ಥದೃಷ್ಟಿಯಿಂದ ಅತ್ಯಲ್ಪವಾದರೂ ರಚನಾದೃಷ್ಟಿಯಿಂದ ಅತ್ಯಲ್ಪವಲ್ಲ. ಧ್ವನಿಮಾ ಎಂಬ ಘಟಕಗಳಿಂದ ಆಕೃತಿಮಾ ರೂಪಿತವಾಗಿದೆ. ವೈದೃಶ್ಯ ಪ್ರಸಾರದಲ್ಲಿರುವ ಅರ್ಥವಿಲ್ಲದ ಅತ್ಯಲ್ಪ ಬಹುರೂಪಿ ಭಾಷಾಘಟಕವೇ ಧ್ವನಿಮಾ.

ಕುಡಿ→ಕ್ + [ಉ + ಡ್ + ಇ
ಗುಡಿ→ಗ್ + [ಉ + ಡ್ + ಇ–ಎಂಬಲ್ಲಿ ಕ್, ಗ್ ಗಳು ಏಕಪ್ರಸಾರದಲ್ಲಿ ಅರ್ಥಭಿನ್ನತೆಯನ್ನು ತರುತ್ತವೆ. ಕಾರಣ ಅವು ವೈದೃಶ್ಯ ಪ್ರಸಾರದಲ್ಲಿವೆ. ಮೇಲಿನ ಉಚ್ಚಾರಣೆಗಳಲ್ಲಿ /ಕ್, ಗ್/ಗಳಿಗೆ ಅರ್ಥವಿಲ್ಲ. ಮಾತ್ರವಲ್ಲ. ಅವುಗಳನ್ನು ಇನ್ನು ಮುಂದೆ ವಿಭಜಿಸಲಾಗುವದಿಲ್ಲವಾದುದರಿಂದ ಅವು ಅತ್ಯಲ್ಪ ಘಟಕಗಳು. ಕಿಟಿಕಿ, ಕಡಿ, ಕುಡಿ ಎಂಬ ರೂಪಗಳಲ್ಲಿ /ಕ್/ ಹಲವಾರು ರೂಪಗಳಿಂದ ವ್ಯಕ್ತಗೊಳ್ಳುವದರಿಂದ ಧ್ವನಿಮಾ ಬಹುರೂಪಿಯಾಗಿದೆ. ನಿರ್ದಿಷ್ಟ ಪರಿಸರದಲ್ಲಿ ಬರುವ ಅದರ ರೂಪವೇ ಉಪಧ್ವನಿಮಾ (ಅಲೊಫೋನ್). ಹೀಗೆ [ಕ್. ಕ್. ಕ್./ಗಳು /ಕ್/ ಧ್ವನಿಮಾದ ಉಪಧ್ವನಿಮಾಗಳು:

[ಕಿಟಿಕಿ], [ಕಡಿ] [ಕುಡಿ]

ಭಾಷೆ ಉಚ್ಚಾರಣೆಯನ್ನು ಮಾತ್ರವಲ್ಲ, ಅರ್ಥವನ್ನೂ ಒಳಗೊಂಡಿದೆ ಎಂಬುದನ್ನು ಮರೆಯುವಂತಿಲ್ಲ. ಆದರೂ ಭಾಷೆಯ ಸ್ವರೂಪವನ್ನು ವಿಶ್ಲೇಷಿಸುವಲ್ಲಿ ಅರ್ಥಕ್ಕಿಂತ ಉಚ್ಚಾರಣೆಗೆ ಪ್ರಾಧಾನ್ಯ ಸಿಕ್ಕಿದೆ.

ಭಾಷೆಯನ್ನು ಕಲಿಯುವುದು ಮಾನವನಿಗೆ ಮಾತ್ರ ಸಾಧ್ಯವೇ? ಭಾಷಾಶಕ್ತಿಯನ್ನು ಕ್ರಿಯಾರೂಪಕ್ಕಿಳಿಸುವುದೇ ಭಾಷಾಕಲಿಕೆ. ಕಾರಣ ಭಾಷಾಶಕ್ತಿ ಮಾನವೇತರ ಪ್ರಾಣಿಗಳಿಗಿದ್ದರೆ ಅವು ಭಾಷೆ

ಯನ್ನು ಕಲಿಯಬಹುದು. ಮಾನವೇತರ ಪ್ರಾಣಿಗಳಲ್ಲಿ ಭಾಷಾಶಕ್ತಿ ಕ್ರಿಯಾರೂಪದಲ್ಲಿ ಅಭಿವ್ಯಕ್ತಿಗೊಂಡಿದೆಯೇ? ನಾಯಿಗೆ ಹಸಿವಾದಾಗ ಅದೊಂದು ರೀತಿಯಲ್ಲಿ ಬೊಗಳಿದರೆ. ಅದಕ್ಕೆ ಸಂತೋಷವಾದಾಗ ಅದು ಬೊಗಳುವ ಪರಿಯೇ ಬೇರೆ. ಈ ರೀತಿಯಲ್ಲಿ ವಿಭಿನ್ನ ಅವಶ್ಯಕತೆಗಳನ್ನು ಪೂರೈಸಲು ಭಿನ್ನ ಭಿನ್ನ ರೀತಿಯಲ್ಲಿ ಕೂಗುವರೂ ಪ್ರಾಣಿಗಳು ಮೂಕವೆನಿಸುತ್ತವೆ. ಹಾಗಾದರೆ ಮಾನವನ ಭಾಷೆಗೂ ಪ್ರಾಣಿಗಳ ಕೂಗಿಗೂ ವ್ಯತ್ಯಾಸವಾದರೂ ಏನು?

ಮೊತ್ತಮೊದಲನೆಯದಾಗಿ ಪ್ರಾಣಿಗಳ ಕೂಗು ಸಾಂಕೇತಿಕವೆನಿಸಿದರೂ ಯಾದೃಚ್ಛಿಕವಲ್ಲ. ಪ್ರಾಣಿ ಅನುಭವಿಸುವ ಅನುಭವಕ್ಕೂ ಆಗ ಅದು ಮಾಡುವ ಕೂಗಿಗೂ ನೇರವಾದ ಸಂಬಂಧವಿದೆ. ಆ ಕೂಗು ಅನುಭವವನ್ನು ಬಿಟ್ಟು ಇಲ್ಲ. ಉದಾಹರಣೆಗೆ ಹಸಿವಾದಾಗ ಅದು ಒಂದು ರೀತಿಯಲ್ಲಿ ಕೂಗುತ್ತದೆ. ಆ ಕೂಗಿನಲ್ಲಿ ಏನೂ ಬದಲಾವಣೆ ಇಲ್ಲ; ಅಲ್ಲದೆ ಒಂದು ಜಾತಿಯ ಎಲ್ಲ ಪ್ರಾಣಿಗಳೂ ಅದೇ ರೀತಿಯಲ್ಲಿ ಅದೇ ಇಂಗಿತವನ್ನು ತಿಳಿಸಲು ಕೂಗುತ್ತವೆ.

ಮಾನವನ ಭಾಷೆಗೂ ಅರ್ಥಕ್ಕೂ ನೇರವಾದ, ಸಹಜವಾದ ಸಂಬಂಧ ಇಲ್ಲ. ಹಲವಾರು ರೀತಿಗಳಲ್ಲಿ ಧ್ವನಿಗಳನ್ನು ಕೂಡಿಸಿ ಒಂದೇ ವಸ್ತುವನ್ನು ಸೂಚಿಸಲು ಸಾಧ್ಯವಿದೆ: ಅಲ್ಲದೆ ಭಾಷೆಯು ಕೆಲವೇ ಕೆಲವು ಸಂಕೇತಗಳನ್ನು ಉಪಯೋಗಿಸಿ ಹಲವಾರು ಅರ್ಥಗಳನ್ನು ಸೂಚಿಸಬಹುದು. ಇದು ಪ್ರಾಣಿಗಳ ಕೂಗಿನಲ್ಲಿ ಅಸಾಧ್ಯ. ಪ್ರಾಣಿಗಳು ಬಳಸುವ ಸಂಕೇತಗಳು ಯಾದೃಚ್ಛಿಕವಲ್ಲದಿರುವುದೇ ಇದಕ್ಕೆ ಕಾರಣ.

ಮಾನವ ಬಳಸುವ ಭಾಷಾ ಸಂಕೇತಗಳನ್ನು ವಿವಿಧ ರೀತಿಯಲ್ಲಿ ಜೋಡಿಸಿದರೆ ವಿವಿಧ ಭಾಷಾ ರೂಪಗಳಾಗುತ್ತವೆ. ಆದರೆ ಪ್ರಾಣಿಗಳು ಬಳಸುವ ಸಂಕೇತಗಳು ಆಯಾ ಪ್ರಾಣಿ ವರ್ಗಕ್ಕೆ ಸೀಮಿತ. ಕಾರಣ ಅವು ಉತ್ಪಾದಕಗಳಲ್ಲ.

ಭಾಷಾಶಕ್ತಿ ಮಾನವನಿಗೆ ಅನುವಂಶಿಕವಾಗಿದ್ದರೂ ಅದನ್ನು ಆತ ಬಾಹ್ಯ ಪರಿಸರದ ಸಹಾಯದಿಂದ ಕ್ರಿಯಾರೂಪಕ್ಕೆ ಇಳಿಸಬೇಕಾಗುತ್ತದೆ. ಹುಟ್ಟಿದಾರಭ್ಯದಲ್ಲಿ ಯಾವ ಭಾಷೆಯೂ ಆತನಿಗೆ ಬರುವುದಿಲ್ಲ. ಆದರೆ ಪ್ರಾಣಿ ಅದಕ್ಕೆ ಸಹಜವಾದ ಕೂಗನ್ನು ಹುಟ್ಟಿದಾರಭ್ಯ ಬಳಸಬಹುದು. ಕೋಳಿಮರಿ ಮೊಟ್ಟೆಯಿಂದ ಹೊರಬಂದ ತತ್‌ಕ್ಷಣ ತನ್ನ ಕೂಗನ್ನು ಬಳಸುವುದನ್ನು ಕೇಳಿರಬಹುದು.

ಪ್ರಾಣಿಗಳ ಕೂಗಿನಲ್ಲಿ ವ್ಯಾಕರಣ ವ್ಯವಸ್ಥೆ ಕಂಡು ಬರುವುದಿಲ್ಲ. ಮಾನವನ ಪ್ರತಿಭಾಷೆಗೂ ತನ್ನದೇ ಆದ ವ್ಯಾಕರಣ ವ್ಯವಸ್ಥೆ ಇದೆ. ಮಾನವನ ಭಾಷೆಯಲ್ಲಿ ಸಾಂದ್ರ. ಅಸಾಂದ್ರ ರಚನೆಗಳನ್ನು ನಾವು ಗುರುತಿಸಿ ಅವುಗಳ ಘಟಕಗಳಾದ ಆಕೃತಿಮಾಗಳನ್ನು ಕಂಡುಹಿಡಿದು ಅಲ್ಲಿಯ ಧ್ವನಿಮಾ ವ್ಯವಸ್ಥೆಯನ್ನು ತಿಳಿದುಕೊಳ್ಳಬಹುದು. ಅಲ್ಲದೆ ಆಕೃತಿಮಾಗಳನ್ನು ವಿವಿಧ ರೀತಿಯಲ್ಲಿ ಸಂಯೋಜಿಸಿ ಸಂಯುಕ್ತಾಕೃತಿಮಾಗಳನ್ನೂ ಸಮಾಸಗಳನ್ನೂ ಆಕೃತಿಮಾಪುಂಜ(ಫ್ರೇಸ್)ಗಳನ್ನೂ, ವಾಕ್ಯಗಳನ್ನೂ ರಚಿಸಬಹುದು. ಈ ರೀತಿಯ ವ್ಯವಸ್ಥೆ ಪ್ರಾಣಿಗಳ ಕೂಗುಗಳಲ್ಲಿ ಇಲ್ಲ. ಒಂದು ಭಾಷೆಯ ಕುರಿತು ವಿವೇಚನೆಯನ್ನು ನಡೆಯಿಸಲು ಆ ಭಾಷೆಯನ್ನೇ ನಾವು ಬಳಸಬಹುದು. ಆದರೆ ಪ್ರಾಣಿಗಳ ಕೂಗುಗಳ ಕುರಿತು ವಿವೇಚನೆಯನ್ನು ನಡೆಯಿಸಲು ಆ ಕೂಗುಗಳನ್ನು ಬಳಸಲಾಗುವುದಿಲ್ಲ.

ಭಾಷೆ ಸಹಜವಾಗಿ ಶಾಬ್ದವಾದರೂ ಮಾನವ ಸಂಸ್ಕೃತಿಯ ಬೆಳವಣಿಗೆ. ಪರಿಸರದ ಅನುಕೂಲತೆಗಳನ್ನು ಅಳವಡಿಸಿ ಅದಕ್ಕೆ ಚಾಕ್ಷುಷ ರೂಪವೂ ಬಂದಿದೆ. ಅಲ್ಲದೆ. ಅದು ದೈನಂದಿನ ವ್ಯವಹಾರಕ್ಕೆ ಮಾತ್ರ ಸೀಮಿತವಾಗಿರದೆ ಕಲಾಭಿವ್ಯಕ್ತಿಗೂ ಸಾಧನವಾಗಿ ಗ್ರಾಂಥಿಕ. ಸಾಹಿತ್ಯಕ ಭಾಷೆಯೂ ಆಗಿ ಪರಿವರ್ತನೆಗೊಂಡಿದೆ. ಕಾಲಗತಿಯನ್ನು ಅನುಸರಿಸಿ. ಪ್ರದೇಶ ಹವಾಮಾನಗಳನ್ನು ಹೊಂದಿಕೊಂಡು ಭಾಷಾ ವಾಹಿನಿ ನಿತ್ಯವೂ ಹೊಸತಾಗಿ ಹರಿಯುತ್ತ ಇದೆ. ಆದರೆ ಪ್ರಾಣಿಗಳ ಕೂಗು ಅಂದಿನಿಂದ ಇಂದಿನ ವರೆಗೆ ಒಂದೇ ಆಗಿದೆ.

ಹಾಕೆಟ್ ಹೇಳುವಂತೆ ಮಾನವ ಭಾಷೆಗೆ ಏಳು ವೈಶಿಷ್ಟ್ಯಗಳಿವೆ: ಮಾನವೇತರ ಸಂಪರ್ಕ ಮಾಧ್ಯಮಗಳಲ್ಲಿ ಇವುಗಳಲ್ಲಿ ಕೆಲವಿದ್ದರೆ ಉಳಿದವುಗಳಿಲ್ಲ:

1 ದ್ವೈತಭಾವ: ಭಾಷೆಯ ಪ್ರತಿ ಉಚ್ಚಾರಣೆಯಲ್ಲಿ ಧ್ವನಿಮಾವ್ಯವಸ್ಥೆ ಹಾಗೂ ಆಕೃತಿಮಾ ವ್ಯವಸ್ಥೆಗಳಿರುತ್ತವೆ. ಹೀಗೆ ಒಂದೇ ಉಚ್ಚಾರದಲ್ಲಿ ಎರಡು ಅವಸ್ಥೆಗಳಿರುವುದೇ ದ್ವೈತಭಾವ.

2 ಉತ್ಪಾದಕತೆ: ಭಾಷೆಯಲ್ಲಿಯ ರಚನಾತ್ಮಕ ಅಂಶಗಳನ್ನು ಸಂಘಟಿಸಿ ಹಿಂದೆಂದೂ ಉಚ್ಚರಿಸದ ಹಾಗೂ ಕೇಳದ ಹೊಸ ಪ್ರಯೋಗಗಳನ್ನು ಉಂಟುಮಾಡಿ ಅರ್ಥಮಾಡಿಕೊಳ್ಳಬಹುದು. ಇದೇ ಉತ್ಪಾದಕತೆ.

3 ಯಾದೃಚ್ಛಿಕತೆ: ಮಾನವನ ಭಾಷಾ ಸಂಕೇತಗಳಲ್ಲಿ ಅರ್ಥ ಹುದುಗಿಕೊಂಡಿರುವುದಿಲ್ಲ; ಅವು ಅರ್ಥವನ್ನು ಪಡೆದುಕೊಳ್ಳುವುದರಿಂದ ನಮ್ಮ ಅನುಕೂಲತೆಗೆ ತಕ್ಕಂತೆ ಹೊಸ ವಿಷಯಗಳನ್ನು ಸೂಚಿಸಲು ಹೊಸ ಧ್ವನಿಮೊತ್ತಗಳನ್ನು ಕಲ್ಪಿಸುವ ಸಾಧ್ಯತೆ ಇದೆ. ಇದನ್ನೇ ಯಾದೃಚ್ಛಿಕತೆ ಎಂದು ಕರೆಯುವರು.

4 ವಿನಿಮಯ ಗುಣ: ಒಂದು ಭಾಷೆಯನ್ನು ಆಡುವಾತ ಅದನ್ನು ಕೇಳಲೂ ಶಕ್ತ; ತಿಳಿಯಲೂ ಶಕ್ತ. ಇದೇ ವಿನಿಮಯ ಗುಣ.

5 ವಿಶಿಷ್ಟತೆ: ಮಾನವನ ಪ್ರತಿಯೊಂದು ಭಾಷೆಯೂ ಒಂದು ವಿಶಿಷ್ಟ ವ್ಯವಸ್ಥೆ. ಅದು ತನ್ನ ರಚನೆಯ ಹಾಗೂ ಅರ್ಥದ ಚೌಕಟ್ಟಿನಲ್ಲಿ ವಿಚಾರವಿನಿಮಯ ಮಾಡಲು ಯೋಗ್ಯವಾಗಿದೆ; ಆದರೂ ತಿಳಿಸುವ ವಿಚಾರಕ್ಕೂ ಭಾಷೆಗೂ ನೇರವಾದ ಭೌತಿಕ ಸಂಬಂಧವಿಲ್ಲ. ಇದೇ ಭಾಷೆಯ ವಿಶಿಷ್ಟತೆ.

6 ಸ್ಥಾನ ಪಲ್ಲಟತೆ: ಭಾಷೆಗೂ ಅದು ಸೂಚಿಸುವ ವಸ್ತುವಿಗೂ ನೇರ ಸಂಪರ್ಕ ಇರಬೇಕಾಗಿಲ್ಲ. ಅರ್ಥಾತ್ ಅದು ನಮ್ಮ ಕಣ್ಮುಂದೆ ಇರಬೇಕಾಗಿಲ್ಲ ಅಥವಾ ನಮ್ಮ ಅನುಭವಕ್ಕೆ ಬರಬೇಕಾಗಿಲ್ಲ. ಹೀಗೆ ಕನ್ನಡನಾಡಿನ ಗತವೈಭವದ ಬಗ್ಗೆ, ಕೈಲಾಸ ನರಕಗಳ ಬಗ್ಗೆ, ಸತ್ಯ ಅಹಿಂಸೆಗಳ ಬಗ್ಗೆ ಮಾತನಾಡಬಹುದು.

7 ಸಂಸ್ಕೃತಿ ವಾಹಕತೆ: ಭಾಷೆ ಆನುವಂಶಿಕವಾಗಿ ಬಾರದೆ ಪ್ರಯತ್ನ ಪೂರ್ವಕ ಅನುಕರಣೆ ಹಾಗೂ ಅಧ್ಯಯನಗಳಿಂದ ಬರುವಂತಹದಾಗಿದೆ.

ಭಾಷೆಯ ಈ ಸಪ್ತ ವೈಶಿಷ್ಟ್ಯಗಳು ಮಾನವನ ವಾಚಿಕ ಸಂಪರ್ಕ ಸಾಧನದಲ್ಲಿ ಮಾತ್ರ ಇವೆ; ಕಾರಣ, ಅದು ಮಾತ್ರ ಭಾಷೆ.

ಈಗಾಗಲೇ ಹೇಳಿದ ವಿಷಯವನ್ನು ಕೆಳಗೆ ಕೋಷ್ಟಕದಲ್ಲಿ ತೋರಿಸಲಾಗಿದೆ:

	ದುಂಬಿಯ ಕುಣಿತದಲ್ಲಿ	ಸ್ಟಿಕ್‌ಬ್ಯಾಕಿನ ಪ್ರಣಯದಲ್ಲಿ	ಹೇರಿಂಗ್‌ಗಲ್ ತನ್ನ ಮರಿಯೊಡನೆ ಇಡುವ ಸಂಪರ್ಕದಲ್ಲಿ	ಗಿಬ್ಬನಿನ ಕೂಗಿನಲ್ಲಿ	ಭಾಷೆಯಲ್ಲಿ
ದ್ವೈತಭಾವ	ಇಲ್ಲ(?)	ಇಲ್ಲ	ಇಲ್ಲ	ಇಲ್ಲ	ಇದೆ
ಉತ್ಪಾದಕತೆ	ಇದೆ	ಇಲ್ಲ	ಇಲ್ಲ	ಇಲ್ಲ	ಇದೆ
ಯಾದೃಚ್ಛಿಕತೆ	ಸ್ವಲ್ಪ	—	—	ಸ್ವಲ್ಪ	ಅತಿ
ವಿನಿಮಯಗುಣ	ಇದೆ	ಇಲ್ಲ	ಇಲ್ಲ	ಇದೆ	ಇದೆ
ವಿಶಿಷ್ಟತೆ	ಇದೆ	ಕೆಲಮಟ್ಟಿಗೆ	?	ಇದೆ	ಇದೆ
ಸ್ಥಾನಪಲ್ಲಟತೆ	ಇದೆ	ಇಲ್ಲ	ಇಲ್ಲ	ಇಲ್ಲ	ಇದೆ
ಸಂಸ್ಕೃತಿ ವಾಹಕತೆ	ಇಲ್ಲ	ಇಲ್ಲ	ಇಲ್ಲ	ಇಲ್ಲ(?)	ಇದೆ

ಒಟ್ಟಿನಲ್ಲಿ. ಪ್ರಾಣಿಗಳ ಕೂಗುಗಳಿಗಿಂತ ಭಿನ್ನವಾಗಿ ಅದು ಬುದ್ಧಿಯ ದ್ಯೋತಕವಾಗಿ ಅಭಿವ್ಯಕ್ತಗೊಂಡು ಮಾನವನಿಗೆ ಸೀಮಿತವಾಗಿದೆ. ನೋಮ್ ಚಾಮ್ಸ್ಕಿಯವರ ಮಾತಿನಲ್ಲಿ ಹೇಳಬೇಕಾದರೆ:

"The most stupid men learn how to talk while even the most brilliant monkeys never learn."

ಭಾಷೆಯು ವಿಶಿಷ್ಟ ಆಕೃತಿಸ್ವರೂಪವಿಂದಾಗಿ. ಅದು ಮಾನವಜಾತಿಗೆ ಪರಿಮಿತಿಗೊಂಡಿರುವುದರಿಂದಾಗಿ. ಎಲ್ಲಕ್ಕಿಂತ ಮಿಗಿಲಾಗಿ ಭಾಷೆಗಳನ್ನು ಮಾನವರು ಕಲಿಯಬೇಕೇ ಹೊರತು ಅವು ಅನುವಂಶೀಯವಾಗಿ ಸಾಗುವುವಿಲ್ಲವೆಂಬ ಕಾರಣದಿಂದ. ಸಂಸ್ಕೃತಿಯ ಒಂದು ಶಾಖೆಯಾಗಿ ಭಾಷೆಯು ಸ್ಪಷ್ಟ ಪೃಥಕವಾಗಿದೆ. ಭಾಷೆಗೂ ಬುಡಕಟ್ಟಿಗೂ ಬಹುವೇಳೆ ಐತಿಹಾಸಿಕ ಸಂಬಂಧ ಇರುವುದಾದರೂ—ಎಂದರೆ ಸಮಾನ ಮೂಲಪುರುಷರನ್ನುಳ್ಳವರೇಕರು ಸಾಮಾನ್ಯ ಭಾಷೆಯ ಪಾಲುದಾರರಾದಾಗ್ಯೂ—ಅಂಥ ಸಂಬಂಧಗಳು ಎಷ್ಟೂ ಅಗತ್ಯವಲ್ಲ. ಭಾಷೆಗಳು ಅನುವಂಶೀಯವಾಗಿ ಸಾಗುವಂಥವೆಂಬ ಅಂಶಕ್ಕೆ ಅಮೇರಿಕ ಸಂಯುಕ್ತ ಸಂಸ್ಥಾನಗಳ ಭಾಷಿಕ ಮೂಸೆಯೇ ಸ್ಪಷ್ಟ ನಿದರ್ಶನವಾಗಿದೆ. ಅಲ್ಲಿ ಅತ್ಯಂತ ಭಿನ್ನ ಬುಡಕಟ್ಟುಗಳ ಹಿನ್ನೆಲೆಗಳುಳ್ಳ ಜನ ಇಂಗ್ಲಿಷ್ ಬಳಕೆಯ ಸಮಾನ ವಿಶಿಷ್ಟತೆಗಳ ಪಾಲುದಾರರಾಗಿದ್ದಾರೆ. ಆದರೂ. ಬರೆಹವು ಭಾಷೆಯೂ ಸಾಗುವುದು ಅನುವಂಶೀಯವಾಗಿ ಅಲ್ಲ. ಸಾಂಸ್ಕೃತಿಕವಾಗಿ—ಎಂಬ ಅಂಶದಿಂದ ಭಾಷಿಕ ವರ್ತನೆಗೆ ಸಂಬಂಧಿಸಿದಂತೆ ಅನನ್ಯವೂ ಪ್ರಕೃತಿಜನ್ಯವೂ ಆದ ಕೆಲವು ಸಾಮರ್ಥ್ಯಗಳು ಮಾನವಕುಲಕ್ಕೆ ತೋರದಿರುವುದಿಲ್ಲ. ವಂಶಾನುಗತವಾದ ಸಾಮರ್ಥ್ಯಗಳ ಒಂದು ರಂಗವಾದ 'ಭಾಷೆಗೂ' ಆ ಸಾಮರ್ಥ್ಯಗಳ ಮೇಲೆ ಸಂಸ್ಕೃತಿಯಿಂದ ನಿರ್ಮಿತವಾದ ವಿಶಿಷ್ಟ ರಚನೆಗಳಾದ 'ಭಾಷೆಗಳಿಗೂ' ವ್ಯತ್ಯಾಸವನ್ನು ನಾವು ಕೆಲವು ಉದ್ದೇಶಗಳಿಗಾಗಿ ಕಂಡುಕೊಳ್ಳಬೇಕು.[1]

—ವಿಲಿಯಂ ಬ್ರೈಟ್

---

1 Bright, William: Language and Culture: *International Encyclopaedia of the Social Sciences*, vol. 9 (Ed. David L. Sills); The Macmillan company & the Free Press (1968); p. 19

ದಾಮೋದರ ಕೃಷ್ಣ ಪೊದುವಾಳ್

ದೇಶದ ಆರ್ಥಿಕ ಪ್ರಗತಿ ಹಾಗೂ ರಾಸಾಯನಿಕ ಗೊಬ್ಬರ ಕೈಗಾರಿಕೆ

"ಸ್ವಾವಲಂಬನೆಯ ಮೂಲಕ ಕೈಗಾರಿಕಾಭಿವೃದ್ಧಿ" ಎಂಬ ವಿಷಯ ಕುರಿತು ಜರುಗಿದ ರಾಷ್ಟ್ರೀಯ ಸಮಾಲೋಚನಗೋಷ್ಠಿ, ಆಹಾರಧಾನ್ಯ ವಿಪುಲವಾಗಿ ಬೆಳೆಯಲು ಅತ್ಯಗತ್ಯವಾದ ರಾಸಾಯನಿಕ ಗೊಬ್ಬರ ವನ್ನು ಹೆಚ್ಚು ಹೆಚ್ಚಾಗಿ ಉತ್ಪಾದಿಸಲು ಕೆಲವು ಶಿಫಾರಸುಗಳನ್ನು ನೀಡಿದೆ. ದೇಶದ ಆರ್ಥಿಕತೆಯನ್ನು ಸ್ವಾವಲಂಬನೆಯತ್ತ ಒಯ್ಯುತ್ತ ಪ್ರಗತಿ ಸಾಧಿಸಲು ಇದೊಂದೇ ಮಾರ್ಗ ಎಂಬ ತನ್ನ ಸ್ಪಷ್ಟನಿಲುವನ್ನು ಹೀಗೆ ಅದು ತೋರಿಸಿಕೊಟ್ಟಿದೆ.

ಭಾರತದ ರಾಸಾಯನಿಕ ಗೊಬ್ಬರ ಸಂಸ್ಥೆಯ ಚರ್ಚಾಗೋಷ್ಠಿಗಳು ಪ್ರಸಕ್ತ ಉತ್ಪಾದನೆಯಲ್ಲಿ ಕನಿಷ್ಠಪಕ್ಷ ಸ್ವಯಂಪೂರ್ಣತೆಗಾಗಿ ಹೆಚ್ಚಳ ಸಾಧಿಸುವುದು ಅತ್ಯಾವಶ್ಯಕ ಎಂಬುದನ್ನು ಒತ್ತಿ ಹೇಳುತ್ತವೆ. ಕೋಟಿಗಟ್ಟಳೆ ರೂಪಾಯಿಗಳ ವಿದೇಶಿ ವಿನಿಮಯ ವೆಚ್ಚವನ್ನು ತಪ್ಪಿಸುವುದು ಈಗಿನ ಅನಿವಾರ್ಯತೆ ಎಂಬುದಂತೂ ನಿಜ. ಹಿಂದಿನ ಐದು ವರ್ಷಗಳ ಅವಧಿಯಲ್ಲಿ ಇದಕ್ಕಾಗಿ ರೂ. 600 ಕೋಟಿ ಖರ್ಚಾಗಿದೆ. ಈಗಿರುವ ಹಾಗೂ ಮುಂದೆ ಸ್ಥಾಪಿತವಾಗುವ ಅನೇಕ ಕಾರ್ಖಾನೆಗಳು ಉತ್ಪಾದನೆಯಲ್ಲಿ ಹೆಚ್ಚಳ ಸಾಧಿಸ ಬಲ್ಲವಾದರೂ ಅವು ದೇಶದ ಆವಶ್ಯಕತೆಗಳನ್ನು ಪೂರೈಸುವುದಿಲ್ಲ. ಉದಾಹರಣೆಗೆ, 1971–72ರಲ್ಲಿ ದೇಶ 8.20.000 ಟನ್ನುಗಳಷ್ಟು ನೈಟ್ರೊಜನನ್ನು – ಒಟ್ಟು ಬಳಕೆಯಲ್ಲಿ ಸುಮಾರು ಅರ್ಧದಷ್ಟು –ಸುಮಾರು 100 ದಶಲಕ್ಷ ಡಾಲರುಗಳ ವಿದೇಶಿ ವಿನಿಮಯದ ವೆಚ್ಚದಿಂದ–ಆಮದು ಮಾಡಿಕೊಂಡಿತು.

ಪ್ರಸಕ್ತ ಕೈಗಾರಿಕೆಯನ್ನು ಕಾಡಿಸುತ್ತಿರುವ ಪ್ರಮುಖ ಸಮಸ್ಯೆಗಳಲ್ಲಿ ಎರಡನ್ನು ಉಲ್ಲೇಖಿಸ ಬಹುದಾಗಿದೆ: ಉತ್ಪಾದನ ಸಾಮರ್ಥ್ಯವನ್ನು ಸಮಪ್ರಮಾಣದಲ್ಲಿ ಬಳಸಿಕೊಳ್ಳದಿರುವಿಕೆ ಮತ್ತು ಉತ್ಪಾದನಾಂಗಗಳನ್ನು ಯೋಜನಾರೀತ್ಯ ಕಾರ್ಯಗತಗೊಳಿಸದಿರುವುದು. ಉತ್ಪಾದನ ವೆಚ್ಚ ಹಾಗೂ ಬೆಲೆಗಳಲ್ಲಿ ಉತ್ಪಾದನಾಂಗಗಳ ವೆಚ್ಚ ವಿಪರೀತ ಏರಿಕೆ ಕಂಡುಬರುವುದು ಈ ಕಾರಣಗಳಿಂದಲೇ.

ಐದನೆಯ ಪಂಚವಾರ್ಷಿಕ ಯೋಜನಾವಧಿಯಲ್ಲಿ ಸುಮಾರು 12 ಕಾರ್ಖಾನೆಗಳನ್ನು ಸ್ಥಾಪಿಸುವ ಯೋಜನೆ ಇದೆ. ಇವುಗಳಲ್ಲಿ 5 ಜಪಾನಿನ ಜೊತೆಯ ಸಂಬಂಧದಿಂದಲೂ ಉಳಿದವು ಇನ್ನಿತರ ದೇಶಗಳ ಜೊತೆಯ ಸ್ನೇಹಸಂಪರ್ಕದಿಂದಲೂ ಕುದುರುವ ಸಂಭವವಿದೆ. ಆದರೆ ಜಪಾನು ತನ್ನ ಐದು ಯೋಜನೆ ಗಳಿಗೂ ಯೆನ್ ಸಾಲವನ್ನೊದಗಿಸುತ್ತದೆ ಎಂದು ನಂಬಲಾಗುವುದಿಲ್ಲ. ಸರ್ಕಾರಿ ವಲಯದಲ್ಲಿ ಅಸ್ತಿತ್ವಕ್ಕೆ ಬರುವ ಇವುಗಳಿಗಾಗಿ ಎಂಜಿನಿಯರ್ಸ್ ಲಿಮಿಟೆಡ್, ಇಂಡಿಯ ಮತ್ತು ಟೋಕಿಯೋ ಎಂಜನಿಯರಿಂಗ್ ಕಾರ್ಪೋರೇಶನ್ ಆಫ್ ಜಪಾನ್ ನಡುವೆ ಒಪ್ಪಂದವಾಗಿದೆ. ಈ ಯೋಜನೆಗೆ ಒಟ್ಟು ತಗಲುವ ವೆಚ್ಚ ಸುಮಾರು ರೂ. 600 ಕೋಟಿಗಳೆಂದು ನಿರೀಕ್ಷಿಸಲಾಗಿದೆ. ಜಪಾನಿನಿಂದ ಆಮದಾಗುವ ಸಾಮಗ್ರಿಗಳ ವೆಚ್ಚವನ್ನು ಸರಿದೂಗಿಸಲು ಯೆನ್ ಸಾಲದ ಬಳಕೆಯಾಗುತ್ತದೆ. ಒಮ್ಮೆ ಜಪಾನು ಯೆನ್ ಸಾಲವನ್ನು ಎರಡು ಅಥವಾ ಮೂರು ಯೋಜನೆಗಳಿಗೆ ಮಾತ್ರ ವಿನಾಸಲಾಗಿಟ್ಟರೆ ಉಳಿದ ಯೋಜನೆಗಳಿಗೆ ಸರಕಾರ ಸಮಸ್ಯೆಯನ್ನೆದುರಿಸಬೇಕಾಗುತ್ತದೆ. ಎಷ್ಟೇ ಕಷ್ಟವಾದರೂ ಯೋಜನೆಯ ಕೈಬಿಡಲಾಗದು. ಪಶ್ಚಿಮ

ಐರೋಪ್ಯರಾಷ್ಟ್ರಗಳಿಂದ ಸಾಲ ಪಡೆಯಲು ಪ್ರಯತ್ನಿಸುವುದು ವ್ಯಾಪಾರದೃಷ್ಟಿಯಿಂದ ಉತ್ತಮವೆಂದು ಕೇಂದ್ರದ ತೈಲ ಹಾಗೂ ರಾಸಾಯನಿಕ ಸಚಿವ ಸಂಪುಟ ಯೋಚಿಸಬಹುದಾಗಿದೆ.

ಇಲ್ಲಿ ಇನ್ನೊಂದು ವಿಷಯವನ್ನು ಉಲ್ಲೇಖಿಸಬಹುದಾಗಿದೆ: ವಿಶ್ವಬ್ಯಾಂಕಿನ ಆಶ್ರಯದಲ್ಲಿರುವ ಅಂತರರಾಷ್ಟ್ರೀಯ ಅಭಿವೃದ್ಧಿ ಸಂಸ್ಥೆ (ಐಡಿಎ) ರಾಸಾಯನಿಕ ಉತ್ಪನ್ನವನ್ನು ಅಧಿಕಗೊಳಿಸಲು ಭಾರತಕ್ಕೆ 580 ಲಕ್ಷ ಡಾಲರುಗಳನ್ನು ಸಾಲರೂಪದಲ್ಲಿ ಒದಗಿಸಲಿದೆ. ಈ ಸಾಲವನ್ನು ಭಾರತದ ರಾಸಾಯನಿಕ ದ್ರವ್ಯಸಂಸ್ಥೆ ದೇಶದಲ್ಲೇ ಅತಿ ಹೆಚ್ಚಿನ ಗಾತ್ರದಲ್ಲಿ ರಾಸಾಯನಿಕ ವಸ್ತು ಉತ್ಪಾದಿಸುವ ಪಂಜಾಬಿನ ನಂಗಾಲ್ ಪ್ರದೇಶದಲ್ಲಿಯ ಉತ್ಪಾದನೆಯನ್ನು ವಿಸ್ತರಿಸಲು ಉಪಯೋಗಿಸಲು ನಿಶ್ಚಯಿಸಿದೆ. ಇದು ಸ್ತುತ್ಯವಾದ ಕಾರ್ಯ. ಇದು ವರ್ಷವೊಂದಕ್ಕೆ 80.000 ಟನ್ನುಗಳಷ್ಟು ನೈಟ್ರೊಜನನ್ನು ಉತ್ಪಾದಿಸುತ್ತದೆ. ಈ ದಾರಿಯಲ್ಲಿ ಸ್ವಲ್ಪ ಉಳಿತಾಯ ಮಾಡಿ. ಜಪಾನಿನ ಯೆನ್ ಸಾಲದ ಕೊರತೆಯನ್ನು ನೀಗಿಸಲು ಪ್ರಯತ್ನಿಸಬಹುದಾಗಿದೆ.

ಕೆಲವು ಉದ್ಯಮಿಗಳು ವಿದೇಶೀ ಸಹಯೋಗ ವ್ಯವಸ್ಥೆಯಿಂದ ಹೆಚ್ಚು ಹಣ ಪೋಲಾಗುವುದೆಂಬ ನಿಲುವು ತಳೆದಿದ್ದಾರೆ. ಆದರೆ ಮುಂದುವರಿದ ದೇಶಗಳ ಸಂಪರ್ಕ ಪ್ರಸಕ್ತ ಕೈಗಾರಿಕಾ ಬೆಳವಣಿಗೆಯ ನಿಟ್ಟಿನಿಂದ ಅನಿವಾರ್ಯ. ಪ್ರಪಂಚದಲ್ಲೆಲ್ಲ ಈ ಬಗೆಯ ಸಹಯೋಗದಿಂದ ಕೈಗಾರಿಕಾ ವಿಸ್ತರಣೆ ಆಗಿರುವುದು ಸರ್ವವಿದಿತ: ರಷ್ಯ ಹಾಗೂ ಅಮೆರಿಕಗಳ ನಡುವೆ ಇತ್ತೀಚೆಗೆ ಏರ್ಪಟ್ಟ. ವಿಶ್ವದ ಚರಿತ್ರೆಯಲ್ಲೆ ಅತಿ ದೊಡ್ಡ. ವಾಣಿಜ್ಯ ಸಹಯೋಗ–4ಸ್ಥಾವರಗಳು: 8 ಬಿಲಿಯನ್ ಡಾಲರುಗಳು–ಇದಕ್ಕೆ ಸಾಕ್ಷಿ. ಐದು ಕಾರ್ಖಾನೆಗಳು ರೂಪಗೊಳ್ಳುವ ಪ್ರದೇಶಗಳನ್ನು ಸರ್ಕಾರ ಈಗಾಗಲೇ ಪ್ರಕಟಿಸಿದೆ: ಮಥುರಾ, ಪಾಣಿಪಟ್. ಬಾಟಿಂಡಾ. ಪರದೀಪ್ ಮತ್ತು ಮಂಗಳೂರು ಅಥವಾ ಕೊಚ್ಚಿ. ಈ ಕಾರ್ಖಾನೆಗಳಲ್ಲಿ ತೈಲಶಕ್ತಿ ಚಾಲಿತ. ಇರಾಕ್ ದೇಶ ಇವುಗಳಿಗೆ ಅಗತ್ಯವಾದ ಕಚ್ಚಾ ತೈಲ ಸರಬರಾಜು ಮಾಡಲು ಒಪ್ಪಿಕೊಂಡಿದೆ. ಇವುಗಳಲ್ಲಿ 4 ಸರ್ಕಾರಿ ವಲಯದಲ್ಲೂ 1 ಸಹಕಾರಿ ಕ್ಷೇತ್ರದಲ್ಲೂ ಬೆಳಕು ಕಾಣಲಿವೆ. ಸರಕಾರ ಇನ್ನುಳಿದ ಕಾರ್ಖಾನೆಗಳ ಸ್ಥಾಪನೆಯ ಸ್ಥಳಗಳನ್ನು ಶೀಘ್ರದಲ್ಲಿ ಪ್ರಕಟಿಸುವುದು ಒಳಿತು. ಹಿಂದುಳಿದ ಪ್ರದೇಶಗಳ ಬೆಳವಣಿಗೆಯನ್ನು ಈ ಸಂದರ್ಭದಲ್ಲಿ ಮರೆಯದಿರುವುದು ಉತ್ತಮ.

ದೇಶದಲ್ಲಿ ರಾಸಾಯನಿಕ ವಸ್ತು ಬಳಕೆ ಹೆಚ್ಚಿರುವುದು ಹಿಂದಿನ ಎರಡು ವರ್ಷಗಳ ಅಂಕಿಅಂಶಗಳಿಂದ ತಿಳಿದುಬರುತ್ತದೆ. ರೈತರಲ್ಲಿ ರಾಸಾಯನಿಕ ಗೊಬ್ಬರ ಜಾಗೃತಿ ಮೂಡಿದೆ. ಪರಿಣಾಮವಾಗಿ 1974–75ರ ವೇಳೆಗೆ ಇದರ ಬೇಡಿಕೆ 32.5 ಲಕ್ಷ ಟನ್ನುಗಳಿಗೇರುತ್ತದೆ. 1978–79ರ ಕಾಲಕ್ಕೆ 50 ಲಕ್ಷ ಟನ್ನುಗಳಷ್ಟು ಬೇಡಿಕೆಯಿರುತ್ತದೆಯೆಂದು ಭಾರತದ ರಾಸಾಯನಿಕ ವಸ್ತು ಸಂಸ್ಥೆ ಅಂದಾಜಿಸಿದೆ. ಐದನೆಯ ಪಂಚವಾರ್ಷಿಕಯೋಜನಾವಧಿಯಲ್ಲಿ ಕ್ರಮಬದ್ಧ ಯೋಜನೆಯನ್ನು ರೂಪಿಸಿಕೊಂಡು ಕೊರತೆ ನೀಗದಿದ್ದರೆ ಸುಮಾರು ರೂ. 1.000 ಕೋಟಿಗಳನ್ನು ಆಮದಿಗಾಗಿಯೇ ವೆಚ್ಚ ಮಾಡಬೇಕಾಗಿ ಬರುವುದಂತೂ ನಿಜವಾದ ಸಂಗತಿ. ಈ ಕೆಳಗಿನ ಅಂಕಿ ಅಂಶಗಳು ನಿರಾಶಾದಾಯಕ ಚಿತ್ರವನ್ನೇ ತೋರಿಸುತ್ತವೆ. ಉತ್ಪಾದನೆ ಹೆಚ್ಚಿದಂತೆಲ್ಲ ಆಮದೂ ಗಣನೀಯವಾಗಿ ಹೆಚ್ಚಿರುವುದು ಖೇದಕರ:

ರಾಸಾಯನಿಕ ವಸ್ತು ಉತ್ಪಾದನೆ. ಆಮದು ಮತ್ತು ವಿತರಣೆ: 1952–53ರಿಂದ 9171–72

(ಏಪ್ರಿಲ್—ಮಾರ್ಚ್) (ಟನ್ನುಗಳಲ್ಲಿ)

ವರ್ಷ	ಉತ್ಪಾದನೆ	ಆಮದು	ವಿತರಣೆ
1952–53	60.512	47.605	65,685
1955–56	89.224	63,665	130.808
1961–62	219,686	173,946	383,450
1964–65	374.251	325,986	652,565
1965–66	356.668	491,677	757,287
1966–67	454,671	847,123	1,203,048

1967–68	609,790	1,623,138	1,739,459
1968–69	776,210	1,036,063	1,749,871
1969–70	954,314	762,414	1,407,106
1970–71	1,060,603	633,129	1,814,102
1971–72	1.239.557	970,274	2,382.487

ಮೂಲ: ರಾಸಾಯನಿಕ ವಸ್ತು ಅಂಕಿ ಅಂಶಗಳು, 1971–72

1978–79ರ ಸಾಲಿಗೂ ದೇಶ ಸುಮಾರು ರೂ. 300 ಕೋಟಿ ಬೆಲೆಯ ರಾಸಾಯನಿಕ ದ್ರವ್ಯ ಆಮದು ಮಾಡಿಕೊಳ್ಳಬೇಕಾಗುತ್ತದೆಂದು ನಿರೀಕ್ಷಿಸಲಾಗಿದೆ. ಬೇಡಿಕೆಗೆ ಸಮನಾಗಿ ಉತ್ಪಾದನೆ ಇಲ್ಲ. ಐದನೆಯ ಪಂಚವಾರ್ಷಿಕ ಯೋಜನೆಯ ಒಟ್ಟು ಆಮದಿನ ಮೊತ್ತ ರೂ. 900 ಕೋಟಿಯನೂ ಮೀರುತ್ತದೆ. ಆದ್ದರಿಂದ, 1978–79ರ ವೇಳೆಗೆ ಸ್ವಯಂ ಪರಿಪೂರ್ಣತೆ ಸಾಧಿಸಲು, ಸುಮಾರು ರೂ. 1,700 ಕೋಟಿ ವಿನಿಯೋಜಿಸಬೇಕಾಗಿ ಬರುತ್ತದೆ ಎಂದು ಭಾರತದ ರಾಸಾಯನಿಕ ವಸ್ತು ಸಂಸ್ಥೆ ಅಂದಾಜು ಮಾಡಿದೆ.

ಕೇವಲ ಸರ್ಕಾರಿಕ್ಷೇತ್ರಕ್ಕೆ ಸೀಮಿತವಾಗಲು ಬಿಡದೆ ಖಾಸಗಿ ಕ್ಷೇತ್ರದ ಉದ್ಯಮಗಳಿಗೂ ಹೊಸ ಹೊಸ ಯೋಜನೆಗಳನ್ನು ಈ ದಿಶೆಯಲ್ಲಿ ಕೈಗೊಳ್ಳಲು ಅನುವು ಮಾಡಿಕೊಡುವುದು ಈ ಸಂದಿಗ್ಧ ಪರಿಸ್ಥಿತಿಯಲ್ಲಿ ಉತ್ತಮ ಪದ್ಧತಿ. 2.25 ದಶಲಕ್ಷ ಟನ್ನುಗಳ ಕೊರತೆ ನೀಗಲು ಇದು ಅಗತ್ಯ. ಇಲ್ಲವಾದರೆ ಸದ್ಯ ನಿಲ್ಲಿಸಿರುವ ಆಹಾರಧಾನ್ಯಗಳ ಆಮದನ್ನು ಮತ್ತೊಮ್ಮೆ ಆರಂಭಿಸಬೇಕಾದೀತು.

ದೇಶದಲ್ಲಿರುವ 54 ಪ್ರಮುಖ ಕೈಗಾರಿಕೆಗಳಲ್ಲಿ ಒಂದಾದ ರಾಸಾಯನಿಕ ಗೊಬ್ಬರ ಕೈಗಾರಿಕೆ ಈಗ ಈ ಕೆಳಗಿನ ಚಟುವಟಿಕೆಗಳನ್ನು ತನ್ನ ಕಾರ್ಯಕ್ಷೇತ್ರದಲ್ಲಿ ಅಳವಡಿಸಿಕೊಳ್ಳಬೇಕು. ಆಗ ಆಹಾರಾಭಾವ ನಿವಾರಣೆ ಸುಲಭಸಾಧ್ಯ:–

1 ದೇಶದಲ್ಲಿ ಅತ್ಯಧಿಕ ರಾಸಾಯನಿಕ ಗೊಬ್ಬರ ಉತ್ಪಾದನೆ

2 ಸಮತೋಲನವನ್ನು ರಕ್ಷಿಸಿಕೊಂಡು ರೈತರು ರಾಸಾಯನಿಕ ಗೊಬ್ಬರ ಉಪಯೋಗಿಸುವಂತೆ ಗಮನ ಹರಿಸುವುದು.

3 ರೈತರಿಗೆ ಕಡಿಮೆ ಬೆಲೆಗೆ ರಾಸಾಯನಿಕ ವಸ್ತು ಲಭ್ಯವಾಗುವಂತೆ ನೋಡುವುದು.

4 ಅದು ಸರಿಯಾದ ಕಾಲದಲ್ಲಿ ಸಿಕ್ಕಿ ಉಪಯೋಗವಾಗುವಂತೆ ಸುವ್ಯವಸ್ಥಿತ ಮಧ್ಯವರ್ತಿಕ್ರಮದಿಂದ ವಿತರಣೆಯಾಗುವಂತೆ ಗಮನಿಸುವುದು.

ಕೃಷಿಕಾರ್ಯಕ್ರಮಕ್ಕೆ ತಕ್ಕುದಾದ ರಾಸಾಯನಿಕ ಗೊಬ್ಬರದ ಆವಶ್ಯಕತೆಯ ಮಟ್ಟವನ್ನು ನಿರ್ಣಯಿಸುವುದೂ ಮುಖ್ಯವೇ. ಹಾಗೆಯೇ ಮಣ್ಣಿನ ಪರೀಕ್ಷೆ, ಪರೀಕ್ಷಾ ದೃಷ್ಟಿಯಿಂದ ಕೈಗೊಳ್ಳುವ ಮಾದರಿ ಬೆಳೆ ತೆಗೆಯುವ ಅಧ್ಯಯನಶೀಲ ಪ್ರಯತ್ನಗಳು ನಡೆಯಬೇಕು.

ಧಾರಣೆ ನಿಷ್ಕರ್ಷೆ ಮಾಡುವ ಮುನ್ನ ಸರಿಯಾದ ವೆಚ್ಚ ನಿರ್ಣಯ, ಉತ್ಪಾದನ ಸಂಗ್ರಹಣೆಯಲ್ಲಿ ನಷ್ಟವಾಗದಂತೆ ಜತನವಾಗಿಡುವ ವೈಜ್ಞಾನಿಕ ರೀತಿಗಳನ್ನು ಅನುಷ್ಠಾನಕ್ಕೆ ತರುವುದು– ಇವು ಮುಖ್ಯ. ಒಂದು ಧಾರಣ ಕಂಪನಿಯನ್ನು ಈ ಕೈಗಾರಿಕೆಗಾಗಿ ಸ್ಥಾಪಿಸಬೇಕೆಂಬ ಕೂಗು ಎದ್ದಿದೆ. ಇದಾದರೆ ಈ ಕಾರ್ಯಗಳೆಲ್ಲ ಫಲ ನೀಡುವುದರಲ್ಲಿ ಸಂಶಯವಿಲ್ಲ. ಶಿಕ್ಷಣ ಹಾಗೂ ಉತ್ತಮ ಗುಣಮಟ್ಟದ ಕಾರ್ಯ ಆಗ ಸಾಧ್ಯ.

ಭಾರತದ ರಾಸಾಯನಿಕ ವಸ್ತು ಸಂಸ್ಥೆಯ ಅಧ್ಯಕ್ಷರಾದ ಎಫ್. ಜಿ. ಪೆರೆಡಿಯಾ ನುಡಿದಂತೆ ದೇಶವೀಗ ಲೋಕಾಭಿರಾಮವಾಗಿ ಯೋಜನೆಗಳನ್ನು ಯೋಚಿಸುವುದು ಮತ್ತು ಕಾರ್ಯಗತಗೊಳಿಸುವುದರಲ್ಲಿ ವಿಳಂಬ ನೀತಿಯನ್ನು ಅನುಸರಿಸುವ ಶ್ರೀಮಂತಸ್ಥಿತಿಯಲ್ಲಿಲ್ಲ. ಕಾಲವ್ಯಯ ತಡೆಗಟ್ಟಲು ಕೇಂದ್ರದ ತೈಲ ಮತ್ತು ರಾಸಾಯನಿಕವಸ್ತು ಸಚಿವ ಸಂಪುಟದಲ್ಲಿ ಒಬ್ಬ ಹಿರಿಯ ಅಧಿಕಾರಿ ನೇಮಿತನಾಗುವುದು ಉತ್ತಮ. ತನ್ನ ಸಂಪೂರ್ಣಗಮನ ವಹಿಸಲು ದಕ್ಷ ಅಧಿಕಾರಿಯ ಆವಶ್ಯಕತೆ ಇದೆ. ಹಾಗೆಯೇ ಕಾರ್ಖಾನೆಯನ್ನು ಸ್ಥಾಪಿಸುವ ಅವಧಿಯಾದ 5–6 ವರ್ಷಗಳನ್ನು 30–32 ತಿಂಗಳುಗಳಿಗೆ ಜಪಾನಿನ

ಸಹಕಾರದೊಂದಿಗೆ ಇಳಿಸಲು ಸಾಧ್ಯ ಎಂದು ಡಿ. ಪಿ. ಧರ್ ತಿಳಿಸಿದ್ದಾರೆ. ಬಹು ವೆಚ್ಚದಾಯಕವಾದ ವಿಳಂಬವನ್ನು ತಡೆಗಟ್ಟಿದಷ್ಟೂ ಕ್ಷಾಮದ ಪರಿಹಾರ ಅಷ್ಟಷ್ಟು ಶೀಘ್ರವಾಗುತ್ತದೆ.

ಒಟ್ಟಿನಲ್ಲಿ ಪ್ರಸಕ್ತ ಕೈಗಾರಿಕಾ ಪ್ರಗತಿಗೆ ಮಾರಕವಾಗಿರುವ ಅಂಶಗಳು ಇವು: ಯಂತ್ರಸ್ಥಾವರಗಳ ಸ್ಥಾಪನೆಗೆ ಮುನ್ನ ಹಾಗೂ ಸ್ಥಾಪಿತವಾದ ಬಳಿಕ ಉತ್ಪಾದನೆ ಆರಂಭವಾಗಲು ತೆಗೆದುಕೊಳ್ಳುವ ಕಾಲ (ಉದಾ. ಕೊಚ್ಚಿ ಮತ್ತು ದುರ್ಗಾಪುರ ಕಾರ್ಖಾನೆಗಳು). ಇದಕ್ಕೆ ಕಾರಣ: ಆವಶ್ಯಕವಾದ ಸಾಮಗ್ರಿಗಳು ಕ್ಲುಪ್ತಕಾಲದಲ್ಲಿ ಸಿಗದಿರುವುದು. ಅಧಿಕ ಬೆಲೆ. ಇತರ ಕಾರಣಗಳೆಂದರೆ. ಆಗಿಂದಾಗ್ಗೆ ತಲೆದೋರುವ ಹಠಾತ್ ಯಂತ್ರಕುಸಿತ. ಉತ್ಪಾದನ ಸಾಮರ್ಥ್ಯ ನಿರೀಕ್ಷಿತ ಪರಿಮಾಣದಲ್ಲಿ ಉಪಯೋಗವಾಗದಿರುವುದು. ಕಾರ್ಮಿಕ ಕ್ಷೋಭೆ. ವಿದ್ಯುಚ್ಛಕ್ತಿಯ ಕೊರತೆ. ಇವೆಲ್ಲ ಕಾರಣಗಳಿಂದ ಉದ್ಭವಿಸುವ ಆರ್ಥಿಕ ಸಮಸ್ಯೆಗಳು ಇವು:

1 ಉತ್ಪಾದನೆಯ ಪರಿಮಾಣ ಕಡಿಮೆಯಾಗುವುದು. ಆದರೆ ಅದೇ ಪ್ರಮಾಣದಲ್ಲಿ ತಯಾರಿಕೆ ವೆಚ್ಚ ಕಡಿಮೆಯಾಗುವುದಿಲ್ಲ. ಆ ವೆಚ್ಚದ ಹೊರೆ ಉತ್ಪಾದಿಸಲಾದ ಪ್ರತಿಯೊಂದು ಪದಾರ್ಥದ ಮೇಲೆ ಸಹಜವಾಗಿ ಬೀಳುತ್ತದೆ: ಬೆಲೆ ಅಧಿಕವಾಗುತ್ತದೆ.

2 ಕಡಿಮೆ ಉತ್ಪಾದನೆಯ ಕೊರತೆ ನೀಗಲು ಆಮದು ಮಾಡಿಕೊಳ್ಳಬೇಕಾದ ಅನಿವಾರ್ಯತೆ.

3 ವಿವಿಧ ರೂಪದ ಕಳ್ಳತನದ ವ್ಯವಹಾರಕ್ಕೆ ಈ ಗೊಬ್ಬರದ್ರವ್ಯಕ್ಷಾಮ ಎಡೆಯೀಯುತ್ತದೆ. ಬೆಲೆ ಗಗನಗಾಮಿಯಾಗುತ್ತದೆ.

4 ವಿದೇಶಿ ವಿನಿಮಯ ಹಣದ ವೆಚ್ಚ.

5 ಸರಿಯಾಗಿ ನಡೆಯುತ್ತಿರುವ ಕೆಲವು ಉತ್ಪಾದನ ಸಂಸ್ಥೆಗಳು ಏಕಸ್ವಾಮ್ಯ ಪ್ರವೃತ್ತಿಯುಳ್ಳವಾಗುವುವು.

6 ಉತ್ಸಾಹಿಗಳಾದ ಹೊಸ ಕೈಗಾರಿಕೋದ್ಯಮಿಗಳನ್ನು ನಿರಾಶೆಗೊಳಿಸುವ ಪರಿಸರ ಉದ್ಭವವಾಗುವುದು.

ಡಾ. ಎನ್. ಕೆ. ಸಿಂಘಿ

ಅನೈತಿಕ ವ್ಯಾಪಾರ

ಮಾನವ ಸಮಾಜ ಆದರ್ಶಪ್ರಾಯವಾಗಿ ರೂಪಿಸಲ್ಪಟ್ಟಿದೆ. ಆಂತರಿಕ ನೆಮ್ಮದಿ ಮತ್ತು ಸಂಬದ್ಧತೆಯನ್ನು ಉಳಿಸಿಕೊಂಡು ಬರಲು ಇದು ಅನುಗಾಲವೂ ಆವಶ್ಯಕವಾಗಿದೆ. ಅದಿಲ್ಲದೆ ಯಾವ ಸಮಾಜವೂ ತನ್ನ ಕರ್ತವ್ಯವನ್ನು ನಿರ್ವಹಿಸಲಾರದು. ಆದರ್ಶಗಳು ಮಾನವನ ನಡತೆಯನ್ನು ನಿಯಂತ್ರಿಸುತ್ತವೆ, ಧ್ಯೇಯಗಳನ್ನು ಸ್ಥಾಪಿಸುತ್ತವೆ ಮತ್ತು ವಿಭಿನ್ನ ವ್ಯಕ್ತಿಗಳ ಆಂತರಿಕ–ವೈಯಕ್ತಿಕ ಸಂಬಂಧಗಳನ್ನು ಸುಗಮಗೊಳಿಸುತ್ತವೆ. ಮಾನವ ಸಂಬಂಧಗಳ ಸಂಕೀರ್ಣತೆಗಳು, ಆಂತರಿಕ ಕ್ರಿಯೆಗಳ ಮಾದರಿಗಳು, ನಿರ್ವಹಿಸುವ ವೈವಿಧ್ಯಪೂರ್ಣವಾದ ಪಾತ್ರಗಳು, ವ್ಯಕ್ತಿಗಳು ವಹಿಸುವ ಅಂತಸ್ತುಗಳು ಮೊದಲಾದ ಸಂಭಾವ್ಯ ಸಾಮಾಜಿಕ ಸಂದರ್ಭಗಳ ಸೂತ್ರರೂಪವಾಗಿರುವ ಆದರ್ಶಗಳನ್ನು ಶಾಸನ ಮಾಡದಿದ್ದರೆ ಅರ್ಥಪೂರ್ಣವಾದ ಏಕತೆ ಅಥವಾ ಅವಿಚ್ಛಿನ್ನತೆಯನ್ನು ಹೊಂದಲಾಗುವುದಿಲ್ಲ. ಸಾರ್ವತ್ರಿಕ ವಾಕ್ಸರಣಿಯನ್ನು ಪಡೆದು ಸಾಮಾನ್ಯವಾಗಿರುವಂತಹ ಸಾಮಾಜಿಕ ಸನ್ನಿವೇಶಗಳಿಗೆ, ಆದರ್ಶಗಳು ಚೆನ್ನಾಗಿ ಗೊತ್ತುಮಾಡಲ್ಪಟ್ಟಿರುತ್ತವೆ. ವಿವರಿಸಲ್ಪಟ್ಟಿರುತ್ತವೆ ಮತ್ತು ನಡತೆಯ ಮಾದರಿಯ ಅತ್ಯಂತ ಸೂಕ್ಷ್ಮ ವಿವರಗಳನ್ನು ನಿಯಂತ್ರಿಸುತ್ತವೆ. ಹೊಸ ಸನ್ನಿವೇಶಗಳಿಗೆ ಮತ್ತು ಹೊಸ ಬಗೆಯ ಸಂಬಂಧಗಳಿಗೆ, ಆದರ್ಶಗಳು ಉದಿಸುತ್ತಿರುತ್ತವೆ. ಕ್ರಮೇಣ ಆದರ್ಶಗಳು ಹೆಚ್ಚು ಪರ್ಯಾಲೋಚನೆ ಮಾಡಿದವುಗಳಾಗುತ್ತಿವೆ, ಪ್ರಕಟವಾಗುತ್ತಿವೆ ಮತ್ತು ಸಂಬಂಧಗಳನ್ನು ಪರಿಣಾಮಕಾರಿಯಾಗಿ ಮಾಡುತ್ತಿವೆ. ಹೀಗೆ ಸಾಮಾಜಿಕ ಪದ್ಧತಿಗಳ ಮೂಲಾಂಶಗಳಾದ ಆದರ್ಶಗಳು ಆಚಾರಾರ್ಥಕವಾಗಿವೆ.

ಕುಟುಂಬದ ಮುಖಾಂತರ ಜೈವಿಕ ತೃಪ್ತಿ

ಆದರ್ಶಗಳು ಮಾನವನ ಅನುಭವದಿಂದ ಬೆಳೆದು ಬಂದಿರುತ್ತವೆ. ಅಂಥ ಆದರ್ಶಗಳು ಒಂದು ಸಾಮಾಜಿಕ ಪದ್ಧತಿಯಿಂದ ಸ್ವೀಕರಿಸಲ್ಪಟ್ಟು ಮತ್ತು ತಲೆಮಾರಿನಿಂದ ತಲೆಮಾರಿಗೆ ಒಯ್ಯಲ್ಪಟ್ಟಾಗ ಅವು ಸಮಾಜದ ವಿಭಿನ್ನ ಸನ್ನಿವೇಶಗಳೊಳಗೆ ಆಚಾರಾರ್ಥಕವಾದವುಗಳೆಂದು ಸಿದ್ಧಪಡುತ್ತವೆ. ವಿವಿಧವಾದ ಸಂಚಿತ ಮಾನವ ಅನುಭವಗಳ ಪರಿಣಾಮವಾಗಿ ವಿವಿಧ ಸಂಸ್ಥೆಗಳು ಉದಯಿಸಿವೆ. ಕುಟುಂಬ ವಿಶ್ವವ್ಯಾಪಿ ಮತ್ತು ಆಧಾರಸಂಸ್ಥೆಯಾಗಿ ಎಲ್ಲ ಸಮಾಜಗಳಲ್ಲಿಯೂ ಇದೆ. ಸಂಸ್ಥೆಗಳು ಸ್ವೀಕೃತ ಮಾರ್ಗಗಳಲ್ಲಿ ಮಾನವನ ಅಗತ್ಯಗಳನ್ನು ಪೂರೈಸುತ್ತವೆ. ಕುಟುಂಬ ಸಂಸ್ಥೆ ಸಾಮಾಜಿಕವಾಗಿ ಸ್ವೀಕೃತ ಮಾರ್ಗಗಳಲ್ಲಿ ಮಾನವರ ಲೈಂಗಿಕ ಅಗತ್ಯಗಳ ತೃಪ್ತಿಗೆ ಅನುವು ಮಾಡಿಕೊಡುತ್ತದೆ. ಇದು ಕುಟುಂಬ ಸಂಸ್ಥೆ ನಿರ್ವಹಿಸುವ ಅನೇಕ ಕಾರ್ಯಗಳಲ್ಲಿ ಒಂದು. ಅದು ಹೇಗೇ ಇರಲಿ. ಎಲ್ಲ ಮಾನವರೂ ಅನಿವಾರ್ಯವಾಗಿ ಲೈಂಗಿಕ ತೃಪ್ತಿಯನ್ನು ವಿವಾಹ ಮತ್ತು ಕುಟುಂಬಗಳೊಳಗೇ ಹೊಂದುವರೆಂದು ಸೂಚಿಸುವುದಿಲ್ಲ. ಅಮೆರಿಕದ ವಿವಾಹಿತರಲ್ಲಿ ಅರ್ಧ ಜನರು ಮದುವೆಯ ಹೊರಗಿನ ಸಂಬಂಧಗಳನ್ನು ಮಾಡಿಕೊಂಡಿರುತ್ತಾರೆಂದು ಕಿನ್ಸೆಯವರು ಅಂದಾಜು ಮಾಡಿದ್ದಾರೆ. ಆದರೆ ಪ್ರಾಯಶಃ ಇವರೆಲ್ಲ ಆತ್ಮಸಾಕ್ಷಿಯಾಗಿರುವ ಧ್ಯೇಯದಲ್ಲಿ ನಂಬಿಕೆಯಿಟ್ಟವರಾಗಿದ್ದಾರೆ. ಹೆಚ್ಚಿನ ವೈಯಕ್ತಿಕ ಮಟ್ಟದಲ್ಲಿ ನಾವುಗಳೆಲ್ಲ ಸುಳ್ಳು ಹೇಳುತ್ತೇವೆ, ಆದರೆ ಅಷ್ಟಾದರೂ ಸತ್ಯ ಹೇಳುವ ಧ್ಯೇಯದಲ್ಲಿ ಎಲ್ಲರಿಗೂ ನಂಬಿಕೆಯಿದೆ. ಕುಟುಂಬ ವ್ಯಕ್ತಿಯನ್ನು

ಸಮಾಜಯೋಗ್ಯನನ್ನಾಗಿ ಮಾಡುತ್ತದೆ ಮತ್ತು ಅವನು ಸಮಾಜದ ಕ್ರಿಯಾಶೀಲ ಸದಸ್ಯನಾಗಲು ಸಹಾಯ ಮಾಡುತ್ತದೆ. ಕುಟುಂಬ ನಿರ್ವಹಿಸುವ ಅನೇಕ ಕಾರ್ಯಗಳಲ್ಲಿ ನಿಸ್ಸಂದೇಹವಾಗಿ ಲೈಂಗಿಕ ಕಾರ್ಯವೂ ಒಂದು. ಲೈಂಗಿಕ ಅಪಮಾರ್ಗದ ಸಂಗತಿಯಿಂದಾಗಿ ಕುಟುಂಬ ಲೈಂಗಿಕ ನಿಯಂತ್ರಣ ಮಾಡುವಲ್ಲಿ ವಿಫಲವಾಗಿದೆ ಎಂದು ಅರ್ಥವಲ್ಲ. ಯಾವ ವಿಷಯದಲ್ಲಿ ಜನರು ಆದರ್ಶಗಳನ್ನು ಬಹಳ ನಂಬಿಕೆಯಿಂದ ಅಭ್ಯಸಿಸುತ್ತಾರೋ. ಅದರಲ್ಲಿ ಪರತ್ಯಾಗಗಳನ್ನು ನಿರ್ಮಿಸುವುದು ಸಾಧ್ಯ. ಕುಟುಂಬ ನಮ್ಮ ತೃಪ್ತಿಯ ಅಗತ್ಯಗಳನ್ನು ನಿಯಂತ್ರಿಸುತ್ತದೆ ಮತ್ತು ಸಂಸ್ಕೃತಿಯ ಒಂದು ಪ್ರಮುಖ ಅಂಗವಾಗಿ ಧ್ಯೇಯಗಳು ಮತ್ತು ಮೌಲ್ಯಗಳನ್ನು ಆದರ್ಶಗಳ ಸಂಹಿತೆಗಳ ರೀತಿಯಲ್ಲಿ ಬೋಧಿಸುವ ಮೂಲಕ ಒಂದು ತಲೆಮಾರಿನಿಂದ ಮತ್ತೊಂದು ತಲೆಮಾರಿಗೆ ವಹಿಸುವಂತೆ ಮಾಡುತ್ತದೆ.

ಸಮಾಜೀಕರಣದ ಮುಖಾಂತರ ಅಂತಸ್ಥವಾದ ಮೌಲ್ಯಗಳ ಪ್ರಭಾವ ಎಷ್ಟೊಂದು ತೀವ್ರವಾಗಿದೆ ಎಂದರೆ, ವ್ಯಕ್ತಿ ಆದರ್ಶಗಳ ಉಲ್ಲಂಘನೆ ಮಾಡಿದಾಗ ಆಂತರಿಕ ಕ್ಷಮಾಪಣೆ ಕೇಳಿಕೊಳ್ಳುತ್ತಾನೆ. ಅವನು ಆ ರೀತಿ ಉಲ್ಲಂಘಿಸಿದುದನ್ನು ಮುಚ್ಚಿಡುವ ಸಂಭವವಿದೆ ಮತ್ತು ಬೇರೆಯವರು ಅವನು ಆ ರೀತಿ ಮಾಡಿದುದನ್ನು ಕಂಡುಹಿಡಿದಾಗ ಮನಸ್ಸಿಗೆ ಸಂಕೋಚ ಉಂಟುಮಾಡಿಕೊಳ್ಳುತ್ತಾನೆ.

ಹೀಗೆ ಕುಟುಂಬ ಸಮಾಜದೊಳಗೆ ಒಂದು ಮೂಲಭೂತ ಸಂಸ್ಥೆಯಾಗಿದೆ. ಅದು ಮಾನವನನ್ನು ಅವನ ನಾನಾ ಬಗೆಯ ಪಾತ್ರಗಳಲ್ಲಿ ಸಮಾಜೀಕರಿಸುತ್ತದೆ. ಅವನ ನಡತೆಯನ್ನು ವ್ಯವಸ್ಥೆಗೊಳಿಸುತ್ತದೆ. ಅವನ ಅವಶ್ಯಕತೆಗಳ ಮೇಲೆ ನಿಯಂತ್ರಣಗಳನ್ನಿಡುತ್ತದೆ ಮತ್ತು ಅವನು ಸಾಮಾಜಿಕವಾಗಿ ಸ್ವೀಕೃತ ಮಾರ್ಗಗಳ ಮುಖಾಂತರ. ಅವನ ಇಚ್ಛೆಗಳಿಗೆ ಹೊರಕ್ಕೆ ಹೋಗುವ ಮಾರ್ಗವನ್ನು ಹೊಂದುವಂತೆ ಬೋಧಿಸುತ್ತದೆ.

ಲೈಂಗಿಕ ಪ್ರೇರಣೆ

ಮಾನವರ ನಡುವಣ ಲೈಂಗಿಕ ಸಂಭೋಗದಿಂದ ಮೊದಲುಗೊಂಡು ಮಕ್ಕಳನ್ನು ಪೋಷಿಸುವ ವರೆಗೂ ಕಲಿತದ್ದು. ನಮ್ಮ ಅನುಭವ ಲೈಂಗಿಕ ಪ್ರೇರಣೆಯನ್ನು ಒಂದು ವಿಶಿಷ್ಟ ಗುರಿ ಅಥವಾ ನೆಲೆಗೆ ಸಂಬಂಧಿಸುವ ಸಂಘಗಳನ್ನು ಅಥವಾ ಸ್ಥಿತಿ-ಪ್ರತಿಕ್ರಿಯೆಗಳನ್ನು ಸೃಜಿಸುತ್ತದೆ. ಲೈಂಗಿಕ ಬೇಡಿಕೆ ಮತ್ತು ಪ್ರೇರಣೆ ಸಮಾಜದಿಂದ ಸಮಾಜಕ್ಕೆ ಬದಲಾವಣೆಯನ್ನು ಹೊಂದುವ ಪರಿಮಳ. ಸಂಗೀತ. ಕೆಲವು ಮಾತುಗಳು. ಕೆಲವು ವಾಕ್ಸರಣಿಯ ನಾವ ಮೊದಲಾದವುಗಳೊಡನೆ ಜೊತೆಗೂಡಿರುತ್ತದೆ. ಈ ಅಂಶಗಳು ಸಾಂಸ್ಕೃತಿಕವಾಗಿ ನೆಲೆಗೊಳಿಸಲ್ಪಡುವುದರಿಂದ ಲೈಂಗಿಕ ದೃಷ್ಟಿಯನ್ನು ಪಡೆಯುತ್ತವೆ. ಪರ್ಯಾಯವಾಗಿ ಲೈಂಗಿಕ ಪ್ರೇರಣೆಯೇ ಸಂಸ್ಕೃತಿಯಿಂದ ವ್ಯವಸ್ಥಿತ ರೂಪವನ್ನು ಪಡೆಯುತ್ತದೆ. ನಿದರ್ಶನರೂಪವಾಗಿ ಸೋದರ ಸೋದರಿಯರು ದೈಹಿಕವಾಗಿ ಚಿತ್ತಾಕರ್ಷಕವಾಗಿದ್ದೂ ಸಮೀಪವರ್ತಿಗಳಾಗಿದ್ದರೂ ಜಾಗ್ರತ ಲೈಂಗಿಕಾಸಕ್ತಿಯನ್ನು ಕೆರಳಿಸಲಾರರು. ಅವರು ಲೈಂಗಿಕ ಸಹಭಾಗಿಗಳಾಗಲು ಸಾಧ್ಯವೇ ಇಲ್ಲವೆಂದು ಪರಿಗಣಿಸಲ್ಪಟ್ಟಿದ್ದಾರೆ.

ಲೈಂಗಿಕ ಪ್ರೇರಣೆ ಸಾಂಸ್ಕೃತಿಕವಾಗಿ ನಿಯಂತ್ರಿಸಲ್ಪಟ್ಟಿದೆ. ಪ್ರಾಯಶಃ ಲೈಂಗಿಕ ಪ್ರೇರಣೆಯಷ್ಟು ನಿಷ್ಕೃಷ್ಟವಾಗಿಯೂ ಸಾಮಾಜಿಕವಾಗಿಯೂ ನಿಯಂತ್ರಿಸಲ್ಪಟ್ಟಿರುವ ಬೇರಾವುದೇ ಜೈವಿಕ ಪ್ರೇರಣೆಯೂ ಇಲ್ಲ. ಉದ್ರಿಕ್ತ ಸ್ಥಿತಿಯಲ್ಲಿದ್ದಾಗ ಅದರ ಸಂಪೂರ್ಣ ತೃಪ್ತಿಯನ್ನು ಪಡೆಯಲಾಗದಿದ್ದರೂ ಲೈಂಗಿಕ ತುಡಿತವನ್ನು ಅನುಭವಿಸಲು ಸಾಂಸ್ಕೃತಿಕವಾಗಿ ವಿಧಿಸಿರುವ ಅನೇಕ ಮಾರ್ಗಗಳುಂಟು. ಚಲನಚಿತ್ರ. ಸಾಹಿತ್ಯ. ಉಡುಪಿನ ಮಾದರಿ. ನೃತ್ಯಗಳು. ಹಾಡುಗಳು. ಚಿತ್ರಗಳು–ಮೊದಲಾದವು ಸಾಂಪ್ರದಾಯಿಕ ಮತ್ತು ಆಧುನಿಕ ಸಂಸ್ಕೃತಿಗಳೆರಡರಲ್ಲೂ ಪ್ರಾಯದ ಗಂಡಸರು ಮತ್ತು ಹೆಂಗಸರಿಗೆ ವಿಪುಲವಾಗಿ ಶೃಂಗಾರ ಸಂವೇದನೆಯನ್ನು ಒದಗಿಸುತ್ತವೆ. ಒಂದು ಕಡೆಯಲ್ಲಿ ಸಾಂಸ್ಕೃತಿಕವಾಗಿ ವಿಧಿಸಿರುವ ಈ ಶೃಂಗಾರ ಸಂವೇದನೆ ಲೈಂಗಿಕ ತುಡಿತವನ್ನು ಸೃಜಿಸುತ್ತದೆ ಮತ್ತೊಂದು ಕಡೆ ಅದೇ ವೇಳೆಯಲ್ಲಿ ಸಂಸ್ಕೃತಿ ವಿವಾಹದಿಂದ ಹೊರಗೆ ಅಥವಾ ಅದಕ್ಕೆ ಮುಂಚಿನ ಯಾವುದೇ ಲೈಂಗಿಕ ಪೂರೈಕೆಯನ್ನು ವಿರೋಧಿಸುತ್ತದೆ. ಹಾಗೆಯೇ ವಿಶೇಷವಾಗಿ ಯಾರು ತಮ್ಮ ಶಕ್ತಿಯನ್ನು ರಚನಾತ್ಮಕವಾಗಿ ಉಪಯೋಗಿಸುವ ಬಹಿರ್ದ್ವಾರವನ್ನು ಕಂಡುಕೊಳ್ಳಲು ಅಸಮರ್ಥರಾಗಿ ಹಗಲುಗನಸಿನಲ್ಲಿ ಅತ್ಯಾಸಕ್ತರಾಗಿದ್ದು ಮತ್ತು

ಕಲ್ಪನಾ ರಾಜ್ಯದಲ್ಲಿರುತ್ತಾರೋ ಅವರಿಗೆ ವಿಶೇಷವಾಗಿ ಲೈಂಗಿಕ ಭ್ರಾಂತಿ, ಕಲ್ಪನೆ ಮತ್ತು ಲೈಂಗಿಕ ಪ್ರವೃತ್ತಿಗಳ ದಮನ ಹೆಚ್ಚಾಗಿರುತ್ತದೆ.

ಇವುಗಳಿದ್ದೂ ಏಕಪತಿತ್ವ–ಪತ್ನೀತ್ವ ಎಲ್ಲಾ ನಾಗರಿಕ ಸಮಾಜಗಳಲ್ಲಿಯೂ ಆದರ್ಶಪ್ರಾಯವಾಗಿವೆ. ಮೇಲ್ಮಟ್ಟದ ವಾನರಗಳು ಕೂಡ ಏಕಪತಿತ್ವ–ಪತ್ನೀತ್ವವುಳ್ಳವಾಗಿವೆಯೆಂದು ಶ್ರುತಪಟ್ಟದೆ; ಅವ್ಯಭಿಚಾರತೆ ಆದರ್ಶಪ್ರಾಯವಾಗಿದೆ ಮತ್ತು ಕನ್ಯಾತ್ವ ಅಪೇಕ್ಷಣೀಯವಾಗಿದೆ. ಅಮೆರಿಕದ ಸಮಾಜದಲ್ಲಿ ಸಾಂಸ್ಕೃತಿಕವಾಗಿ ಡೇಟಿಂಗ್, ಕಂಠಾಲಿಂಗನ ಮೊದಲಾದವುಗಳ ಮೂಲಕ ಕೆಲವಂಶದ ದೈಹಿಕ ಗಾಢ ಪರಿಚಯಕ್ಕೆ ಅನುಮತಿ ಕೊಡಲಾಗಿದೆ. ಈಗಲೂ ಅಮೆರಿಕದ ತರುಣ ತನ್ನ ಹೆಂಡತಿಯಲ್ಲಿ ಕನ್ಯಾತ್ವ ಇರಬೇಕೆಂದು ಬಯಸುತ್ತಾನೆ ಮತ್ತು ಅದಕ್ಕೆ ಮಹತ್ವವಿತ್ತಿದ್ದಾನೆ.

ಏಕಪತಿತ್ವ–ಪತ್ನೀತ್ವ ಮತ್ತು ಕನ್ಯಾತ್ವ ಧ್ಯೇಯಗಳಾಗಿದ್ದರೂ ಸ್ವೀಕೃತ ಸಾಮಾಜಿಕ ಆದರ್ಶಗಳನ್ನು ಬಿಟ್ಟು, ಅಡ್ಡಮಾರ್ಗ ಹಿಡಿಯುವುದು ಅಸಾಧಾರಣವಾದುದೇನಲ್ಲ. ಯಾವುದು ಏನೇ ಆಗಲಿ, ಇವು ಒಂದು ಸಾಮಾಜಿಕ ಪದ್ಧತಿಗೂ ಮತ್ತೊಂದು ಸಾಮಾಜಿಕ ಪದ್ಧತಿಗೂ ವಿಸ್ತಾರದಲ್ಲಿ ವ್ಯತ್ಯಾಸಗೊಳ್ಳುತ್ತವೆ. ಲೈಂಗಿಕತೆ ಅತ್ಯಂತ ಪ್ರಬಲವಾದ ಸಹಜ ಪ್ರವೃತ್ತಿ ಆಗಿದ್ದಾಗ್ಯೂ ಎಲ್ಲ ಸಮಾಜಗಳೂ ಅದರ ಸಾಂಸ್ಥಿಕ ನಿಯಂತ್ರಣವನ್ನು ಒತ್ತಿ ಹೇಳುತ್ತವೆ. ಲೈಂಗಿಕ ತೃಪ್ತಿಗೆ ಮುಖ್ಯವಾಗಿ ತನ್ನೊಳಗೆ ಅವಕಾಶವೀಯುವ ವಿವಾಹ ಮತ್ತು ಕುಟುಂಬ ಸಂಸ್ಥೆಗಳ ಮುಖಾಂತರ ಇದು ಸಾಧ್ಯವಾಗುತ್ತದೆ. ವಿವಾಹ ಮತ್ತು ಕುಟುಂಬಗಳೊಳಗೇ ಲೈಂಗಿಕ ಪೂರೈಕೆ ಎಲ್ಲ ಸಮಾಜಗಳಲ್ಲಿಯೂ, ಅವುಗಳು ಸಮಾಜ ವಿಕಸನದ ಯಾವುದೇ ಮಟ್ಟದಲ್ಲಿದ್ದರೂ ಗಣನೆಗೆ ತೆಗೆದುಕೊಳ್ಳದೆ, ಆದರ್ಶವಾಗುತ್ತಿದೆ.

ನಿಯಮಗಳ ಉಲ್ಲಂಘನೆ

ಸ್ತ್ರೀಯರೊಳಗಿನ ಅನೈತಿಕ ವ್ಯಾಪಾರದಿಂದ ವಿವಾಹದ ಪವಿತ್ರತೆ, ಸ್ಥಿರತೆ ಮತ್ತು ಕನ್ಯಾತ್ವ ಮತ್ತು ಅವ್ಯಭಿಚಾರತೆಯ ಉಲ್ಲಂಘನೆಯಾಗುತ್ತಿದೆ. ಇದು ವ್ಯಭಿಚಾರ ಸಂಸ್ಥೆಯ ಮುಖಾಂತರ ನಾಗರಿಕತೆಯ ಪ್ರಾರಂಭದಿಂದಲೂ ಅದರ ವಿವಿಧ ರೂಪಗಳೊಡನೆ ಪ್ರಕಟವಾಗುತ್ತಿದೆ. ವ್ಯಭಿಚಾರ ಸಂಸ್ಥೆ ವಿವಾಹ ಸಂಸ್ಥೆಯೊಡನೆ ವಿವಿಧ ಶ್ರೇಣಿ ಮತ್ತು ನಮೂನೆಗಳೊಡನೆ ಎಲ್ಲ ಸಮಾಜಗಳಲ್ಲಿ ಅಸ್ತಿತ್ವದಲ್ಲಿದೆ. ಒಂದು ಪಂಥದ ವಿವೇಚಕರು ವ್ಯಭಿಚಾರ ಒಂದು ಅನಿವಾರ್ಯ ಕೇಡು ಎಂದು ನಂಬುವಂತೆ ಇದು ಮಾಡಿದೆ. ಮನುಷ್ಯ ಸ್ವಭಾವ ಅದು ಇರುವ ರೀತಿಯಲ್ಲಿಯೇ ಇರುವವರೆಗೂ ವ್ಯಭಿಚಾರವನ್ನು ನಿರ್ಮೂಲ ಮಾಡಲಾಗುವುದಿಲ್ಲ. ವ್ಯಭಿಚಾರದ ರೂಪ ಮತ್ತು ಹರವಿನಲ್ಲಿ ಸಮಾಜಸಮಾಜಕ್ಕೆ ಮತ್ತು ಕಾಲಕಾಲಕ್ಕೆ ಭಿನ್ನತೆಯಿದ್ದಾಗ್ಯೂ ಅದು ಎಲ್ಲ ಕಾಲದಲ್ಲೂ ನಾಗರಿಕತೆಯ ಪ್ರಾರಂಭದಿಂದಲೂ ಇರುವುದು ಸತ್ಯ ಸಂಗತಿಯಾಗಿದೆ. ವ್ಯಭಿಚಾರದ ಇರುವಿಕೆಯ ಬಗ್ಗೆ ಸಮಾಜದ ಪ್ರತಿಕ್ರಿಯೆ ಒಂದೇ ರೀತಿಯಲ್ಲಿಲ್ಲ. ಕೆಲವೊಂದು ಕಾಲದಲ್ಲಿ ವ್ಯಭಿಚಾರ ಸ್ಪಷ್ಟವಾದ ರೀತಿಯಲ್ಲಿ ಖಂಡಿಸಲ್ಪಟ್ಟಿದೆ ಮತ್ತು ಕೆಲವೊಂದು ಕಾಲದಲ್ಲಿ ಅದು ಭಿನ್ನವೇಷದೊಡನೆ ಧಾರ್ಮಿಕವಾಗಿ ಅನುಮೋದನೆ ಪಡೆದಿದೆ. ಪ್ರಾಚೀನ ಗ್ರೀಕ್, ಸ್ಪಾರ್ಟನ್, ಚೀನೀ ಮತ್ತು ಭಾರತೀಯ ಸಮಾಜಗಳು ವ್ಯಭಿಚಾರ ಸಂಸ್ಥೆಯನ್ನು ಸಹಿಸಿವೆ. ಆಗಾಗ್ಗೆ ಮೆಚ್ಚಿವೆ ಮತ್ತು ಆಗಾಗ್ಗೆ ಖಂಡಿಸಿವೆ ಎಂಬುದಕ್ಕೆ ಸಾಕಷ್ಟು ಐತಿಹಾಸಿಕ ಸಾಕ್ಷಿಗಳಿವೆ.

ಐತಿಹಾಸಿಕವಾಗಿ ಈ ಅಪಮಾನಕರ ವೃತ್ತಿಯನ್ನು ಅನುಸರಿಸಿದ್ದಕ್ಕಾಗಿ ಸ್ತ್ರೀ ಮಾತ್ರವೇ ಯಾವಾಗಲೂ ಖಂಡಿಸಲ್ಪಟ್ಟಿದ್ದಾಳೆ. ಗಂಡು ಸಾಮಾಜಿಕ ಹರಟೆಗಳ ಹೊರತು ಯಾವ ಸಂದರ್ಭದಲ್ಲೂ ಗುರುತಿಸಲ್ಪಡುತ್ತಿಲ್ಲ. ಅವನು ಮೇಲು ಮತ್ತು ಕೀಳು. ಕುಲೀನ ಮತ್ತು ನೀಚ ಮುಂತಾದ ಎಲ್ಲ ವರ್ಗ ಮತ್ತು ಎಲ್ಲ ವಿಧವಾದ ಕುಟುಂಬಗಳಿಂದ ಬಂದವನಿರುತ್ತಾನೆ. ಇದು ಸ್ವಲ್ಪಮಟ್ಟಿಗೆ ನಿಜಸಂಗತಿ. ಏಕೆಂದರೆ ಮೌಲ್ಯಗಳು ಮತ್ತು ಆದರ್ಶಗಳನ್ನು ಸ್ಥಾಪಿಸುವಲ್ಲಿ ಗಂಡಸರು ಪರಿಷ್ಕೃತ ಸ್ಥಾನದಲ್ಲಿದ್ದಾರೆ. ಸಾಮಾಜಿಕ ಪದ್ಧತಿಗಳ ಕಾರ್ಯನಿರ್ವಹಣೆಗೋಸ್ಕರ ಮೌಲ್ಯಗಳನ್ನು ಸೃಜಿಸುವುದು ಮತ್ತು ಆದರ್ಶಗಳನ್ನು ಸ್ಥಾಪಿಸುವುದು ಅವನ ಕಾರ್ಯವಾಗಿದೆ. ಗಂಡಸು ಮತ್ತು ಹೆಂಗಸು ಉಭಯತ್ರರಲ್ಲಿ ಯಾರಾದರೂ ಆಕೃತ್ಯರಾಗಿರಬಹುದು. ಅವರು ಹಣಕಾಸಿನ ಅಥವಾ ಬೇರೆ ರೀತಿಯಾಗಿರುವ ಸಂಪಾದನೆಯ ಉದ್ದಿಶ್ಯಕ್ಕೋಸ್ಕರ ವಿವಿಧ ಜನರೊಡನೆ ಒಪ್ಪೊತ್ತಿನ ಅಥವಾ ಪೂರ್ಣಾವಧಿಯ ಹುದ್ದೆಯಾಗಿ ಕ್ರಮಬದ್ಧವಾದ

ಅಥವಾ ಅತಿರೇಕದ ಲೈಂಗಿಕ ಸಂಬಂಧಗಳಲ್ಲಿ ತೊಡಗಿರುತ್ತಾರೆ. ಲೈಂಗಿಕ ಅಪರಾಧ ಓರ್ವ ವ್ಯಕ್ತಿ ತಾನು ಜೀವಿಸಿರುವ ಸಮಾಜದಲ್ಲಿ ಬಳಕೆಯಲ್ಲಿರುವ ಲೈಂಗಿಕ ಆದರ್ಶಗಳಿಗೆ ವಿರುದ್ಧವಾಗಿ ಅಥವಾ ಕಾನೂನಿಗೆ ಅನುಸಾರವಾಗಿ ಶಿಕ್ಷಾರ್ಹವಾಗಿದ್ದರೂ ಅದು ತತ್‌ಕ್ಷಣದ ಲೈಂಗಿಕ ತೃಪ್ತಿಗಾಗಿ ಮಾಡುವ ಒಂದು ಬಹಿರಂಗ ಕ್ರಿಯೆಯಾಗಿದೆ.

ವ್ಯಭಿಚಾರ ಮಾನವ ಸತತವು ರೋಗವಿಜ್ಞಾನದ ದೃಷ್ಟಿ ಮತ್ತು ಸಾಮಾಜಿಕ ರಚನೆಯ ಒಂದು ಸ್ಪಷ್ಟ ಮಾದರಿ—ಎರಡನ್ನೂ ಒಳಗೊಂಡಿದೆ. ಅದು ಸಾಂಸ್ಥಿಕ ರೂಪಗಳನ್ನು ಹೊಂದಿದೆ. ಕೇವಲ ಎರಡು ಜನರನ್ನು ಒಳಗೊಳ್ಳದೆ, ಕೆಳಸಂಸ್ಕೃತಿ, ಮೌಲ್ಯಗಳ ಪದ್ಧತಿ ಮತ್ತು ಅವರದ್ದೇ ಆದ ಒಂದು ಭಿನ್ನ ವಿಶ್ವವನ್ನು ಹೊಂದಿರುವ ಒಂದು ವಿಸ್ತೃತ ಗುಂಪಾಗಿದೆ. ವ್ಯಭಿಚಾರ ಎರಡು ಅಥವಾ ಅದಕ್ಕೂ ಹೆಚ್ಚಿನ ಜನರ ನಡುವೆ ವಿವಾಹೇತರದೊಡನೆ ಸ್ವೇಚ್ಛಾ ಸಂಪರ್ಕ ಅಥವಾ ಕೂಲಿಯ ಆಧಾರದ ಮೇಲೆ ಇರುವ ಲೈಂಗಿಕ ಸಂಯೋಗವನ್ನು ಒಳಗೊಂಡಿದೆ. ಬಹಳ ಸಂಖ್ಯೆಯ ಹೆಂಗಸರು ಸ್ವೇಚ್ಛಾಸಂಪರ್ಕ ಉಳ್ಳವರಾಗಿರಬಹುದು: ಆದರೆ ಅವರೆಲ್ಲ ವ್ಯಭಿಚಾರಿಗಳಲ್ಲ. ಯಾವಾಗ ಹೆಂಗಸರು ಅದನ್ನು ಒಂದು ವೃತ್ತಿಯನ್ನಾಗಿಸಿಕೊಳ್ಳುತ್ತಾರೋ, ಆಗ ಅವರು ವ್ಯಭಿಚಾರಿಗಳೆಂದು ಪರಿಗಣಿಸಲ್ಪಡುತ್ತಾರೆ. ಅವರು ಆದರಿಂದ ಹೊಟ್ಟೆ ಹೊರೆಯುತ್ತಾರೆ.

ವ್ಯಭಿಚಾರಿಗಳು ಕೆಲವು ಸಾಮಾಜಿಕ ಕಾರ್ಯಗಳನ್ನು ಸಾಧಿಸುವರೆಂದು ಸಮರ್ಥಿಸಲಾಗಿದೆ. ವ್ಯಭಿಚಾರ ಸಂಸ್ಥೆ ತಾನು ಲೈಂಗಿಕ ಬಹಿರ್ದ್ವಾರವನ್ನು ಒದಗಿಸುವುದರಿಂದ ಬಲಾತ್ಕಾರ ಸಂಭೋಗ ಮತ್ತು ವಿವಾಹ ವಿಚ್ಛೇದನಗಳಿಂದ ಸಮಾಜವನ್ನು ರಕ್ಷಿಸುತ್ತದೆ. ಅದರಿಂದ ಸುಖ ಪಡೆಯುವ ಒಬ್ಬಂಟಿಗ ಗಂಡಸರ ಭಾವೋದ್ರೇಕವನ್ನು ಶಮನ ಮಾಡುತ್ತದೆ. ಅದರ ಅಸ್ತಿತ್ವವನ್ನು ನ್ಯಾಯವೆಂದು ಸಮರ್ಥಿಸಲು ಸಮಗ್ರ ಪರಿಣಾಮಗಳನ್ನು ಪರೀಕ್ಷಿಸಬೇಕೇ ಹೊರತು ಆರಿಸಿದ ಕೆಲವನ್ನಲ್ಲ. ಹಾಗೆ ಮಾಡಿದಾಗ ಈ ವಾದಗಳು ಸಮರ್ಥನೀಯವಾದವುಗಳಲ್ಲವೆಂದು ತೋರುತ್ತದೆ. ಯಾರು ವ್ಯಭಿಚಾರಿಗಳಲ್ಲಿಗೆ ಆಗಾಗ್ಗೆ ಹೋಗುತ್ತಿದ್ದರೋ, ಅವರೆಲ್ಲ ನಿಶ್ಚಯವಾಗಿಯೂ ಲೈಂಗಿಕ ಅಡ್ಡಮಾರ್ಗ ಹಿಡಿದವರೂ ಅಲ್ಲ. ಬಲಾತ್ಕಾರ ಸಂಭೋಗಿಗಳೂ ಅಲ್ಲ.

ವ್ಯಭಿಚಾರದ ಆಚಾರಾರ್ಥಕವಲ್ಲದ ರೂಪಗಳು ಬಹಳ ತೀಕ್ಷ್ಣವಾಗಿವೆ. ಲೈಂಗಿಕ ಸಂಬಂಧಗಳ ವ್ಯಾಪಾರೀಕರಣ ಅದರ ಸಂಪೂರ್ಣ ವ್ಯಾಪ್ತ ರಚನೆಯಲ್ಲಿ ಒಳಕೊಳ್ಳುವ ನಾನಾ ವಿಧದ ಉಪಪದ್ಧತಿಗಳ ರಚನೆಮಾಡಲು ದಾರಿ ತೋರಿಸುವಂತಹುದಾಗಿದೆ. ಯಾರು ವ್ಯಭಿಚಾರ ಕಾರ್ಯವನ್ನು ನಿಯಂತ್ರಿಸಬೇಕೆಂದು ಕೋರಲ್ಪಡುತ್ತಾರೋ, ಆ ಪೋಲೀಸರು ಮತ್ತು ವೈದ್ಯರೊಳಗೇ ರತಿರೋಗದ ಹರವು, ನೀತಿ ಭ್ರಷ್ಟತೆ ಮತ್ತು ಲಂಚಗಾರಿಕೆ ಹಾಸುಹೊಕ್ಕಾಗಿರುವುದು ಅದರ ವಿಷಮತೆಯನ್ನು ಹೆಚ್ಚಿಸಿದೆ. ವ್ಯಭಿಚಾರದಿಂದ ಬಾಡಿಗೆ ಮೋಟಾರುಗಾಡಿ ಮಂಡಲಿಗಳು, ಡೋಬಿಖಾನೆಗಳು, ವಿರಾಮಪ್ರವಾಸಸ್ಥಳಗಳು, ಗರ್ಭನಿರೋಧಕಗಳ ತಯಾರಕರು, ವೈದ್ಯರು, ಗರ್ಭಪಾತ ಮಾಡಿಸುವವರು ಮುಂತಾದವರುಗಳೆಲ್ಲ ಹಣವನ್ನು ಸಂಪಾದಿಸುತ್ತಾರೆ. ವ್ಯಭಿಚಾರದಿಂದ ಆಗುವ ಪರಿಣಾಮಗಳು ಸಾಮಾನ್ಯವಾಗಿ ಎಣಿಸಿರುವುದಕ್ಕಿಂತ ಹೆಚ್ಚು ವಿಸ್ತಾರವಾಗಿ ಹರಡಿರುತ್ತವೆ. ವ್ಯಭಿಚಾರಿಗಳ ವಿಶ್ವ ಭಿನ್ನವಾದದ್ದು ಮತ್ತು ಪ್ರತ್ಯೇಕವಾದದ್ದಾಗಿದೆ. ಅವರ ದಿನನಿತ್ಯದ ಹೆಚ್ಚಿನ ಅನುಭವವನ್ನು ಹಂಚಿಕೊಳ್ಳಲು ಜೊತೆಗೆ ಯಾರೂ ಇಲ್ಲದೇ ಇರುವುದು ಅವರು ಇತರ ವ್ಯಭಿಚಾರಿಗಳನ್ನು ಹಿಂಬಾಲಿಸುವಂತೆ ಅವರನ್ನು ನಿರ್ಬಂಧಿಸುತ್ತದೆ. ಮತ್ತು ಅವರೆಲ್ಲ ಒಂದು ವಿಶಿಷ್ಟ ತೆರನಾದ ಸಾಮಾಜಿಕ ಹೊರಹಾಕುವಿಕೆ ಮತ್ತು ಸಾಮಾಜಿಕ ಅಂತರದಲ್ಲಿ ಸಮಭಾಗಿಗಳಾಗಿರುತ್ತಾರೆ.

ಅವರು ಗಿರಾಕಿಗಳನ್ನು ಬದಲಿಸಬಹುದಾದ ವಸ್ತುಗಳ ಸರಣಿಯಂತೆ ಕಾಣುವುದರಿಂದ ಅವರೊಡನೆ ಭಾವಗಳ ಬಂಧನ (ಸಂಬಂಧ)ವನ್ನು ಬೆಳಸಿಕೊಳ್ಳುವುದಿಲ್ಲ. ಗಿರಾಕಿ ಅವಲಿತ ಸಂಬಂಧ, ಅನ್ಯೋನ್ಯ ಮಾತುಕತೆಗಳು ಮತ್ತು ಅನುಭವಗಳ ಹಂಚಿಕೆಯಿಂದ ಕಲಿತದ್ದಾಗಿದೆ.

ವ್ಯಭಿಚಾರಿಗಳ ಜೀವನ ಮತ್ತು ಸಂಸ್ಕೃತಿಯ ಸಮಗ್ರ ಸಂಕೀರ್ಣತೆ ಸಾಂಪ್ರದಾಯಿಕ ಸಮಾಜಕ್ಕೆ ಅವರು ಹಿಂದಿರುಗುವುದು ಬಹಳ ಕಷ್ಟವಾಗುವಂತೆ ಮಾಡಿದೆ. ಆದಕಾರಣ ಅದು ಹೀಗೆ ಹೇಳಲ್ಪಟ್ಟಿದೆ: ಓರ್ವ ವ್ಯಕ್ತಿ ಒಮ್ಮೆ ವ್ಯಭಿಚಾರಿಯಾದರೆ ಸರ್ವದಾ ವ್ಯಭಿಚಾರಿ. ಅವನ ಆತ್ಮಗೌರವಕ್ಕೆ

ಹಾನಿಯುಂಟಾಗುತ್ತದೆ ಮತ್ತು ಸಮಾಜದ ಜೊತೆಗಿನ ಸಹಜ ಸಂಬಂಧಗಳಿಗೆ ಭಂಗ ತರುತ್ತದೆ. ಆದ್ದರಿಂದ ವ್ಯಭಿಚಾರಿಗಳಿಗೆ ಯಾವ ಕಳಂಕವೂ ತಟ್ಟದ ರೀತಿಯಲ್ಲಿ ಅವರನ್ನು ಪೂರ್ವಸ್ಥಿತಿಗೆ ತರಬೇಕಾಗಿದೆ.

ಅನೈತಿಕ ವ್ಯವಹಾರ ಮತ್ತು ಸಾಮಾಜಿಕ ಅನೈಕ್ಯ

ಅನೈತಿಕ ವ್ಯಾಪಾರದ ಮುಖಾಂತರ ಬಂದಂಥ ಅನೈಕ್ಯ ಮುಂದೆ ಹೇಳುವ ಮಾದರಿಯಲ್ಲಿದೆ :

(ಅ) ಕುಟುಂಬದಂಥ ಸಮಾಜದ ಆಧಾರದ ಸ್ವರೂಪದ ಅನೈಕ್ಯ,

(ಆ) ಜೊತೆಗೂಡಿದ ಸಂಗಾತಿಗಳೊಳಗಿನ ಕೌಟುಂಬಿಕ ಸಂಬಂಧಗಳ ಅನೈಕ್ಯ.

ಅನೈತಿಕ ವ್ಯಾಪಾರ ವಿಶೇಷವಾಗಿ ಸಾಂಸ್ಥೀಕರಿಸಲ್ಪಟ್ಟ ರೂಪ ಅಥವಾ ವಿಸ್ತಾರವಾಗಿ ಹರಡಿರುವ ಕಳ್ಳತನದ ರೂಪಗಳೆರಡನ್ನೂ ಪಡೆದಾಗ ಕುಟುಂಬ ಸಂಸ್ಥೆಯ ಮೇಲೆ ಕೆಟ್ಟ ಪರಿಣಾಮವನ್ನು ಬೀರುತ್ತದೆ. ಸಾಮಾಜಿಕ ಪದ್ಧತಿಗಳ ಆರೋಗ್ಯಕರವಾದ ಬೆಳವಣಿಗೆಗಾಗಿ ಮತ್ತು ಕುಟುಂಬಗಳ ಕ್ರಮಬದ್ಧವಾದ ಕಾರ್ಯನಿರ್ವಹಣೆಗಾಗಿ ಸಮಾಜದಲ್ಲಿಯ ಆಡಳಿತಗಳಿಗೆ ಅನುಸಾರವಾಗಿ ಕುಟುಂಬದಲ್ಲಿಯ ಪಾತ್ರಗಳು ವರ್ತಿಸಬೇಕಾಗಿದೆ. ಕುಟುಂಬ ಬರಿಯ ಗಂಡ ಹೆಂಡತಿಯನ್ನಲ್ಲದೆ ಮಕ್ಕಳನ್ನು ಕೂಡ ಒಳಗೊಂಡಿರುತ್ತದೆ. ಅವರಲ್ಲಿ ಯಾರೊಬ್ಬರಾದರೂ ಅಡ್ಡಮಾರ್ಗ ಹಿಡಿದರೆ ಅದು ಕುಟುಂಬದ ಅನೈಕ್ಯಕ್ಕೆ ಅನುವು ಮಾಡಿ ಕೊಡುತ್ತದೆ ಮತ್ತು ಅದು ಹೆಚ್ಚಾದರೆ ಯಾವುದೇ ಸಮಾಜದಲ್ಲಿಯೇ ಆಗಲಿ ಕುಟುಂಬಗಳ ಅನೈಕ್ಯಕ್ಕೇ ಎಡೆಗೊಡುತ್ತದೆ ಹಾಗೂ ಸಮಾಜದ ಸಾಮಾನ್ಯ ನಾಶಕ್ಕೆ ಅವಕಾಶವೀಯುತ್ತದೆ. ಅಂತಿಮವಾಗಿ ಕುಟುಂಬ ಸಂಸ್ಕೃತಿಯನ್ನು ಪೋಷಿಸುವಂಥದ್ದಾಗಿದೆ ಮತ್ತು ಮಕ್ಕಳಲ್ಲಿ ಪ್ರಾಥಮಿಕ ಮೌಲ್ಯಗಳನ್ನು ಬೋಧಿಸುವ ಕರ್ತೃವಾಗಿದೆ. ಗಂಡ ಮತ್ತು ಹೆಂಡತಿಯ ಸಂಬಂಧಗಳಲ್ಲಿಯ ಅನೈಕ್ಯ ಮತ್ತೊಂದು ಆತಂಕಕರವಾದ ವಿಷಯವಾಗಿದೆ. ಈ ಜೊತೆಗೂಡಿದ ಗುಂಪಿನೊಳಗಿನ ಸಮರಸ ಸಂಬಂಧ ವ್ಯಾಪಕವಾಗಿ ವಿಸ್ತೃತಗೊಂಡ ಸಾಮಾಜಿಕ ಪರಿಣಾಮ ಉಳ್ಳದಾಗಿರುತ್ತದೆ. ನೆಮ್ಮದಿಯುಳ್ಳ ಕುಟುಂಬಗಳು ಸಮಾಜದಲ್ಲಿ ಬಹಳವಾಗಿದ್ದದ್ದೇ ಆದರೆ ಅವು ಸಾಮಾನ್ಯ ಸಾಮಾಜಿಕ ಜೀವನವನ್ನು ಬಹಳ ಸುಖಕರವಾದ್ದನ್ನಾಗಿಸುತ್ತವೆ. ಈ ಸಮಸ್ಯೆ ವ್ಯಾಪಕವಾಗಿ ಪ್ರಸಾರಗೊಂಡಾಗ ಸಮಾಜದ ಸಾಮಾನ್ಯ ನೈತಿಕ ಮಟ್ಟವೂ ಮಲಿನವಾಗುತ್ತದೆ. ಸಮಾಜದ ದೂಷಿತ ಭಾಗಕ್ಕೆ ಸಂಬಂಧಪಟ್ಟಿರುವುದರಿಂದ ಇವರು ಸಾಮಾಜಿಕ ಪದಚ್ಯುತಿಗೊಳಪಟ್ಟವರಾಗಿರುವುದರಿಂದ ಮತ್ತು ದೈಹಿಕ ರೋಗಿಗಳಾಗಿರುವುದರಿಂದ ಇವರ ಸರಾಸರಿ ವ್ಯಕ್ತಿತ್ವ ಸ್ವರೂಪದ ಅನೈಕ್ಯವಾಗಿರುತ್ತದೆ.

ಸುಧಾರಣೆ ಮತ್ತು ಪುನರ್‌ವಸತಿಯ ಸಲುವಾಗಿ ಖಚಿತವಾದ ಯೋಜನೆ

ಈ ಸಂಪೂರ್ಣ ಸಮಸ್ಯೆಯನ್ನು ಪ್ರತಿಬಂಧಕ, ಪರಿಷ್ಕರಣ ಮತ್ತು ಪುನರ್ವಸತೀಕರಣ ಅಂಶಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ನೋಡಬೇಕು. ಅನೈತಿಕ ವ್ಯಾಪಾರದ ಘಟನೆಯನ್ನು ಎರಡು ಹಂತಗಳಲ್ಲಿ ಪರಿಶೀಲಿಸಬೇಕು: 1 ಸಾಮಾನ್ಯ ಸಮಾಜ ಸಂಬಂಧಕ. 2 ನಿರ್ದಿಷ್ಟ ಉಪ-ಸಮಾಜ ಸಂಬಂಧಕ. ಸಮಾಜದ ಸಾಮಾನ್ಯ ಮಟ್ಟದಲ್ಲಿ ನಮ್ಮ ಆದರ್ಶಗಳು ಮತ್ತು ಶಿಷ್ಟತೆಗಳಿಗೆ ಒಪ್ಪುವಂಥ ಕೆಲವು ಬದಲಾವಣೆಗಳನ್ನು ಮಾಡಲು ಆಳವಾದ ಮತ್ತು ವಿಸ್ತಾರವಾಗಿ ಹರಡಿರುವ ಸೂಕ್ತಕ್ರಮ ಕೈಗೊಳ್ಳುವುದು ಅಗತ್ಯವಾಗಿದೆ. ಜೀವನದ ಎಲ್ಲ ಉದ್ಯೋಗಗಳಲ್ಲೂ ಹೆಚ್ಚಿನ ಪ್ರಮಾಣದ ಸಡಿಲವಾದ ನೀತಿಗಳನ್ನು ಬಳಕೆಯಲ್ಲಿ ಹೊಂದಿರುವ ಕೆಲವು ಸಮಾಜಗಳಿವೆ. ಮತ್ತೊಂದೆಡೆ ಕೆಲವು ಸಮಾಜಗಳಲ್ಲಿ ಅಂಥ ಅಡ್ಡ ಮಾರ್ಗ ಹಿಡಿದ ನಡತೆಯ ಹರಡುವಿಕೆ ಈ ಸಮಾಜದ ನಿರ್ದಿಷ್ಟ ಭಾಗಗಳಿಗೆ ಮಾತ್ರ ಸೀಮಿತವಾಗಿರುತ್ತದೆ ಮತ್ತು ಇದು ಒಂದು ಸಾಮಾನ್ಯ ಸಾಮಾಜಿಕ ಸಮಸ್ಯೆಯನ್ನು ಸೃಜಿಸುವುದಿಲ್ಲ. ಮಾನವ ಸಮಾಜ ಯಾವ ರೀತಿ ಇದೆಯೋ ಅದೇ ರೀತಿ ಇರುವವರೆಗೆ ಕೆಲವು ಬಗೆಯ ಅಪಮಾರ್ಗಗಳು ಮುಂದುವರಿದೇ ತೀರುವುದು ಸಿದ್ಧವೆಂದು ಎಣಿಸಲ್ಪಟ್ಟಿದೆ. ಅಡ್ಡಮಾರ್ಗ ಹಿಡಿಯುವುದು ಯಾವಾಗ ವಿಸ್ತಾರವಾಗಿ ಹರಡಿರುತ್ತದೆಯೊ ಮತ್ತು ಸಮಸ್ಯೆಯಾಗುತ್ತದೆಯೋ, ಆಗ ಅದು ಇನ್ನೂ ನಿರ್ದಿಷ್ಟ ಸಮಸ್ಯೆಯಾಗಿ ಉಳಿಯುವುದಿಲ್ಲ. ಆದರೆ ಒಂದು ಸಾಮಾನ್ಯ ಸಾಮಾಜಿಕ ವಿವಾದಾಂಶವಾಗುತ್ತದೆ. ನಾವು

ಇಲ್ಲಿ ಆತಂಕಗೊಂಡಿರುವುದು ಹೆಚ್ಚಿನ ಪ್ರಾಮುಖ್ಯ ಹೊಂದಿರುವ ವಿಸ್ತೃತ ಪರಿಣಾಮವನ್ನು ಒಳಗೊಂಡಿರುವ ಬಹಳ ಸಾಮಾನ್ಯ ವಿವಾದಾಂಶದ ಬಗ್ಗೆ.

ಉಪಸಮಾಜದ ಮಟ್ಟದಲ್ಲಿ ನಾವು ಅನೈತಿಕ ವ್ಯಾಪಾರದ ನಿರ್ದಿಷ್ಟ ಸಮಸ್ಯೆಗಳನ್ನು ಕುರಿತು ಎರಡು ಹಂತಗಳಲ್ಲಿ ವಿಚಾರ ಮಾಡಬೇಕಾಗಿದೆ: 1 ಪ್ರತಿಬಂಧಕ. 2 ಸುಧಾರಕ ಮತ್ತು ಪುನರ್ವಸತಿಕಾರಕ.

ವೈಜ್ಞಾನಿಕ ಸಂಶೋಧನೆಯ ಅಗತ್ಯ

ವೈಜ್ಞಾನಿಕ ಮತ್ತು ಅನುಭವಿಕ ಆಧಾರದ ಮೇಲೆ ಯಾವುದೇ ಪ್ರತಿಬಂಧಕ ಸೂಕ್ತ ಕಾರ್ಯಕ್ರಮಗಳನ್ನು ಸೂಚಿಸುವ ಮುನ್ನ ನಾವು ಈ ವೃತ್ತಿಯಲ್ಲಿ ತೊಡಗಿರುವವರ ಸಾಮಾಜಿಕ ಮತ್ತು ವೈಯಕ್ತಿಕ ಹಿನ್ನೆಲೆಯನ್ನು ಅರಿಯಲೇ ಬೇಕು. ಅಂಥ ಜನರ ವ್ಯಕ್ತಿತ್ವ. ಸ್ವರೂಪ ಮತ್ತು ಮೌಲ್ಯ ಹೊಂದಾವಣೆಯನ್ನು ವೈಜ್ಞಾನಿಕ ಅಧ್ಯಯನಗಳ ಮುಖಾಂತರ ತಿಳಿಯುವುದು ಅಗತ್ಯವಾಗಿದೆ. ಅದಕ್ಕಾಗಿ ದೇಶದ ವಿವಿಧ ಭಾಗಗಳಲ್ಲಿ ಮತ್ತು ಸಮಾಜದ ಭಿನ್ನ ಮಾರ್ಗಗಳಲ್ಲಿ ಕೆಲವು ವೈಜ್ಞಾನಿಕ ಪಥಗಳಲ್ಲಿ ಸಂಶೋಧನೆಯನ್ನು ಮಾಡಬೇಕಾಗಿದೆ. ಅಂಥ ಅಧ್ಯಯನಗಳು ಇದಕ್ಕೆ ವಾಸ್ತವಿಕವಾಗಿ ಜವಾಬ್ದಾರಿಯುತವಾದ ಕಾರಣಗಳನ್ನು ಗೊತ್ತು ಹಚ್ಚುತ್ತವೆ. ನಮ್ಮ ಸಮಾಜದೊಳಗಿನ ಸಾಮಾಜಿಕ ಸಮಸ್ಯೆಗಳನ್ನು ಅರ್ಥಮಾಡಿಕೊಳ್ಳುವುದಕ್ಕಾಗಿ ಮತ್ತು ಬಿಡಿಸಲಿಕ್ಕಾಗಿ ನಾವು ಭಾವೋತ್ಪಾದಕ ಮತ್ತು ವೃತ್ತಪತ್ರಿಕಾ ವ್ಯಾಖ್ಯಾನಗಳ ಸಾಮಾನ್ಯ ಪರಿಶೀಲನೆಯನ್ನು ಅವಲಂಬಿಸಿದ್ದೇವೆ. ಆದರೆ ಇದು ಅದಕ್ಕಿಂತ ಭಿನ್ನವಾಗಿರುತ್ತದೆ.

ಅಡ್ಡಮಾರ್ಗಗಳಲ್ಲಿ ಸಿಕ್ಕಿಹಾಕಿಕೊಳ್ಳದ ವ್ಯಕ್ತಿಗಳ ಬಗ್ಗೆಯೂ ಅಧ್ಯಯನ ಮಾಡಬೇಕಾಗಿದೆ. ಮತ್ತು ಈ ಜನರು ಸ್ವೇಚ್ಛೆಯಾಗಿಲ್ಲದಿರುವುದಕ್ಕೆ ಕಾರಣವಾದ ಅಂಶಗಳನ್ನು ಕಂಡು ಹಿಡಿಯಬೇಕು. ಅಂಥ ತೌಲನಿಕ ಅಧ್ಯಯನ ಅಡ್ಡಮಾರ್ಗ ಹಿಡಿಯುವಿಕೆ ಮತ್ತು ಅನೈತಿಕ ವ್ಯಾಪಾರವೆಡೆಗೆ ಸೆಳೆಯುವ ಕಾರಣಗಳ ಮೇಲೆ ಪರಿಣಾಮಕಾರಿಯಾದ ಬೆಳಕನ್ನು ಚೆಲ್ಲಬಲ್ಲದು.

ಒಂದು ವೈಜ್ಞಾನಿಕ ಕಾರ್ಯವಿಧಾನದ ಮುಖಾಂತರ ಯಾವುದೇ ಸಮಸ್ಯೆಗೆ ಕಾರಣಗಳನ್ನು ಅರಿತರೆ, ರೋಗ ನಿವಾರಕ ಮದ್ದನ್ನು ಕಂಡು ಹಿಡಿಯುವುದು ಅತ್ಯಂತ ಸುಲಭವಾದ ಕೆಲಸವಾಗುತ್ತದೆ. ಕುಟುಂಬಗಳು ಮತ್ತು ಶಾಲೆಗಳಲ್ಲಿ ಸಮಾಜೀಕರಣ ಕಾರ್ಯಗತಿಯಿಂದ ಪ್ರಾರಂಭದಿಂದಲೇ ಮಾನವ ಜೀವಿತದ ಈ ರೂಪದ ಬಗ್ಗೆ ಸಮರ್ಥವಾದ ನೈತಿಕ ಮೌಲ್ಯಗಳನ್ನು ಬೋಧಿಸುವ ಅಗತ್ಯವಿದೆ. ಬೇಗನೆಯ ಕಾಲದಲ್ಲಿ ಮೌಲ್ಯಗಳನ್ನು ಬೋಧಿಸಿದರೆ ವ್ಯಕ್ತಿತ್ವದ ಮೇಲೆ ಬಹಳ ಆಳವಾದ ಮತ್ತು ಬಹಳ ಕಾಲ ನಿಲ್ಲುವಂಥ ಪ್ರಭಾವವನ್ನು ಬೀರುತ್ತದೆ. ಅಂಥ ಮೌಲ್ಯಗಳನ್ನು ಜನತಾ ಮಾಧ್ಯಮಗಳಾದ ರೇಡಿಯೋ ಮತ್ತು ಪತ್ರಿಕೆಗಳ ಮೂಲಕ ಬಹು ವಿಸ್ತಾರವಾಗಿ ವ್ಯಾಪಿಸಿದ ಮತ್ತು ಚದುರಿದಂತಿರುವ ಪ್ರೇಕ್ಷಕರಿಗೆ ಬೋಧಿಸಬಹುದು.

ಲೈಂಗಿಕ ಶಿಕ್ಷಣ

ಶಾಲೆಗಳು ಮತ್ತು ಕಾಲೇಜುಗಳ ಶೈಕ್ಷಣಿಕ ಪಾಠಕ್ರಮ ಮತ್ತು ಗ್ರಾಮೀಣ ಪ್ರದೇಶಗಳ ವಯಸ್ಕರ ಶಿಕ್ಷಣ ಪಾಠ ಸೂಚಿಗಳಲ್ಲಿ ಲೈಂಗಿಕ ಶಿಕ್ಷಣ ಒಂದು ಭಾಗವಾಗಿರುವುದು ಅನಿವಾರ್ಯವಾಗಿದೆ. ಲೈಂಗಿಕ ಶಿಕ್ಷಣ ಎಂಬ ಪದ ವಕ್ರ ಒಳ ಅರ್ಥಗಳನ್ನು ಸೂಚಿಸುತ್ತದೆ ಮತ್ತು ಒಂದು ವಿಧವಾದ ಕುಚೋದ್ಯದ ರಂಜನೆಯನ್ನುಂಟುಮಾಡುತ್ತದೆ. ಲೈಂಗಿಕ ಪದವನ್ನು ಪೂರ್ವಪದವಾಗಿ ಹಚ್ಚದ ಬೇರೊಂದು ಯೋಗ್ಯಪದವನ್ನು ಬದಲಾಗಿ ತರಬೇಕಾಗಿದೆ. ಯೋಗ್ಯ ಪದಗಳನ್ನು ಉಪಯೋಗಿಸುವುದರಿಂದ ಉತ್ತಮವಾದ ಮಾನಸಿಕ ಪರಿಣಾಮ ಉಂಟಾಗಬಹುದು.

ಕಳಂಕ ಹಚ್ಚಿದ ವ್ಯಕ್ತಿ ಮತ್ತು ಅಂಥ ವ್ಯಕ್ತಿಗಳ ಬಗ್ಗೆ ವಿಶಿಷ್ಟ ರೀತಿಯಲ್ಲಿ ಪ್ರತಿಕ್ರಿಯೆಯನ್ನು ತೋರಿಸುವ ಸಮಾಜಗಳು—ಈರ್ವರ ಮೇಲೂ ಕಳಂಕಪೂರಿತವಾದ ಕೆಲವು ಪದಗಳು ಉಂಟುಮಾಡುವ ಮಾನಸಿಕ ಪ್ರಭಾವ ಅಹಿತಕರ ಪರಿಣಾಮದಿಂದ ಕೂಡಿದ್ದು. ಚರ್ಚಿಸಲ್ಪಡುತ್ತಿರುವ ಸಾಮಾಜಿಕ ಕಳಂಕದ ವಿಷಯವನ್ನು ಬಹಳ ಜೋಕೆಯಿಂದ ಪರಿಶೀಲಿಸಬೇಕಾಗಿದೆ. ಏಕೆಂದರೆ ಯಾವುದೇ ವ್ಯಕ್ತಿ

ನಿರ್ದಿಷ್ಟ ವ್ಯಕ್ತಿಗಳೊಡನೆ ನೀತಿಭ್ರಷ್ಟನಾಗುವುದರಿಂದ ಒಂದು ಬಾರಿ ಕಳಂಕವನ್ನು ಹತ್ತಿಸಿಕೊಂಡರೆ, ಆ ವ್ಯಕ್ತಿ ಅದೇ ಸಮಾಜದಲ್ಲಿ ಹಿಂದಿನ ರೀತಿಯ ಅಂತಸ್ತನ್ನು ತನ್ನದಾಗಿಸಿಕೊಳ್ಳುವುದು ಕಷ್ಟವಾಗುತ್ತದೆ. ಯಾವ ವ್ಯಕ್ತಿ ಒಂದು ಬಾರಿ ನೈತಿಕ ಅಸಮ್ಮತವೆನಿಸಿದ ಯಾವುದೇ ಸಾಮಾಜಿಕ ಅಡ್ಡಮಾರ್ಗದಲ್ಲಿ ಆಸಕ್ತಿಯುಳ್ಳವನಾಗಿರುವನೊ ಅವನನ್ನು ಸಮಾಜ ಅಂಗೀಕಾರಾರ್ಹವಲ್ಲದ ಯಾವನೋ ಒಬ್ಬ ವ್ಯಕ್ತಿಯಂತೆ ಕಾಣುತ್ತದೆ. ಅವನು ದೋಷಿಯೆಂದು ಭಾವಿಸುವಂತೆ ಮಾಡುವುದೇ ಅಲ್ಲದೆ ಮುಂದೆ ಎಂದೆಂದಿಗೂ ಘನತೆಯನ್ನು ಕಳೆದುಕೊಳ್ಳುವಂತಾಗುತ್ತದೆ.

ಮದುವೆ ಮಾರ್ಗದರ್ಶನ

ಮದುವೆಯಾಗಲಿರುವ ಕಿರಿಯ ಜನರಿಗೆ ಕುಟುಂಬ ಸಂಸ್ಥೆಯನ್ನು ಕುರಿತು ಹೊಂದಿಕೆಯಾದ, ನ್ಯಾಯ ಮತ್ತು ಪವಿತ್ರವಾದ ಆದರ್ಶಗಳನ್ನು ವಿವಾಹಪೂರ್ವ ಮಾರ್ಗದರ್ಶನವಾಗಿ ಕೊಡಬೇಕು. ಅಂಥ ಮಾರ್ಗದರ್ಶನವನ್ನು ವೈಜ್ಞಾನಿಕ ದಾರಿಯಲ್ಲಿ ಔಷಧ–ವೈದ್ಯ, ಸಮಾಜಶಾಸ್ತ್ರ ಮತ್ತು ಮನಶ್ಶಾಸ್ತ್ರಗಳಂಥ ವೃತ್ತಿಗಳಿಂದ ಆಕರ್ಷಿಸಿ ತರಬೇತು ಕೊಟ್ಟ ಸಿಬ್ಬಂದಿಯಿಂದ ಒದಗಿಸಬೇಕಾಗಿದೆ. ವಿವಿಧ ವಿದ್ಯೆಗಳಿಂದ ಕೊಡಲಾಗುವ ಈ ಸಮಗ್ರ ಮಾರ್ಗದರ್ಶನ ನೈತಿಕ ಬೆಳವಣಿಗೆ ಮತ್ತು ನೈತಿಕ ಮೌಲ್ಯಗಳಿಗೆ ಬದ್ಧವಾಗುವಂತೆ ಮಾಡುವಲ್ಲಿ ಹಿತಕರ ಪರಿಣಾಮವನ್ನುಂಟುಮಾಡುತ್ತದೆ. ಎಲ್ಲ ಸಮಾಜಗಳಲ್ಲಿ ಇದು ಮದುವೆ ಸಂಸ್ಥೆಯ ಮುಖಾಂತರ ನೆರವೇರಬೇಕಾಗಿದೆ. ನಮ್ಮ ಸಮಾಜದಲ್ಲಿ ವಿವಾಹಪೂರ್ವ ಮಾರ್ಗದರ್ಶನ ಸಂಸ್ಥೆ ಇನ್ನೂ ಬೆಳೆದು ಬಂದಿಲ್ಲ. ನಮ್ಮ ದೇಶ ಭೌತ ಬದಲಾವಣೆಗಳ ಕ್ಷೇತ್ರದಲ್ಲಿ ನವೀನೀಕರಣವನ್ನು ಕೈಗೊಂಡಿದ್ದಾಗ್ಯೂ ಈಗಲೂ ಸಾಂಸ್ಥಿಕ ಹೊಂದಾವಣೆಯ ಕ್ಷೇತ್ರದಲ್ಲಿ ನಾವು ನಮ್ಮ ಗತ ಒಡನಾಟಗಳಿಗೆ ಅಂಟಿಕೊಳ್ಳುತ್ತಿದ್ದೇವೆ. ವಿವಾಹ ಮಾರ್ಗದರ್ಶನ ಉಪಾಯ ನಮಗೆ ಯಾವುದೋ ವಿದೇಶೀಯ ಎನ್ನುವಂತೆ ತೋರುತ್ತಿದೆ. ಭಾರತದಲ್ಲಿ ನೈತಿಕ ಮತ್ತು ಸಾಮಾಜಿಕ ಜನಾರೋಗ್ಯ ನಿಮಿತ್ತ ಸಂಘದಂಥ ವ್ಯವಸ್ಥಿತ ಸಂಘಗಳ ಪ್ರಯತ್ನವಿದ್ದರೂ ವಿವಾಹ ಸಲಹಾ ನಿಯೋಗಗಳ ಸ್ಥಾಪನೆಯ ದಿಕ್ಕಿನಲ್ಲಿ ಪ್ರಯತ್ನ ಈಗಲೂ ಫಲಕಾರಿ ಆಗಿಲ್ಲ. ಜೀವನದ ಅಂಥ ರೂಪಗಳನ್ನು ಕುರಿತ ಜ್ಞಾನವನ್ನು ನಮ್ಮ ಜನಸಾಮಾನ್ಯ ಮಾಧ್ಯಮಗಳು ಈಗಲೂ ಹುರುಪಿನಿಂದ ಪ್ರಸಾರ ಮಾಡುತ್ತಿಲ್ಲ.

ಅನೈತಿಕ ವ್ಯಾಪಾರ ಮತ್ತು ಅಪಮಾರ್ಗಗಮನದ ಪ್ರಶ್ನೆಯನ್ನು ವಿದ್ವಾಂಸರು ವೈಜ್ಞಾನಿಕ ಅಧ್ಯಯನದ ಒಂದು ಕ್ಷೇತ್ರವೆಂದು ಭಾವಿಸದೆ ಉಪೇಕ್ಷಿಸಿದ್ದಾರೆ. ಕೇವಲ ಉತ್ಸಾಹಿ ಸಾಮಾಜಿಕ ಕಾರ್ಯಕರ್ತರು ಮತ್ತು ಅರಿವುಳ್ಳ ನಾಗರಿಕರು ಮಾತ್ರ ಈ ಸಮಸ್ಯೆಯನ್ನು ಪರೀಕ್ಷಿಸುವತ್ತ ಗಮನ ಹರಿಸಿದ್ದಾರೆ. ಅದು ವೈಜ್ಞಾನಿಕವಾಗಿ ಅಧ್ಯಯನೇಚ್ಛೆಗಿಂತ ಹೆಚ್ಚಾಗಿ ನೈತಿಕ ಪ್ರೇರಣೆಗಳ ಫಲ. ವ್ಯವಸ್ಥಿತ ವಿಧಾನದಲ್ಲಿ ಈ ಸಮಸ್ಯೆಯನ್ನು ಸಮಾಜದ ಗಮನಕ್ಕೆ ತರಲು ಸುಪ್ರಸಿದ್ಧ ವಿದ್ವಾಂಸರು ಮತ್ತು ಬುದ್ಧಿಜೀವಿಗಳು ಇಂಥ ಸಮಸ್ಯೆಗಳನ್ನು ವೈಜ್ಞಾನಿಕ ಅಧ್ಯಯನಕ್ಕಾಗಿ ತೆಗೆದುಕೊಳ್ಳಬೇಕಾಗಿದೆ. ಸಮಾಜಶಾಸ್ತ್ರ ಮತ್ತು ಮಾನವಶಾಸ್ತ್ರಗಳಂತಹ ಶಾಸ್ತ್ರೀಯ ದೃಷ್ಟಿಯುಳ್ಳ ನೈತಿಕ ಜನಾರೋಗ್ಯ ಮತ್ತು ಅಪಮಾರ್ಗ ಗಮನಗಳಂಥ ಸಮಸ್ಯೆಗಳಿಗೆ ಸಂಬಂಧಿಸಿದ ಅಧ್ಯಯನ ಮತ್ತು ಸಂಶೋಧನ ಕಾರ್ಯಗಳು ವಿದ್ವತ್ ಪ್ರಪಂಚಕ್ಕೆ ಹೊರಗಿನವೆಂದು ಪರಿಗಣಿತವಾಗಿವೆ. ಕುಟುಂಬ ಯೋಜನೆಯ ಕ್ಷೇತ್ರದಲ್ಲಿ ನಡೆದಿರುವ ಅಧ್ಯಯನಗಳನ್ನು ಭಾರತೀಯ ಸಮಾಜದಲ್ಲಿಯ ವಿದ್ವತ್ ವೃತ್ತಗಳು ಯಾವ ರೀತಿ ಪರಿಗಣಿಸುತ್ತವೆ ಎಂಬುದನ್ನು ಗಮನಿಸಿದರೆ ಈ ಮನೋಭಾವ ತಿಳಿಯುತ್ತದೆ. ಕುಟುಂಬ ಯೋಜನೆ ಈ ಕ್ಷಣದಲ್ಲಿ ಸಮಾಜಕ್ಕೆ ಸಂಬಂಧಿಸಿದ ಅತ್ಯಂತ ಪ್ರಮುಖ ಸಮಸ್ಯೆಗಳಲ್ಲೊಂದಾಗಿದ್ದಾಗ್ಯೂ ಅದು ಬದ್ಧ ವಿದ್ವಾಂಸರ ಗಮನ ಸೆಳೆದಿಲ್ಲ. ಅಂಥ ಅಧ್ಯಯನಗಳಲ್ಲಿ ಸ್ವತಃ ತೊಡಗಿರುವಂಥವರ ಬಗ್ಗೆ ಅನೇಕ ವೇಳೆ ತಿರಸ್ಕಾರ ದೃಷ್ಟಿ ಇರುತ್ತದೆ.

ಪುನರ್ವಸತೀಕರಣವನ್ನೂ ನಾವು ಸೂಕ್ತವಾಗಿ ಯೋಜಿಸಬೇಕಾಗಿದೆ. ಪತಿತ ಸ್ತ್ರೀಯರನ್ನು ರಕ್ಷಾಗೃಹಗಳಿಗೆ ಕೊಂಡೊಯ್ಯುವುದೇ ಪುನರ್ವಸತೀಕರಣವೆಂದು ನಾವು ರೂಢಿಯಲ್ಲಿ ಇದನ್ನು ಪರಿಮಿತವಾದ ಅರ್ಥದಲ್ಲಿ ಭಾವಿಸುತ್ತೇವೆ. ರಕ್ಷಾಗೃಹ ಎನ್ನುವುದು ಒಂದು ನಿರ್ದಿಷ್ಟ ಕಳಂಕವುಳ್ಳ ಪದವಾಗಿದೆ

ಮತ್ತು ಅಲ್ಲಿರುವವರ ಬಗ್ಗೆ ರೂಢಿಯಲ್ಲಿ ಮರ್ಯಾದೆಯ ಭಾವನೆ ಇರುವುದಿಲ್ಲ. ರಕ್ಷಾಗೃಹ ವ್ಯವಸ್ಥೆಯನ್ನು ಅತ್ಯಂತ ವಿಶಿಷ್ಟವಾದ ವೈಯಕ್ತಿಕ ಚಿಕಿತ್ಸೆ ಅಗತ್ಯವಾದ ಕ್ಲಿಷ್ಟ ವ್ಯಕ್ತಿಗಳಿಗಾಗಿ ಇಟ್ಟುಕೊಳ್ಳಬಹುದು. ಆಕಸ್ಮಿಕ ಮತ್ತು ಅನಿವಾರ್ಯ ಸನ್ನಿವೇಶಗಳಿಂದಾಗಿ ಪಾತಾಕಕ್ಕಿಳಿದಂಥವರು, ಸಾಮಾಜಿಕ ಅಡ್ಡ ಮಾರ್ಗದಲ್ಲಿ ಆಗತಾನೆ ತೊಡಗಿದವರ ಸಲುವಾಗಿ ಸಮಾಜದ ಗೌರವಾರ್ಹ ಕುಟುಂಬಗಳೊಡನೆ ಸಹವಾಸ ಮತ್ತು ನೆಲೆಗೊಳಿಸುವಿಕೆ ಅಪೇಕ್ಷಣೀಯವಾಗಿದೆ. ಅಂಥವರನ್ನು ಮುಂದಾಳುಗಳು, ಗುರು ಮತ್ತು ಶಿಷ್ಟ ನಾಗರಿಕರು ತೆಗೆದುಕೊಂಡು ತಮ್ಮ ಮನೆಯಲ್ಲಿ ಕುಟುಂಬದ ಸದಸ್ಯರ ರೀತಿ ಇರಲು ಅವಕಾಶ ಮಾಡಿಕೊಡಬೇಕು. ಆ ರೀತಿಯ ಒಂದು ಕ್ರಮ ಖಂಡಿತವಾಗಿ ಕ್ರಾಂತಿಕಾರಿಯಾಗಿ ಕಾಣಬಹುದು. ಆದರೆ ಯಾವುದೇ ಸುಧಾರಣೆ ಪರಿಣಾಮಕಾರಿಯಾಗಿರಬೇಕಾದರೆ ಕ್ರಾಂತಿಕಾರಿಯಾಗಿರುತ್ತದೆ. ಹಲವು ಶತಮಾನಗಳಿಂದ ನಮ್ಮನ್ನು ಬಂಧಿಸಿರುವ ಹಳೆಯ ಕಾಲದ ಭಾವನೆಗಳನ್ನು ನಾವು ತ್ಯಜಿಸಬೇಕು.

ಕ್ಲಿಷ್ಟ ಪಾತಕಿಗಳು ಮತ್ತು ಇತರ ಅಪಮಾರ್ಗಿಗಳೊಡನೆ ವ್ಯವಹರಿಸುವ ರೀತಿಯಲ್ಲೇ ಅಂಥವರೊಂದಿಗೂ ವ್ಯವಹರಿಸಬಾರದು. ಶಾಸನಸಮ್ಮತವಾದ ಕಾಯಿದೆಗಳು ಉಪಯುಕ್ತವಾಗಿವೆ. ಆದರೆ ಅವು ಪರಿಮಿತವಾದವು. ಪೋಲೀಸ್‌ದಳ, ಅಪರಾಧ ಪತ್ತೇದಾರಿ ನಿಯೋಗಗಳು ಮತ್ತು ಮಾನವರ ನಡೆ ಅಥವಾ ಗುಣಪರೀಕ್ಷಣೆ ಅಧಿಕಾರಿಗಳು ಚಿಕಿತ್ಸಕ ಭಾವನೆಯಿಂದ ಕೂಡಿ ಕೆಲಸ ಮಾಡಬೇಕಾಗಿದೆ. ಮಹಿಳಾ ಸಮಾಜ ಸುಧಾರಕರು ಅಂಥ ವ್ಯಕ್ತಿಗಳೊಡನೆ ಆತ್ಮೀಯ ಸಂಪರ್ಕವನ್ನಿಟ್ಟುಕೊಂಡಿರಬೇಕು. ತಮ್ಮ ಸ್ವಂತ ಆದರ್ಶ ವರ್ತನೆಯಿಂದ ಉನ್ನತ ಮತ್ತು ಉತ್ತಮ ಶೀಲ ಪ್ರಭಾವವನ್ನು ಪತಿತ ಮಹಿಳೆಯ ಮನಸ್ಸಿನ ಮೇಲೆ ಬಿತ್ತಿಸಬಹುದು. ಒಂದು ಉತ್ತಮ ಸಾಮಾಜಿಕ ಪರಿಸರದ ದೀರ್ಘಸಹವಾಸದ ಬಳಿಕ ಮತ್ತು ಯಾವಾಗ ಪತಿತೆಯರು ಹೊಸ ಮೌಲ್ಯಗಳನ್ನು ಅಂಗೀಕರಿಸುತ್ತಾರೋ, ಅವನ್ನು ಅಂತರಂಗೀಕರಿಸುತ್ತಾರೋ, ತಮ್ಮದೇ ಆದ ಗತಕಾಲದ ಪಾಪಾಚರಣೆಗಳ ಬಗ್ಗೆ ಪಶ್ಚಾತ್ತಾಪ ಪಡುತ್ತಾರೋ ಮತ್ತು ಅವನ್ನು ಮರೆತುಬಿಡುತ್ತಾರೋ, ಆಗ ಅದೇ ಮಹಿಳೆಯರು ಉಪಯುಕ್ತ ಸಾಮಾಜಿಕ ಕಾರ್ಯಕರ್ತೆಯರಾಗಿ ರೂಪುಗೊಳ್ಳುತ್ತಾರೆ.

ಹೀಗೆ ಸಂಪೂರ್ಣ ಸಮಸ್ಯೆಯನ್ನು ಅನೇಕ ಮಾನಕ ದೃಷ್ಟಿಗಳಿಂದ ನೋಡಬೇಕಾಗಿದೆ. ನಾವು ಯಾವುದೇ ಸಾಮಾಜಿಕ ಸಮಸ್ಯೆಯೊಡನೆ ಬಿಡಿಬಿಡಿಯಾಗಿಯೇ ವ್ಯವಹರಿಸಲಾಗುವುದಿಲ್ಲ. ಸಾಮಾಜಿಕ ಕಾರ್ಯಕರ್ತ, ಸಂಶೋಧಕ ವಿದ್ವಾಂಸ, ಪ್ರಜ್ಞಾಶೀಲ ನಾಗರಿಕ, ನಿರ್ಣಯಕಾರ, ಕಾರ್ಯನೀತಿಗಳ ನಿರ್ಮಾಪಕ ಮುಂತಾದವರೆಲ್ಲರೂ ಅತ್ಯಂತ ಶೀಘ್ರವಾಗಿ ಒಂದು ಸ್ವಚ್ಛ ಸಮಾಜವನ್ನು ತರಲಿಕ್ಕಾಗಿ ಸುಸಂಘಟಿತವಾದ ರೀತಿಯಲ್ಲಿ ಈ ಸಮಸ್ಯೆಯನ್ನು ಬಿಡಿಸುವ ಪ್ರಯತ್ನಮಾಡಬೇಕು.

(ಅನುವಾದ: ಬಿ. ಎಂ. ರುದ್ರಪ್ಪ)

ರಘುಸುತ

ಎಲ್ಸ್‌ವರ್ತ್ ಹಂಟಿಂಗ್ಟನ್

ಭೂಗೋಳಶಾಸ್ತ್ರಜ್ಞ ಎಲ್ಲಕ್ಕಿಂತ ಮೊದಲು ಮಾನವತಾವಾದಿಯಾಗಬೇಕು, ಎಂಬುದನ್ನು ಜಗತ್ತಿಗೆಲ್ಲ ಗೊತ್ತಾಗುವಂತೆ ವಾದಿಸಿದ ಮೊದಲ ವ್ಯಕ್ತಿ ಎಲ್ಸ್‌ವರ್ತ್ ಹಂಟಿಂಗ್ಟನ್ ಎಂಬ ಭೂಗೋಳಶಾಸ್ತ್ರಜ್ಞ. ಪ್ರಾಕೃತಿಕ ಪರಿಸರ ಮಾನವನ ಚಟುವಟಿಕೆಗಳ ಮೇಲೆ ಯಾವ ರೀತಿಯ ಪ್ರಭಾವವನ್ನು ಬೀರುತ್ತದೆ, ಮಾನವ ಮತ್ತು ಪ್ರಕೃತಿಗಳ ಸತ್ಸಂಬಂಧವ ನಿರ್ಮಾಣದಲ್ಲಿ ಭೂಗೋಳಶಾಸ್ತ್ರ ಯಾವ ಪಾತ್ರವನ್ನು ವಹಿಸಬಲ್ಲದು ಎಂಬುದನ್ನು ತನ್ನ ಜೀವನಪರ್ಯಂತ ಜನರಿಗೆ, ಸರ್ಕಾರಕ್ಕೆ, ವಿದ್ಯಾರ್ಥಿಗಳಿಗೆ ಈತ ಬೋಧಿಸಿದ. ತನ್ನೆಲ್ಲ ಜೀವನವನ್ನು ಈ ತತ್ವದ ಪ್ರತಿಪಾದನೆಗಾಗಿ ಮೀಸಲಿಟ್ಟ. ಹೀಗಾಗಿ ಮಾನವನ ನಾಗರಿಕತೆಯ ಮೇಲೆ ವಾಯುಗುಣ ಉಂಟುಮಾಡುವ ಪ್ರಭಾವವನ್ನು ಕುರಿತಾದ ಅನೇಕ ಸಿದ್ಧಾಂತಗಳನ್ನು ಈತ ನಿರೂಪಿಸಿದ. ಈ ದೃಷ್ಟಿಯಿಂದ ಈತ ಅಮೆರಿಕ ಸಂಯುಕ್ತಸಂಸ್ಥಾನಗಳ ಅತ್ಯಂತ ಪ್ರಸಿದ್ಧ ಭೂಗೋಳಶಾಸ್ತ್ರಜ್ಞನೆನ್ನಬಹುದು.

ಇಲಿನಾಯ್ ರಾಜ್ಯ ಪ್ರಕೃತಿ ಪ್ರಸಾದದ, ಪ್ರಭಾವದ ಪುಣ್ಯಕ್ಷೇತ್ರವೆಂದು ಅಮೆರಿಕನರ ನಂಬಿಕೆ. ಆ ರಾಜ್ಯದ ಗ್ಯಾಲೆಸ್‌ಬರ್ಗ್‌ನಲ್ಲಿ 1876ರ ಸಪ್ಟೆಂಬರ್ 16ರಂದು ಈತ ಜನಿಸಿದ. ಪ್ರಾರಂಭದ ವಿದ್ಯಾಭ್ಯಾಸದ ಅನಂತರ ವಿಸ್‌ಕಾನ್ಸಿನ್‌ನಲ್ಲಿಯ ಬೆಲಿಯೆಟ್ ಕಾಲೇಜಿನಲ್ಲಿ 1897ರಲ್ಲಿ ಎ. ಬಿ. ವಿದ್ಯಾಭ್ಯಾಸವನ್ನು ಮುಗಿಸಿ, ಅನಂತರ ಹಾರ್ವರ್ಡಿನಲ್ಲಿ 1902ರಲ್ಲಿ ಎ. ಎಂ. ಪದವಿ ಗಳಿಸಿದ. ಇದರ ಮಧ್ಯೆ, 1897ರಿಂದ 1901ರ ವರೆಗೆ, ತುರ್ಕಿಯ ಹರವುತ್‌ನಲ್ಲಿಯ ಫ್ರೇಟಿಸ್ ಕಾಲೇಜಿನಲ್ಲಿ ಭೂಗೋಳಶಾಸ್ತ್ರ ಅಧ್ಯಾಪಕನಾಗಿದ್ದ. ವಿದ್ಯಾಭ್ಯಾಸದ ಸಮಯದಲ್ಲಿ ರ್‍ಯಾಟ್ಜೆಲ್, ಹಂಬೋಲ್ಟ್, ರಿಟ್ಟರ್–ಇವರುಗಳ ಭೌಗೋಳಿಕ ಸಾಹಿತ್ಯದ ಪ್ರಭಾವಕ್ಕೆ ಒಳಗಾಗಿ, ಈತನ ಮನಸ್ಸು ಭೌಗೋಳಿಕ ಸಂಶೋಧನೆಗಳಿಗಾಗಿ ತವಕಗೊಂಡಿತ್ತು. ರ್‍ಯಾಟ್ಜೆಲನ ಪರಿಸರವಾದ ಈತನನ್ನು ತುಂಬ ಪ್ರಭಾವಗೊಳಿಸಿತ್ತು. ಇವೆಲ್ಲವುಗಳ ಪರಿಣಾಮವಾಗಿ 1901ರಲ್ಲಿ ಯುಫ್ರೇಟಿಸ್ ನದಿಯ ಕಮ್ಮ್ರಿ ಹಳ್ಳಗಳ ಸಂಶೋಧನೆ ನಡೆಸಿ ಜಯಪ್ರದನಾದ. ಇದಕ್ಕಾಗಿ ಲಂಡನ್ನಿನ ರಾಯಲ್ ಜಿಯೋಗ್ರಾಫಿಕಲ್ ಸೊಸೈಟಿ ಈತನಿಗೆ ಗಿಲ್ ಸ್ಮಾರಕ ಪದಕ ನೀಡಿತು.

1902ರಲ್ಲಿ ಈತ ಮಾಸ್ಟರ್ ಪದವಿಯನ್ನು ಪಡೆದ ಕೂಡಲೆ. ಮತ್ತೆ ಏಷ್ಯ ಖಂಡದಿಂದ ಆಕರ್ಷಿತನಾದ. 1903ರಿಂದ 1906ರ ವರೆಗೆ ಮಧ್ಯ ಏಷ್ಯದಲ್ಲಿ ವ್ಯಾಪಕವಾಗಿ ಭೌಗೋಳಿಕ ಸಂಶೋಧನ ಪ್ರವಾಸಗಳನ್ನು ಕೈಗೊಂಡು, ತನ್ನ ಅನುಭವಗಳನ್ನು ಗ್ರಂಥರೂಪದಲ್ಲಿ ಪ್ರಕಟಿಸಿದ. 'ತುರ್ಕಿಸ್ತಾನದ ಅನ್ವೇಷಣೆಗಳು' ಎನ್ನುವ ಗ್ರಂಥ 1905ರಲ್ಲಿ ರಚಿತವಾಯಿತು. ಹಿಂದಿನ ಅನುಭವಗಳ ಮತ್ತು ಆಗಿನ ಪ್ರವಾಸಗಳ ಫಲವಾಗಿ ಈ ಗ್ರಂಥ ಹೊರಬಿತ್ತು.

ಭಾರತ, ಚೀನ, ಟಿಬೆಟ್ ಮತ್ತು ಸೈಬೀರಿಯಗಳಲ್ಲಿ ಪ್ರವಾಸ ಮಾಡಿದ್ದರ ಪರಿಣಾಮವಾಗಿ 1907ರಲ್ಲಿ ಈತ 'ಏಷ್ಯದ ಸ್ಪಂದನ' ಎಂಬ ಗ್ರಂಥವನ್ನು ರಚಿಸಿದ. ಈತನ ಅತ್ಯುತ್ತಮ ಕೃತಿಗಳಲ್ಲಿ ಇದೊಂದು. ಇದರಲ್ಲಿ ಇವನು ತನ್ನ ಒಂದು ಹೊಸ ಸಿದ್ಧಾಂತವನ್ನು ಪ್ರತಿಪಾದಿಸಿದ್ದಾನೆ. ಮಂಚು, ಮಂಗೋಲ್ ಮತ್ತು ಮೊಗಲ್ ವಲಸೆಗಾರರು ತಾವಿದ್ದ ಸ್ಥಳದಲ್ಲಿಯ ಬರಗಾಲದ ಹೊಡೆತವನ್ನು

ತಾಳಲಾರದೆ ಬೇರೆಡೆಗಳಿಗೆ ವಲಸೆ ಹೋದರು ಎಂದುದನ್ನು ಇದರಲ್ಲಿ ಪ್ರತಿಪಾದಿಸಿದ್ದಾನೆ. ಕೆಲವು ವರ್ಷಗಳ ವರೆಗೆ ತಾನು ವಿದ್ಯಾಭ್ಯಾಸ ಮಾಡಿದ ಯೇಲ್ ವಿಶ್ವವಿದ್ಯಾನಿಲಯದಲ್ಲಿ ಅಧ್ಯಾಪಕನಾಗಿದ್ದು ಅನಂತರ ಉಪಪ್ರಾಧ್ಯಾಪಕನಾಗಿ ಈತ ನೇಮಕಗೊಂಡ. 1909ರಲ್ಲಿ ಭೂಗರ್ಭಶಾಸ್ತ್ರದಲ್ಲಿ ಪಿ. ಎಚ್‌ಡಿ. ಪದವಿ ಪಡೆದು. ಸಂಶೋಧನ ಸಹಾಯಕನಾಗಿ ನಿಯುಕ್ತನಾದ.

ಅಮೆರಿಕ ಸಂಯುಕ್ತಸಂಸ್ಥಾನಗಳ ಕೆಲವು ವಿಶ್ವವಿದ್ಯಾಲಯಗಳು ಪ್ಯಾಲಸ್ತೀನ್ ಮತ್ತು ಏಷ್ಯ ದೇಶಗಳ ಸಂಶೋಧನ ಪ್ರವಾಸಗಳನ್ನು ಏರ್ಪಾಡು ಮಾಡಿದುವು. ಸಾಕಷ್ಟು ಅನುಭವವಿದ್ದ ಹಂಟಿಂಗ್‌ಟನ್ನನನ್ನು ನಾಯಕನನ್ನಾಗಿ ನಿಯೋಜಿಸಲಾಯಿತು. ಈ ಪ್ರವಾಸಗಳು ಜಯಪ್ರದವಾದುವು. 1911ರಲ್ಲಿ 'ಪ್ಯಾಲಸ್ತೀನ್ ಮತ್ತು ಅದರ ಪರಿವರ್ತನೆ' ಎನ್ನುವ ಗ್ರಂಥವನ್ನು ಹಂಟಿಂಗ್‌ಟನ್ ರಚಿಸಿದ.

1910ರಿಂದ 1913ರ ವರೆಗೆ ವಾಷಿಂಗ್ಟನ್ನಿನ ಕಾರ್ನೆಜೀ ಸಂಸ್ಥೆಯ ಸಹಾಯಕ ಸಂಶೋಧಕನಾಗಿ ಈತ ನಿಯುಕ್ತನಾದಾಗ ಅಮೆರಿಕ ಸಂಯುಕ್ತ ಸಂಸ್ಥಾನಗಳು. ಮೆಕ್ಸಿಕೋ ಮತ್ತು ಮಧ್ಯ ಅಮೆರಿಕಗಳಲ್ಲಿ ವಾಯುಗುಣಾತ್ಮಕ ಪರೀಕ್ಷಣಗಳನ್ನು ನಡೆಸಿದ.

ಭೂಮೇಲ್ಮೈಗಳು. ಭೂಗರ್ಭ ಹಾಗೂ ಐತಿಹಾಸಿಕ ಬದಲಾವಣೆಗಳು. ಮಾನವನ ಚಟುವಟಿಕೆಗಳು ಮತ್ತು ನಾಗರಿಕತೆಗಳ ವಿಕಾಸಗಳ ಮೇಲೆ ವಾಯುಗುಣದ ಪ್ರಭಾವಗಳ ಬಗ್ಗೆ ಸಂಶೋಧನೆ ನಡೆಸುವುದೇ ಈತನ ಮುಖ್ಯ ಕಾರ್ಯಕ್ಷೇತ್ರವಾಯಿತು.

ಮಾನವ ಸಂಸ್ಕೃತಿಯನ್ನು ತಿದ್ದುವುದರಲ್ಲಿ. ಅದರ ಮೇಲೆ ಪರಿಣಾಮಕಾರಕ ರೀತಿಯಲ್ಲಿ ಪ್ರಭಾವ ಬೀರುವುದರಲ್ಲಿ. ವಾಯುಗುಣ ಎಂಥ ಪ್ರಮುಖ ಪಾತ್ರವಹಿಸುತ್ತದೆ ಎಂಬುದರ ಬಗ್ಗೆ ಈತ ಅನೇಕ ತತ್ತ್ವಗಳನ್ನು ನಿರೂಪಿಸಿದ. ಇದಕ್ಕೆ ಅನೇಕ ಉದಾಹರಣೆಗಳನ್ನು ನೀಡಿದ್ದಾನೆ. ಇವೆಲ್ಲವನ್ನೂ ಈತ ಆ ಸಮಯದಲ್ಲಿ ರಚಿಸಿದ ಗ್ರಂಥಗಳಲ್ಲಿ ಕಾಣಬಹುದು.

ಆ ಸಂಶೋಧನೆಗಳ ಫಲವಾಗಿ ರೂಪುಗೊಂಡ ಗ್ರಂಥಗಳೆಂದರೆ 'ವಾಯುಗುಣಾತ್ಮಕ ಪ್ರತಿನಿಧಿ' (1914). 'ನಾಗರಿಕತೆ ಮತ್ತು ವಾಯುಗುಣ' (1915. ವಿಸ್ತೃತ ಮುದ್ರಣ 1924) ಮತ್ತು 'ಜಾಗತಿಕ ಶಕ್ತಿ ಮತ್ತು ವಿಕಾಸ' (1919). ಈ ಗ್ರಂಥಗಳಲ್ಲಿ ವಾಯುಗುಣದ ವಿಭಿನ್ನತೆಗೆ ಕಾರಣಗಳನ್ನು ಕಂಡು ಹಿಡಿಯಲು ಪ್ರಯತ್ನಿಸಲಾಗಿದೆ.

'ನಾಗರಿಕತೆ ಮತ್ತು ವಾಯುಗುಣ' ಎನ್ನುವ ಗ್ರಂಥದಲ್ಲಿ ಈತ ಒಂದು ಹೊಸ ವಾದವನ್ನೇ ಮಂಡಿಸಿದ. ವಾಯುಗುಣದ ಪ್ರಭಾವಗಳಿಗೆ ಹೊಂದಿಕೊಳ್ಳಬೇಕಾದ ಕಾರಣದಿಂದ ಏಷ್ಯ ನದೀಕಣಿವೆಗಳಿಂದ ಯೂರೋಪಿನ ಶೀತಲ ಪ್ರದೇಶಗಳಿಗೆ ನಿರಂತರವಾಗಿ ನಾಗರಿಕತೆಯು ಪಲ್ಲಟವಾಗುತ್ತಿತ್ತು ಎಂಬುದೇ ಆ ಹೊಸ ವಾದ. ಆ ವಾದವನ್ನು ಸ್ಪಷ್ಟಗೊಳಿಸಲು ವಾಯುಗುಣ ಸಾಮರ್ಥ್ಯ ಸಂಬಂಧವಾದ ಅನೇಕ ನಕ್ಷೆಗಳನ್ನು ರಚಿಸಿ ಆ ಗ್ರಂಥದಲ್ಲಿ ಸೇರಿಸಿದ.

ಇತರರೊಂದಿಗೆ ಕೂಡಿಯೂ ಈತ ಅನೇಕ ಕೃತಿಗಳನ್ನು ರಚಿಸಿದ್ದಾನೆ. ಇವುಗಳಲ್ಲಿ ಮುಖ್ಯವಾದವು ಎರಡು: 1 ಎಸ್. ಡಬ್ಲ್ಯು. ಕುಷಿಂಗ್‌ನೊಡನೆ ಸಹಕರಿಸಿ. ಸಿದ್ಧಗೊಳಿಸಿದ ಕೃತಿ–'ಮಾನವ ಭೂಗೋಳ ಶಾಸ್ತ್ರದ ತತ್ತ್ವಗಳು' (1912). ಬ್ಲಾಷ್. ಬ್ರೂನ್ಸ್ ಇತ್ಯಾದಿ ಮಾನವ ಭೂಗೋಳಶಾಸ್ತ್ರಜ್ಞರ ಭಾವನೆಗಳಿಗಿಂತಲೂ ಭಿನ್ನವಾದ. ನೂತನವಾದ ವಿಚಾರ ಸರಣಿಯನ್ನು ಈ ಕೃತಿಯಲ್ಲಿ ಹೊರಚೆಲ್ಲಿದ. ಭೂಮಿಯೊಂದಿಗೆ ಮಾನವನಿಗಿರುವ ಸಂಬಂಧಗಳ ಕೇಂದ್ರೀಕರಣದ ವಿವರಣೆ ಇದರಲ್ಲಿ ಇದೆ. ವಾಯುಗುಣದ ಪ್ರಭಾವಗಳು. ಭೌಗೋಳಿಕ ಸನ್ನಿವೇಶಗಳ ಮೇಲೆ ತೋರುವ ಒತ್ತಡ. ಸಸ್ಯವರ್ಗ ಮತ್ತು ಆಹಾರ ಸೇವನೆಯ ಮೇಲಿನ ಭೂಗೋಳದ ಒತ್ತಾಸೆ, ಭೌಗೋಳಿಕ ಪರಿಸ್ಥಿತಿಗಳಿಂದ ಉದ್ಭವವಾಗುವ ರಾಜಕೀಯ ಸಂಬಂಧಗಳ ಬೆಳಕಿನಲ್ಲಿ ನಿರ್ಮಾಣವಾಗುವ ರಾಜಕೀಯ ಭೂಗೋಳ ಶಾಸ್ತ್ರದ ಅರ್ಥ ವಿನ್ಯಾಸ–ಇತ್ಯಾದಿ ವಿವರಗಳೂ ಈ ಗ್ರಂಥದಲ್ಲಿವೆ. ಮಾನವ ಭೂಗೋಳಶಾಸ್ತ್ರವನ್ನು ಕುರಿತಾದ ಕೆಲವೇ ಉತ್ತಮ ಕೃತಿಗಳಲ್ಲಿ ಇದೂ ಒಂದು. 2 ಎಸ್. ಎಸ್. ವಿಷರ್ ಎಂಬವನ ಜೊತೆಯಲ್ಲಿ ಕೆಲಸ ಮಾಡಿ 'ವಾಯುಗುಣ ಪರಿವರ್ತನೆಗಳು' ಎಂಬ ಗ್ರಂಥವನ್ನು ಈತ 1922ರಲ್ಲಿ ರಚಿಸಿದ. ಇದಲ್ಲದೆ ಸ್ವತಃ 'ಭೂಮಿ ಮತ್ತು ಸೂರ್ಯ' ಎಂಬ ಗ್ರಂಥವನ್ನು 1923ರಲ್ಲಿ ರಚಿಸಿದ.

ಇದೇ ರೀತಿಯಲ್ಲಿ ಅನೇಕ ಭೂಗೋಳ ಶಾಸ್ತ್ರದ ತತ್ತ್ವ ಗ್ರಂಥಗಳನ್ನು ಈತ ಅನಂತರದ ವರ್ಷಗಳಲ್ಲೂ ರಚಿಸಿದ. ಅವುಗಳಲ್ಲಿ ಮುಖ್ಯವಾದವು 'ಜನಾಂಗಗಳ ಗುಣ ವಿಶೇಷಗಳು (1924)', 'ಪ್ರಗತಿಯ ಸ್ಪಂದನ' (1926), 'ಮಾನವೀಯ ವಸತಿ' (1927).

ಈತ ಭೂಗೋಳಶಾಸ್ತ್ರಕ್ಕೆ ಸಂಬಂಧಪಟ್ಟ ಅನೇಕ ಪತ್ರಗ್ರಂಥಗಳನ್ನು ರಚಿಸಿದ್ದಾನೆ. ತನ್ನ ಜೀವನದ ಕಡೆಯ ವರ್ಷಗಳನ್ನು ಮುಖ್ಯವಾಗಿ ಮತ್ತೆ ಸಂಶೋಧನೆಗಾಗಿ ವಿನಿಯೋಗಿಸಲಾಗಿಟ್ಟ. ಅನುವಂಶೀಯತೆ ಮತ್ತು ಉತ್ತಮ ಸಂತಾನ ಶಾಸ್ತ್ರಗಳ ಬಗ್ಗೆ ವಿಸ್ತೃತವಾಗಿ ಬರೆದ. ಸಮೃದ್ಧವಾಗಿ ಹಾಗೂ ಸತ್ವಪೂರ್ಣವಾಗಿ ಬರೆಯಬಲ್ಲವನಾಗಿದ್ದ ಈ ಭೂಗೋಳಶಾಸ್ತ್ರಜ್ಞ ಜಗತ್ತಿನಾದ್ಯಂತ ಖ್ಯಾತನಾದ. ಪ್ರಚಲಿತವಾದ ಪರಿಸರವಾದಕ್ಕಿಂತ ಸ್ವಲ್ಪ ಭಿನ್ನವಾದ ಪರಿಸರವಾದವನ್ನು ಈತ ಕಂಡುಹಿಡಿದುದರಿಂದ ಈತನ ಈ ವಾದವನ್ನು ಮಾನವ ಜನಾಂಗ ಕೇಂದ್ರ ತತ್ವ (ಎತ್ನೊ–ಸೆಂಟ್ರಿಕ್) ಎಂದು ಕರೆಯಲಾಗಿದೆ. ಆದರೆ ಇವರ ಬಗ್ಗೆ ಇನ್ನೂ ಹೆಚ್ಚಿನ ಸಂಶೋಧನೆಯಾಗಬೇಕಾದ ಆವಶ್ಯಕತೆ ಇದೆ.

ಒಂದನೆಯ ಮತ್ತು ಎರಡನೆಯ ಮಹಾಯುದ್ಧಗಳಲ್ಲಿ ಸೈನಿಕ ಕಾರ್ಯಾಚರಣೆಯಲ್ಲಿ ಭಾಗವಹಿಸಿ ಈತ ದೇಶಸೇವೆ ಮಾಡಿದ. ಉತ್ತಮ ಸಂತಾನಶಾಸ್ತ್ರವನ್ನು ಕುರಿತಾದ ಸಮಸ್ಯೆಗಳಲ್ಲಿ ಹಾಗೂ ಲೀಗ್ ಆಫ್ ನೇಷನ್ಸ್ ಇತ್ಯಾದಿ ಅಂತರರಾಷ್ಟ್ರೀಯ ಸಂಸ್ಥೆಗಳಲ್ಲಿ ಈತನಿಗೆ ತುಂಬ ಆಸಕ್ತಿ. ವಿಶ್ವಸಂಸ್ಥೆಯ ಮಾನವಹಕ್ಕುಗಳ ಸಂಸ್ಥೆಯ ಪ್ರಾದುರ್ಭಾವಕ್ಕೆ ಈತನ ಸೇವೆಯೂ ಸಾಕಷ್ಟಾಗಿದೆ.

ಇಷ್ಟಾದರೂ ಈತ ಜಗತ್ತಿನ ಕಣ್ಣಿಗೆ ಕಂಡುಬಂದಿರುವುದು ಮುಖ್ಯವಾಗಿ ಮಾನವ ಭೂಗೋಳ ಶಾಸ್ತ್ರಜ್ಞನಾಗಿ. ಏಷ್ಯ ಖಂಡದಲ್ಲಿ ಈತ ನಡೆಸಿದ ವಿಸ್ತೃತ ಪ್ರವಾಸಗಳು ಅನೇಕ ಕೃತಿಗಳ ರಚನೆಗೆ ಕಾರಣವಾದಂತೆ, ಈ ಖಂಡದ ಮೇಲೆ ಪಾಶ್ಚಾತ್ಯ ರಾಷ್ಟ್ರಗಳು ತಮ್ಮ ಮಾನವತಾ ದೃಷ್ಟಿಯನ್ನು ಬೀರಲೂ ಸಹಾಯವಾಯಿತು.

ಪ್ರಾರಂಭದ ರಚನೆಗಳಲ್ಲಿ ವಾಯುಗುಣ ಪರಿವರ್ತನೆಯ ಸಮಸ್ಯೆಗಳ ಬಗ್ಗೆ ಈತ ಹೆಚ್ಚು ಆಸಕ್ತಿ ವಹಿಸಿದರೂ ಅನಂತರದ ವರ್ಷಗಳಲ್ಲಿ ಮಾನವನೇ ಈತನ ಭೌಗೋಳಿಕ ಅಧ್ಯಯನಗಳ ಕೇಂದ್ರವಾದ ನೆಯಿಬುದನ್ನು ಈತನ ಅನಂತರದ ಕೃತಿಗಳಲ್ಲಿ ಕಾಣಬಹುದು. "ಒಂದು ನಾಗರಿಕತೆ—ಚಿಕ್ಕದಾಗಿರಲಿ, ದೊಡ್ಡದಾಗಿರಲಿ—ತನ್ನೆಲ್ಲ ಉದ್ಘೋಷಗಳಲ್ಲಿ ವಾಯುಗುಣದ ಸ್ಪಂದನೆಗಳಿಗೆ ನೇರ ಸಂಬಂಧ ಹೊಂದಿದೆ" ಎಂಬುದು ಇವನ ಮುಖ್ಯ ವಾದ. ಈ ರೀತಿ ವಾಯುಗುಣಕ್ಕೆ ಒಂದು ಶಾಸ್ತ್ರರೂಪವನ್ನು ಕೊಟ್ಟಿದ್ದೇ ಅಲ್ಲದೆ, ಅದಕ್ಕೆ ಒಂದು ವೈಜ್ಞಾನಿಕ ವಿಶ್ಲೇಷಣೆಯನ್ನೂ ಈತ ನೀಡಿದ. ಈತನ ಪ್ರಯತ್ನಗಳ ಫಲವಾಗಿಯೇ 'ವಾಯುಗುಣಶಾಸ್ತ್ರ' ರೂಪುಗೊಂಡಿತೆಂದು ಹೇಳಬಹುದು. ಇದರಿಂದ ಈತನ ಅನೇಕ ಕೃತಿಗಳಲ್ಲಿ ವಾಯುಗುಣ ವಿಷಯ ಒಂದು ಮುಖ್ಯ ಉದ್ದೇಶವಾಗಿರುತ್ತಿತ್ತು.

ಈತನ ಕಟ್ಟಕಡೆಯ ಕೃತಿ 'ನಾಗರಿಕತೆಯ ಮುಖ್ಯ ಸೂತ್ರಗಳು' ಎಂಬುದು. ಇದನ್ನು ರಚಿಸಿದ್ದು 1945ರಲ್ಲಿ. ಇದು ಈತನ ಪ್ರಾರಂಭಿಕ ಕೃತಿಗಳ ಸಂಕ್ಷಿಪ್ತ ರೂಪವೆಂದು ಕೆಲವರು ಕರೆದರೂ, ಈತನ ತಾತ್ವಿಕ ಜಾಡು ಇದರಲ್ಲೂ ಅಂತರ್ಗತವಾಗಿ ಹರಿದಿದೆ. ಇದರಲ್ಲಿ ಮುಖ್ಯವಾಗಿ. ಸೂರ್ಯನ ಚಟುವಟಿಕೆ, ಮಾನವಜೀವಿಶಾಸ್ತ್ರ ಮತ್ತು ಮನೋವೈಜ್ಞಾನಿಕ ಶಾಸ್ತ್ರಗಳ ನಡುವೆ ಇರುವ, ಇರಬಹುದಾದ ಸಂಬಂಧವೊಂದನ್ನು ಚರ್ಚಿಸಿದ್ದಾನೆ.

ಇಪ್ಪತ್ತೈದಕ್ಕೂ ಹೆಚ್ಚು ಭೌಗೋಳಿಕ ಶಾಸ್ತ್ರೀಯ ಗ್ರಂಥಗಳನ್ನು ರಚಿಸಿರುವ ಈತನ ಅನೇಕ ವಾದಗಳನ್ನು, ಭಾವನೆಗಳನ್ನು ಪ್ರಪಂಚದ ಅನೇಕ ಭೂಗೋಳಶಾಸ್ತ್ರಜ್ಞರು ಒಪ್ಪಿಲ್ಲ. ಆದರೂ ಈತನ ವಾದಗಳಲ್ಲಿ ಇರುವ ಸತ್ತ್ವವನ್ನು ಎಲ್ಲರೂ ಒಪ್ಪಿದ್ದಾರೆ. ಎಷ್ಟೇ ಭಿನ್ನಾಭಿಪ್ರಾಯಗಳು ಇದ್ದರೂ ಈತನ ಮಾನವೀಯತೆಯನ್ನು ಎಲ್ಲರೂ ಮೆಚ್ಚಿದ್ದರು.

ವ್ಯಾಪಕ ಹಾಗೂ ಶಕ್ತಿಯುತ ಪ್ರಭಾವವನ್ನು ಈತ ಎಲ್ಲರ ಮೇಲೂ ಬೀರಿದ್ದೇ ಅಲ್ಲದೆ ಆಧುನಿಕ ಭೂಗೋಳ ಶಾಸ್ತ್ರದ ಬುನಾದಿಯನ್ನು ಹಾಕುವುದರಲ್ಲಿ ಪ್ರಮುಖ ಪಾತ್ರ ವಹಿಸಿದ. ಅಮೆರಿಕನ್ ಭೂಗೋಳಶಾಸ್ತ್ರಜ್ಞರಲ್ಲಿ ಈತನ ಸ್ಥಾನ ಅತ್ಯುನ್ನತವಾದ್ದು.

ಈತ ತನ್ನ 71ನೆಯ ವಯಸ್ಸಿನಲ್ಲಿ, 1947ರ ಅಕ್ಟೋಬರ್ 17ರಂದು ನ್ಯೂ ಹೇವೆನ್‌ನಲ್ಲಿ ಮರಣ ಹೊಂದಿದ.

ತಮ್ಮ ವಿಷಯದ ವ್ಯಾಪ್ತಿ ಎಷ್ಟೆಂಬುದರ ಬಗ್ಗೆ ವೃತ್ತಿನಿರತ ಭೂಗೋಳಶಾಸ್ತ್ರಜ್ಞರಲ್ಲಿ ಸಂಪೂರ್ಣ ಏಕಮತವಿಲ್ಲ. ಆದರೆ ಭೂಗೋಳಶಾಸ್ತ್ರದ ಸ್ವರೂಪ ಎಂಥದೆಂಬುದರ ಚರ್ಚೆಯೊಳಕ್ಕೆ ಭೂಗೋಳಶಾಸ್ತ್ರಜ್ಞನಲ್ಲದವನನ್ನು ಎಳೆದು ತರುವುದು ನ್ಯಾಯವೆನಿಸುವುದಿಲ್ಲ. ಸ್ಥಳಗಳು ಎಲ್ಲಿವೆ, ಅವು ಏನನ್ನು ಉತ್ಪಾದಿಸುತ್ತವೆ ಎಂಬುದನ್ನು ಕುರಿತು ಅಸಂಖ್ಯಾತ ಅಂಶಗಳ ಶೇಖರಣೆಯಷ್ಟೇ ಭೂಗೋಳಶಾಸ್ತ್ರ ಅಲ್ಲವೆಂಬುದನ್ನು ಸೂಚಿಸಿದರೆ ಇಲ್ಲಿ ಸಾಕು. ಆದರೂ ಇವುಗಳಲ್ಲಿ ಎಷ್ಟನ್ನು ಅವನು ಹುಡುಕಾಟ ನಡೆಸುವ ಪ್ರಯತ್ನವಿಲ್ಲದೆ ತಿಳಿದಿರುತ್ತಾನೋ ಅಷ್ಟರ ಮಟ್ಟಿಗೆ ಅವನು ತನ್ನ ವಿಷಯದ ಬಗ್ಗೆ—ಪ್ರಾದೇಶಿಕ ಭೂಗೋಳಶಾಸ್ತ್ರದ ಅಧ್ಯಯನವನ್ನು ಕುರಿತಂತೆಯಾದರೂ—ಸುಲಭವಾಗಿ ಕೆಲಸಮಾಡಬಹುದು. ಭೂಗೋಳಶಾಸ್ತ್ರ ಭೂಮಿಯ ಮೇಲ್ಮೈಯನ್ನು ಕುರಿತದ್ದು; ಮತ್ತು, ಸಹಜವಾಗಿಯೇ. ಇದನ್ನು ರೂಪಿಸುವುದರಲ್ಲಿ ಕಳೆದ ಕೆಲವು ಸಹಸ್ರಮಾನಗಳಲ್ಲಿ ಮಾನವ ಒಂದು ಮಹತ್ತ್ವದ ಪಾತ್ರ ವಹಿಸಿರುವುದರಿಂದ, ಭೌತ ಪರಿಸರಕ್ಕೂ ಮಾನವನ ಚಟುವಟಿಕೆಗಳಿಗೂ ನಿಕಟ ಸಂಬಂಧವನ್ನು ಭೂಗೋಳಶಾಸ್ತ್ರಜ್ಞ ಗ್ರಹಿಸುತ್ತಾನೆ. ಆದ್ದರಿಂದ, ಕಾಲದಲ್ಲಿ ಮಾನವನ ಚಟುವಟಿಕೆಗಳನ್ನು ಕುರಿತದ್ದು ಚರಿತ್ರೆಯಾಗಿರುವಂತೆ, ಪ್ರದೇಶದಲ್ಲಿ (ಎಂದರೆ ಪ್ರಪಂಚದ ಹೊರಮೈಯ ಮೇಲೆ) ಮಾನವನ ಆರ್ಥಿಕ ಸಾಮಾಜಿಕ ರಾಜಕೀಯ ಜೀವನದ ಅಧ್ಯಯನ ಭೂಗೋಳಶಾಸ್ತ್ರದ ಒಂದು ಮುಖ್ಯ ಭಾಗ. ಹೀಗೆ, ಪ್ರಪಂಚದ ವಿದ್ಯಮಾನಗಳ ಅಧ್ಯಯನಕ್ಕೆ ಭೂಗೋಳಶಾಸ್ತ್ರಜ್ಞನ ಕಾಣಿಕೆಯೆಂದರೆ ಭೌತ ಪರಿಸರದ ಪ್ರಭಾವ ಮತ್ತು ಚಲನೆಗಳ ಹಾಗೂ ಪ್ರದೇಶಸಂಬಂಧಗಳ ತಿಳಿವಳಿಕೆ.*

ಜೆ. ಪಿ. ಕೋಲ್

* Cole, J. P. : *Geography of World Affairs*, A Pelican Original, Penguin Books Ltd. (1964), p. 13

ಡಾ. ಸೀತಾರಾಂ

ಶಾಲೆ—ಸಮುದಾಯ ಸಂಬಂಧ

ಪರಿಚಯ: ಶಿಕ್ಷಣದ ಇತಿಹಾಸದಲ್ಲಿ ಇಪ್ಪತ್ತನೆಯ ಶತಮಾನದ ಶಿಕ್ಷಣವನ್ನು ಕ್ರಾಂತಿಕಾರಕವೆಂದು ಕರೆಯಬಹುದು. ಏಕೆಂದರೆ ಈ ಶತಮಾನದ ಆದಿಯಲ್ಲಿ ಶಿಕ್ಷಣದ ಹಲವಾರು ಕ್ಷೇತ್ರಗಳಲ್ಲಿ ಮೂಲಭೂತವಾದ ಬದಲಾವಣೆಗಳು ಕಂಡುಬಂದುವು. ಇವುಗಳಲ್ಲಿ ಕೆಲವು ಜನಪ್ರಿಯವಾದ ಬದಲಾವಣೆಗಳೆಂದರೆ ಬೋಧನ ವಿಧಾನಗಳಲ್ಲಿ, ಶಾಲೆಯ ವ್ಯವಸ್ಥೆಯಲ್ಲಿ, ಶಾಲಾ ಶಿಸ್ತಿನ ಪಾಲನೆಯಲ್ಲಿ, ಮೌಲ್ಯಮಾಪನ ವಿಧಾನಗಳಲ್ಲಿ, ವಿದ್ಯಾರ್ಥಿಗೆ ಮಾರ್ಗದರ್ಶನ ನೀಡುವ ಹಾಗೂ ಅವನ ಮನಸ್ವಾಸ್ಥ್ಯವನ್ನು ಕಾಪಾಡುವ ಕಾರ್ಯದಲ್ಲಿ ಆದ ಬದಲಾವಣೆಗಳು. ಇವುಗಳ ಜೊತೆಯಲ್ಲಿ ಬೆಳೆದು ಬಂದ ಮತ್ತೊಂದು ಶೈಕ್ಷಣಿಕ ಅಂಶವೆಂದರೆ ಶಾಲಾಸಮುದಾಯಗಳ ಸಂಬಂಧದ ಆವಶ್ಯಕತೆಯ, ಮಹತ್ವದ, ಉಪಯೋಗದ ಅರಿವು. ಹಲವಾರು ಮಾನವೀಯ ವಿಜ್ಞಾನಗಳಲ್ಲಿ ಒಂದಾದ ಸಮಾಜ ಶಾಸ್ತ್ರದಲ್ಲಿ ಬೆಳವಣಿಗೆ ಹಾಗೂ ಶಿಕ್ಷಣ ತಜ್ಞರಲ್ಲಿ ಈ ಬೆಳವಣಿಗೆಯಿಂದ ಶಿಕ್ಷಣಕ್ಕೆ ಸಂಬಂಧಿಸಿದ ಅನ್ವಯಗಳ ಪ್ರಜ್ಞೆಯ ಫಲವೇ ಶಾಲಾ ಸಮುದಾಯಗಳ ಸಂಬಂಧದ ಬಗ್ಗೆ ದಿನೇ ದಿನೇ ಹೆಚ್ಚುತ್ತಿರುವ ಆಸಕ್ತಿ. ಈ ಸಂಬಂಧದ ಆವಶ್ಯಕತೆ, ಮಹತ್ವ, ವ್ಯಾಪ್ತಿ, ವಿಸ್ತಾರ, ಪ್ರಸ್ತುತ ಪರಿಸ್ಥಿತಿಯ ವಿಶ್ಲೇಷಣೆ ಹಾಗೂ ಭವಿಷ್ಯದಲ್ಲಿ ಈ ಸಂಬಂಧಗಳ ಗತಿ ನಿರ್ದೇಶನವೇ ಈ ಲೇಖನದ ಉದ್ದೇಶ. ಆದರೆ ಇದಕ್ಕೆ ಮೊದಲು ಇಲ್ಲಿ ಉಪಯೋಗಿಸಿರುವ ಎರಡು ಮುಖ್ಯ ಶಬ್ದಗಳಾದ ಶಾಲೆ ಮತ್ತು ಸಮುದಾಯಗಳ ಸಂಕ್ಷಿಪ್ತವಾದ ವ್ಯಾಖ್ಯೆ, ಲೇಖನದ ಪರಿಪೂರ್ಣತೆ ಹಾಗೂ ಮುಂದೆ ಆಗಬಹುದಾದ ಅಪಾರ್ಥಗಳನ್ನು ತಡೆಗಟ್ಟುವ ದೃಷ್ಟಿಯಿಂದ, ಆವಶ್ಯಕ.

ಶಾಲೆ: ಕೆಲವು ನಿರ್ದಿಷ್ಟ ವೈಯಕ್ತಿಕ ಹಾಗೂ ಸಾಮಾಜಿಕ ಆವಶ್ಯಕತೆಗಳನ್ನು ಪೂರೈಸಲಿಕ್ಕಾಗಿ ಒಂದು ಸಮಾಜ ನಿಯೋಜಿಸಿ, ಸ್ಥಾಪಿಸಿದ ಒಂದು ಸಾಮಾಜಿಕ ಸಂಸ್ಥೆ.

ಸಮುದಾಯ: ಒಂದೇ ರೀತಿಯ ಆವಶ್ಯಕತೆಗಳು, ಸಮಸ್ಯೆಗಳು, ಆಸಕ್ತಿಗಳು, ಮೌಲ್ಯಗಳು ಜೀವನಧ್ಯೇಯಗಳಿಂದ ಕೂಡಿದ ನಿರ್ದಿಷ್ಟ ಸ್ಥಾನಮಾನಗಳು ಉಳ್ಳ, ಅದಕ್ಕೆ ತಕ್ಕ ಪಾತ್ರ ನಿರ್ವಹಣೆ ಮಾಡಬೇಕಾದ ವ್ಯಕ್ತಿಗಳ ನಡುವೆ ಇರುವ ಪರಸ್ಪರ ಸಂಪರ್ಕ ಹಾಗೂ ಸಂಬಂಧಗಳಿಂದ ಕೂಡಿದ ಹಲವಾರು ವ್ಯಕ್ತಿಗಳ ಒಂದು ಗುಂಪು.

ಸಮುದಾಯಕ್ಕೂ ಸಮಾಜಕ್ಕೂ ಇರುವ ವ್ಯತ್ಯಾಸ: ಸಮಾಜವನ್ನು ಬೃಹತ್ ಪರಿಮಾಣದ ಒಂದು ಸಮುದಾಯವೆಂದು ಪರಿಗಣಿಸಬಹುದು. ಆದರೆ ಇಲ್ಲಿಯ ವ್ಯಕ್ತಿಗಳಿಗೆ ಸಮಾಜದ ಸಾಮಾನ್ಯ ಗುರಿಗಳು, ಸಮಸ್ಯೆಗಳು ಇತ್ಯಾದಿಗಳ ಅರಿವು ಅತ್ಯಲ್ಪ ಪ್ರಮಾಣದಲ್ಲಿರುತ್ತದೆ. ಸಮಾಜ ಶಾಸ್ತ್ರಜ್ಞರ ಪ್ರಕಾರ ಸಮುದಾಯ ಸಮಾಜದ ಒಂದು ಅವಿಚ್ಛಿನ್ನ ಭಾಗ. ನಮ್ಮ ಶಾಲೆಗಳಲ್ಲಿಯ ವಿದ್ಯಾರ್ಥಿಗಳು ಬಾಹ್ಯ ಸಮಾಜವನ್ನು ತಮ್ಮ ಸಮುದಾಯವನ್ನು ಮಾನವಾಗಿಟ್ಟುಕೊಂಡು ಅರ್ಥ ಮಾಡಿಕೊಳ್ಳುತ್ತಾರೆ. ಆದ್ದರಿಂದ ಶಾಲೆ ಸಮುದಾಯಗಳ ಸಂಬಂಧ ಚರ್ಚೆಗೆ ಈ ವ್ಯತ್ಯಾಸವನ್ನು ಗುರುತಿಸಬೇಕಾದ್ದು ಅನಿವಾರ್ಯ.

ಸಮುದಾಯಕ್ಕೂ ಸಮಾಜಕ್ಕೂ ಇರುವ ವ್ಯತ್ಯಾಸ: ಶಾಲೆ ಸಮುದಾಯಗಳಿಗೆ ಸಂಬಂಧದ ಅವಶ್ಯಕತೆ ಇದೆ ಎಂಬ ಅಭಿಪ್ರಾಯದ ಬಗ್ಗೆ ಪ್ರಪಂಚದ ಯಾವ ಶಿಕ್ಷಣ ವ್ಯವಸ್ಥೆಯಲ್ಲೂ ಭಿನ್ನಾಭಿಪ್ರಾಯವಿಲ್ಲ. ಈ ಅವಶ್ಯಕತೆಯನ್ನು ಗುರುತಿಸಿದ ಮೊದಲಿಗರಲ್ಲಿ ಜಾನ್ ಡ್ಯೂಯಿ ಪ್ರಮುಖರು. ಅವರ ಹಲವು ಪುಸ್ತಕಗಳಲ್ಲಿ 'ಸ್ಕೂಲ್ ಅಂಡ್ ಸೊಸೈಟಿ' (1919) ಎನ್ನುವುದು ಒಂದು. ಶಾಲೆ-ಸಮುದಾಯಗಳ ಸಂಬಂಧದ ರೂಪರೇಖೆ, ವ್ಯಾಪ್ತಿ, ಅಥವಾ ಸಮುದಾಯದ ಸಮಾಜದಲ್ಲಿ ಜೀವನದಲ್ಲಿ ಶಾಲೆಯ ಪಾತ್ರದ ಬಗ್ಗೆ ಶಿಕ್ಷಣತಜ್ಞರಲ್ಲಿ ಭಿನ್ನಾಭಿಪ್ರಾಯಗಳಿವೆ. ಈ ಭಿನ್ನಾಭಿಪ್ರಾಯಗಳು ಶಾಲಾ-ಸಮುದಾಯ ಸಂಬಂಧಗಳ ಬಗ್ಗೆ ಮೂರು ಸಿದ್ಧಾಂತಗಳಿಗೆ ದಾರಿ ಮಾಡಿಕೊಟ್ಟಿವೆ. ಈ ಮೂರು ಸಿದ್ಧಾಂತಗಳ ಸಂಕ್ಷಿಪ್ತ ಚರ್ಚೆ ಶಾಲೆಯ ಪಾತ್ರ ನಿರ್ವಹಣೆಯ ಅರ್ಥ ಕಲ್ಪನೆಗೆ ಸಹಾಯಕವಾಗುತ್ತದೆ.

(ಅ) ಶಾಲೆ ಸಂಸ್ಕೃತಿಪ್ರಸಾರ ಕೇಂದ್ರ: ಮಾನವರು ತಮ್ಮ ಪರಿಸರಕ್ಕೆ ಪೂರ್ಣವಾಗಿ ಹೊಂದಿಕೊಂಡು, ಪ್ರಕೃತಿಯ ಅನಿಶ್ಚಿತತೆ ಹಾಗೂ ಕಷ್ಟ ಮುಟ್ಟಾಲೆಗಳಿಂದ ರಕ್ಷಣೆ ಪಡೆದುಕೊಂಡು, ತಮ್ಮ ಮೂಲಭೂತ ಅವಶ್ಯಕತೆಗಳನ್ನು ಪೂರೈಸುವುದಕ್ಕಾಗಿ ಸಂಘಜೀವಿಗಳಾದರು. ಕಾಲಕ್ರಮೇಣ ಹಲವಾರು ಪದ್ಧತಿಗಳು, ಪರಂಪರೆಗಳು, ಜಾನಪದ ರೀತಿನೀತಿಗಳು, ನಂಬಿಕೆಗಳು, ಮೌಲ್ಯಗಳು, ಭಾವನೆಗಳು, ಸುಲಭ ಜೀವನದ ಸಾಧನ ಸಂಪರ್ಕಗಳು ಈ ಸಂಘ ಜೀವನದ ಪರೋಕ್ಷ ಫಲಗಳಾಗಿ ಬೆಳೆದು ಬಂದುವು. ಒಟ್ಟಾಗಿ ಸಂಸ್ಕೃತಿಯೆಂದು ಕರೆಯಲ್ಪಟ್ಟ ಇವುಗಳ ರಕ್ಷಣೆ ಮಾನವರ ವೈಯಕ್ತಿಕ ಹಾಗೂ ಸಂಘ ಜೀವನದ ಹಿತದೃಷ್ಟಿಯಿಂದ ಅವಶ್ಯಕವಾಗಿ ಕಂಡಿತು. ಸಂಘ ಜೀವನ ಸರಳವೂ ಸುಲಭವೂ ಆಗಿದ್ದಾಗ ಈ ಕಾರ್ಯವನ್ನು ಪ್ರತಿಯೊಂದು ಮನೆಯಲ್ಲಿ ತಂದೆ ತಾಯಿಗಳು ತಮ್ಮ ಮಕ್ಕಳಿಗೆ ತಿಳಿವಳಿಕೆ ಕೊಡುವುದರ ಮೂಲಕ ನೆರವೇರಿಸಲಾಗುತ್ತಿತ್ತು. ಆದರೆ ಸಂಘಜೀವನ ತಾಂತ್ರಿಕವೂ, ಸಂಕೀರ್ಣವೂ, ಕ್ಲಿಷ್ಟವೂ ಆಗಿ, ಮಾನವರ ಪರಸ್ಪರಾವಲಂಬನೆ ಹೆಚ್ಚಾಗಿ, ಸಮುದಾಯ ಹೆಚ್ಚು ಸುಂಘಟಿತವಾಗಿ, ಸಂಸ್ಕೃತಿಯ ವ್ಯಾಪ್ತಿ, ವಿಸ್ತಾರ ಹೆಚ್ಚಾಗಹೋಗುತ್ತಿದ್ದ ಹಾಗೆ ಸಂಸ್ಕೃತಿರಕ್ಷಣೆಯ ಕಾರ್ಯವನ್ನು ಮನೆ ದಕ್ಷತೆಯಿಂದ, ಯಶಸ್ವಿಯಾಗಿ ನಿರ್ವಹಿಸುವುದು ಅಸಾಧ್ಯವಾಗತೊಡಗಿತು. ಆದಕಾರಣ ಈ ಸಂಸ್ಕೃತಿ ರಕ್ಷಣೆಯ ಕಾರ್ಯವನ್ನೇ ಮೂಲಭೂತವಾಗಿ ಇಟ್ಟುಕೊಂಡಂಥ, ಈ ಕಾರ್ಯಕ್ಕೇ ತಮ್ಮ ಜೀವನವನ್ನು ಮೀಸಲಾಗಿಡುವಂಥ ವ್ಯಕ್ತಿಗಳ, ಸಂಘಜೀವನದ ಈ ಅವಶ್ಯಕತೆಯನ್ನು ಪೂರೈಸುವಂಥ, ವಿಶೇಷವಾಗಿಯೇ ಸ್ಥಾಪಿಸಲ್ಪಡುವಂಥ ಒಂದು ಸಾಮಾಜಿಕ ಸಂಸ್ಥೆಯ ಪರಿಕಲ್ಪನೆ ಸಂಘಜೀವಿಗಳಲ್ಲಿ ಮೂಡಿಬಂತು. ಇಂಥ ಒಂದು ಸಾಮಾಜಿಕ ಸಂಸ್ಥೆಯೇ ಶಾಲೆ. ಈ ರೀತಿಯಾಗಿ ಶಾಲೆಯ ಉಗಮದ ಆಧಾರ ಸಮುದಾಯಕ್ಕಿರುವ ಸಂಸ್ಕೃತಿ ಪ್ರಸಾರ (ಆದರಿಂದಾಗಿ ಸಂಸ್ಕೃತಿಯ ರಕ್ಷಣೆ) ಕಾರ್ಯದ ಅವಶ್ಯಕತೆ. ಮೇಲೆ ಚರ್ಚಿಸಿದ ವಾದಸರಣಿಗೆ ಅನುಗುಣವಾಗಿ ಶಾಲೆಯ ಸಮುದಾಯದ ಜೊತೆ ಸಂಬಂಧ ಅದರ ಸಂಸ್ಕೃತಿ ಪ್ರಸಾರಕ್ಕೆ ಮಾತ್ರ ಸೀಮಿತವಾಗಿರಬೇಕು ಎಂಬುದು ಒಂದು ಸಿದ್ಧಾಂತ. ಸಮುದಾಯದ ಜೀವನ ರೀತಿ ಸುರಕ್ಷಿತವೂ ಸುಭದ್ರವೂ ಆಗುವಂತೆ ಸಂಸ್ಕೃತಿ ಪ್ರಸಾರದ ಮೂಲಕ ಮಾಡಲು ಶಾಲೆ ಅನುವಾಗುತ್ತದೆ.

(ಆ) ಸಂಸ್ಕೃತಿ ಪ್ರಸಾರ ಕೇಂದ್ರ ಮತ್ತು ಸಂಸ್ಕೃತಿ ಪುನರುದ್ಧಾರ ನಿಯೋಗ: ಒಂದು ಸಂಸ್ಕೃತಿ ಬೆಳೆಯುತ್ತಿರುವಲ್ಲಿ, ಒಂದು ಸಮಾಜಜೀವನ ಅಭಿವೃದ್ಧಿ ಹೊಂದುತ್ತಿರುವಲ್ಲಿ ಅದರ ವಿಕಾಸದ ಹಾದಿಯಲ್ಲಿ ಹಲವು ಅಹಿತಕರ ಪದ್ಧತಿಗಳು, ಪರಂಪರೆಗಳು ಹಾಗೂ (ಅವೈಜ್ಞಾನಿಕವಾದ) ಮೂಢ ನಂಬಿಕೆಗಳು, ಅಭಿಪ್ರಾಯಗಳು, ಸಂಕುಚಿತ ಮೌಲ್ಯಗಳು ಬೆಳೆದು ಬರುತ್ತವೆ. ಜಾತಿ ಪದ್ಧತಿ ಹಾಗೂ ಅಸ್ಪೃಶ್ಯತೆ, ಮನುವಿನಿಂದ ಮಾನವ, ಪ್ರಜಾಪ್ರಭುತ್ವಕ್ಕೆ ವಿರುದ್ಧವಾದ ನಂಬಿಕೆಗಳು, ಇತ್ಯಾದಿಗಳು ಭಾರತೀಯ ಸಂಸ್ಕೃತಿಯ ವಿಕಾಸದ ಹಾದಿಯಲ್ಲಿ ಬೆಳೆದ ಕೆಲವು ದೃಷ್ಟಾಂತಗಳು. ಮಾನವೀಯ ಮೌಲ್ಯಗಳ ಹಿನ್ನೆಲೆಯಲ್ಲಿ, ಆ ಸಂಸ್ಕೃತಿಯ ಪ್ರಗತಿಯ ದೃಷ್ಟಿಯಿಂದ, ವ್ಯಕ್ತಿಯ ವೈಯಕ್ತಿಕ ಬೆಳವಣಿಗೆಯ ದೃಷ್ಟಿಯಿಂದ ಈ ಅಹಿತಕರ ಹಾಗೂ ಅವೈಜ್ಞಾನಿಕ ಪದ್ಧತಿ, ಪರಂಪರೆ, ನಂಬಿಕೆಗಳು ಹಾಗೂ ರೀತಿನೀತಿಗಳ ನಿರ್ಮೂಲನ ಅವಶ್ಯಕ. ಇವರಿಂದ ಸಮಾಜ ಜೀವನದ ಸುಧಾರಣೆಗಳು ಸಾಧ್ಯ. ಇದನ್ನು ಸಂಸ್ಕೃತಿಯ ಪುನರುದ್ಧಾರಕಾರ್ಯ ಎನ್ನುತ್ತಾರೆ. ಒಂದು ಸೈದ್ಧಾಂತಿಕ ಶಾಲೆಯ ಶಿಕ್ಷಣ ತಜ್ಞರ ಪ್ರಕಾರ ಈ ಕಾರ್ಯವನ್ನು ದಕ್ಷತೆಯಿಂದ ಹಾಗೂ ಯಶಸ್ವಿಯಾಗಿ ನಿರ್ವಹಿಸಲು ಶಕ್ತಿಯನ್ನೂ ಯುಕ್ತಿಯನ್ನೂ ಸಾಮರ್ಥ್ಯ

ಗಳನ್ನೂ ಕೌಶಲಗಳನ್ನೂ ಹೊಂದಿರುವ ಒಂದೇ ಒಂದು ಸಾಮಾಜಿಕ ಸಂಸ್ಥೆಯೆಂದರೆ ಶಾಲೆ. ಒಂದು ಸಮುದಾಯದ ಎಲ್ಲ ವ್ಯಕ್ತಿಗಳು ತಮ್ಮ ಜೀವನದ ಬಾಲಾವಸ್ಥೆಯಲ್ಲಿ ಶಾಲೆಯ ಮೆಟ್ಟಿಲುಗಳನ್ನು ಹತ್ತಲೇಬೇಕಾಗಿರುವುದರಿಂದ (ಉಚಿತ, ಕಡ್ಡಾಯ, ಸಾರ್ವತ್ರಿಕ ಶಿಕ್ಷಣದ ಧೋರಣೆಯಿಂದಾಗಿ) ಸಮುದಾಯದ ಎಲ್ಲ ವ್ಯಕ್ತಿಗಳಿಗೂ ಈ ಅಹಿತಕರ, ಅವೈಜ್ಞಾನಿಕ ವಿಷಯಗಳ ಬಗ್ಗೆ ತಿಳಿವಳಿಕೆ ಕೊಡುವ ಅವಕಾಶವಿರುವುದು ಶಾಲೆಯಲ್ಲಿ ಮಾತ್ರ. ಈ ರೀತಿಯಾಗಿ ಸಮುದಾಯ ತನ್ನ ಪುನರುದ್ಧಾರವನ್ನು ಶಾಲೆಯ ಮೂಲಕ ಮಾಡಿಕೊಳ್ಳುವುದು ಸಾಧ್ಯ. ಆದ್ದರಿಂದ ಶಾಲೆ–ಸಮುದಾಯ ಸಂಬಂಧದಲ್ಲಿ ಶಾಲೆಯ ಪಾತ್ರ ಸಂಸ್ಕೃತಿ ಪ್ರಸಾರ ಕಾರ್ಯಕ್ಕೆ ಮಾತ್ರ ಸೀಮಿತವಾಗಿದೆ. ಅದು ತನ್ನ ಕಾರ್ಯಕ್ಷೇತ್ರವನ್ನು ಸಂಸ್ಕೃತಿಯ ಪುನರುದ್ಧಾರಕ್ಕೆ ವಿಸ್ತರಿಸಬೇಕು. ಸಂಸ್ಕೃತಿಯ ಪುನರುದ್ಧಾರ ಕಾರ್ಯದ ಮೂಲಕ ಸಮುದಾಯದ ಜೀವನ ರೀತಿಯ ನಿಯಂತ್ರಣ ಸಾಧ್ಯ.

(ಇ) ಶಾಲೆ ಸಂಸ್ಕೃತಿ ಪ್ರಸಾರದ ಕೇಂದ್ರ, ಸಂಸ್ಕೃತಿ ಪುನರುದ್ಧಾರ ನಿಯೋಗ ಹಾಗೂ ಸಂಸ್ಕೃತಿಯ ಪ್ರಗತಿಯ ನೆತ್ತಿಗಲ್ಲು. ತನ್ನ ಗತಿಯನ್ನೇ ಅನುಸರಿಸಿದಲ್ಲಿ ಯಾವುದೇ ಸಮುದಾಯದ ಸಂಸ್ಕೃತಿ ವಿಕಾಸ ಒಂದು ನಿಧಾನ ಪ್ರಕ್ರಿಯೆ. ಅದರ ವಿಕಾಸದ ವೇಗವನ್ನು ವರ್ಧಿಸಬೇಕಾದಲ್ಲಿ ಪ್ರಜ್ಞಾಪೂರ್ವಕ ಹಾಗೂ ಬುದ್ಧಿಪೂರ್ವಕ ಪ್ರಯತ್ನಗಳು ಅಗತ್ಯ. ಸಮುದಾಯದ ಆರ್ಥಿಕ, ಸಾಮಾಜಿಕ, ನೈತಿಕ, ರಾಜನೈತಿಕ, ಧಾರ್ಮಿಕ ಜೀವನ ರೀತಿಗಳಲ್ಲಿ ಸಮುದಾಯದ, ಅದು ಒಂದು ಭಾಗವಾದ ಸಮಾಜದ ಹಾಗೂ ಮಾನವ ಕಲ್ಯಾಣದ ದೃಷ್ಟಿಯಿಂದ ಹಲವಾರು ಪ್ರಗತಿಪರ ಬದಲಾವಣೆಗಳನ್ನು ತರುವುದು ಹಿತಕರವಾಗಿರುತ್ತದೆ. ಈ ಬದಲಾವಣೆಗಳನ್ನು ವೇದಿಕೆಯ ಮೇಲೆ ಮಾಡುವ ಭಾಷಣಗಳಿಂದಾಗಲಿ, ಘೋಷಣೆಗಳಿಂದಾಗಲಿ, ಪ್ರಚಾರದಿಂದಾಗಲಿ ಮಾಡುವ ಪ್ರಯತ್ನಗಳಿಂದ ಸಾಗುವ ಫಲ ಅನಿಶ್ಚಿತವೂ ಅನಿರ್ದಿಷ್ಟವೂ, ಅಳತೆಗೆ ಸಿಗದ್ದೂ, ನಿಧಾನವೂ ಆಗಿರುತ್ತದೆ. ಏಕೆಂದರೆ ಇಂತಹ ವಿಧಾನಗಳ ಮೂಲಕ ಸಮುದಾಯದ ಕೆಲವು ಪ್ರೌಢ ವಯಸ್ಕರನ್ನು ಮಾತ್ರ ತಲುಪಬಹುದು. ಈ ಪ್ರೌಢ ವ್ಯಕ್ತಿಗಳಲ್ಲಿ ತಮ್ಮವೇ ಆದ ನಂಬಿಕೆಗಳು, ಅಭಿಪ್ರಾಯಗಳು ಮನಸ್ಸಿನಲ್ಲಿ ಬೇರೂರಿರುವುದರಿಂದ ತರಬೇಕಾದ ಬದಲಾವಣೆಗಳ ಗುಣಗಳ ಬಗ್ಗೆ ಮೆಚ್ಚುಗೆಯನ್ನು ಮತ್ತು ಕಾರ್ಯಬದ್ಧತೆಯನ್ನು ಮೂಡಿಸುವುದು ಬಹಳ ಕಷ್ಟದ ಕೆಲಸ. ಆದರೆ ಯಾವ ವಿಷಯದ ಬಗ್ಗೆಯೇ ಆಗಲಿ ತಮ್ಮ ಸ್ವಂತ ಅಭಿಪ್ರಾಯಗಳನ್ನು ಇಟ್ಟುಕೊಂಡಿಲ್ಲದ ವ್ಯಕ್ತಿಗಳ ಬಳಿ ಈ ಕಾರ್ಯ ಬಹಳ ಸುಲಭ. ಇಂತಹ ವ್ಯಕ್ತಿಗಳೆಂದರೆ ವಿದ್ಯಾರ್ಥಿಗಳು. ಹೀಗಾಗಿ ಸಮುದಾಯ ಜೀವನದಲ್ಲಿ ಪ್ರಗತಿಪರ ಬದಲಾವಣೆಗಳನ್ನು ತರುವುದಕ್ಕೆ ಬಹಳ ಉಪಕಾರಿಯಾದ ಅವಕಾಶಗಳನ್ನು ಜರಗಿಸುವ ಒಂದೇ ಒಂದು ಸಾಮಾಜಿಕ ಸಂಸ್ಥೆ ಎಂದರೆ ಶಾಲೆ. ಆದ್ದರಿಂದ ಶಾಲೆಯ ಚಟುವಟಿಕೆಗಳೆಲ್ಲವೂ ಸಮುದಾಯದ ಪ್ರಗತಿಗೆ ದ್ಯೋತಕವಾಗಿರಬೇಕು. ಇದೇ ಅಭಿಪ್ರಾಯವನ್ನು 1967ರಲ್ಲಿ ಬ್ರಿಟಿಷ್ ಪ್ರಾಥಮಿಕ ಶಿಕ್ಷಣ ರೀತಿಯ ಮೇಲೆ ಪ್ರಕಟವಾದ ಲೇಡಿ ಪ್ಲೌಡನ್ ಸಮಿತಿ ವರದಿ ಮುಂದಿಸಿದೆ ಮತ್ತು ಸಮುದಾಯದ ಪ್ರಗತಿಯೇ ಮೂಲಧ್ಯೇಯವಾಗಿ ಉಳ್ಳಂತಹ ಸಮುದಾಯ ಶಾಲೆಗಳನ್ನು (ಕಮ್ಯೂನಿಟಿ ಸ್ಕೂಲ್ಸ್) ಸ್ಥಾಪಿಸುವುದಕ್ಕೆ ಸಲಹೆ ನೀಡಿದೆ.

ಶಾಲಾ–ಸಮುದಾಯ ಸಂಬಂಧ ; ಇಂದಿನ ಪರಿಸ್ಥಿತಿ : ನಮ್ಮ ಸಮಾಜದ ಸಮುದಾಯಗಳಲ್ಲಿ ಇಂದು ಕಾರ್ಯಮಾಡುತ್ತಿರುವ ಹೆಚ್ಚಿನ ಅಂಶದ ಶಾಲೆಗಳು ನಮ್ಮ ದೇಶವನ್ನು ಎರಡು ಶತಮಾನಗಳ ತನಕ ಆಳಿದ ಬ್ರಿಟಿಷ್ ಸಾಮ್ರಾಜ್ಯಶಾಹಿಗಳು ರೂಪಿಸಿ ಕಾರ್ಯರೂಪಕ್ಕೆ ತಂದ ಶಿಕ್ಷಣ ವ್ಯವಸ್ಥೆಯ ಭಗ್ನಾವಶೇಷಗಳಾಗಿವೆ. ಅವು ಸಮುದಾಯ ಜೀವನದ ಕೇಂದ್ರಬಿಂದುಗಳಾಗಿರದೆ, ಸಮುದಾಯದ ಪ್ರಗತಿಯ ಚಿಲುಮೆಗಳಾಗಿರದೆ, ಪ್ರತ್ಯೇಕೀಕೃತವಾದ, ತಮ್ಮದೇ ಕಟ್ಟು ನಿಟ್ಟುಗಳನ್ನು ಪರಿಪಾಲಿಸುತ್ತಿರುವ, ಜ್ಞಾನವನ್ನು ಮಾರಾಟಮಾಡುವ, ಸ್ವಕಲ್ಪಿತ ಶೈಕ್ಷಣಿಕ ಗುಣಮಟ್ಟಗಳ ದ್ವೀಪದಲ್ಲಿ ವಾಸಿಸುತ್ತಿರುವ ಸಂಸ್ಥೆಗಳಾಗಿವೆ. ಇಂಥ ಶಾಲೆಗಳಲ್ಲಿರುವ ಶಾಲೆ–ಸಮುದಾಯ ಸಂಬಂಧ ತೀರಾ ಅಲ್ಪ ಪ್ರಮಾಣದ್ದೂ, ಕಡಿಮೆ ಗುಣಮಟ್ಟದ್ದೂ ಆಗಿದೆ. ಯಾವಾಗಲಾದರೊಮ್ಮೆ, ಸಮುದಾಯದ ಸದಸ್ಯರೂ ಆದ ಶಾಲೆಯ ವಿದ್ಯಾರ್ಥಿಗಳ ಪ್ರಜ್ಞಾವಂತ ತಂದೆತಾಯಿಯರು ಶಾಲೆಗೆ ತಮ್ಮ ಮಕ್ಕಳನ್ನು ನೋಡುವುದಕ್ಕಾಗಿ ಭೇಟಿ ನೀಡುವುದು. ವರ್ಷಕ್ಕೊಮ್ಮೆ ಆಚರಿಸುವ ಅಧ್ಯಾಪಕ–ಪೋಷಕರ ಸಂಘದ ಸಭೆಗಳಲ್ಲಿ ಒಬ್ಬರನ್ನೊಬ್ಬರು ಭೇಟಿಯಾಗುವುದು. ಶಾಲೆಯ ವಾರ್ಷಿಕೋತ್ಸವದ ನಾಟಕಗಳು, ಯಕ್ಷಗಾನಗಳು, ಇತ್ಯಾದಿಗಳನ್ನು

ನೋಡುವುದಕ್ಕೆಂದು ಸಮುದಾಯದ ಸದಸ್ಯರು ಶಾಲೆಗೆ ಬರುವುದು. ಕೆಲವು ಉದಾಹರಣೆಯುದಾದ ಸಂಬಂಧಗಳು. ಶಾಲೆ ಸಮುದಾಯಗಳ ಸಂಬಂಧವನ್ನು ವ್ಯವಸ್ಥಿತವಾದ, ವೈಜ್ಞಾನಿಕವಾದ ಮಟ್ಟಕ್ಕೆ ಏರಿಸುವ ಅವಶ್ಯಕತೆ ಹಾಗೂ ಶಾಲೆಯನ್ನು ಸಮುದಾಯದಲ್ಲಿ ಹೆಚ್ಚು ದಕ್ಷತೆಯಿಂದ ಹೆಚ್ಚು ಯಶಸ್ವಿಯಾಗಿ ಹೆಚ್ಚು ಪರಿಣಾಮಕಾರಿ ಹಾಗೂ ಪ್ರಭಾವಶಾಲಿಯಾಗಿ ಮಾಡುವ ಅವಶ್ಯಕತೆ ಇವೆ.

ಶಾಲೆ-ಸಮುದಾಯಗಳ ಸಂಬಂಧ ಸಲಹೆಗಳು: ಯಾವುದೇ ಸಮುದಾಯದಲ್ಲಿ ಶಾಲೆ ಸಮುದಾಯದೊಂದಿಗೆ ಸುವ್ಯವಸ್ಥಿತವಾದ. ವೈಜ್ಞಾನಿಕವಾದ. ಹಿತಕರವಾದ ಪರಿಣಾಮಕಾರಿಯಾದ ಯಶಸ್ವಿಯಾದ ಸಂಬಂಧಗಳನ್ನು ಬೆಳೆಸಿಕೊಳ್ಳಲು ಶಾಲೆಗೆ 'ಸಮುದಾಯ ಸರ್ವೇಕ್ಷಣೆ'ಯನ್ನು (ಕಮ್ಯೂನಿಟಿ ಸರ್ವೆ) ನಡೆಸುವ ಕಾರ್ಯ ಅತ್ಯಗತ್ಯ ಹಾಗೂ ಅತ್ಯುಪಕಾರಿ. 'ಸಮುದಾಯ ಸಮೀಕ್ಷೆ' ಎಂದರೆ (ಅ) ಒಂದು ಸಮುದಾಯದ ಜನತೆಗೆ ಆರ್ಥಿಕ. ಸಾಮಾಜಿಕ. ಧಾರ್ಮಿಕ. ರಾಜನೈತಿಕ, ಔದ್ಯೋಗಿಕ ಇತ್ಯಾದಿ ಕ್ಷೇತ್ರಗಳಲ್ಲಿರುವ ಅವಶ್ಯಕತೆಗಳು. ಆಸೆ ಆಕಾಂಕ್ಷೆಗಳು. ಅಭಿರುಚಿಗಳು, ಸಾಮರ್ಥ್ಯಗಳು, ಧ್ಯೇಯಧೋರಣೆಗಳು. ಅಭಿಪ್ರಾಯಗಳು, ನಂಬಿಕೆಗಳು. ಮೌಲ್ಯಗಳು ಇತ್ಯಾದಿಗಳ ಬಗ್ಗೆ ಸಂಪೂರ್ಣ ಮಾಹಿತಿಗಳನ್ನು ಪಡೆದುಕೊಳ್ಳುವುದು: (ಆ) ಆ ಸಮುದಾಯಕ್ಕೆ ತಮ್ಮ ಆಶೋತ್ತರಗಳನ್ನು, ಅವಶ್ಯಕತೆಗಳನ್ನು ಈಡೇರಿಸಿಕೊಳ್ಳುವುದಕ್ಕೆ ಇರುವ ಮಾನವೀಯ ಹಾಗೂ ಭೌಗೋಳಿಕ ಸಂಪನ್ಮೂಲಗಳ ಪರಿಶೀಲನೆ ಮಾಡುವುದು.

ಸಮುದಾಯ ಸರ್ವೇಕ್ಷಣೆಯ ಅನಂತರ, ಅದರ ಆಧಾರದ ಮೇಲೆ ಶಾಲೆಯೂ ಸಮುದಾಯದಲ್ಲಿ ತನ್ನ ಪಾತ್ರವನ್ನು ನಿರ್ಧರಿಸಲಿಕ್ಕೆ ದೀರ್ಘಾವಧಿ ಹಾಗೂ ಅಲ್ಪಾವಧಿಯ ಕಾರ್ಯಯೋಜನೆಗಳನ್ನು ಹಾಕಿಕೊಳ್ಳಬೇಕು.

ತನ್ನ ಯೋಜನೆಗಳನ್ನು ಕಾರ್ಯಗತಗೊಳಿಸುತ್ತಿರುವಲ್ಲಿ ಕಾಲಕಾಲಕ್ಕೆ ತನ್ನ ಕಾರ್ಯನೀತಿಗಳ ಸಾಧನೆಗಳ ಬಗ್ಗೆ ಸಮುದಾಯದ ಅಭಿಪ್ರಾಯಗಳನ್ನು. ಅಭಿಪ್ರಾಯಸೂಚಿಗಳನ್ನು ಉಪಯೋಗಿಸಿ, ಕ್ರೋಡಿಕರಿಸಿ, ಸ್ವಮೌಲ್ಯಮಾಪನ ಮಾಡಬೇಕು.

ಸಾರಭೂತವಾಗಿ ಹಾಗೂ ನಿರ್ಧಾರಾತ್ಮಕವಾಗಿ ಹೇಳುವುದಾದರೆ, ಶಾಲೆ-ಸಮುದಾಯಗಳ ಶ್ರೇಷ್ಠ ಗುಣಮಟ್ಟದ ಸಂಬಂಧಗಳು ಭಾರತದ ಉಜ್ವಲ ಭವಿಷ್ಯಕ್ಕೆ, ಪ್ರಜಾಪ್ರಭುತ್ವದ ಯಶಸ್ಸಿಗೆ ದ್ಯೋತಕವಾಗಿರುತ್ತವೆ.

ವಸ್ತುಕೋಶ

ಆರನೆಯ ಹಣಕಾಸು ಆಯೋಗ

ಭಾರತ ಸಂವಿಧಾನದ 280 (1)ನೆಯ ವಿಧಿಯ ಪ್ರಕಾರ ರಾಷ್ಟ್ರಪತಿಯವರು ಪ್ರತಿ ಐದು ವರ್ಷಗಳಿಗೊಮ್ಮೆ ಒಂದು ಹಣಕಾಸು ಆಯೋಗವನ್ನು ನೇಮಿಸುವುದು ಎಲ್ಲರಿಗೂ ಗೊತ್ತಿರುವ ವಿಷಯ. ಹಣಕಾಸು ಆಯೋಗದ ಮುಖ್ಯಕಾರ್ಯಗಳೇನೆಂದರೆ: 1 ಕೇಂದ್ರ ಸರ್ಕಾರದ ಆಡಳಿತ ವ್ಯಾಪ್ತಿಗೆ ಒಳಪಟ್ಟಿರುವ ತೆರಿಗೆಗಳಲ್ಲಿ ರಾಜ್ಯ ಸರ್ಕಾರಗಳ ಪಾಲನ್ನು ನಿರ್ಧರಿಸುವುದು, 2 ಕೇಂದ್ರ ಸರ್ಕಾರದಿಂದ ಧನಸಹಾಯಕ್ಕೆ ರಾಜ್ಯ ಸರ್ಕಾರಗಳ ಕೋರಿಕೆಯನ್ನು ಪರಿಶೀಲಿಸಿ ಅದರ ಮೇಲೆ ವರದಿ ಮಾಡುವುದು ಮತ್ತು 3 ರಾಷ್ಟ್ರಪತಿಯವರು ಇನ್ನಾವುದಾದರೂ ವಿಷಯವನ್ನು ವಹಿಸಿದರೆ ಅದನ್ನು ಪರಿಶೀಲಿಸಿ ಅವರಿಗೆ ವರದಿ ಸಲ್ಲಿಸುವುದು. 1951ರಿಂದೀಚೆಗೆ ಐದು ಹಣಕಾಸು ಆಯೋಗಗಳು ನೇಮಿಸಲ್ಪಟ್ಟಿದ್ದು ಅವು ತಮ್ಮ ವರದಿಗಳನ್ನು ಸಲ್ಲಿಸಿರುತ್ತವೆ.

ಆರನೆಯ ಹಣಕಾಸು ಆಯೋಗವನ್ನು ರಾಷ್ಟ್ರಪತಿಯವರು 1972ರ ಜೂನ್ 28ರಂದು ಆಂಧ್ರ ಪ್ರದೇಶದ ಮಾಜಿ ಮುಖ್ಯಮಂತ್ರಿ ಶ್ರೀ ಕೆ. ಬ್ರಹ್ಮಾನಂದ ರೆಡ್ಡಿಯವರ ಅಧ್ಯಕ್ಷತೆಯಲ್ಲಿ ನೇಮಿಸಿದರು. ಕಲ್ಕತ್ತ ಉಚ್ಚ ನ್ಯಾಯಾಲಯದ ನ್ಯಾಯಾಧೀಶರಾದ ಸಯದ್ ಸಾದಕ್ ಅಬ್ದುಲ್ ಮಸೂದ್, ಯೋಜನಾ ಆಯೋಗದ ಸದಸ್ಯರಾದ ಡಾ. ಬಿ. ಎಸ್. ಮಿನ್ಹಾಸ್ ಮತ್ತು ತಿರುವನಂತಪುರದ ಅಭಿವೃದ್ಧಿ ಅಧ್ಯಯನ ಸಂಸ್ಥೆಯ ಡಾ. ಜೆ. ಎಸ್. ಗುಲಾಟಿಯವರು ಈ ನಿಯೋಗದ ಸದಸ್ಯರಾಗಿರುತ್ತಾರೆ. ಭಾರತ ಸರ್ಕಾರದ ಜಂಟಿ ಕಾರ್ಯದರ್ಶಿಗಳಾದ ಜಿ. ರಾಮಚಂದ್ರನ್‌ರವರು ನಿಯೋಗದ ಸದಸ್ಯರೂ ಕಾರ್ಯದರ್ಶಿಗಳೂ ಆಗಿದ್ದಾರೆ.

ಆರನೆಯ ಹಣಕಾಸಿನ ಆಯೋಗಕ್ಕೆ ವಹಿಸಿರುವ ಪರ್ಯಾಲೋಚನಾಂಶಗಳಲ್ಲಿ ಕಂಡು ಬರುವ ಒಂದು ಪ್ರಮುಖ ಲಕ್ಷಣವೆಂದರೆ, ಇದು ಹಿಂದಿನ ಹಣಕಾಸಿನ ಆಯೋಗಗಳು ಸಾಧಾರಣವಾಗಿ ಪರಿಶೀಲಿಸುತ್ತಿದ್ದ ವಿಷಯಗಳಿಗಿಂತ ಹೆಚ್ಚಿನ ಎರಡು ವಿಷಯಗಳನ್ನು ವಿಮರ್ಶಿಸಬೇಕು. 1974–79ರ ಅವಧಿಯಲ್ಲಿ ರಾಜ್ಯಗಳಲ್ಲಿ ಕಂಡುಬರುವ ಯೋಜನೇತರ ಬಂಡವಾಳದ ತೆರಪನ್ನು ಏಕರೀತಿಯಲ್ಲಿ ಮತ್ತು ಪರಸ್ಪರ ಹೋಲಿಕೆಯ ಆಧಾರದ ಮೇಲೆ ನಿರ್ಧರಿಸಬೇಕೆಂದು ಇದಕ್ಕೆ ವಹಿಸಿರುವ ಪರ್ಯಾಲೋಚನಾಂಶಗಳಲ್ಲಿ ತಿಳಿಸಿದೆ. ಪ್ರಕೃತಿಯ ದುರಂತಗಳಿಂದ ತೊಂದರೆಗೀಡಾದವರಿಗೆ ರಾಜ್ಯ ಸರ್ಕಾರಗಳು ವೆಚ್ಚ ಮಾಡುವ ಪರಿಹಾರ ಹಣವನ್ನು ಯಾವರೀತಿ ಒದಗಿಸುವುದು ಎಂಬ ಅಂಶವನ್ನೂ ಆರನೆಯ ಆಯೋಗ ವಿಮರ್ಶಿಸಬೇಕು. ಇದಕ್ಕಾಗಿ ಒಂದು ರಾಷ್ಟ್ರೀಯ ನಿಧಿಯನ್ನು ಸ್ಥಾಪಿಸುವ ಸಾಧ್ಯತೆಯನ್ನು ಕುರಿತೂ ಈ ಆಯೋಗ ಆಲೋಚಿಸುವ ಸಂಭವವಿದೆ. ಈ ನಿಧಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ತಮ್ಮ ಆದಾಯದಲ್ಲಿ ಒಂದು ನಿರ್ದಿಷ್ಟ ಭಾಗವನ್ನು ನೀಡುವ ವಿಷಯವನ್ನೂ ಸಹ ಪರಿಶೀಲಿಸುತ್ತದೆ. ಆರನೆಯ ಹಣಕಾಸಿನ ಆಯೋಗ ಐದನೆಯ ಪಂಚವಾರ್ಷಿಕ ಯೋಜನೆಯ (1974–79) ಅವಧಿಗೆ ಸಂಬಂಧಿಸಿದ್ದಾಗಿದೆ. 1973ರ ಜೂನ್ ತಿಂಗಳಲ್ಲಿ ತಮ್ಮ ವರದಿಯನ್ನು ಸಲ್ಲಿಸಬೇಕೆಂದು ಸರ್ಕಾರ ನಿಯೋಗಕ್ಕೆ ತಿಳಿಸಿರುತ್ತದೆ. ಏಕೆಂದರೆ ಐದನೆಯ ಯೋಜನೆಗೆ ಬೇಕಾದ ಹಣಕಾಸಿನ ಮೊತ್ತವನ್ನು ಅಂತಿಮವಾಗಿ ನಿರ್ಧರಿಸಲೂ 1974–75ರ ಆಯವ್ಯಯ ಪಟ್ಟಿಯನ್ನು ತಯಾರಿಸಲೂ ಅನುಕೂಲವಾಗುತ್ತದೆ.

ಈ ಆಯೋಗ ಕೇಂದ್ರದ ವರಮಾನ ತೆರಿಗೆ, ಮಾರಾಟ ಸುಂಕ ಮುಂತಾದ ಮೂಲಗಳಿಂದ ಬರುವ ಆದಾಯವನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಹೇಗೆ ಪಾಲು ಮಾಡಿಕೊಳ್ಳಬೇಕೆಂಬ ವಿಷಯದಲ್ಲಿ ತಕ್ಕ ಶಿಫಾರಸ್ಸನ್ನು ಮಾಡುತ್ತದೆ. ಭಾರತದ ಸಮುಚ್ಚಯ ನಿಧಿಯಿಂದ (ಕನ್ಸಾಲಿಡೇಟೆಡ್ ಫಂಡ್

ಆಫ್ ಇಂಡಿಯ) ರಾಜ್ಯಗಳಿಗೆ ಧನಸಹಾಯ ಮಾಡಲು ಅನುಸರಿಸಬೇಕಾದ ನಿಯಮಗಳ ವಿಷಯದಲ್ಲಿ ಸೂಕ್ತ ಸಲಹೆಗಳನ್ನು ನೀಡುವುದು ಈ ಆಯೋಗದ ಮತ್ತೊಂದು ಕರ್ತವ್ಯ. ಸಂವಿಧಾನದ 275ನೆಯ ವಿಧಿಯ ಪ್ರಕಾರ ರಾಜ್ಯಸರ್ಕಾರಗಳಿಗೆ ಎಷ್ಟು ಧನಸಹಾಯ ಮಾಡಬಹುದೆಂಬ ಅಂಶವನ್ನೂ ನಿರ್ಧರಿಸುತ್ತದೆ. ಈಗಿರುವ ಪದ್ಧತಿಯಲ್ಲಿ ಯೋಜನೆಗಳು ಯೋಜನಾ ಆಯೋಗದ ಶಿಫಾರಸನ್ನು ಆಧರಿಸಿವೆ ಎಂಬ ವಿಷಯವನ್ನು ಗಮನದಲ್ಲಿಟ್ಟುಕೊಂಡು ಮತ್ತು ಸರ್ಕಾರಿ ನೌಕರರು, ಉಪಾಧ್ಯಾಯರು ಮತ್ತು ಸ್ಥಳೀಯ ಅಭಿವೃದ್ಧಿ ಮಂಡಳಿಗಳ ನೌಕರರ ಸಂಭಾವನೆಯ ಒಟ್ಟು ಮೊತ್ತವನ್ನು ಪರಿಗಣನೆಗೆ ತೆಗೆದುಕೊಂಡು, ರಾಜ್ಯಸರ್ಕಾರಗಳ ಹಣಕಾಸಿನ ಅವಶ್ಯಕತೆಯನ್ನು ಆರನೆಯ ಹಣಕಾಸಿನ ಆಯೋಗ ನಿರ್ಧರಿಸುವ ಪ್ರಯತ್ನ ಮಾಡುತ್ತದೆ. ಹಿಂದುಳಿದಿರುವ ರಾಜ್ಯಗಳು ತಮ್ಮ ಆಡಳಿತ ಕ್ರಮದ ಮಟ್ಟವನ್ನು ಮುಂದುವರಿದಿರುವ ರಾಜ್ಯಗಳ ಮಟ್ಟಕ್ಕೆ ಇನ್ನು ಹತ್ತು ವರ್ಷಗಳಲ್ಲಿ ಏರಿಸಲು ಬೇಕಾದ ಹಣದ ಅಗತ್ಯವನ್ನೂ ಪರಿಗಣನೆಗೆ ತೆಗೆದುಕೊಳ್ಳುತ್ತದೆ.

ಒಟ್ಟಿನಲ್ಲಿ ಆರನೆಯ ಹಣಕಾಸಿನ ಆಯೋಗ ಹಿಂದಿನ ಯಾವುದೇ ಆಯೋಗಕ್ಕಿಂತಲೂ ಅಧಿಕ ರೀತಿಯಲ್ಲಿ ಕೇಂದ್ರ ಮತ್ತು ರಾಜ್ಯಗಳ ಸಂಬಂಧ ಸಮಸ್ಯೆಗಳ ಅಧ್ಯಯನ ನಡೆಸಿ ತಕ್ಕ ಶಿಫಾರಸುಗಳನ್ನು ಮಾಡಬೇಕು. ಮೊಟ್ಟಮೊದಲ ಬಾರಿಗೆ ಯೋಜನಾ ಆಯೋಗಕ್ಕೂ ಹಣಕಾಸಿನ ಆಯೋಗಕ್ಕೂ ಪರಸ್ಪರ ಹೊಂದಾಣಿಕೆಯನ್ನುಂಟುಮಾಡಲು ಯೋಜನಾ ಆಯೋಗದ ಒಬ್ಬ ಸದಸ್ಯರನ್ನು ಆರನೆಯ ಹಣಕಾಸಿನ ಆಯೋಗದಲ್ಲಿ ಸೇರಿಸಿರುವುದು ತುಂಬಾ ಸ್ವಾಗತಾರ್ಹ ವಿಚಾರ. ಆರನೆಯ ಹಣಕಾಸಿನ ಆಯೋಗದ ಸದಸ್ಯರು ಬ್ರಹ್ಮಾನಂದ ರೆಡ್ಡಿಯವರ ಅಧ್ಯಕ್ಷತೆಯಲ್ಲಿ ಜುಲೈ 14ರಂದು ನವದೆಹಲಿಯಲ್ಲಿ ತಮ್ಮ ಮೊದಲನೆಯ ಸಭೆಯನ್ನು ನಡೆಸಿ ಮುಂದಿನ ಕಾರ್ಯಕ್ರಮಗಳ ವಿಷಯವಾಗಿ ಸಮಾಲೋಚನೆ ನಡೆಸಿದ್ದಾರೆ. ಬ್ರಹ್ಮಾನಂದ ರೆಡ್ಡಿಯವರ ಆಯೋಗ ರಾಜ್ಯ ಸರ್ಕಾರಗಳು ಕೇಂದ್ರ ಸರ್ಕಾರದ ಮೇಲೆ ಹಣಕಾಸಿನ ಪಾಲುಗಾರಿಕೆ ಮತ್ತು ಸಹಾಯಗಳ ವಿಷಯಗಳಲ್ಲಿ ಹೊರಿಸುತ್ತಿರುವ ದೂರಿನ ಪಟ್ಟಿಯನ್ನು ಆದಷ್ಟು ಕಡಿಮೆ ಮಾಡಿ ರಾಜ್ಯ ಮತ್ತು ಕೇಂದ್ರ ಸರ್ಕಾರಗಳ ಸಂಬಂಧದಲ್ಲಿ ಒಂದು ಹೊಸ ಅಧ್ಯಾಯವನ್ನು ಪ್ರಾರಂಭಿಸುತ್ತದೆ ಎಂದು ಆಶಿಸಬಹುದು.

—ಡಾ. ಎಂ. ಮಾದಯ್ಯ

ಬುದ್ಧನ ಜನ್ಮಸ್ಥಳ ಭಾರತ

ಬುದ್ಧನ ತಂದೆ ಶುದ್ಧೋದನ ಮಹಾರಾಜನ ರಾಜಧಾನಿ ಕಪಿಲವಸ್ತುವೆಂಬ ನಗರ. ಬುದ್ಧ ಜನಿಸಿದ್ದು ಇಲ್ಲಿಯೇ. ಈ ನಗರ ನೇಪಾಳದಲ್ಲಿದೆಯೆಂಬುದು ಇತ್ತೀಚಿನ ವರೆಗಿನ ಎಲ್ಲರ ನಂಬಿಕೆಯಾಗಿದ್ದಿತು. 1897ರಲ್ಲಿ ಫ್ಯೂರರ್ ಎಂಬ ಜರ್ಮನ್ ವಿದ್ವಾಂಸ ನೇಪಾಳದಲ್ಲಿರುವ ಈ ನಗರವನ್ನು ಪತ್ತೆ ಹಚ್ಚಿ ಇದೇ ಬುದ್ಧನ ಜನ್ಮಸ್ಥಳವೆಂದು ತೀರ್ಮಾನಿಸಿದ್ದ. ಈ ಸಿದ್ಧಾಂತದ ಬಗೆಗೆ ಆಗಾಗ್ಗೆ ಸಂದೇಹಗಳು ಕೇಳಿಬರುತ್ತಿದ್ದುವು. ಆದರೆ ಶಾಸ್ತ್ರೀಯವಾಗಿ ಇದರ ವಿಷಯದಲ್ಲಿ ಸಂಶೋಧನೆಯನ್ನು ನಡೆಸಿರಲಿಲ್ಲ. ಭಾರತೀಯ ಪುರಾತತ್ತ್ವ ಸರ್ವೇಕ್ಷಣದಲ್ಲಿ ಡೈರೆಕ್ಟರ್ ಆಗಿರುವ ಶ್ರೀಮತಿ ದೇಬಲ ಮಿತ್ರರವರು ನೇಪಾಳದ ಈ ಸ್ಥಳದಲ್ಲಿ ಉತ್ಖನನವನ್ನು ನಡೆಸಿದರು. ಈ ಉತ್ಖನನದಿಂದ ಹೊರಬಂದ ಮುಖ್ಯ ಸಂಗತಿಯೆಂದರೆ ಈ ಕಪಿಲವಸ್ತು ನಗರದ ಪ್ರಾಚೀನತೆ ಕ್ರಿ.ಪೂ. ಮೂರನೆಯ ಶತಮಾನಕ್ಕಿಂತ ಹಿಂದಿನದಾಗಿರಲಿಲ್ಲ. ಅಂದರೆ ಕ್ರಿ. ಪೂ. ಆರನೆಯ ಶತಮಾನದ ಬುದ್ಧನಿಗೆ ಸಂಬಂಧಿಸಿದ ನಗರ ಇದಾಗಿರಲು ಸಾಧ್ಯವಿಲ್ಲವೆಂದು ಇದರಿಂದ ಸ್ಪಷ್ಟವಾಯಿತು. ಆದರೆ ಆ ನಗರ ಯಾವುದು ಎಂದು ಮಾತ್ರ ತಿಳಿಯಲಿಲ್ಲ.

ಉತ್ತರ ಪ್ರದೇಶದ ಬಸ್ತಿ ಜಿಲ್ಲೆಯ ಪಿಪ್ರಾವ ಎಂಬುದು ಪ್ರಾಚೀನ ಬೌದ್ಧ ಸ್ಥಳ. ಇತ್ತೀಚೆಗೆ ಇಲ್ಲಿ ಕೆ. ಎಮ್. ಶ್ರೀವಾಸ್ತವ ಎಂಬ ವಿದ್ವಾಂಸರು ಉತ್ಖನನವನ್ನು ನಡೆಸಿದರು. ಇಲ್ಲಿ ಮೂವತ್ತೊಂದು ಮಣ್ಣಿನ ಮುದ್ರೆಗಳು ದೊರಕಿದುವು. ಅವುಗಳ ಮೇಲೆ 'ಮಹಾಕಪಿಲವಸ್ತು ಭಿಕ್ಷು ಸಂಘ' ಮತ್ತು 'ಓಂ ದೇವಪುತ್ರ ವಿಹಾರೆ ಕಪಿಲವಸ್ತು ಭಿಕ್ಷು ಸಂಘ' ಎಂಬ ಬರಹಗಳಿವೆ. ಕಪಿಲವಸ್ತುವಿನಲ್ಲಿದ್ದ ಬೌದ್ಧ ವಿಹಾರಗಳ ಭಿಕ್ಷುಗಳು ಈ ಮುದ್ರೆಗಳನ್ನು ಬಳಸುತ್ತಿದ್ದರು. ಪಿಪ್ರಾವದಲ್ಲಿ ಇದೇ ಕಾಲದ ಇಟ್ಟಿಗೆಯ

ವಿಹಾರಗಳೂ ದೊರಕಿವೆ. ಈ ಬರಹಗಳಿಂದ ಇದೇ ಕಪಿಲವಸ್ತು ನಗರವೆಂಬುದು ಖಚಿತಪಟ್ಟಿದೆ. ಇನ್ನೂ ಇಲ್ಲಿ ಉತ್ಖನನಗಳು ನಡೆಯುತ್ತಿದ್ದು ಕ್ರಿ.ಪೂ. ಆರನೆಯ ಶತಮಾನಕ್ಕೆ ಸೇರಿದ ಕುರುಹುಗಳನ್ನು ಪತ್ತೆ ಮಾಡುವ ಕಾರ್ಯ ಭರದಿಂದ ನಡೆಯುತ್ತಿದೆ. ಶೀಘ್ರದಲ್ಲಿಯೇ ಬುದ್ಧ ವಾಸಮಾಡುತ್ತಿದ್ದ ಅರಮನೆ ಮುಂತಾದವು ಬೆಳಕಿಗೆ ಬರಲಿವೆ. ಬುದ್ಧ ಭಾರತದಲ್ಲಿಯೇ ಜನ್ಮತಾಳಿದ; ನೇಪಾಳವಲ್ಲಲ್ಲ ಎಂಬುದು ಇದರಿಂದ ಖಚಿತವಾಗುತ್ತದೆ. ಒಟ್ಟಿನಲ್ಲಿ ಭಾರತೀಯ ಪುರಾತತ್ತ್ವದಲ್ಲಿ ಇದೊಂದು ಮಹತ್ಸಂಶೋಧನೆ ಎನ್ನುವುದರಲ್ಲಿ ಸಂದೇಹವೇ ಇಲ್ಲ.

—ಎ. ವಿ. ಎನ್.

ಅತ್ಯಂತ ಪ್ರಾಚೀನ ವ್ಯವಸಾಯ ಭೂಮಿ

ಪುರಾತತ್ತ್ವ ಉತ್ಖನನಗಳಿಂದ ವೈವಿಧ್ಯಪೂರ್ಣವಾದ ವಸ್ತುಗಳು ದೊರೆಯುತ್ತವೆ. ಆ ವಸ್ತುಗಳಿಂದ ಆ ಕಾಲದ ಪ್ರಾಚೀನ ಜನರ ಜೀವನವನ್ನು ಪುರಾತತ್ತ್ವಜ್ಞ ತಿಳಿದುಕೊಳ್ಳುತ್ತಾನೆ. ಬಹು ಪ್ರಾಚೀನ ಕಾಲದಿಂದಲೂ ಭೂಮಿಯನ್ನು ಉತ್ತು ಬೆಳೆಗಳನ್ನು ಬೆಳೆಯುವ ಪದ್ಧತಿ ಇತ್ತೆಂದು ಆ ಕಾಲದ ನೇಗಿಲು ಮುಂತಾದವುಗಳಿಂದ ಮಾತ್ರ ತಿಳಿಯಬಹುದಾಗಿತ್ತು. ಆದರೆ ಇತ್ತೀಚೆಗೆ ಭಾರತೀಯ ಪುರಾತತ್ತ್ವ ಸರ್ವೇಕ್ಷಣ ಇಲಾಖೆಯ ಸುಪ್ರಸಿದ್ಧ ವಿದ್ವಾಂಸರಾದ ಬಿ. ಬಿ. ಲಾಲ್ ಮತ್ತು ಬಿ. ಕೆ. ಥಾಪರ್ ಅವರ ನಿರ್ದೇಶನದಲ್ಲಿ ಕಾಲಿಬಂಗನ್ ಎಂಬಲ್ಲಿ ನಡೆದ ಉತ್ಖನನದಿಂದ. ಉತ್ತ ಭೂಮಿ ಬೆಳಕಿಗೆ ಬಂದಿದೆ. ರಾಜಸ್ಥಾನದ ಗಂಗಾನಗರ್ ಜಿಲ್ಲೆಯಲ್ಲಿರುವ ಕಾಲಿಬಂಗನ್ ಸಿಂಧೂ ನಾಗರಿಕತೆಯ ಅವಶೇಷಗಳನ್ನುಳ್ಳ ಮುಖ್ಯ ನೆಲೆ. ಹರಪ್ಪ ಸಂಸ್ಕೃತಿಗಿಂತಲೂ ಪುರಾತನವಾದ ಸಂಸ್ಕೃತಿಯೊಂದು ಇಲ್ಲಿ ಕಾಣಿಸುತ್ತದೆ. ಈ ಹರಪ್ಪ ಪೂರ್ವ ಸಂಸ್ಕೃತಿ ಅನೇಕ ವಿಷಯಗಳಲ್ಲಿ ಹರಪ್ಪ ಸಂಸ್ಕೃತಿಗಿಂತ ಭಿನ್ನವಾದ್ದು. ಹರಪ್ಪ ಸಂಸ್ಕೃತಿ ರೂಪುಗೊಳ್ಳಲು ಇದು ಕಾರಣವಾಗಿದೆಯೆನ್ನುವುದು ಇನ್ನೂ ವಿವಾದಾಸ್ಪದ ವಿಷಯವಾಗಿಯೇ ಉಳಿದಿದೆ.

ಇದಕ್ಕಿಂತಲೂ ಮುಖ್ಯವಾಗಿ. ಇಲ್ಲಿ ದೊರಕಿರುವ ಉತ್ತಭೂಮಿ ಪ್ರಪಂಚದಲ್ಲೇ ಎಲ್ಲೂ ದೊರೆಯದೆ ಇರುವಂಥ ಒಂದು ಮಾಹಿತಿಯನ್ನು ಒದಗಿಸಿದೆ. ಅಷ್ಟೇ ಅಲ್ಲದೆ, ಭಾರತೀಯ ಪುರಾತತ್ತ್ವಜ್ಞರು ಉತ್ಖನನ ತಂತ್ರದಲ್ಲಿ ವಿಷ್ಟೊಂದು ಮುಂದುವರಿದಿರುವರೆಂಬುದಕ್ಕೂ ಇದು ಸಾಕ್ಷಿಯಾಗಿದೆ. ಹರಪ್ಪ-ಪೂರ್ವ ಕಾಲದ ಸಂಸ್ಕೃತಿಯ ಒಂದು ವ್ಯವಸಾಯ ಭೂಮಿ ಕಾಲಿಬಂಗನ್ ನೆಲೆಯ ಆಗ್ನೇಯದಲ್ಲಿ ದೊರಕಿದೆ. ಉತ್ತರ-ದಕ್ಷಿಣ ಮತ್ತು ಪೂರ್ವ–ಪಶ್ಚಿಮವಾದ ಎರಡು ರೀತಿಯ ನೇಗಿಲು ಗುರುತುಗಳು ಸರಳರೇಖೆಯಲ್ಲಿರುವುದು ಗಮನಾರ್ಹ ಅಂಶ. ಉತ್ತರ–ದಕ್ಷಿಣಾಭಿಮುಖವಾದ ಎರಡು ರೇಖೆಗಳ ಮಧ್ಯೆ ಹೆಚ್ಚಿನ ಅಂತರವೂ. ಪೂರ್ವ–ಪಶ್ಚಿಮಾಭಿಮುಖ ರೇಖೆಗಳ ಮಧ್ಯೆ ಕಡಿಮೆ ಅಂತರವೂ ಇರುವುದೂ ಗಮನಾರ್ಹ. ಈ ರೇಖೆಗಳನ್ನು ಗಮನಿಸಿದಾಗ, ಭೂಮಿಯನ್ನು ಪೂರ್ವ–ಪಶ್ಚಿಮವಾಗಿ ಮೊದಲು ಉತ್ತು. ಅನಂತರ ಉತ್ತರ–ದಕ್ಷಿಣವಾಗಿ ಉತ್ತಿರುವರೆಂಬುದೂ ಗೊತ್ತಾಗುತ್ತದೆ. ಈ ರೀತಿ ಎರಡು ದಿಕ್ಕಿನಲ್ಲಿಯೂ ಉಳಲು ಕಾರಣವೇನು ಎಂಬುದು ಸೋಜಿಗದ ಸಂಗತಿಯೇ ಆಗಿತ್ತು. ಕಾಲಿಬಂಗನ್ ಮತ್ತು ಅದರ ಸುತ್ತಮುತ್ತಲ ಪ್ರದೇಶದಲ್ಲಿ ಇಂದಿಗೂ ಈ ರೀತಿಯೇ ವ್ಯವಸಾಯ ಮಾಡುವ ಪದ್ಧತಿ ಪ್ರಚಾರದಲ್ಲಿದೆ. ಒಂದು ದಿಕ್ಕಿನಲ್ಲಿ ಹುರುಳಿಯನ್ನೂ ಮತ್ತೊಂದು ದಿಕ್ಕಿನಲ್ಲಿ ಸಾಸುವೆಯನ್ನೂ ಬೆಳೆಸುವ ಪದ್ಧತಿ ಈಗಲೂ ಅಲ್ಲಿದೆ. ಅಂದರೆ ಒಂದೇ ಭೂಮಿಯಲ್ಲಿ ಒಂದೇ ಸಮಯದಲ್ಲಿ ಎರಡು ಭಿನ್ನ ಬೆಳೆಗಳನ್ನು ಬೆಳೆಯುವುದೇ ಆಗಿನ ಪದ್ಧತಿಯೂ ಆಗಿತ್ತೆಂಬುದು ಸ್ಪಷ್ಟವಾಗುತ್ತದೆ. ಇಂಗಾಲ-14 ರೀತಿಯ ಕಾಲ ನಿರ್ಣಯದಂತೆ ಕಾಲಿಬಂಗನ್‌ನಲ್ಲಿ ಕಾಣಿಸಿಕೊಂಡಿರುವ ಹರಪ್ಪ–ಪೂರ್ವ ಸಂಸ್ಕೃತಿ ಕ್ರಿ.ಪೂ. 2350ಕ್ಕೆ ಸೇರುತ್ತದೆ. ಆದುದರಿಂದ ಈ ಸಂಸ್ಕೃತಿಯ ಸ್ತರದಲ್ಲಿ ದೊರಕಿರುವ ಈ ಭೂಮಿ ಇದೇ ಕಾಲಕ್ಕೆ ಸೇರುತ್ತದೆ. ಒಟ್ಟಿನಲ್ಲಿ ಹೇಳುವುದಾದರೆ ಇದೊಂದು ಮಹತ್ತ್ವಪೂರ್ಣ ಸಂಶೋಧನೆ ಮತ್ತು ಭಾರತೀಯ ಪುರಾತತ್ತ್ವದಲ್ಲಿ ಒಂದು ಮೈಲಿಗಲ್ಲು. ಇಷ್ಟೊಂದು ಪ್ರಾಚೀನವಾದ ಈ ರೀತಿಯ ಉತ್ತ ಭೂಮಿ ಪ್ರಪಂಚದಲ್ಲಿ ದೊರಕಿರುವುದು ಇದೇ ಮೊದಲು.

—ಎ. ವಿ. ಎನ್.

ಎಪಿಗ್ರಾಫಿಯ ಕರ್ನಾಟಕ ಪ್ರಥಮ ಸಂಪುಟ ಬಿಡುಗಡೆ

ಡಾ. ಬಿ. ಎಲ್. ರೈಸ್ ಅವರು ಪ್ರಕಟಿಸಿದ್ದ ಎಪಿಗ್ರಾಫಿಯ ಕರ್ನಾಟಿಕದ ಪರಿಷ್ಕರಣ ಮತ್ತು ಪುನರ್ ಮುದ್ರಣ ಕಾರ್ಯವನ್ನು ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆ ಕೈಗೆತ್ತಿಕೊಂಡಿದೆ. ಕೊಡಗು ಜಿಲ್ಲೆಗೆ ಸಂಬಂಧಿಸಿದ ಅದರ ಮೊದಲ ಸಂಪುಟವನ್ನು 1972ರ ಅಕ್ಟೋಬರ್ 21ರಂದು ಭಾರತ ಸರ್ಕಾರದ ಪುರಾತನ ಶಾಸನ ವಿಭಾಗಗಳ ಶಾಸನತಜ್ಞ ಡಾ. ಜಿ. ಎಸ್. ಗಾಯಿ ಅವರು ಬಿಡುಗಡೆ ಮಾಡಿದರು. ಕುಲಪತಿ ಪ್ರೊ. ದೇ. ಜವರೇಗೌಡ ಅವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು.

ಡಾ. ಗಾಯಿ ಅವರು ಮಾತನಾಡುತ್ತ, "ಡಾ. ರೈಸ್ ಅವರ ಎಪಿಗ್ರಾಫಿಯ ಕರ್ನಾಟಿಕ ಭಾರತದಲ್ಲಿಯೇ ಪ್ರಥಮ ಕೃತಿ. ಇತರ ದೇಶಗಳಲ್ಲಿ ಇಂಥ ಕೃತಿಗಳು ಇನ್ನೂ ಹೊರಬೀಳದಿದ್ದ ಕಾಲದಲ್ಲಿ ಇವನ್ನು ಡಾ. ರೈಸ್ ಪ್ರಕಟಿಸಿದ್ದು ಹೆಮ್ಮೆಯ ಸಂಗತಿ. ಎಪಿಗ್ರಾಫಿಯ ಇಂಡಿಕ 1888ರಲ್ಲಿ ಪ್ರಕಟವಾಯಿತು. ಡಾ. ರೈಸರ ಕೆಲಸ ಪ್ರಪಂಚದಲ್ಲೇ ಅದ್ಭುತವಾದದ್ದು. 1886ರಲ್ಲೇ ಸುಮಾರು 9,000 ಶಾಸನಗಳ ಸಂಗ್ರಹಣೆ ಮತ್ತು ಪ್ರಕಟಣೆಯಂಥ ಸಾಹಸ ಕಾರ್ಯವನ್ನು ರೈಸ್ ಕೈಗೊಂಡರು." ಎಂದರು. ಅವರು ಮುಂದುವರಿದು ಮಾತನಾಡುತ್ತ, ಇದರ ಪ್ರತಿಗಳು ದುರ್ಲಭವಾಗಿದ್ದ ಕಾಲದಲ್ಲಿ ಪರಿಷ್ಕರಣ ಮತ್ತು ಪುನರ್ಮುದ್ರಣಕಾರ್ಯವನ್ನು ಕೈಗೊಂಡ ಕನ್ನಡ ಅಧ್ಯಯನ ಸಂಸ್ಥೆಯನ್ನು, ವಿಶೇಷವಾಗಿ ಅದರ ನಿರ್ದೇಶಕ ಡಾ. ಹಾ. ಮಾ. ನಾಯಕ ಅವರನ್ನು ಶ್ಲಾಘಿಸಿದರು.

ಅಧ್ಯಕ್ಷತೆ ವಹಿಸಿದ್ದ ಕುಲಪತಿ ಪ್ರೊ. ದೇಜಗೌ ಅವರು ಮಾತನಾಡುತ್ತ, "ರೆ. ಕಿಟ್ಟೆಲ್ ಮತ್ತು ಡಾ. ರೈಸ್ ಅವರಿಬ್ಬರೂ ಕನ್ನಡ ವಿದ್ಯಾಪ್ರಪಂಚಕ್ಕೆ ಅಮೂಲ್ಯ ಸೇವೆ ಸಲ್ಲಿಸಿದ್ದಾರೆ". ಎಂದರು.

ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರಾದ ಡಾ. ಹಾ. ಮಾ. ನಾಯಕ ಅವರು ಮಾತನಾಡುತ್ತ, "ಎಪಿಗ್ರಾಫಿಯ ಕರ್ನಾಟಕದ ಪರಿಷ್ಕರಣೆಗೆ ಸರ್ಕಾರ 12 ಲಕ್ಷ ರೂಪಾಯಿಗಳನ್ನು ನೀಡಿದೆ. ಡಾ. ರೈಸ್ 8.869 ಶಾಸನಗಳನ್ನು ಸಂಗ್ರಹಿಸಿ 1884–1906ರಲ್ಲಿ 12 ಸಂಪುಟಗಳಲ್ಲಿ ಪ್ರಕಟಿಸಿದರು. ಈ ಸಂಪುಟಗಳಲ್ಲಿರುವ ಶಾಸನಗಳು ಹಳೆಯ ಮೈಸೂರಿನ ಎಂಟು ಜಿಲ್ಲೆಗಳಿಗೂ ಕೊಡಗಿಗೂ ಸಂಬಂಧಿಸಿದ್ದು. ಈಗಿನ ಸಂಪಾದಕ ಮಂಡಳಿ ಪ್ರಥಮಸಂಪುಟದಲ್ಲಿ ಹೊಸದಾಗಿ 32 ಶಾಸನಗಳನ್ನು ಸಂಗ್ರಹಿಸಿದೆ ಎಂದು ನುಡಿದರು. ಈ ಯೋಜನೆಯಲ್ಲಿ ವಿಶೇಷ ಆಸಕ್ತಿ ವಹಿಸಿದ್ದ ರಾಜ್ಯದ ಹಿಂದಿನ ಮಂತ್ರಿಮಂಡಲವನ್ನು ಸ್ಮರಿಸಿದರು.

ಶಾಸನತಜ್ಞ ಡಾ. ಬಿ. ಆರ್. ಗೋಪಾಲ್ ಅವರು ಸಂದೇಶಗಳನ್ನು ಓದಿದರು.

—ಜಿ. ಎಸ್. ಭಟ್ಟ

ಪುಸ್ತಕಲೋಕ

ನಮ್ಮ ಉನ್ನತ ಶಿಕ್ಷಣದ ಸಮಸ್ಯಾತ್ರಯ ಮತ್ತು ನಿವಾರಣೋಪಾಯಗಳು

ಸರದಾರ್ ಕೆ. ಬಸವರಾಜೇ ಅರಸರು ತಮ್ಮ ಧರ್ಮಪತ್ನಿ ರಾಜಕುಮಾರಿ ಲೀಲಾವತಿಯವರ ಸ್ಮರಣೆಗಾಗಿ ಇಟ್ಟ ಪ್ರದುವಟ್ಟಿನಿಂದ ಮೈಸೂರು ವಿಶ್ವವಿದ್ಯಾನಿಲಯ ಏರ್ಪಡಿಸುತ್ತಿರುವ ರಾಜಕುಮಾರಿ ಲೀಲಾವತಿ ಸ್ಮಾರಕ ಉಪನ್ಯಾಸಮಾಲೆಯಲ್ಲಿ ಶ್ರೀ ಜೆ. ಪಿ. ನಾಯಕ್ ಅವರು ಮಾಡಿದ ಎರಡು ಉಪನ್ಯಾಸಗಳನ್ನೊಳಗೊಂಡ ಕೃತಿಯಿದು.* ಇವರು ಸುಮಾರು ನಲವತ್ತು ವರ್ಷಗಳಿಂದ ಶಿಕ್ಷಣದ ವಿವಿಧ ಕ್ಷೇತ್ರಗಳಲ್ಲಿ ದುಡಿದು ಅಲ್ಲಿನ ಸಮಸ್ಯೆಗಳನ್ನು ಪರಿಚಯ ಮಾಡಿಕೊಂಡಿರುವುದರ ಜೊತೆಗೆ ಶಿಕ್ಷಣದ ಇತಿಹಾಸವೇ ಮುಂತಾದ ಅನೇಕ ಕೃತಿಗಳನ್ನೂ ರಚಿಸಿರುವರು. ಸದ್ಯದಲ್ಲಿ ಕೇಂದ್ರ ಸರ್ಕಾರದ ಶಿಕ್ಷಣ ಸಚಿವ ಶಾಖೆಯ ಸಲಹೆಗಾರರಾಗಿದ್ದುಕೊಂಡು ನಮ್ಮ ಶಿಕ್ಷಣ ಕ್ಷೇತ್ರದ ಮೇಲೆ ತಮ್ಮ ಪ್ರಭಾವವನ್ನು ಬೀರುತ್ತಿರುವರು. ಪ್ರಕೃತ ಕೃತಿಯಲ್ಲಿ ಉನ್ನತ ಶಿಕ್ಷಣಕ್ಕೆ ಸಂಬಂಧಿಸಿದಂತೆ, ಪ್ರವೇಶಾವಕಾಶ, ರಚನಾ ವ್ಯವಸ್ಥೆ ಮತ್ತು ಶಿಕ್ಷಣದ ಮಟ್ಟ–ಈ ಮೂರು ಅಂಶಗಳನ್ನು ಪರಿಶೀಲಿಸಿರುವರು.

ಸ್ವಾತಂತ್ರ್ಯಾನಂತರದ ದಿನಗಳಲ್ಲಿ ಭಾರತದಲ್ಲಿ ಉನ್ನತ ಶಿಕ್ಷಣ ಅಗಾಧವಾಗಿ ವಿಸ್ತರಿಸಿದೆ. ವಿಶ್ವವಿದ್ಯಾನಿಲಯಗಳ ಸಂಖ್ಯೆ ಐದಾರು ಪಟ್ಟು ಹೆಚ್ಚಿದೆ. ಜೊತೆಗೆ ಉನ್ನತ ಶಿಕ್ಷಣಕ್ಕೆ ಮೀಸಲಾಗಿರುವ ಪರಿಗಣಿತ ವಿಶ್ವವಿದ್ಯಾನಿಲಯಗಳೂ ರಾಷ್ಟ್ರೀಯ ಪ್ರಾಮುಖ್ಯದ ಸಂಸ್ಥೆಗಳೂ ಅಸ್ತಿತ್ವಕ್ಕೆ ಬಂದಿವೆ. ಇದರ ಫಲವಾಗಿ ವಿದ್ಯಾರ್ಥಿಗಳ ಸಂಖ್ಯೆ ಸುಮಾರು ಹದಿನೈದು ಪಟ್ಟು ಹೆಚ್ಚಿದೆ. ಜೊತೆಗೆ ವರ್ಷಂಪ್ರತಿ ಸೇ. 13ರಂತೆ ಹೆಚ್ಚುತ್ತಿದೆ. ಉನ್ನತ ಶಿಕ್ಷಣ ಕ್ಷೇತ್ರ ವಿಸ್ತರಿಸಿದಂತೆ ಅಲ್ಲಿನ ಸಮಸ್ಯೆಗಳೂ ಹೆಚ್ಚಿಕೊಂಡಿವೆ. ಅವುಗಳಲ್ಲಿ ಕೆಲವಂತೂ ತೀವ್ರರೀತಿಯವಾಗಿದ್ದು ಅಗತ್ಯವಾಗಿ ಗಮನ ಕೊಡಬೇಕಾಗಿದೆ. ಪ್ರವೇಶ ರಚನಾವ್ಯವಸ್ಥೆ, ಶಿಕ್ಷಣದ ಮಟ್ಟ–ಇವು ಮೂರೂ ಅಂಥ ಉಗ್ರರೂಪಿನವು. ಇವು ಪ್ರತ್ಯೇಕವಾಗಿ ತೋರಿದರೂ ಒಂದಕ್ಕೊಂದಕ್ಕೆ ಸಂಬಂಧಿಸಿವೆ. ಲೇಖಕರು ಇವನ್ನು ಪರಿಶೀಲಿಸಿ ಪರಿಹಾರವನ್ನು ಸೂಚಿಸಲು ಯತ್ನಿಸಿರುವರು.

ಎಲ್ಲರಿಗೂ ಪ್ರವೇಶಾವಕಾಶವನ್ನು ದೊರಕಿಸಿ ಸಾಮಾಜಿಕ ನ್ಯಾಯವನ್ನು ಸ್ಥಾಪಿಸುವ ಭರದಲ್ಲಿ ಶಿಕ್ಷಣ ಸೌಲಭ್ಯವನ್ನು ವಿಸ್ತರಿಸಿದ್ದರಿಂದ ಅಲ್ಲಿನ ಆಡಳಿತದಲ್ಲಿ ದಕ್ಷತೆ ಕುಂದಿದೆ; ಕಾಲೇಜುಗಳ ಶಿಕ್ಷಣದ ಮಟ್ಟ ಹಾಗೂ ತೀವ್ರವೇಗದಲ್ಲಿ ವಿಸ್ತರಿಸುತ್ತಿರುವ ಕಲಾ, ಶಾಸ್ತ್ರ, ವಾಣಿಜ್ಯ ಮತ್ತು ನ್ಯಾಯಶಾಸ್ತ್ರದ ಕಾಲೇಜುಗಳಲ್ಲಿ ಶಿಕ್ಷಣದ ಮಟ್ಟ ಇಳಿದಿದೆ; ಶಿಕ್ಷಣಮಟ್ಟದ ಇಳಿತಾಯ. ಸದ್ಯದ ಜೀವನ ಸಮಸ್ಯೆಗೆ ಅದರ ಅನುಪಯುಕ್ತತೆ, ಪದವಿಗೂ ಉದ್ಯೋಗಕ್ಕೂ ಎದ್ದುಕೊಂಡಿರುವ ಅಂತರ ಇವುಗಳಿಂದಾಗಿ ವಿದ್ಯಾರ್ಥಿಗಳಲ್ಲಿ ಶಿಕ್ಷಣದಲ್ಲಿ ಇರಬೇಕಾದ ಪ್ರೇರಕಶಕ್ತಿ ಕುಂದಿದೆ; ಇದಕ್ಕೆ ಬೆನ್ನು ಹತ್ತಿದಂತೆ ವಿದ್ಯಾರ್ಥಿ

---

* Access, Structure and Quality in Higher Education : ಲೇ. : ಜೆ. ಪಿ. ನಾಯಕ್ ; ಪ್ರ. : ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ; ಪುಟಗಳು : ಡೆ. 1/8 30 ; ಬೆಲೆ. 3 ರೂ., ವಿದೇಶಗಳಿಗೆ 2 ಡಾಲರ್ (ಅಂಚೆವೆಚ್ಚ ಸೇರಿ)

ಗಳಲ್ಲಿ ಅಶಾಂತಿ ತಾಂಡವವಾಡುತ್ತಿದೆ. ದಿನದಿನಕ್ಕೂ ನಿರುದ್ಯೋಗದ ಸಮಸ್ಯೆ ಹೆಚ್ಚುತ್ತಿದೆ. ಇವುಗಳ ಪರಿಹಾರಕ್ಕೆ ಎರಡು ಮಾರ್ಗಗಳಿವೆ–ಅಗತ್ಯವಾದಷ್ಟು ಹಣವನ್ನು ಮೀಸಲಿಟ್ಟು ಅಧಿಕಗೊಂಡಿರುವ ವಿದ್ಯಾರ್ಥಿ ಸಂಖ್ಯೆಗನುಗುಣವಾಗಿ ಎಲ್ಲ ಸೌಲಭ್ಯಗಳನ್ನೂ ಉತ್ತಮಪಡಿಸಬೇಕು; ಇಲ್ಲವಾದರೆ ಇರುವ ಸೌಲಭ್ಯಗಳಿಗೆ ಒಪ್ಪುವಷ್ಟು ವಿದ್ಯಾರ್ಥಿಗಳನ್ನು ಮಾತ್ರ ಸೇರಿಸಿಕೊಳ್ಳುವ, ಎಂದರೆ ಅರ್ಹ ವಿದ್ಯಾರ್ಥಿಗಳಿಗೆ ಮಾತ್ರ ಅವಕಾಶವೀಯುವ ಪ್ರವೇಶ ಪದ್ಧತಿಯನ್ನು ಆಚರಣೆಗೆ ತರಬೇಕು. ಸದ್ಯದ ಸ್ಥಿತಿಯಲ್ಲಿ ಮೊದಲನೆಯ ಸಲಹೆ ಹಣದ ಅಭಾವದಿಂದ ದುಸ್ಸಾಧ್ಯವೆನಿಸುತ್ತದೆ. ಎರಡನೆಯ ಸಲಹೆಯಂತೂ ನಮ್ಮ ರಾಜಕೀಯ ಮತ್ತು ಸಾಮಾಜಿಕ ದೃಷ್ಟಿಯಲ್ಲಿ ಆಚರಣೀಯವೆನಿಸುವಂತಿಲ್ಲ. ಈ ಎರಡೂ ರೀತಿಯ ಪರಿಹಾರಕ್ರಮಗಳನ್ನು ಅನುಸರಿಸಲಾಗದೆ ಸಮಸ್ಯೆ ದಿನದಿನಕ್ಕೂ ಉಲ್ಬಣಗೊಳ್ಳುತ್ತಿದೆ. ಲೇಖಕರು ಈ ಎರಡು ಕ್ರಮಗಳಿಗೂ ಭಿನ್ನವೆನಿಸುವ ಮೂರನೆಯ ಪರಿಹಾರಕ್ರಮವನ್ನು ಸೂಚಿಸಲು ಯತ್ನಿಸಿರುವರು. ಅದನ್ನು ಮುಂದೆ ಸೂಚಿಸಿದೆ.

1 ಪ್ರವೇಶಾವಕಾಶ

ಪ್ರವೇಶಾವಕಾಶದ ಅಭಾವದಿಂದ ಉದ್ಭವಿಸಿರುವ ಅಹಿತ ಪ್ರಸಂಗಗಳನ್ನು ನಿವಾರಿಸಲು, ಹಾಗೂ ತಕ್ಕಷ್ಟು ಸಾಮಾಜಿಕ ನ್ಯಾಯಕ್ಕೆ ಅವಕಾಶ ಕಲ್ಪಿಸಲು ನೆರವಾಗುವಂತೆ ಪ್ರವೇಶ ಸೌಲಭ್ಯದ ಆಧಾರದ ಮೇಲೆ ಉನ್ನತ ಶಿಕ್ಷಣವನ್ನು (1) ಅರ್ಹ ವಿದ್ಯಾರ್ಥಿಗಳಿಗೆ ಮತ್ತು (2) ಆಯ್ದ ವಿದ್ಯಾರ್ಥಿಗಳಿಗೆ ಎಂದು ಎರಡು ಕ್ಷೇತ್ರಗಳನ್ನಾಗಿ ವಿಂಗಡಿಸಬೇಕು. ವೈದ್ಯಶಾಸ್ತ್ರ, ಕೃಷಿ ಮತ್ತು ಇಂಜಿನಿಯರಿಂಗ್ ಕಾಲೇಜುಗಳೂ ಶಿಕ್ಷಣದ ಉನ್ನತ ಮಟ್ಟವನ್ನುಳಿಸಿಕೊಂಡು ಬರುತ್ತಿರುವ ಕಲೆ, ವಿಜ್ಞಾನ, ವಾಣಿಜ್ಯ, ನ್ಯಾಯ, ಮತ್ತು ತಾಂತ್ರಿಕ ಕಾಲೇಜುಗಳೂ ಮೊದಲನೆಯ ಕ್ಷೇತ್ರಕ್ಕೆ ಸೇರುತ್ತವೆ. ಅವು ದೇಶದ ಎಲ್ಲ ಭಾಗಗಳಲ್ಲೂ ಹರಡಿರುವಂತೆ ವ್ಯವಸ್ಥೆಗೊಳಿಸಿ ಅಲ್ಲಿಗೆ ಅರ್ಹ ವಿದ್ಯಾರ್ಥಿಗಳನ್ನು ಮಾತ್ರ ಸೇರಿಸಬೇಕು. ಈ ಕ್ಷೇತ್ರದಲ್ಲಿ ಶಿಕ್ಷಣದ ಮಟ್ಟವನ್ನು ಉತ್ತಮಪಡಿಸಲು ಯತ್ನಿಸಬೇಕು. ಅಲ್ಲಿಗೆ ಸೇರಲು ಸಾಮಾಜಿಕವಾಗಿ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗಾಗಿ ಕೆಲವು ಸ್ಥಾನಗಳನ್ನು ಮೀಸಲಿಟ್ಟು ಅಂಥ ವಿದ್ಯಾರ್ಥಿಗಳಿಗೆ ವೈಯಕ್ತಿಕ ಗಮನ, ವಿದ್ಯಾರ್ಥಿವೇತನ ಮುಂತಾದ ಅಧಿಕ ಸೌಲಭ್ಯಗಳನ್ನೊದಗಿಸಿ ಅವರು ಶಿಕ್ಷಣದಲ್ಲಿ ಇತರರೊಡನೆ ಸರಿದೂಗಲು ನೆರವು ನೀಡಬೇಕು. ಸಾಮಾಜಿಕವಾಗಿ ಮುಂದುವರಿದ ಹಾಗೂ ನಗರದ ವರ್ಗದವರೇ ಈ ಕ್ಷೇತ್ರದಲ್ಲಿ ಸೇರಿಕೊಂಡು ಹಿಂದುಳಿದ ವರ್ಗದ ವಿದ್ಯಾರ್ಥಿಗಳಿಗೆ ಅವಕಾಶ ಇಲ್ಲದಂತೆ ಮಾಡುವುದನ್ನು ತಡೆಗಟ್ಟಬೇಕು. ರಾಜಕೀಯ ಅಥವಾ ಇತರ ಒತ್ತಡಗಳಿಂದ ಸ್ಥಾನ ಗಳಿಸಲು ಅವಕಾಶವಿರಬಾರದು. ಪ್ರೌಢಶಾಲಾಮಟ್ಟದಲ್ಲಿ ಶಿಕ್ಷಣವನ್ನು ವೈವಿಧ್ಯಗೊಳಿಸಿ ಅವರಲ್ಲಿ ಬಹುಮಂದಿ ಆ ಶಿಕ್ಷಣ ಮುಗಿದೊಡನೆ ನಿರ್ದಿಷ್ಟ ಉದ್ಯೋಗಗಳಿಗೆ ಸೇರಿಕೊಳ್ಳುವ ಅಥವಾ ತರಬೇತು ಪಡೆಯುವ ಅವಕಾಶ ಕಲ್ಪಿಸಬೇಕು. ಅಂಥವರಿಗೆ ಸುಲಭವಾಗಿ ಉದ್ಯೋಗ ದೊರಕಿಸಲು ಅವರಿಗೆಂದು ಮೀಸಲಾಗಿರುವ ಸ್ಥಾನಗಳಿಗೆ ಪದವೀಧರರನ್ನು ನೇಮಿಸಕೂಡದೆಂದು ಸೂಚಿಸಿ ಆ ಮೂಲಕ ಉನ್ನತ ಶಿಕ್ಷಣಕ್ಕೆ ಬರತಕ್ಕವರ ಸಂಖ್ಯೆಯನ್ನು ಮಿತಿಗೊಳಿಸಬೇಕು.

ಸಾಮಾನ್ಯರಿಗೆ ಎಂದರೆ ಆಯದೆ ಪ್ರವೇಶ ಕೋರಿದವರಿಗೆಲ್ಲ ಅವಕಾಶವೀಯುವ ಎರಡನೆಯ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಪರ್ಯಾಲೋಚಿಸುತ್ತ, ಅಲ್ಲಿಯ ಶಿಕ್ಷಣದ ಮಟ್ಟವನ್ನು ರಕ್ಷಿಸಿಕೊಂಡು ಬರುವ ಅಗತ್ಯವನ್ನು ಒತ್ತಿಹೇಳಿ ಅಲ್ಲಿಯ ಯಾವ ಸಂಸ್ಥೆಯಲ್ಲೂ ಶಿಕ್ಷಣ ಒಂದು ನಿರ್ದಿಷ್ಟಗೊಳಿಸಿದ ಕನಿಷ್ಠ ಮಟ್ಟಕ್ಕಿಂತ ಕೆಳಗಿಳಿಯದಂತೆ ಕಡ್ಡಾಯ ಮಾಡಬೇಕೆಂದು ವಾದಿಸಿ ಅದನ್ನು ಸಾಧಿಸಲು ಅಂಗೀಕಾರ ನಿಯಮಗಳನ್ನು ಬಿಗಿಗೊಳಿಸಿ ಅಲ್ಲಿಗೆ ಅನುಮತಿ ಇತ್ತಿರುವುದಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳಲು ಅವಕಾಶವೀಯಬಾರದೆಂದೂ ಸೂಚಿಸಿರುವರು. ಹಾಗೂ ಪ್ರವೇಶಾವಕಾಶ ದೊರಕದವರು ಪತ್ರಮುಖೇನ ಶಿಕ್ಷಣ, ಬಹಿರಂಗ ವಿಶ್ವವಿದ್ಯಾಲಯ, ಖಾಸಗಿ ಪರೀಕ್ಷೆಗೆ ಕೂಡುವುದು ಮುಂತಾದವುಗಳ ಮೂಲಕ ಏರ್ಪಟ್ಟಿರುವ ಉನ್ನತ ಶಿಕ್ಷಣದ ಸೌಲಭ್ಯವನ್ನು ಬಳಸಿಕೊಳ್ಳಬೇಕೆಂದಿರುವರು.

ವಿಶ್ವವಿದ್ಯಾನಿಲಯ ಮತ್ತು ಇತರ ಉನ್ನತ ಶಿಕ್ಷಣ ಸಂಸ್ಥೆಗಳ ಆಡಳಿತ ವ್ಯವಸ್ಥೆಯ ಬಗ್ಗೆ ಪರ್ಯಾಲೋಚಿಸುತ್ತ ಸದ್ಯದಲ್ಲಿ ಇರತಕ್ಕ ಬೋಧಿಸುವ ಮತ್ತು ಅಂಗೀಕಾರ ನೀಡುವ ವಿಶ್ವವಿದ್ಯಾ

ನಿಲಯಗಳ ವ್ಯವಸ್ಥೆಯನ್ನು ನಿಲ್ಲಿಸಿ ವಿಶ್ವವಿದ್ಯಾಲಯ ಬೋಧಿಸುವ ಹಾಗೂ ಸ್ನಾತಕೋತ್ತರ ತರಗತಿಗಳಿಗೆ ಮಾತ್ರ ಬೋಧಿಸುವ ಕಾರ್ಯವನ್ನು ಮಾತ್ರ ವಹಿಸಿಕೊಳ್ಳಬೇಕೆಂದೂ, ಅಂಗೀಕಾರ ನೀಡಲು ಮತ್ತು ಪ್ರಥಮ ಮತ್ತು ದ್ವಿತೀಯ ಪದವೀ ಪರೀಕ್ಷೆ ನಡಸಲು 'ರಾಜ್ಯ ಕೊಲೆಜಿಯೆಟ್ ಬೋರ್ಡ್' ಅನ್ನು ಸ್ಥಾಪಿಸಬೇಕೆಂದೂ ಸೂಚಿಸಿರುವರು. ಐತಿಹಾಸಿಕವಾಗಿ ಭಾರತದಲ್ಲಿ ಕಾಲೇಜುಗಳೇ ಮೊದಲು ಆರಂಭವಾಗಿ ಅವೇ ಪರೀಕ್ಷೆ ನಡೆಸುತ್ತಿದ್ದುವು; ಅವುಗಳ ವಿದ್ಯಾರ್ಥಿಗಳ ಪರೀಕ್ಷೆ ನಡೆಸಲು 1917 ರಿಂದ ಈಚೆಗೆ ವಿಶ್ವವಿದ್ಯಾಲಯಗಳು ಅಸ್ತಿತ್ವಕ್ಕೆ ಬಂದುವು. ಇದರಿಂದ ಕಾಲೇಜುಗಳು ಆತ್ಮಗೌರವವನ್ನೂ ಆತ್ಮವಿಶ್ವಾಸವನ್ನೂ ಕಳೆದುಕೊಂಡು ಸತ್ವಹೀನವಾಗುತ್ತ ಬಂದುವು. ವಿಶ್ವವಿದ್ಯಾಲಯಗಳು ಕೇವಲ ಪರೀಕ್ಷಿಸುವ ಸಂಸ್ಥೆಗಳಾಗಿದ್ದುವು. 1917ರ ಅನಂತರ, ಬೋಧಿಸುವ ಮತ್ತು ಅಂಗೀಕಾರ ನೀಡುವ ವಿಶ್ವವಿದ್ಯಾಲಯಗಳು ಅಸ್ತಿತ್ವಕ್ಕೆ ಬರಲಾರಂಭಿಸಿದುವು. ಇದರಿಂದ ಕಾಲೇಜುಗಳಿಗೂ ವಿಶ್ವವಿದ್ಯಾಲಯದ ಬೋಧನ ವಿಭಾಗಗಳಿಗೂ ಅನುಚಿತವಾದ ತಿಕ್ಕಾಟ ಆರಂಭವಾಯಿತು. ಈಚೆಗೆ ಈ ಬಗೆಯ ವಿಶ್ವವಿದ್ಯಾಲಯಗಳ ಬಗ್ಗೆಯೂ ಆಸಕ್ತಿ ತಪ್ಪುತ್ತಿದೆ. ಬೋಧನೆ ಮತ್ತು ಅಂಗೀಕರಣ–ಈ ಎರಡು ಕಾರ್ಯಗಳೂ ಒಂದಕ್ಕೊಂದಕ್ಕೆ ಸರಿಹೊಂದದ ಕಾರ್ಯವೆಂದು ಭಾವಿಸಿ ಲೇಖಕರು ಅವೆರಡು ಕಾರ್ಯಗಳನ್ನೂ ಪ್ರತ್ಯೇಕಿಸುವ ಮೇಲಿನ ಸಲಹೆಯನ್ನು ಮಂಡಿಸಿರುವರು. ಇದರಿಂದ ವಿಶ್ವವಿದ್ಯಾಲಯ ಸ್ನಾತಕೋತ್ತರ ಶಿಕ್ಷಣ ಮತ್ತು ಸಂಶೋಧನೆಗಳನ್ನು ಮಾತ್ರ ನೋಡಿಕೊಂಡು, ಕಾಲೇಜುಗಳು ಬೋಧನೆಯ ಕಾರ್ಯವನ್ನು ಮಾಡಿಕೊಂಡು, ಅವೆರಡೂ ತಮ್ಮ ತಮ್ಮ ಕ್ಷೇತ್ರದಲ್ಲಿ ಕೆಲಸ ಮಾಡಿದಾಗ ಉನ್ನತ ಶಿಕ್ಷಣ ಸುಸೂತ್ರವಾಗಿ ನಡೆಯುವುದೆಂಬುದು ಲೇಖಕರ ಅಭಿಪ್ರಾಯ.

ಲೇಖಕರು ಸೂಚಿಸಿರುವ ಹೊಸ ವ್ಯವಸ್ಥೆಯಲ್ಲಿ ವಿಶ್ವವಿದ್ಯಾಲಯಕ್ಕೂ ಕಾಲೇಜುಗಳಿಗೂ ಯಾವ ಸಂಬಂಧವೂ ಇರುವುದಿಲ್ಲ. ವಿಶ್ವವಿದ್ಯಾನಿಲಯ ಸ್ನಾತಕೋತ್ತರ ಬೋಧನೆ ಮತ್ತು ಸಂಶೋಧನೆಗಳಲ್ಲಿ ಮಾತ್ರ ನಿರತವಾಗಿರಬೇಕು. ಪ್ರಥಮ ಪದವೀಮಟ್ಟದ ಅಂಗಿಕ (ಕಾನ್ಸಿಟ್ಯೂಯೆಂಟ್) ಕಾಲೇಜುಗಳನ್ನು ಅದು ಹೊಂದಿರಕೂಡದು. ಆದರೆ ಉಚ್ಚ ಅಧ್ಯಯನ ಕೇಂದ್ರ (ಅಡ್ವಾನ್ಸ್ಡ್ ಸ್ಟಡಿ ಸೆಂಟರ್) ವನ್ನು ಮಾತ್ರ ಹೊಂದಿರಬಹುದು. ಹಾಗೂ ಅಖಿಲ ಭಾರತ ವ್ಯಾಪ್ತಿಯ ಆಧಾರದ ಮೇಲೆ ಆರಿಸಿದ 100 ವಿದ್ಯಾರ್ಥಿಗಳ ಪದವೀಮಟ್ಟದ ಒಂದು ತರಗತಿಯನ್ನು ಮಾತ್ರ ಹೊಂದಿರಬಹುದು. ಅದಕ್ಕೂ ಇತರ ಕಾಲೇಜುಗಳಿಗೂ ನೇರ ಸಂಬಂಧವಿರುವುದಿಲ್ಲ. ತಾವಾಗಿ ಇಚ್ಛಿಸುವುದಾದರೆ ಅವು ತಮ್ಮ ವಿದ್ವನ್ಮಂಡಲಿಗಳಲ್ಲೂ ಅಧ್ಯಯನ ಮಂಡಲಿಗಳಲ್ಲೂ ಸೇ. 20ರಷ್ಟು ಸದಸ್ಯರನ್ನು ಅಲ್ಲಿನವರಿಂದ ಆಯ್ದುಕೊಳ್ಳಬಹುದು. ಎಲ್ಲ ಕಾಲೇಜುಗಳೂ ಕೊಲೆಜಿಯೆಟ್ ಬೋರ್ಡಿನ ನೇತೃತ್ವದಲ್ಲಿ ಕೆಲಸ ಮಾಡಬೇಕು. ಬೋರ್ಡ್ ಸ್ವಯಮಾಡಳಿತ ಸಂಸ್ಥೆಯಾಗಿದ್ದು ಪೂರ್ಣಕಾಲದ ಪಂಡಿತರೊಬ್ಬರನ್ನು ಅಧ್ಯಕ್ಷರನ್ನಾಗಿ ಹೊಂದಿರಬೇಕು. ಅದರ ಆಡಳಿತ ನಿರ್ವಹಣೆಗಾಗಿ 10–15 ಮಂದಿ ಸದಸ್ಯರ ಒಂದು ಕಾರ್ಯ ನಿರ್ವಾಹಕ ಮಂಡಲಿಯಿದ್ದು, ಅದರಲ್ಲಿ ವಿಶ್ವವಿದ್ಯಾನಿಲಯ, ಕಾಲೇಜು ಮತ್ತು ಸರ್ಕಾರದ ಪ್ರತಿನಿಧಿಗಳಿರಬೇಕು. ಅಂಗೀಕೃತ ಕಾಲೇಜುಗಳಿಗೆ ಅಗತ್ಯ ಸಲಹೆ ನೀಡಲು ಕೆಲವು ಪೂರ್ಣಕಾಲದ ತಜ್ಞರನ್ನು ನೇಮಿಸಿಕೊಳ್ಳಬಹುದು. ಅಕೆಡೆಮಿಕ್ ಕೌನ್ಸಿಲ್ ಮತ್ತು ಬೋರ್ಡ್ ಆಫ್ ಸ್ಟಡೀಸನ್ನೂ ಅದು ಹೊಂದಿರಬೇಕು. ಅಂಗೀಕೃತ ಕಾಲೇಜುಗಳ ಪ್ರತಿನಿಧಿಗಳೇ ಹೆಚ್ಚಾಗಿರುವ ಆ ಸಂಸ್ಥೆಗಳಲ್ಲಿ ಸೇ. 20ಕ್ಕಿಂತ ಹೆಚ್ಚಿಲ್ಲದೆ ವಿಶ್ವವಿದ್ಯಾಲಯದ ಪ್ರತಿನಿಧಿಗಳೂ ಇರಲು ಅವಕಾಶವಿರಬಹುದು. ಅಂಗೀಕಾರ ನೀಡುವುದು, ಪಠ್ಯಕ್ರಮಕ್ಕೆ ಅನುಮತಿ ನೀಡುವುದು, ಪ್ರಥಮ ಪದವೀ ಪರೀಕ್ಷೆಗಳನ್ನು ನಡೆಸುವುದು, ಸಹಾಯಧನವನ್ನು ಹಂಚುವುದು ಬೋರ್ಡಿನ ಕೆಲಸಗಳಲ್ಲಿ ಸೇರಿರಬೇಕು. ಪ್ರತಿ ರಾಜ್ಯ ಮತ್ತು ರಾಜಧಾನಿಗೆಲ್ಲ ಸಾಮಾನ್ಯವಾಗಿ ಒಂದು ಕೊಲೆಜಿಯೆಟ್ ಬೋರ್ಡ್ ಇರಬೇಕು.

ಉನ್ನತ ಶಿಕ್ಷಣ ಕ್ಷೇತ್ರದಲ್ಲಿ ಸಂಶೋಧನ ಸಂಸ್ಥೆ(ಇನ್ಸ್ಟಿಟ್ಯೂಟ್ ಆಫ್ ರಿಸರ್ಚ್)ಗಳೆಂಬ ನೂತನ ವಿದ್ಯಾಲಯಗಳನ್ನು ಪ್ರತಿರಾಜ್ಯದಲ್ಲೂ ಒಂದೊಂದರಂತೆ ಸ್ಥಾಪಿಸಬೇಕೆಂಬ ಸಲಹೆಯನ್ನು ಮಂಡಿಸುತ್ತ ಲೇಖಕರು 'ಇಂಥ ಸಂಸ್ಥೆಗಳು ಪ್ರಥಮತಃ ಸಂಶೋಧನೆಗಾಗಿ ಮೀಸಲಾಗಿರಬೇಕು. ಅಲ್ಲಿಗೆ ಬಂದು ಸಂಶೋಧನೆ ನಡೆಸಲು ವಿಶ್ವವಿದ್ಯಾನಿಲಯದ, ಕಾಲೇಜಿನ ಮತ್ತು ಇತರ ಕ್ಷೇತ್ರಗಳ ಪಂಡಿತರಿಗೆ ಅವಕಾಶವಾಗುವಂತೆ ಸಂಶೋಧನ ವೇತನಗಳನ್ನು ಸ್ಥಾಪಿಸಬೇಕು. ಈಗಾಗಲೇ ಅಂಥ

ಸಂಸ್ಥೆಗಳು ನಿಸರ್ಗ ವಿಜ್ಞಾನಕ್ಕೆ ಅಲ್ಲಲ್ಲಿ ಏರ್ಪಟ್ಟಿರುವುದರಿಂದ ಮುಂದೆ ಮಾನವಿಕ ಹಾಗೂ ಸಮಾಜ ಶಾಸ್ತ್ರಗಳ ಸಂಶೋಧನೆಗೆ ಅವನ್ನು ಮೀಸಲಿಡಬೇಕು. ವಿಶ್ವವಿದ್ಯಾನಿಲಯ ಮತ್ತು ಕಾಲೇಜುಗಳೊಡನೆ ಅವು ಸಹಕರಿಸುತ್ತ ಮುಖ್ಯವಾಗಿ ಅನ್ವಯಿಕ ವಿಜ್ಞಾನ ಸಂಶೋಧನೆಗೆ ಹೆಚ್ಚಿನ ಗಮನ ಕೊಡಬೇಕು. ಕ್ರಮಕ್ರಮವಾಗಿ. ಅಖಿಲ ಭಾರತದ ವ್ಯಾಪ್ತಿಯಲ್ಲಿ ಆಯ್ದ ಪ್ರತಿಭಾವಂತ ವಿದ್ಯಾರ್ಥಿಗಳಿಗಾಗಿ ವಿಶಿಷ್ಟ ವಿಷಯಗಳಲ್ಲಿ ಸ್ನಾತಕೋತ್ತರ ಹಾಗೂ ಸ್ನಾತಕಪೂರ್ವ ತರಗತಿಗಳನ್ನು ನಡೆಸಬಹುದು. ಆದರೆ ಆ ಯಾವ ಸಂಸ್ಥೆಯೇ ಆಗಲಿ ನೂರಕ್ಕೂ ಹೆಚ್ಚಿಗೆ ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳುವ ಅವಕಾಶವಿರ ಕೂಡದು. ಕ್ರಮಕ್ರಮವಾಗಿ ಅವು ರಾಷ್ಟ್ರೀಯ ಪ್ರಯೋಗಾಲಯ (ನ್ಯಾಷನಲ್ ಲ್ಯಾಬೊರಟರಿ)ಗಳ ಸ್ವರೂಪವನ್ನು ತಾಳಿ ಪರಿಗಣಿತ ವಿಶ್ವವಿದ್ಯಾಲಯಗಳ ಸ್ಥಾನವನ್ನು ಪಡೆದುಕೊಳ್ಳಬಹುದು." ಎಂದು ಸಲಹೆ ಮಾಡಿರುವರು.

2 ರಚನಾವ್ಯವಸ್ಥೆ

ಉನ್ನತ ಶಿಕ್ಷಣದ ರಚನಾ ವ್ಯವಸ್ಥೆಗೆ ಸಂಬಂಧಿಸಿದಂತೆ ಪ್ರತಿ ರಾಜ್ಯದಲ್ಲೂ ಸ್ವಯಮಾಡಳಿತ ಕಾಲೇಜುಗಳನ್ನು ಸ್ಥಾಪಿಸಬೇಕೆಂಬ ಮತ್ತೊಂದು ಸಲಹೆಯನ್ನು ಮಾಡಿರುವರು. ಉನ್ನತ ಶಿಕ್ಷಣದಲ್ಲಿ ಕಾಲೇಜುಗಳಿಗೆ ಅಂಗೀಕಾರ ನೀಡುವುದು. ಪಠ್ಯಕ್ರಮವನ್ನು ಗೊತ್ತುಮಾಡುವುದು ಪರೀಕ್ಷೆ ನಡೆಸಿ ಪದವಿ ನೀಡುವುದು–ಈ ಮೂರು ಕಾರ್ಯಗಳಲ್ಲಿ ಮೂರನೆಯದು ಅಗಾಧವಾದ ಹೊರೆಯೆನಿಸಿದೆ. ಕಾಲಕ್ರಮದಲ್ಲಿ ಪರೀಕ್ಷೆ ನಡೆಸುವುದು ಕೊಲೆಜಿಯೆಟ್ ಬೋರ್ಡಿಗೆ ಅಸಾಧ್ಯವಾಗಿ ಪರಿಣಮಿಸಬಹುದು. ವಿಶ್ವವಿದ್ಯಾನಿಲಯದ ಈ ಹೊರೆಯನ್ನು ಬೋರ್ಡಿಗೆ ವಹಿಸಿದ್ದರಿಂದ ವಿಶ್ವವಿದ್ಯಾನಿಲಯಕ್ಕೆ ಹೊರೆ ಇಳಿದರೂ ಅದು ಬೋರ್ಡಿನ ಮೇಲೆ ಬೀಳುವಂತಾಗುತ್ತದೆ. ಈ ಹೊರೆ ಬೋರ್ಡಿಗೂ ತಪ್ಪಬೇಕು. ಉನ್ನತ ಶಿಕ್ಷಣದಲ್ಲಿ ಆಗಬೇಕಾದ ಪುನರ್ವ್ಯವಸ್ಥೆಯಲ್ಲಿ ಪರೀಕ್ಷೆಯ ಹೊರೆ (ಸಂಖ್ಯೆ)ಯನ್ನು ಕಡಮೆ ಮಾಡುವುದು ಬಹು ಮುಖ್ಯ ಅಂಶ. ಲಕ್ಷಗಟ್ಟಲೆ ವಿದ್ಯಾರ್ಥಿಗಳನ್ನು ಬೋರ್ಡು ಪರೀಕ್ಷಿಸಲು ಯತ್ನಿಸುವಾಗ ಎಷ್ಟೋ ವಿಧವಾದ ಲೋಪದೋಷಗಳೂ ಸುಳಿದುಕೊಳ್ಳುತ್ತವೆ. ಆದ್ದರಿಂದ ಲೇಖಕರು ಕೆಲವು ಆಯ್ದ ಕಾಲೇಜುಗಳನ್ನು ಸ್ವಯಮಾಡಳಿತ ಸಂಸ್ಥೆಗಳೆಂದು ಪರಿಗಣಿಸಿ ಅವಕ್ಕೆ ತಮ್ಮದೇ ಆದ ಪಠ್ಯಕ್ರಮವನ್ನು ರೂಪಿಸಿಕೊಂಡು ಪರೀಕ್ಷೆ ನಡೆಸಿ ತಮ್ಮದೇ ಆದ ಪದವಿ ನೀಡುವ ಅಧಿಕಾರ ನೀಡಬೇಕೆಂದು ಸಲಹೆ ಮಾಡಿರುವರು. ಕೊಲೆಜಿಯೆಟ್ ಬೋರ್ಡು ಗೊತ್ತು ಮಾಡಿದ ಪಠ್ಯಕ್ರಮವನ್ನು ಅಥವಾ ಅದನ್ನು ಅನುಸರಿಸಿ ಅವಕ್ಕಿಂತ ಮೇಲ್ಮಟ್ಟದ ಪಠ್ಯಕ್ರಮವನ್ನು ಅಂಥ ಕಾಲೇಜುಗಳು ಆಚರಣೆಗೆ ತರುವ ಸ್ವಾತಂತ್ರ್ಯ ಹೊಂದಿರಬೇಕು. ಮೊದಲು ಪ್ರಥಮ ಪದವೀ ಪರೀಕ್ಷೆಯನ್ನೂ. ಅನಂತರ ಆನರ್ಸ್ ಮತ್ತು ಇತರ ಉನ್ನತ ಪದವೀ ಪರೀಕ್ಷೆಗಳನ್ನೂ ನಡೆಸುವ ಸ್ವಾತಂತ್ರ್ಯವನ್ನು ಅವು ಪಡೆದುಕೊಳ್ಳಬೇಕು. ಪ್ರತಿಯೊಂದು ಕಾಲೇಜು. ಆರಂಭವಾದ ಹತ್ತು ವರ್ಷಗಳಲ್ಲಿ ಆ ಹೊಣೆಯನ್ನು ಹೊರಲು ತಯಾರಾಗಬೇಕು. ಇಲ್ಲವಾದರೆ ಅವನ್ನು ಅಂಗೀಕೃತ ಪಟ್ಟಿಯಿಂದ ತೊಡೆದುಹಾಕಬೇಕು. ಪರೀಕ್ಷೆ ನಡೆಸುವಾಗ ಆಂತರಿಕ ಪರೀಕ್ಷಕರ ಜೊತೆಗೆ. ಉಚಿತ ಪ್ರಮಾಣದಲ್ಲಿ ಬಾಹ್ಯ ಪರೀಕ್ಷಕರನ್ನೂ ಒಳಗೊಂಡಿರಬೇಕು. ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಕಾಲೇಜು ಮತ್ತು ಬೋರ್ಡು ಸಂಯುಕ್ತವಾಗಿ ಪದವಿ ನೀಡಬೇಕು. ಉನ್ನತ ವ್ಯಾಸಂಗಕ್ಕೆ ಸೇರಲು ಅದು ಎಲ್ಲ ಕಾಲೇಜು ಮತ್ತು ವಿಶ್ವವಿದ್ಯಾನಿಲಯಗಳಿಗೂ ಅರ್ಹತಾ ಪತ್ರವಾಗಬೇಕು. ಈ ಸಲಹೆಗಳು ತೀರ ತೀವ್ರರೀತಿಯವಾಗಿ ತೋರುವುವಾದರೂ ಪರಿಸ್ಥಿತಿಯ ಉಗ್ರ ರೂಪವನ್ನು ಪರಿಶೀಲಿಸಿದಾಗ ಇದು ಅನಿವಾರ್ಯವಾಗುತ್ತದೆ. ಈ ರೀತಿಯ ಪುನರ್ವ್ಯವಸ್ಥೆಯಿಂದ ವಿಶ್ವವಿದ್ಯಾನಿಲಯಗಳಲ್ಲಿ ಗೋಚರಿಸಿಕೊಂಡಿರುವ ಅನೇಕ ಉಗ್ರ ಸಮಸ್ಯೆಗಳು ಪರಿಹಾರವಾಗಬಹುದು: ವಿಶ್ವವಿದ್ಯಾನಿಲಯ ಹಲವು ಶ್ರೇಷ್ಠ ಶಿಕ್ಷಣ ಸಂಸ್ಥೆಗಳನ್ನು ಆಯ್ದ ವಿದ್ಯಾರ್ಥಿಗಳಿಗಾಗಿ ಸ್ಥಾಪಿಸುವುದರ ಜೊತೆಗೆ ಪ್ರವೇಶಾವಕಾಶ ಕೋರುವ ಇತರ ಎಲ್ಲರಿಗೂ ಅವಕಾಶ ಕಲ್ಪಿಸಬಹುದು: ಆಗ ಸದ್ಯದ ಅಶಾಂತ ಪರಿಸ್ಥಿತಿ ತಪ್ಪಿ ಅವು ಶಾಂತಿಯಿಂದ ಕೆಲಸ ಮಾಡಲು ಅವಕಾಶವಾಗುವುದು. ಬೋರ್ಡಿನ ಸ್ಥಾಪನೆಯಿಂದ ಕಾಲೇಜುಗಳ ಅಂಗೀಕರಣ ಕಾರ್ಯವನ್ನು ಹೆಚ್ಚು ಪರಿಣಾಮಕಾರಿಯಾಗಿ ನಡೆಸಬಹುದು. ಸ್ವಯಮಾಡಳಿತವನ್ನು ಆಚರಣೆಗೆ ತರುವುದರ ಮೂಲಕ ಕಾಲೇಜುಗಳ ದಕ್ಷತೆಯನ್ನು

ಹೆಚ್ಚಿಸಲು ಸಹಾಯವಾಗುತ್ತದೆ. ವಿಶ್ವವಿದ್ಯಾನಿಲಯಗಳು ಉಚ್ಚ ಅಧ್ಯಯನ ಕೇಂದ್ರಗಳ ಮತ್ತು ಸಂಶೋಧನ ಸಂಸ್ಥೆಗಳ ಸ್ಥಾಪನೆಯಿಂದ ಇತರ ಉನ್ನತ ಶಿಕ್ಷಣ ಸಂಸ್ಥೆಗಳಿಗೆ ಆದರ್ಶವನ್ನೊದಗಿಸಬಲ್ಲವು. ಈ ಐದು ಮುಖ್ಯವಾದ ಪುನರ್ವ್ಯವಸ್ಥೆಯ ಕಾರ್ಯಕ್ರಮಗಳನ್ನು ಸಮಗ್ರವಾಗಿ ಮತ್ತು ಒಟ್ಟಾಗಿ ಆಚರಣೆಗೆ ತರುವ ಅಗತ್ಯವನ್ನು ಲೇಖಕರು ಒತ್ತಿ ಹೇಳಿರುವರು.

3 ಶಿಕ್ಷಣದ ಮಟ್ಟ

ಉನ್ನತ ಶಿಕ್ಷಣ ದೇಶದ ಅಭಿವೃದ್ಧಿಗೆ ನೇರವಾಗಿ ಸಂಬಂಧಿಸಿದೆ. ಅದು ಉನ್ನತಮಟ್ಟವನ್ನು ಸಾಧಿಸುವುದಾದರೆ ದೇಶ ತೀವ್ರ ವೇಗವಾಗಿ ಮುನ್ನಡೆ ಸಾಧಿಸಬಲ್ಲದು. ಅದರ ಅಧಃಪತನವಾದಾಗ ದೇಶವೂ ಅಧೋಗತಿಗಿಳಿಯುವುದು. ಆದ್ದರಿಂದ ಉನ್ನತ ಶಿಕ್ಷಣದ ಯಾವ ಪುನರ್ವ್ಯವಸ್ಥೆಯೇ ಆಗಲಿ ಅದರ ಶಿಕ್ಷಣದ ಮಟ್ಟವನ್ನು ಉತ್ತಮಪಡಿಸಲು ನೆರವಾಗಬೇಕು. ಶಿಕ್ಷಣದ ಗುಣಮಟ್ಟ, ವಿದ್ಯಾರ್ಥಿ, ಪಠ್ಯಕ್ರಮ ಮತ್ತು ಮೌಲ್ಯಮಾಪನ–ಈ ಮೂರು ಅಂಶಗಳಿಗೆ ಸಂಬಂಧಿಸಿರುವ ಅಂಶವನ್ನು ಸೂಚಿಸಿ ಅದನ್ನು ಉತ್ತಮಪಡಿಸಲು ಕೆಲವು ಸಲಹೆಗಳನ್ನು ಮುಂದಿಸಿರುವರು: ಹೊರವ್ಯವಸ್ಥೆಯಲ್ಲಿ, ವಿಶ್ವವಿದ್ಯಾಲಯಗಳು ಕಾಲೇಜುಗಳಿಗೆ ದಕ್ಷ ಅಧ್ಯಾಪಕರನ್ನು ಒದಗಿಸುವುದರ ಜೊತೆಗೆ ಪಠ್ಯವಿಷಯ ಮತ್ತು ಪ್ರವೇಶಾವಕಾಶದ ಬಗ್ಗೆ ನೂತನ ನೀತಿಯನ್ನು ರೂಪಿಸಿಕೊಡಬೇಕು; ವೃತ್ತಿನಿರತ ಅಧ್ಯಾಪಕರಿಗಾಗಿ ಬೇಸಗೆಯ ಅಧ್ಯಯನ ಶಿಬಿರಗಳನ್ನು ಹೆಚ್ಚು ಹೆಚ್ಚಾಗಿ ವ್ಯವಸ್ಥೆಗೊಳಿಸಬೇಕು; ಅಧ್ಯಾಪಕರು ತಮ್ಮ ವೃತ್ತಿ ದಕ್ಷತೆಯನ್ನು ಅಧ್ಯಯನ, ಸಂಶೋಧನೆ ಮುಂತಾದವುಗಳ ಮೂಲಕ ಹೆಚ್ಚಿಸಿಕೊಳ್ಳಲು ಅಗತ್ಯ ಸೌಲಭ್ಯಗಳನ್ನು ಒದಗಿಸಬೇಕು; ಅಧ್ಯಾಪಕರ ನೇಮಕದಲ್ಲೂ ಉತ್ತಮರಾದವರನ್ನು ಆಯ್ದುಕೊಳ್ಳುವಂತೆ ನೀತಿನಿಯಮಗಳನ್ನು ಆಚರಣೆಗೆ ತರಬೇಕು. ಖಾಸಗಿ ಕಾಲೇಜುಗಳಲ್ಲಿ ಅವರ ಸೇವಾ ಭದ್ರತೆಯನ್ನು ಉತ್ತಮಗೊಳಿಸಬೇಕು. ಅಧ್ಯಾಪಕರು ಸೇವಾ ಮನೋಭಾವವನ್ನೂ ವಿದ್ಯಾರ್ಥಿಗಳ ಹಾಗೂ ದೇಶದ ಅಭ್ಯುದಯಾಕಾಂಕ್ಷೆಯನ್ನೂ ಬೆಳಸಿಕೊಳ್ಳಬೇಕೆಂಬ ಸಾಂಪ್ರದಾಯಿಕ ಸಲಹೆಯನ್ನೂ ಮಾಡಿರುವರು ಈ ಲೇಖಕರು.

ವಿದ್ಯಾರ್ಥಿಗಳ ಬಗ್ಗೆ ಬರೆಯುತ್ತ ಲೇಖಕರು 'ಉನ್ನತ ಶಿಕ್ಷಣದಲ್ಲಿ ವಿದ್ಯಾರ್ಥಿಗಳು ಕಿರಿಯ ಅಧ್ಯಾಪಕರೆಂದೂ ಅಧ್ಯಾಪಕರು ಹಿರಿಯ ವಿದ್ಯಾರ್ಥಿಗಳೆಂದೂ ಪರಿಗಣಿಸಬೇಕು' ಎಂದು ಸೂಚಿಸಿ ಅಧ್ಯಾಪಕರ ಕಾರ್ಯದಕ್ಷತೆಯನ್ನು ಹೆಚ್ಚಿಸಲು ನೀಡಿರುವ ಸಲಹೆಗಳು ವಿದ್ಯಾರ್ಥಿಗಳಿಗೂ ಅನ್ವಯಿಸುವುವೆಂದು ಹೇಳಿರುವರು. ಜೊತೆಗೆ ಅಗತ್ಯವಿರುವ ಉತ್ತಮ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ, ಶುಲ್ಕ ವಿನಾಯಿತಿ, ಗ್ರಂಥಾಲಯದಲ್ಲಿ ತಕ್ಕಷ್ಟು ಪಠ್ಯಪುಸ್ತಕಗಳನ್ನು ಸೇರಿಸುವಿಕೆ ಇತ್ಯಾದಿಗಳ ಮೂಲಕ ಆರ್ಥಿಕ ಸಹಾಯವನ್ನು ಹೆಚ್ಚಿಸಬೇಕೆಂದೂ ಆಡಳಿತದ ಹಲವು ಕ್ಷೇತ್ರಗಳಲ್ಲಿ ವಿದ್ಯಾರ್ಥಿಗಳಿಗೆ ಪಾತ್ರವಹಿಸಲು ಅವಕಾಶವೀಯಬೇಕೆಂದೂ ತಮ್ಮ ಶಿಕ್ಷಣಾನಂತರ ಉದ್ಯೋಗವೊದಗುವುದೆಂಬ ಭರವಸೆಯ ಮೂಲಕ ಅವರ ಪ್ರೇರಕ ಶಕ್ತಿಯನ್ನು ಹೆಚ್ಚಿಸಬೇಕೆಂದೂ ಸೂಚಿಸಿರುವರು. ಅಂಥ ಭರವಸೆಯನ್ನು ಮೂಡಿಸಲು ಸದ್ಯದ ಪಠ್ಯಕ್ರಮದಲ್ಲಿ ಅಗತ್ಯ ಬದಲಾವಣೆಯಾಗಬೇಕೆಂದು ಹೇಳುತ್ತ 'ಪ್ರಥಮ ಪದವಿಯಲ್ಲಿ ವೃತ್ತಿ ಶಿಕ್ಷಣವನ್ನು ಹೆಚ್ಚು ಹೆಚ್ಚಾಗಿ ಅನುಷ್ಠಾನಕ್ಕೆ ತರಬೇಕು; ಅದರಿಂದ ಪದವಿ ಪಡೆದವರು ನೇರವಾಗಿ ವೃತ್ತಿಯೊಂದಕ್ಕೆ ಸೇರಿಕೊಳ್ಳಲು ನೆರವಾಗಬೇಕು' ಎಂದು ಸಲಹೆ ಮಾಡಿರುವರು. ಅಲ್ಲದೆ ಪದವಿ ಮಟ್ಟದಲ್ಲಿ ವಿವಿಧ ವೃತ್ತಿಗಳ ಶಿಕ್ಷಣವನ್ನು ಸೇರಿಸುವುದರಿಂದ ಪ್ರೌಢಶಾಲೆಯಲ್ಲಿ ವಿದ್ಯಾರ್ಥಿಗಳು ಆ ವೃತ್ತಿಪರ ಶಿಕ್ಷಣವನ್ನು ಆಯ್ದುಕೊಳ್ಳಲು ಉತ್ತೇಜನವಾಗುವುದೆಂದೂ ಸೂಚಿಸಿರುವರು.

ಲೇಖಕರು ಭಾರತೀಯ ಉನ್ನತ ಶಿಕ್ಷಣದ ಬಗ್ಗೆ ಮಾಡಿರುವ ಸಲಹೆಗಳು ತೀರ ಹೊಸವೇನೂ ಅಲ್ಲ. ಅವುಗಳಲ್ಲಿ ಕೆಲವನ್ನು ಕೊಠಾರಿ ಶಿಕ್ಷಣ ಆಯೋಗ ತನ್ನ ವರದಿಯಲ್ಲಿ ಸೂಚಿಸಿದೆ. ಇನ್ನು ಕೆಲವು ಆಗಲೇ ಆಚರಣೆಗೆ ಬರುತ್ತಿವೆ. ಮತ್ತೆ ಕೆಲವು ಅಮೆರಿಕ ಸಂಯುಕ್ತ ಸಂಸ್ಥಾನಗಳಲ್ಲಿ ಆಚರಣೆಯಲ್ಲಿವೆ. ಆದರೆ, ಉನ್ನತ ಶಿಕ್ಷಣದ ಪುನರ್ವ್ಯವಸ್ಥೆಗೆ ಸಂಬಂಧಿಸಿದಂತೆ ಅವನ್ನೆಲ್ಲ ಸಮಗ್ರವಾಗಿ, ವ್ಯಾಪಕವಾಗಿ ರೂಪುಗೊಳಿಸಿರುವ ಕೀರ್ತಿ ಶ್ರೀ ಜೆ. ಪಿ. ನಾಯಕರಿಗೆ ಸಲ್ಲಬೇಕು. ಸಲಹೆಗಳು ಪರಿಣಾಮಕಾರಿಯಾಗಿ

ಕಂಡರೂ ಅವನ್ನು ಆಚರಣೆಗೆ ತರುವಾಗ ಬಹು ಎಚ್ಚರಿಕೆ ಅಗತ್ಯ. ಉದಾ: ಸ್ವಯಮಾಡಳಿತ ಕಾಲೇಜುಗಳ ಸ್ಥಾಪನೆ. ಸಂಸ್ಥೆ ಎಷ್ಟೇ ಆದರ್ಶವಾಗಿ ಕೆಲಸ ಮಾಡುತ್ತಿದ್ದರೂ ಪದವಿಗಳಿಗೆ ಅತಿ ಪ್ರಾಮುಖ್ಯವಿರುವ ನಮ್ಮ ದೇಶದಲ್ಲಿ ಪದವಿಗಳನ್ನು ಗಳಿಸಲು ವಿವಿಧ ತಂತ್ರಗಳು ಅಲ್ಲಿ ಆರಂಭವಾಗಬಹುದು. ಆ ಬಗ್ಗೆ ಅಗತ್ಯ ಎಚ್ಚರಿಕೆಯನ್ನು ತೆಗೆದುಕೊಂಡು ಮೊದಲು ಹಲವಾರು ವರ್ಷಗಳ ಕಾಲ ಪ್ರಾಯೋಗಿಕವಾಗಿ ಆರಂಭಿಸಿ ಅದರ ಪರಿಣಾಮವನ್ನನುಸರಿಸಿ ಮುನ್ನಡೆಯಬೇಕಾಗುತ್ತದೆ.

ಲೇಖಕರು ನೀಡಿರುವ ಸಲಹೆಗಳನ್ನು ಬಹ್ವಾರೆ ಜಾರಿಗೆ ತರುವುದಾದರೆ ಸೈದ್ಧಾಂತಿಕವಾಗಿಯಾದರೂ ಉನ್ನತ ಶಿಕ್ಷಣದಲ್ಲಿ ದಕ್ಷತೆಯನ್ನು ಉಳಿಸಿಕೊಂಡು ಸಾಮಾಜಿಕ ನ್ಯಾಯವನ್ನೂ ಸ್ಥಾಪಿಸಲು ಸಾಧ್ಯವಾಗಬಲ್ಲದು.

—ಡಾ. ಎನ್. ಎಸ್. ವೀರಪ್ಪ

ಶಿಕ್ಷಣದ ಮುನ್ನಡೆ: ಲೇ.: ಮುಗಳಿ, ರಂ. ಶ್ರೀ.: ಪ್ರ.: ಸಾಹಿತ್ಯ ಭಂಡಾರ, ಜಂಗಮ ಮೇಸ್ತ್ರಿ ಗಲ್ಲಿ, ಬೆಂಗಳೂರು–2 ಎ; ಪು.: 160; ಬೆಲೆ: 4.75

'ಸಂಯುಕ್ತ ಕರ್ನಾಟಕ' ಸಾಪ್ತಾಹಿಕದಲ್ಲಿ ಹಿಂದೆ ಪ್ರಕಟವಾಗಿದ್ದ ಲೇಖಕರ ಎಂಟು ಲೇಖನಗಳನ್ನೂ. 'ಜೀವನ' ಮುಂತಾದ ನಿಯತಕಾಲಿಕಗಳಲ್ಲಿ ಪ್ರಕಟವಾಗಿದ್ದ ಹನ್ನೆರಡು ಲೇಖನಗಳನ್ನೂ ಸಂಕಲಿಸಿ ಬೆಂಗಳೂರಿನ ಸಾಹಿತ್ಯ ಭಂಡಾರದವರು ಈ ಪುಸ್ತಕರೂಪದಲ್ಲಿ ಈಗ ಹೊರತಂದಿದ್ದಾರೆ. ಲೇಖಕರು ತಮ್ಮ ಮುನ್ನುಡಿಯಲ್ಲಿ ಹೇಳಿಕೊಂಡಿರುವಂತೆ ಶಿಕ್ಷಣಶಾಸ್ತ್ರದ ಎಲ್ಲ ಅಂಗಗಳನ್ನೂ ಅಭ್ಯಸಿಸದಿದ್ದರೂ ಕಳೆದ ನಲವತ್ತು ವರ್ಷಗಳಲ್ಲಿ ಶಿಕ್ಷಣ ಕ್ಷೇತ್ರದಲ್ಲಿ ತಾವು ಅಧ್ಯಾಪಕರಾಗಿ. ಆಡಳಿತಗಾರರಾಗಿ ಪಡೆದ ಅನುಭವ. ಮಾಡಿದ ಆಲೋಚನೆ ಈ ಪುಸ್ತಕದಲ್ಲಿ ಮೈದಾಳಿದೆಯೆನ್ನಬಹುದು. ಸಂಯುಕ್ತ ಕರ್ನಾಟಕದಲ್ಲಿ ಪ್ರಗತಿಪರ ಶಿಕ್ಷಣ ಎಂಬ ಲೇಖನಮಾಲೆಯಲ್ಲಿ ಪ್ರಕಟವಾಗಿದ್ದ ಎಂಟು ಲೇಖನಗಳು ಗ್ರಂಥದ ಪ್ರಥಮ ವಿಭಾಗದಲ್ಲೂ ಇನ್ನುಳಿದ ಹನ್ನೆರಡು ಲೇಖನಗಳು ದ್ವಿತೀಯ ವಿಭಾಗದಲ್ಲೂ ಪ್ರಕಟವಾಗಿದೆ.

ಸ್ವಾತಂತ್ರ್ಯಾನಂತರದ ಹನ್ನೆರಡು ವರ್ಷಗಳ ಶಿಕ್ಷಣದ ಪ್ರಗತಿಯನ್ನು ಪರಿಶೀಲಿಸುತ್ತ ಲೇಖಕರು ಮೊದಲನೆಯ ಲೇಖನದಲ್ಲಿ ಸ್ವಾತಂತ್ರ್ಯಪೂರ್ವದ ಮತ್ತು ಸ್ವಾತಂತ್ರ್ಯ ಹೋರಾಟದ ಕಾಲದ ಭಾರತೀಯ ಶಿಕ್ಷಣದ ಸ್ವರೂಪವನ್ನು ವಿವರಿಸಿರುವರು: ವ್ಯಕ್ತಿಯ ವಿಕಾಸದಿಂದ 'ಸಂಸ್ಕೃತಿ. ಸಂಸ್ಕೃತಿಯಿಂದ ವಿಮುಕ್ತಿ. ಈ ಫಲಕ್ರಮವು ಶಿಕ್ಷಣದಿಂದ ದೊರೆಯದಾದರೆ ಅದು ಪ್ರಗತಿಯಾಗಲಾರದು. ಮಾತ್ರವಲ್ಲ. ಶಿಕ್ಷಣವಿಲ್ಲದಿರುವುದೇ ಲೇಸು' ಎಂದು ಜನ ಭಾವಿಸುತ್ತಾರೆ ಎಂಬ ಅಭಿಪ್ರಾಯವನ್ನು ಮೊದಲ ಲೇಖನದಲ್ಲಿ ವ್ಯಕ್ತಪಡಿಸಿರುವರು. ಇದು ಶಿಕ್ಷಣ ನಿರ್ವಹಿಸಬೇಕಾದ ಮೂಲ ಕರ್ತವ್ಯ. ಸ್ಥೂಲವಾಗಿ ಅಂತಿಮ ಸ್ವರೂಪದಲ್ಲಿ ಇದು ಶಿಕ್ಷಣದ ಉದ್ದೇಶವೂ ಆಗಬಲ್ಲದು. ಈ ಉದ್ದೇಶ ಎಷ್ಟರಮಟ್ಟಿಗೆ ಫಲಿಸಿದೆ ಎಂದು ಅಳೆದು ನಿರ್ಧರಿಸಲು ಲೇಖಕರು ತಮ್ಮದೇ ಆದ ರೀತಿಯ ಸೂತ್ರಗಳನ್ನೂ ಸೂಚಿಸಿರುವರು: ಶಿಕ್ಷಣ ಸಮಗ್ರವಾದ. ಅನ್ಯೋನ್ಯ ಸಂಬಂಧವುಳ್ಳ ಒಂದು ಜಟಿಲ ಜೀವಂತ ಪ್ರಕ್ರಿಯೆ; ಯೋಗ್ಯ ಶಿಕ್ಷಕನ ಆಯ್ಕೆ; ಸಂಕಲ್ಪಿತ ಫಲದ ಮೇಲೆ ಕಣ್ಣಿಟ್ಟು ಸಂಘಟನೆಯನ್ನು ಮಾಡುವುದು; ಶಿಕ್ಷಣ ವ್ಯಕ್ತಿಯ ಸ್ವಾತಂತ್ರ್ಯ ಮತ್ತು ವಿಶಿಷ್ಟ ವಿಕಾಸದ ಸಾಧನವಾಗಬೇಕು–ಈ ನಾಲ್ಕು ಸೂತ್ರಗಳನ್ನು ಆಧಾರ ಮಾಡಿಕೊಂಡು ಶಿಕ್ಷಣದಲ್ಲಿ ಪ್ರಗತಿ ಆಗಿದೆಯೇ. ಇಲ್ಲವೆ ಎಂದು ನಿರ್ಧರಿಸಬೇಕೆಂದು ಹೇಳಿರುವರು. ಶಿಕ್ಷಣ ಶಾಸ್ತ್ರದ ತಜ್ಞರಿಗೆ. ಬಳಸಿರುವ ಈ ಪಾರಿಭಾಷಿಕಗಳ ದೃಷ್ಟಿಯಿಂದ ಈ ವಿಧಾನ ಒಂದಿಷ್ಟು ವಿನೂತನವಾಗಿ ಕಾಣಬಹುದಾದರೂ ಒಳ್ಳೆಯ ಶಿಕ್ಷಣದ ಲಕ್ಷಣಗಳನ್ನು ಈ ಸೂತ್ರಗಳಲ್ಲಿ ಅಡಗಿಸಿರುವುದು ಚೆನ್ನಾಗಿ ಪರಿಶೀಲಿಸಿದಾಗ ಸ್ಪಷ್ಟವಾಗುತ್ತದೆ. ಈ ವಿಭಾಗದ ಇತರ ಲೇಖನಗಳಲ್ಲಿ ತಾವು ಕಾರ್ಯಕ್ಷೇತ್ರದಲ್ಲಿ ಕಂಡ. ಅನುಭವಿಸಿದ ಮತ್ತು ಆಲೋಚಿಸಿ ನಿರ್ಧರಿಸಿದ ಅಂಶಗಳನ್ನು ವಿವರಿಸಿರುವರು. ಅಧ್ಯಾಪಕರು. ವಿದ್ಯಾರ್ಥಿಗಳು ತಮ್ಮ ತಮ್ಮ ಕಾರ್ಯಕ್ಷೇತ್ರದಲ್ಲಿ ಪ್ರಗತಿ ಸಾಧಿಸಲು ಅನುಸರಿಸಬೇಕಾದ ವಿಧಾನ. ಶಿಕ್ಷಣದ ಬಹಿರಂಗ ಮತ್ತು ಅಂತರಂಗ. ಮಾಧ್ಯಮಿಕ

ಶಿಕ್ಷಣ, ಉನ್ನತ ಶಿಕ್ಷಣ ಮುಂತಾದ ವಿಷಯಗಳನ್ನು ಕುರಿತು ತಮ್ಮ ಅಭಿಪ್ರಾಯಗಳನ್ನು ಬೇರೆ ಬೇರೆ ಲೇಖನಗಳಲ್ಲಿ ವಿವರಿಸಿರುವರು. ಎರಡನೆಯ ವಿಭಾಗದಲ್ಲಿ ಶಿಕ್ಷಣದ ಪುನರ್ರಚನೆ, ಕರ್ನಾಟಕ ವಿಶ್ವವಿದ್ಯಾಲಯ, ಶಿಕ್ಷಣ ಮಾಧ್ಯಮ, ಭಾಷಾವ್ಯವಸ್ಥೆ, ಮಾತೃಭಾಷೆಯಲ್ಲಿ ಶಿಕ್ಷಣ, ಕನ್ನಡಿಗರ ಶಿಕ್ಷಣ ಸಮಸ್ಯೆ, ಗುರುಶಿಷ್ಯ ಸಂಬಂಧ ಮುಂತಾದ ಲೇಖನಗಳಿವೆ. ಲೇಖಕರು ಶಿಕ್ಷಣದ ವಿವಿಧ ಪ್ರಾಕಾರಗಳಿಗೆ ಸಂಬಂಧಿಸಿದಂತೆ ವ್ಯಕ್ತಪಡಿಸಿರುವ ಅಭಿಪ್ರಾಯಗಳು ಬಹುಮಟ್ಟಿಗೆ ಸರ್ವಮಾನ್ಯವೆನಿಸಬಲ್ಲ ಸ್ವರೂಪ ಪಡೆದಿವೆ.

ಶಿಕ್ಷಣವನ್ನು ಕೇವಲ ಶಾಸ್ತ್ರೀಯ ದೃಷ್ಟಿಯಿಂದಲೇ ಪರಿಶೀಲಿಸುವುದರ ಜೊತೆಗೆ ಸಾಮಾನ್ಯ ಮತ್ತು ಸಾಂಸ್ಕೃತಿಕ ದೃಷ್ಟಿಗಳಿಂದಲೂ ಪರ್ಯಾಲೋಚಿಸುವುದು ಅಗತ್ಯ. ಅದರಿಂದ ಶಿಕ್ಷಣ ಕೇವಲ ಯಾಂತ್ರಿಕವಾಗುವುದು ತಪ್ಪಿ ಸಜೀವವೂ ಜೀವನಕ್ಕೆ ಸಂಬಂಧಿಸಿದ ಪ್ರಕ್ರಿಯೆಯೂ ಆಗಬಲ್ಲದು. ಈ ದೃಷ್ಟಿಯಿಂದ ಲೇಖಕರ ಈ ಕೃತಿ ಸ್ವಾಗತಾರ್ಹವೆನಿಸಬಲ್ಲುದು. ಶಿಕ್ಷಣದಲ್ಲಿ ಆಸಕ್ತಿಯುಳ್ಳವರೆಲ್ಲ ಓದಿ ಲಾಭ ಪಡೆಯಬಹುದಾದ ಕೃತಿಯಿದು.

—ಡಾ. ಎನ್. ಎಸ್. ವೀರಪ್ಪ

ಶಿಕ್ಷಣಕ್ಷೇತ್ರದಲ್ಲಿ ಮೌಲ್ಯಮಾಪನ : ಲೇ.: ಕೆ. ರಾಮರಾವ್; ಪ್ರ.: ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ; ಪು.: 104; ಬೆಲೆ: 0.25

ವಿಶ್ವವಿದ್ಯಾನಿಲಯ ಬೋಧನೆ ಸಂಶೋಧನೆಗಳಂತೆ ಸುತ್ತಣ ಜನತೆಯಲ್ಲಿ ಜ್ಞಾನ ಪ್ರಸಾರ ಕಾರ್ಯವನ್ನು ಕೈಗೊಳ್ಳುವ ಹೊಣೆಯನ್ನೂ ಹೊತ್ತಿದೆ. ಈ ಕಾರ್ಯನಿರ್ವಹಣಕ್ಕಾಗಿ ಮೈಸೂರು ವಿಶ್ವವಿದ್ಯಾನಿಲಯ ಪ್ರಸಾರಾಂಗವನ್ನು ಆರಂಭಿಸಿ ಆಯ್ದ ಸ್ಥಳಗಳಲ್ಲಿ ಉಪನ್ಯಾಸಗಳನ್ನು ಏರ್ಪಡಿಸುತ್ತಿದೆ. ಜೊತೆಗೆ ಗ್ರಂಥ ಪ್ರಕಟಣೆಯ ಮೂಲಕವೂ ಆ ಕಾರ್ಯವನ್ನು ನಿರ್ವಹಿಸುತ್ತಿದೆ. ಕೆಲವು ಪ್ರಚಾರೋಪನ್ಯಾಸಗಳನ್ನು ಕಿರುಹೊತ್ತಗೆಗಳ ರೂಪದಲ್ಲಿ ಬರೆಸಿ ಪ್ರಕಟಿಸಲಾಗುತ್ತಿದೆ. ಈಗಾಗಲೆ ಅಂಥ ಸುಮಾರು 200 ಕಿರುಹೊತ್ತಗೆಗಳು ಪ್ರಕಟವಾಗಿ ಬಹು ಪರಿಣಾಮಕಾರಿಯಾಗಿ ಜ್ಞಾನ ಪ್ರಸಾರಮಾಡುತ್ತಿವೆ. ಪ್ರಕೃತ ಗ್ರಂಥ ಆ ಮಾಲೆಯಲ್ಲಿ 187ನೆಯ ಪುಷ್ಪ.

ಈ ಶತಮಾನದ ಆದಿಯಿಂದ ಶಿಕ್ಷಣವನ್ನು ಒಂದು ತಾಂತ್ರಿಕ ವೃತ್ತಿಯನ್ನಾಗಿ ಪರಿವರ್ತಿಸುವ ಯತ್ನ ನಡೆಯುತ್ತಿದೆ. ತಾಂತ್ರಿಕ ಕ್ಷೇತ್ರದಲ್ಲಿ ಸ್ಪಷ್ಟತೆ, ನಿಖರತೆ, ವಾಸ್ತವಿಕತೆ ಮತ್ತು ನಿಷ್ಕೃಷ್ಟತೆ–ಇವಕ್ಕೆ ಪ್ರಾಧಾನ್ಯ. ಶಿಕ್ಷಣದ ಬೇರೆ ಬೇರೆ ಮುಖಗಳಲ್ಲಿ ಮೇಲಿನ ನಾಲ್ಕು ಲಕ್ಷಣಗಳಿಗೆ ಅವಕಾಶ ಕಲ್ಪಿಸಿಕೊಳ್ಳುವುದರಿಂದ ಉದ್ದೇಶಿತ ಗುರಿಯನ್ನು ನಿಶ್ಚಿತವಾಗಿ ಸಾಧಿಸಬಹುದೆಂಬ ಭರವಸೆ ಹೆಚ್ಚುತ್ತಿದೆ. ಮೇಲಾಗಿ ಆಧುನಿಕ ವೃತ್ತಿಗಳೆಲ್ಲ ಈ ಮಾರ್ಗದಲ್ಲಿ ಮುನ್ನಡೆಯುತ್ತಿರುವ ಅಂಶವೂ ಶಿಕ್ಷಣದ ಮೇಲೆ ತನ್ನ ಪ್ರಭಾವವನ್ನು ಬೀರಿದೆ.

ಉದ್ದೇಶ, ಅವಕ್ಕಾಗಿ ರೂಪಿಸಿರುವ ಪಠ್ಯಕ್ರಮ, ಅವನ್ನು ಬೋಧಿಸಲು ಅನುಸರಿಸುವ ಕ್ರಮ, ಪ್ರತಿಫಲದ ಬೆಲೆಕಟ್ಟುವಿಕೆ–ಇವು ಶಿಕ್ಷಣದಲ್ಲಿ ಅನುಕ್ರಮವಾಗಿ ಬರುವ ನಾಲ್ಕು ಪ್ರಕ್ರಿಯೆಗಳು. ಇವುಗಳಲ್ಲಿ ನಾಲ್ಕನೆಯದನ್ನು ಮೌಲ್ಯಮಾಪನ ಎನ್ನಬಹುದು.

ಮೌಲ್ಯಮಾಪನ ಶಿಕ್ಷಣ ಕ್ಷೇತ್ರದಲ್ಲಿ ವಿಶಾಲವ್ಯಾಪ್ತಿ ಹೊಂದಿರುವ ಪ್ರಕ್ರಿಯೆ. ಆಡಳಿತದ ಸಮರ್ಪಕತೆ, ಕಾರ್ಯಕ್ರಮದ ಯಶಸ್ಸು, ಸೇವಾವ್ಯವಸ್ಥೆಯ ಉಪಯುಕ್ತತೆ, ಬೋಧನ ಕ್ರಮದ ಸೂಕ್ತತೆ, ವಿದ್ಯಾರ್ಥಿಯ ಶಿಕ್ಷಣಾಭಿವೃದ್ಧಿಯ ಸಾಧನೆ–ಇವೇ ಮುಂತಾದ ಅಂಶಗಳ ಫಲಾಫಲಗಳನ್ನು ನಿರ್ಧರಿಸುವಾಗ ಅನುಸರಿಸುವ ಪ್ರಕ್ರಿಯೆ ಇದು. ಹಿಂದೆ ಈ ಅಂಶಗಳನ್ನು ವೈಯಕ್ತಿಕ ಅಭಿಪ್ರಾಯದ ಮೇಲೆ ಸ್ಥೂಲವಾಗಿ ನಿರ್ಧರಿಸಲಾಗುತ್ತಿತ್ತು. ಈಗ ಅವನ್ನು ಶಾಸ್ತ್ರೀಯವಾಗಿ ನಿರ್ಧರಿಸುವುದು ನಡೆಯುತ್ತಿದೆ. ಅದಕ್ಕೆ ಅಗತ್ಯವಾದ ಉಪಕರಣಗಳೂ ಸಿದ್ಧವಾಗಿವೆ.

ನೂರಾರು ವರ್ಷಗಳಿಂದ ಶಿಕ್ಷಣ ಕ್ಷೇತ್ರದಲ್ಲಿ ವಿದ್ಯಾರ್ಥಿಯ ಶಿಕ್ಷಣಾಭಿವೃದ್ಧಿಯನ್ನು (ಸಾಧನೆ, ಗಳಿಕೆ) ಅಳೆಯಲು ಪರೀಕ್ಷೆ ಒಂದು ಸಾಧನವಾಗಿ ಪ್ರಚಾರದಲ್ಲಿದೆ. ಶಿಕ್ಷಣದಿಂದ ವಿದ್ಯಾರ್ಥಿಯಲ್ಲಿ

ಜ್ಞಾನ, ಕೌಶಲ, ಮನೋಭಾವ–ಇವೆಲ್ಲ ವೃದ್ಧಿಯಾಗಬೇಕು. ಆದರೆ ಸಾಂಪ್ರದಾಯಿಕ ಪರೀಕ್ಷೆಯಲ್ಲಿ ಕೇವಲ ಜ್ಞಾನಾರ್ಜನೆಯೊಂದನ್ನೆ ಅಳೆಯಲಾಗುತ್ತಿದೆ. ಹಾಗೂ ಉದ್ದೇಶದ ದೃಷ್ಟಿಯಿಂದ ಅಳೆಯಲಾಗುತ್ತಿಲ್ಲ; ಇದೂ ಸಮರ್ಪಕವಾಗಿ ನಡೆಯುತ್ತಿಲ್ಲ. ಜೊತೆಗೆ ಅವರಲ್ಲಿ ಇನ್ನೂ ಬಗೆಬಗೆಯ ಲೋಪದೋಷಗಳೂ ಕಂಡು ಬಂದಿವೆ. ಅವನ್ನು ಹೆಚ್ಚು ಸಮರ್ಪಕವಾಗಿ, ಉದ್ದೇಶಕ್ಕೆ ಅನುಗುಣವಾಗಿ ಹಾಗೂ ವಾಸ್ತವಿಕವಾಗಿ ಅಳೆಯಲು ಅಥವಾ ಅಂದಾಜು ಮಾಡಲು ಮೌಲ್ಯಮಾಪನ ಪ್ರಚಾರಕ್ಕೆ ಬರುತ್ತಿದೆ. ಸಾಂಪ್ರದಾಯಿಕ ಪರೀಕ್ಷೆಗಳಿಂದ ವಿದ್ಯಾರ್ಥಿಗಳನ್ನು ಮುಂದಿನ ತರಗತಿಗಳಿಗೆ ತೇರ್ಗಡೆ ಮಾಡಿಸಲು ನೆರವಾಗುತ್ತಿದ್ದರೆ ಮೌಲ್ಯಮಾಪನದಿಂದ ಇತರ ಅನೇಕ ಅನುಕೂಲತೆಗಳೂ ಇವೆ. ವಿದ್ಯಾರ್ಥಿಗಳಿಗೆ ಅದರಿಂದ ತಮ್ಮ ದೌರ್ಬಲ್ಯ ಅರಿವಾಗುತ್ತದೆ; ತಮ್ಮ ಉತ್ತರಗಳಿಗೆ ತಾವಾಗಿ ಬೆಲೆ ಕಟ್ಟುವ ಸಾಮರ್ಥ್ಯ ಸಿದ್ಧಿಸುತ್ತದೆ; ತಮ್ಮ ಮುಂದಿನ ಶಿಕ್ಷಣದ ಬಗ್ಗೆ ಮಾರ್ಗದರ್ಶನ ದೊರಕುತ್ತದೆ. ಮುಂದಿನ ತರಗತಿಗೆ ತೇರ್ಗಡೆಯಾಗಲು ಆಧಾರವಾಗುವುದಲ್ಲದೆ ತರಗತಿಯಲ್ಲಿ ಅಥವಾ ಆ ವಯೋಮಾನದವರಲ್ಲಿ ಅವನ ಸ್ಥಾನವೂ ಅರಿವಾಗುತ್ತದೆ; ಇತರರಿಗಿಂತ ತೀರ ಹಿಂದಿರುವುದಾದರೆ ತಾನು ಅವರಂತೆ ಮುಂದುವರಿಯಬೇಕೆಂಬ ಸ್ಪರ್ಧೆಯೂ ಉತ್ಸಾಹವೂ ವಿದ್ಯಾರ್ಥಿಯ ಮನಸ್ಸಿನಲ್ಲಿ ಮೂಡುತ್ತದೆ. ಅಧ್ಯಾಪಕರು ತಮ್ಮ ಬೋಧನ ಕ್ರಮದ ಯಥಾರ್ಥತೆಯನ್ನೂ ವಿದ್ಯಾರ್ಥಿಗಳು ಕಲಿಯುವ ಶಕ್ತಿಯ ಪ್ರಮಾಣವನ್ನೂ ಅರಿತುಕೊಳ್ಳುವುದರ ಜೊತೆಗೆ ಪಠ್ಯಕ್ರಮ ಸುಲಭವೇ ಕಠಿಣವೇ ಎಂಬುದನ್ನೂ ಅರಿತುಕೊಳ್ಳಬಹುದು. ಶಾಲೆಯ ಆಡಳಿತ ವರ್ಗದವರು ಯಾವ ಯಾವ ತರಗತಿಯ ವಿದ್ಯಾರ್ಥಿಗಳು ಎಷ್ಟರ ಮಟ್ಟಿಗೆ ಅಭಿವೃದ್ಧಿ ಸಾಧಿಸಿರುವರು, ಅದಕ್ಕೆ ಕಾರಣರಾದ ಉಪಾಧ್ಯಾಯರಾರು, ಚೆನ್ನಾಗಿ ಬೋಧಿಸಲಾರದ ಉಪಾಧ್ಯಾಯರಾರು, ಅವರ ಬೋಧನೆಯನ್ನು ಉತ್ತಮಪಡಿಸಲು ಏನು ಮಾಡಬೇಕು ಎಂಬುದನ್ನು ಅರಿತುಕೊಳ್ಳುವರು. ಹಾಗೆಯೇ ರಾಜ್ಯ ಸರ್ಕಾರ ಅದರಿಂದ ತನ್ನ ಸಂಸ್ಥೆಗಳಿಗೆ ತಕ್ಕ ವ್ಯಕ್ತಿಯನ್ನು ಕೆಲಸಕ್ಕೆ ತೆಗೆದುಕೊಳ್ಳುವುದಕ್ಕೂ ಆ ಕೆಲಸಕ್ಕೆ ಸೂಕ್ತವೆನಿಸುವ ರೀತಿಯಲ್ಲಿ ವೃತ್ತಿ ಶಿಕ್ಷಣ ನೀಡುವುದಕ್ಕೂ ಬೇರೆ ಬೇರೆ ಶಾಲೆಗಳ ಕಾರ್ಯವನ್ನು ಹೋಲಿಸಿ ನೋಡುವುದಕ್ಕೂ, ಹಿಂದುಳಿದ ಭಾಗಗಳ ಕಡೆ ಗಮನ ಕೊಟ್ಟು ಶಿಕ್ಷಣದ ಮಟ್ಟವನ್ನು ಸಂರಕ್ಷಿಸುವುದಕ್ಕೂ ಸಂಶೋಧನೆಗಳ ಫಲವನ್ನು ಬಳಸುವುದಕ್ಕೂ ಅನುಕೂಲವಾಗುತ್ತದೆ. ಇಷ್ಟೊಂದು ಅನುಕೂಲಗಳಿರುವ ಮೌಲ್ಯಮಾಪನ ಕಾರ್ಯ ಅಷ್ಟು ಸುಲಭವೇನಲ್ಲ. ಅದರ ಕಾರ್ಯಾಚರಣೆಯಲ್ಲಿ ಬಗೆ ಬಗೆಯ ಸಮಸ್ಯೆಗಳಿವೆ: ಶಿಕ್ಷಣದಿಂದ ಲಭಿಸುವ ಫಲಗಳು ಅವ್ಯಕ್ತ ಸ್ವರೂಪದಲ್ಲಿರುವುದರಿಂದ ಅವನ್ನು ಅಳೆಯಲು ಸೂಕ್ತ ಸನ್ನಿವೇಶಗಳನ್ನೋ ಪ್ರಶ್ನೆಗಳನ್ನೋ ರಚಿಸುವುದು ಅಗತ್ಯವಾಗುತ್ತದೆ; ಶಿಕ್ಷಣದಿಂದ ಲಭಿಸುವ ಹಲವು ಗುಣಧರ್ಮಗಳು ವಿಶಿಷ್ಟವಾಗಿರದೆ ಸಮ್ಮಿಶ್ರ ಸ್ವರೂಪದಲ್ಲಿರುವುದರಿಂದ ಅವನ್ನು ಪ್ರತ್ಯೇಕಿಸಿ ಅಳೆಯುವ ತಂತ್ರವನ್ನು ಬಳಸಬೇಕಾಗುತ್ತದೆ. ಗ್ರಾಹ್ಯವಾಗದ ಹಾಗೂ ಅಮೂರ್ತ ಸ್ವರೂಪದ ಗುಣಧರ್ಮಗಳ ಸ್ವರೂಪವನ್ನು ಅಳೆಯುವಾಗ ಅವುಗಳ ಅರ್ಥ, ಸಂಯೋಜನೆ, ವ್ಯಕ್ತಪಡುವ ಸನ್ನಿವೇಶ–ಇವನ್ನೂ ಪರಿಚಯ ಮಾಡಿಕೊಳ್ಳಬೇಕು. ಕೆಲವು ಗುಣಧರ್ಮಗಳು ಪ್ರಮಾಣದಲ್ಲಿ ಪೂರ್ಣವಾಗಿ ಶೂನ್ಯದ ಮಟ್ಟವನ್ನು ಮುಟ್ಟುವುದೇ ಇಲ್ಲ. ಅವನ್ನು ಹೆಚ್ಚು–ಕಡಮೆ, ಅಹುದು–ಅಲ್ಲ, ಒಳ್ಳೆಯದು–ಕೆಟ್ಟದ್ದು ಈ ವಿಧವಾದ ವಿವರಣೆಗಳಿಂದ ಅಳೆಯಬೇಕಾಗುತ್ತದೆ. ಇನ್ನು ಕೆಲವನ್ನು ಸೇ. 50, 46, 34 ಇತ್ಯಾದಿ ಸಂಖ್ಯಾ ಪ್ರಮಾಣಗಳಿಗೆ ಬದಲು ಸರಾಸರಿ, ಅರ್ಥಕ್ಕಿಂತ ಕಡಮೆ, ಅದಕ್ಕಿಂತ ಉತ್ತಮ ಇತ್ಯಾದಿ ದರ್ಜೆ ಅಥವಾ ವರ್ಗಗಳಲ್ಲಿ ಅಳೆಯಬೇಕಾಗುತ್ತವೆ. ಕೆಲವು ವೇಳೆ ಬರವಣಿಗೆಯ ಪರೀಕ್ಷೆಗಳಿಗೆ ಬದಲು ನಿಯಂತ್ರಿತ ಸನ್ನಿವೇಶವೊಂದರಲ್ಲಿ ವ್ಯಕ್ತಿ ನಿರ್ವಹಿಸುವ ಕಾರ್ಯ ಸ್ವರೂಪವನ್ನು ನೋಡಿ ಅವನ ಕೆಲವು ಗುಣಧರ್ಮಗಳನ್ನು ಅಳೆಯಬೇಕಾಗುತ್ತದೆ. ಇಷ್ಟೆಲ್ಲ ಸಮಸ್ಯೆಗಳಿದ್ದರೂ ಅವನ್ನು ನಿವಾರಿಸಿಕೊಂಡು, ಸಂದರ್ಭಕ್ಕೆ ತಕ್ಕಂಥ ಅಳತೆಯ ಸಾಧನ(ಪರೀಕ್ಷಣ)ಗಳನ್ನು ರಚಿಸಿಕೊಂಡು ಮೌಲ್ಯಮಾಪನ ಮಾಡುವ ಸಾಹಸ ನಡೆದೇ ಇದೆ.

· ಲೇಖಕರು ಮೌಲ್ಯಮಾಪನದಲ್ಲಿ ಬಳಕೆಗೆ ಬಂದಿರುವ ಸಂಖ್ಯಾತ್ಮಕ, ವಿವರಣಾತ್ಮಕ ದರ್ಶಕಗಳನ್ನು ಮನೋಭಾವ ಮಾಪಕ, ಸಮಾಜ ಆಲೇಖ (ಸೋಷಿಯೋಗ್ರಾಂ) ಸ್ವಯಂ ವರದಿ, ಭೇಟಿ ಮುಂತಾದ ಮಾಪನೆಯ ಸಾಧನಗಳನ್ನೂ ಅವನ್ನು ಬಳಸುವ ವಿಧಾನವನ್ನೂ ವಿವರಿಸಿರುವರು. ಆ ಸಾಧನಗಳು ಸಮರ್ಪಕವಾಗಿ ಅಳತೆ ಮಾಡಬೇಕಾದರೆ ಅವುಗಳು ಕೆಲವು ಲಕ್ಷಣಗಳನ್ನು ಪಡೆದಿರಬೇಕು. ನಾಲ್ಕನೆಯ

ಅಧ್ಯಾಯದಲ್ಲಿ ಆ ಲಕ್ಷಣಗಳನ್ನು ವಿವರಿಸಿರುವರು. ಕೊನೆಯ ಅಧ್ಯಾಯದಲ್ಲಿ ತರಗತಿಯ ಅಧ್ಯಾಪಕರ ದೃಷ್ಟಿಯಲ್ಲಿ ಮೌಲ್ಯಮಾಪನದ ಮುಖ್ಯ ಉದ್ದೇಶಗಳು ವಿವರವಾಗಿವೆ.

ಮೌಲ್ಯಮಾಪನಕ್ಕೆ ಸಂಬಂಧಿಸಿದ ಕೃತಿಗಳು ಕನ್ನಡದಲ್ಲಿ ವಿರಳ. ಲೇಖಕರ ಈ ಕೃತಿಯನ್ನು ಪ್ರಕಟಿಸಿ ಪ್ರಸಾರಾಂಗ ತುಂಬ ಉಪಕಾರಮಾಡಿದೆ.

—ಡಾ. ಎನ್. ಎಸ್. ವೀರಪ್ಪ

ನೈತಿಕ ಶಿಕ್ಷಣ : ಲೇ. : ಶಾಂತಯ್ಯ ಕೆಂಪಯ್ಯಮಠ; ಪ್ರ. : ಕರ್ನಾಟಕ ವಿಶ್ವವಿದ್ಯಾಲಯ, **ಧಾರವಾಡ; ಪುಟ:** 48; **ಬೆಲೆ:** 0.25

ಶಾಲೆಗಳಲ್ಲಿ ನೈತಿಕ ಶಿಕ್ಷಣವೀಯುವ ಬಗ್ಗೆ ಪರ ಮತ್ತು ವಿರುದ್ಧವಾದ ವಿವಾದಗಳು ಈ ಶತಮಾನದ ಆದಿಯಿಂದಲೂ ನಡೆಯುತ್ತ ಬಂದಿವೆ. ಆದರೂ ಸರ್ವಸಮ್ಮತವೆನ್ನಬಹುದಾದ ಇತ್ಯರ್ಥವನ್ನು ಮಾಡಲಾಗಿದೆಯೆಂದು ಹೇಳುವಂತಿಲ್ಲ. ವಿದ್ಯಾರ್ಥಿಗಳಲ್ಲಿ ನೈತಿಕ ಜೀವನದ ಬೆಳವಣಿಗೆಯಾಗಬೇಕೆಂಬುವರ ಬಗ್ಗೆ ಎಲ್ಲರೂ ಒಪ್ಪುವರಾದರೂ ಆ ಶಿಕ್ಷಣವನ್ನು ಹೇಗೆ. ಯಾರು, ಯಾವ ರೂಪದಲ್ಲಿ, ಎಷ್ಟರಮಟ್ಟಿಗೆ ನೀಡಬೇಕೆಂಬುವರ ಬಗ್ಗೆ ಭಿನ್ನಾಭಿಪ್ರಾಯಗಳಿವೆ. ನೀತಿನಿಯಮಗಳನ್ನು ಕಡ್ಡಾಯವಾಗಿ ಬೋಧಿಸುವ ಅಗತ್ಯವನ್ನು ಕೆಲವರು ಎತ್ತಿ ಹಿಡಿದರೆ ಅದರಿಂದ ಯಾವ ಉಪಯೋಗವೂ ಆಗುವುದು ಹಾಗಿರಲಿ ಅನರ್ಥವೇ ಆಗುವುದೆಂದು ಕೆಲವರು ಭಾವಿಸುವರು; ಅದಕ್ಕಾಗಿ ಪ್ರತ್ಯೇಕ ವೇಳೆಯನ್ನು ಗೊತ್ತುಮಾಡುವ ಅಗತ್ಯವನ್ನು ಕೆಲವರು ಸೂಚಿಸಿದರೆ. ಇನ್ನು ಕೆಲವರು ಅದು ಅನಗತ್ಯವೆಂದು ಭಾವಿಸಿ ಶಾಲೆಯ ಎಲ್ಲ ಕಾಲದಲ್ಲೂ ಅದನ್ನು ಬೋಧಿಸಬೇಕೆಂದು ಹೇಳುವರು. ಕೆಲವರು ನೈತಿಕ ಜೀವನಕ್ಕೆ ಸಂಬಂಧಿಸಿದ ವಿಧಿನಿಯಮಗಳನ್ನು ಬೋಧಿಸುವುದಕ್ಕೆ ಪ್ರಾಮುಖ್ಯವಿತ್ತರೆ ಇನ್ನು ಕೆಲವರು ಅವುಗಳ ಅನುಷ್ಠಾನಕ್ಕೆ ಪ್ರಾಮುಖ್ಯವೀಯುವರು. ಕೆಲವರು ಯಾವುದಾದರೂ ವಿಶಿಷ್ಟ ಧರ್ಮವೊಂದರ ತತ್ವವನ್ನು ಬೋಧಿಸಬೇಕೆಂದು ವಾದಿಸಿದರೆ ಮತ್ತೆ ಕೆಲವರು ಎಲ್ಲ ಧರ್ಮಗಳಿಗೂ ಸರ್ವಸಾಮಾನ್ಯವೆನಿಸಿರುವ ಮೂಲತತ್ತ್ವಗಳನ್ನು ಮಾತ್ರ ಬೋಧಿಸಬೇಕೆಂದು ವಾದಿಸಿದರು.

ಇಷ್ಟೊಂದು ವಾದ ವಿವಾದಗಳಿಗೆಡೆಗೊಟ್ಟಿರುವ ನೈತಿಕ ಶಿಕ್ಷಣವನ್ನು ಕೈ ಬಿಡುವುದೇ ಮೇಲೆಂದು ಅನೇಕ ರಾಷ್ಟ್ರಗಳು ಅವಕ್ಕೆ ಅವಕಾಶ ಕಲ್ಪಿಸಿಕೊಳ್ಳಲಿಲ್ಲ. ಈಚೆಗೆ ವಿದ್ಯಾರ್ಥಿಗಳಲ್ಲೂ ಜನಜೀವನದಲ್ಲೂ ತೋರಿಕೊಳ್ಳುತ್ತಿರುವ ಅಶಾಂತ ಪರಿಸ್ಥಿತಿಯನ್ನು ಕಂಡು ಎಲ್ಲ ಕಡೆಯಲ್ಲೂ ಮತ್ತೆ ನೈತಿಕ ಶಿಕ್ಷಣವನ್ನು ಯಾವುದಾದರೂ ರೂಪದಲ್ಲಿ ಆಚರಣೆಗೆ ತರುವ ಯತ್ನ ನಡೆಯುತ್ತಿದೆ. ಇಂಥ ಸಮಯದಲ್ಲಿ ಕರ್ನಾಟಕ ವಿಶ್ವವಿದ್ಯಾಲಯ ಈ ಕಿರುಹೊತ್ತಗೆಯನ್ನು ಪ್ರಕಟಿಸಿ ಶಿಕ್ಷಣರಂಗಕ್ಕೆ ಉಪಕಾರಮಾಡಿದೆ.

ಲೇಖಕರು ನೈತಿಕ ಶಿಕ್ಷಣದ ಪ್ರಾಮುಖ್ಯವನ್ನು ಕುರಿತು 'ಅಶಿಸ್ತಿನ ವಿಕೃತ ನಾಟ್ಯವನ್ನು ತಡೆಗಟ್ಟಲು ನೈತಿಕ ಶಿಕ್ಷಣದ ಸಿದ್ಧಾಂತ ಬೋಧೆ, ಪ್ರಚಾರ ಅತ್ಯಗತ್ಯ' ಎಂದು ಹೇಳಿ 'ಇಲ್ಲಿಯವರೆಗೆ ನಡೆದ ಪ್ರಯತ್ನಗಳ ಪಕ್ಷಿನೋಟವನ್ನು ಕಾಣುವುದಕ್ಕಾಗಿ ಈ ಕಿರುಹೊತ್ತಗೆಯಲ್ಲಿ ಅಲ್ಪ ಪರಿಶ್ರಮ ಮಾಡಲಾಗಿದೆ' ಎಂದು ಸೂಚಿಸಿರುವರು. ಪಾಶ್ಚಾತ್ಯ. ಪ್ರಾಚೀನ. ಅರ್ವಾಚೀನ, ತಜ್ಞರ ಶಿಕ್ಷಣ ಹಾಗೂ ತತ್ತ್ವಗಳ ರೂಪರೇಷೆಗಳನ್ನು ಅಲ್ಲಲ್ಲಿ ಬಿಡಿಸಲಾಗಿದೆ. ಪೀಠಿಕಾ ಪ್ರಕರಣದಲ್ಲಿ ಆಧುನಿಕ ಮಾನವ ಜೀವನದ ಆಂತರಿಕ ದುರಂತಗಳಿಗೆಲ್ಲ ನೈತಿಕ ಜೀವನದ ಅಭಾವವೆ ಕಾರಣವೆಂದು ಸೂಚಿಸಿ ಅದರ ಆವಶ್ಯಕತೆಯ ಬಗ್ಗೆ ಪ್ರಮುಖ ತತ್ತ್ವಜ್ಞಾನಿಗಳ ಮತ್ತು ಶಿಕ್ಷಣ ಆಯೋಗಗಳ ಅಭಿಪ್ರಾಯಗಳನ್ನು ಸಂಗ್ರಹಿಸಿದೆ. ಪ್ರಾಚೀನ ಭಾರತದಲ್ಲಿ ಶಿಕ್ಷಣ ಎಂಬ ಅಧ್ಯಾಯದಲ್ಲಿ ಗುರುಕುಲ ಆಶ್ರಮಗಳಲ್ಲಿ ನೈತಿಕ ಜೀವನಕ್ಕಿದ್ದ ಪ್ರಾಮುಖ್ಯವನ್ನು ಸೂಚಿಸುವುದರ ಜೊತೆಗೆ ಹಲವು ಪಾಶ್ಚಾತ್ಯ ತಜ್ಞರ ಅಭಿಪ್ರಾಯಗಳನ್ನೂ ಸೇರಿಸಿರುವುದನ್ನು ಕಾಣಬಹುದು. ಮೂರನೆಯ ಅಧ್ಯಾಯದಲ್ಲಿ ಆಧುನಿಕ ಭಾರತದಲ್ಲಿ ನೈತಿಕ ಶಿಕ್ಷಣವನ್ನು ಆಚರಣೆಗೆ ತರುವ ಬಗ್ಗೆ ನಡೆದ ಯತ್ನವನ್ನು ಪರಾಮರ್ಶಿಸುತ್ತ. 1882ರ ಭಾರತೀಯ ಶಿಕ್ಷಣ ಆಯೋಗ ಕೇಂದ್ರ ಶಿಕ್ಷಣ ಸಲಹಾಮಂಡಲಿ 1944–46ರ ಸಮಿತಿ, 1948ರ ವಿಶ್ವವಿದ್ಯಾನಿಲಯದ ಶಿಕ್ಷಣ ಆಯೋಗ, 1960ರ ಶ್ರೀ ಪ್ರಕಾಶಂ ಸಮಿತಿ, 1961ರ ಸಂಪೂರ್ಣಾನಂದ ಸಮಿತಿ, 1964–66ರ

ಕೊಠಾರಿ ಶಿಕ್ಷಣ ಆಯೋಗ—ಇವು ಆ ಬಗ್ಗೆ ನೀಡಿರುವ ಅಭಿಪ್ರಾಯಗಳನ್ನು ಸಂಗ್ರಹಿಸಿರುವರು. ಗಾಂಧೀಜಿ. ರವೀಂದ್ರರು ಮುಂತಾದ ರಾಷ್ಟ್ರನಾಯಕರ ಅಭಿಪ್ರಾಯಗಳನ್ನೂ ಉಲ್ಲೇಖಿಸಿರುವರು. ಮೈಸೂರು ರಾಜ್ಯದಲ್ಲಿ ನೈತಿಕ ಶಿಕ್ಷಣಕ್ಕಾಗಿ ಮಾಡಿರುವ ವ್ಯವಸ್ಥೆಯನ್ನು ಪರಿಚಯ ಮಾಡಿಕೊಟ್ಟಿರುವರು. ಕೊನೆಯಲ್ಲಿ ನೈತಿಕ ಶಿಕ್ಷಣದ ವಸ್ತು. ವಿಧಾನ. ಕಾಲ. ಕಾರ್ಯಕ್ರಮ ಮುಂತಾದ ಅಂಶಗಳನ್ನು ಕುರಿತು ಪರ್ಯಾಲೋಚಿಸಿರುವರು.

ಲೇಖಕರು ಮಾಡಿದ ಪ್ರಚಾರೋಪನ್ಯಾಸವೊಂದನ್ನು ಆಧಾರ ಮಾಡಿಕೊಂಡು ರಚಿಸಿರುವ ಕೃತಿಯಿದು. ವಿಷಯದ ಬಗ್ಗೆ ಅಗತ್ಯವೆನಿಸುವ ಅಂಶಗಳನ್ನೆಲ್ಲ ಸಂಗ್ರಹವಾಗಿ ಇದರಲ್ಲಿ ಒದಗಿಸಿದೆ. ಆದರೆ ಅಧ್ಯಾಯಗಳಲ್ಲಿ ವಿಷಯ ವ್ಯವಸ್ಥೆ ಉತ್ತಮಗೊಳ್ಳಬಹುದಾಗಿತ್ತು. ಆದರೂ ಶಿಕ್ಷಣ ಕ್ಷೇತ್ರದ ವಿಶಿಷ್ಟ ಮುಖವೊಂದಕ್ಕೆ ಸಂಬಂಧಿಸಿದಂತೆ ರಚನೆಯಾಗಿರುವ ಈ ಪುಸ್ತಕ ಆ ಕ್ಷೇತ್ರದಲ್ಲಿದ್ದ ಕೊರತೆಯನ್ನು ಬಹುಮಟ್ಟಿಗೆ ನಿವಾರಿಸಿದೆ. ನಿರಂತರ ಗೊಂದಲಕ್ಕೆ ಎಡೆಗೊಟ್ಟಿರುವ ನೈತಿಕ ಶಿಕ್ಷಣದ ಸ್ವರೂಪ. ಬೋಧನಾಕ್ರಮ. ಪಠ್ಯವಿಷಯ. ಅದನ್ನು ಆಚರಣೆಗೆ ತರುವಲ್ಲಿ ಎದುರು ಬರುವ ಅಡ್ಡಿ ಆತಂಕಗಳು. ನಿವಾರಣೋಪಾಯಗಳು ಇವೇ ಮುಂತಾದ ಅಂಶಗಳ ಬಗ್ಗೆ ಸಂಗ್ರಹವಾಗಿ ಇದರಲ್ಲಿ ವಿವರಗಳು ಅಡಕವಾಗಿವೆ.

—ಡಾ. ಎನ್. ಎಸ್. ವೀರಪ್ಪ

ರವೀಂದ್ರರ ಶಿಕ್ಷಣತತ್ವಜ್ಞಾನ: ಲೇ.: ಅನಂತ ಕುಲಕರ್ಣಿ; ಪ್ರ.: ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ; ಪುಟ: 68; ಬೆಲೆ: 0.25

ಅನ್ಯದೇಶದ ಶಿಕ್ಷಣಪದ್ಧತಿಯೊಂದನ್ನು ಭಾರತದಲ್ಲಿ ಪ್ರಚಾರಕ್ಕೆ ತಂದುದರ ವಿರುದ್ಧ ಅತೃಪ್ತಿಗೊಂಡ ತತ್ತ್ವಚಿಂತಕರು ರಾಷ್ಟ್ರೀಯ ಶಿಕ್ಷಣಪದ್ಧತಿಯನ್ನು ಆಚರಣೆಗೆ ತರಲು ಕಳೆದ ಶತಮಾನದ ಕೊನೆಕೊನೆಗೆ ಪ್ರಯತ್ನಿಸಿದರು. ಅದರ ಫಲವಾಗಿ ರೂಪುಗೊಂಡ ಪ್ರಸಿದ್ಧ ವಿದ್ಯಾಮಂದಿರಗಳಲ್ಲಿ ಶಾಂತಿನಿಕೇತನ ಬಹು ಮುಖ್ಯವಾದುದು. ಪ್ರಾಚೀನ ಭಾರತದ ವಿಶ್ವವಿದ್ಯಾನಿಲಯಗಳ ಮಾದರಿಯಲ್ಲಿ, ಬೋಲ್ಪುರದ ರೈಲ್ವೆ ನಿಲ್ದಾಣಕ್ಕೆ ಎರಡು ಮೈಲಿ ದೂರದಲ್ಲಿರುವ.ರಮ್ಯವೂ ನೀರವವೂ ಆದ ನಿವೇಶನದಲ್ಲಿ 1901ರಲ್ಲಿ ರವೀಂದ್ರರು 'ಶಾಂತಿನಿಕೇತನ' ಎಂಬ ಹೆಸರಿನಿಂದ ತಮ್ಮ ವಿದ್ಯಾಮಂದಿರವನ್ನು ಆರಂಭಿಸಿದರು. ಅನಂತರ. ಮಾನವರಲ್ಲಿ ದ್ವೇಷಾಸೂಯೆಗಳನ್ನು ನಿವಾರಿಸಿ ಮಧುರ ಬಾಂಧವ್ಯವನ್ನು ಮೂಡಿಸಲು ನೆರವಾಗುವುದಕ್ಕೂ ಭಾರತೀಯ ಮತ್ತು ವಿಶ್ವದ ಭಾಷೆ. ಸಂಗೀತ. ಕಲೆ. ಸಂಸ್ಕೃತಿ ಮುಂತಾದವುಗಳ ಅಭ್ಯಾಸಕ್ಕೆ ನೆರವಾಗುವುದಕ್ಕೂ ವಿಶ್ವಭಾರತಿ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಿದರು. ಅಲ್ಲದೆ ಸುತ್ತಮುತ್ತಣ ಸಮಾಜಜೀವನವನ್ನು ಉತ್ತಮಪಡಿಸಲು ಶ್ರೀನಿಕೇತನವೆಂಬ ವಿಸ್ತರಣ ಸಂಸ್ಥೆಯನ್ನು ಸ್ಥಾಪಿಸಿದರು. ಅವರು ತಾವು ತಳೆದಿದ್ದ ಶೈಕ್ಷಣಿಕ ವಿಚಾರಗಳನ್ನು ತತ್ತ್ವ ಸಿದ್ಧಾಂತಗಳಲ್ಲಿ ಬರೆದಿಡಲಿಲ್ಲ; ತಾವು ಆರಂಭಿಸಿದ ಈ ಶಿಕ್ಷಣ ಸಂಸ್ಥೆಗಳಲ್ಲಿ ಪ್ರಯೋಗಿಸಿ ಆಚರಣೆಗೆ ತಂದರು. ಆದ್ದರಿಂದ ಲೇಖಕರು ತಮ್ಮ ಈ ಕೃತಿಯಲ್ಲಿ ರವೀಂದ್ರರು ಸ್ಥಾಪಿಸಿದ ಮೂರು ಶಿಕ್ಷಣ ಸಂಸ್ಥೆಗಳನ್ನೂ ಇತರ ಅಂಗ ಸಂಸ್ಥೆಗಳನ್ನೂ ಅವುಗಳ ಕಾರ್ಯವನ್ನೂ ಮೊದಲು ವಿವರಿಸಿ ಅನಂತರ ಅವರ ಶೈಕ್ಷಣಿಕ ವಿಚಾರಗಳನ್ನು ಪರ್ಯಾಲೋಚಿಸಿರುವರು. ಪುಸ್ತಕದ ಕೊನೆಯ ಅಧ್ಯಾಯದಲ್ಲಿ ರವೀಂದ್ರರ ಶಿಕ್ಷಣತತ್ತ್ವದೃಷ್ಟಿಯನ್ನು ಸ್ಥೂಲವಾಗಿ ವಿವರಿಸಿರುವರು. ಅದನ್ನು ಇಲ್ಲಿ ಸಂಗ್ರಹವಾಗಿ ಸೂಚಿಸಬಹುದು.

ಮಾನವನ ಸಂಪೂರ್ಣ ಬೆಳವಣಿಗೆಯಾಗುವಂತೆ ಶಿಕ್ಷಣದ ಗೊತ್ತುಗುರಿಗಳಿರಬೇಕು. ಅಂಥ ಶಿಕ್ಷಣ ಕೇವಲ ಪುಸ್ತಕದಿಂದ ದೊರಕುವುದಿಲ್ಲ. ಜ್ಞಾನವೊಂದೇ ಶಿಕ್ಷಣದ ಸರ್ವಸ್ವವಾಗಿರದೆ ಶೀಲ ನಿರೂಪಣೆಯ ಕಡೆಗೂ ಗಮನ ಕೊಡಬೇಕು. ವ್ಯಕ್ತಿ ಶಿಕ್ಷಣದಿಂದ ತನ್ನ ದೇಶಕ್ಕೂ ಜಗತ್ತಿಗೂ ತನ್ನ ಕರ್ತವ್ಯಗಳನ್ನು ನಿರ್ವಹಿಸುವ ಶಕ್ತಿಯನ್ನು ಪಡೆದುಕೊಳ್ಳಬೇಕು. ಅಂಥ ಆದರ್ಶ ಸಾಧನೆಗೆ ಪ್ರಾಚೀನ ಗುರುಕುಲಗಳು ಆದರ್ಶವೊದಗಿಸಬಲ್ಲ ಸಂಸ್ಥೆಗಳು. ಆಧುನಿಕ ವಿಜ್ಞಾನದ ಅಭ್ಯಾಸ ಅಗತ್ಯವಾಗಿರುವಂತೆ ಅಧ್ಯಾತ್ಮವನ್ನೂ ಅಭ್ಯಾಸಿಸಬೇಕು. ಅವೆರಡೂ ಒಂದೇ ಚಕ್ಕಡಿಯ ಎರಡು ಗಾಲಿಗಳು. ಶಿಕ್ಷಣ

ಸಂಸ್ಥೆಗಳು ನಗರ ಜಂಜಡದಿಂದ ದೂರವಾಗಿ ನಿಸರ್ಗರಮಣೀಯ ಮಡಿಲಲ್ಲಿರಬೇಕು. ಅಲ್ಲಿ ಭವ್ಯ ಸೌಧಗಳನ್ನು ನಿರ್ಮಿಸಬೇಕಾಗಿಲ್ಲ. ಸಾದಾ ಕಟ್ಟಡಗಳಾದರೆ ಸಾಕು. ಕಟ್ಟಡ ಸಲಕರಣೆಗಳ ಮಹತ್ವದವಲ್ಲ, ಅಧ್ಯಾಪಕ ಮಹತ್ವದ ವ್ಯಕ್ತಿ. ಅಧ್ಯಾಪಕ–ವಿದ್ಯಾರ್ಥಿಗಳಲ್ಲಿ ನಿಕಟವಾದ ಸಂಪರ್ಕ ಅಗತ್ಯ. ಸಾಮಾನ್ಯವಾಗಿ ತರಗತಿಗಳನ್ನು ಹೊರಗಡೆ ಮರದಡಿ ನಡೆಸುವುದು ಕ್ರಮ. ಕಲಿಯಲು ವಿದ್ಯಾರ್ಥಿಗೆ ಪೂರ್ಣ ಸ್ವಾತಂತ್ರ್ಯ ಅಗತ್ಯ. ಆಗ ಅಶಿಸ್ತಿನ ಪ್ರಸಂಗಗಳು ಉದ್ಭವಿಸಲಾರವು. ಶಿಸ್ತು ಬಾಹ್ಯ ನಿಯಮಗಳಿಂದ ನೆಲಸದು. ಆಂತರಿಕವಾಗಿ ಪ್ರೇರಿತವಾಗಬೇಕು. ವಿದ್ಯಾರ್ಥಿಗಳು ತಮ್ಮ ಕಾರ್ಯವನ್ನು ತಾವೇ ನೋಡಿಕೊಳ್ಳುತ್ತ ಸ್ವಯಮಾಡಳಿತ ನಡೆಸುತ್ತಿದ್ದರೆ ಶಿಸ್ತು ತಾನಾಗಿ ವರ್ಧಿಸುತ್ತದೆ. ಅವರಲ್ಲಿರಬಹುದಾದ ಕಿಡಿಗೇಡಿಗಳೂ ಸಹಾನುಭೂತಿ, ಪ್ರೀತಿ, ವಿಶ್ವಾಸ—ಇವುಗಳಿಂದ ಸನ್ಮಾರ್ಗಕ್ಕೆ ಬರುವರು. ದೇಶದ ಹೆಸರಿನಲ್ಲಿ ವ್ಯಕ್ತಿಯ ಸ್ವಾತಂತ್ರ್ಯವನ್ನು ಕಸಿದುಕೊಳ್ಳುವುದು ಹಿತವಲ್ಲ. ಸಮಾಜಕ್ಕಾಗಿ ವ್ಯಕ್ತಿಯೆಂದು ಭಾವಿಸುವುದಾದರೂ ವ್ಯಕ್ತಿಯಿಂದ ಸಮಾಜ ಎಂಬುದನ್ನೂ ನೆನಪಿನಲ್ಲಿಡಬೇಕು. ವ್ಯಕ್ತಿಯ ವಿಕಾಸಕ್ಕಾಗಿ ಪ್ರತಿಯೊಬ್ಬರಿಗೂ ಅವಕಾಶವಿರಬೇಕು. ಸ್ವಾತಂತ್ರ್ಯವಿರಬೇಕು. ಬೋಧಿಸುವಾಗ ಪಾಂಡಿತ್ಯಪೂರ್ಣ ಭಾಷಣ ಮಾಡುತ್ತ ಅದನ್ನು ಕೇಳಿಕೊಂಡು ಮಕ್ಕಳು ಸುಮ್ಮನೆ ಕುಳಿತಿರುವುದು ಉತ್ತಮ ಕ್ರಮವಲ್ಲ. ಬಾಲಕ ಬಾಲಕಿಯರು ಚಟುವಟಿಕೆಯಾಗಿದ್ದು ಕಲಿಯಬೇಕು. ತಮ್ಮ ಯತ್ನದಿಂದಲೇ ಜ್ಞಾನವನ್ನು ಸಾಧಿಸಬೇಕು. ಆ ಕಾರ್ಯ ಸುಸೂತ್ರವಾಗಿ ನಡೆಯುವಂತೆ ಶಿಕ್ಷಕರು ಮಾರ್ಗದರ್ಶನ ಮಾಡಬೇಕು. ಮಕ್ಕಳು ಸ್ವತಂತ್ರವಾಗಿ ಪ್ರಯೋಗ ನಡೆಸುತ್ತ ಕಲಿಯುವುದು ಪರಿಣಾಮಕಾರಿಯಾದ ಕ್ರಮ. ಕಲಿಯುವಾಗ ಅವರ ಮುಂದೆ ಉದ್ದೇಶವೊಂದನ್ನು ರೂಪಿಸಿ ಅವರ ಮೇಲೆ ಅದನ್ನು ಕಡ್ಡಾಯ ಮಾಡುವುದರ ಬದಲು ಅವರು ಸ್ವಾಭಾವಿಕವಾಗಿ ಕಲಿಯಲು ಬಿಡಬೇಕು. ವೇಳಾಪತ್ರಿಕೆಯ ಇಕ್ಕಟ್ಟಿನಲ್ಲಿ ಪಾಠ ಮಾಡುತ್ತ ಮಕ್ಕಳನ್ನು ಯಂತ್ರದ ಬೊಂಬೆಗಳಂತೆ ನಡೆಸುವುದರಿಂದ ಬೇಸರವಾಗಿ ಶಿಕ್ಷಣ ಯಶಸ್ಸನ್ನು ಸಾಧಿಸಲಾರದು. ಅವರಿಗೆ ಆಸಕ್ತಿ ಬಂದಾಗ ಇಷ್ಟ ಬಂದ ವಿಷಯವನ್ನು ಕಲಿಯಲು ಅವಕಾಶವಿರಬೇಕು. ಬೇಸರವಾದಾಗ ನಿಲ್ಲಿಸಲು ಸ್ವಾತಂತ್ರ್ಯ ಇರಬೇಕು. ಮಕ್ಕಳು ಸ್ವಾಭಾವಿಕವಾಗಿ ವಿಷಯವನ್ನು ಸಂಗ್ರಹಿಸುವಷ್ಟು ಹೆಚ್ಚಿನ ಆಸಕ್ತಿ ಹೊಂದಿರುವುದರಿಂದ ಶಿಕ್ಷಕರೇ ಎಲ್ಲವನ್ನೂ ಸಿದ್ಧಪಡಿಸಿ ಅವರ ತಲೆಗೆ ತುಂಬುವ ಯತ್ನ ಮಾಡುವುದು ಉಚಿತವಲ್ಲ, ಕ್ರೂರವಾದದ್ದು. ಅಪನಂಬಿಕೆಯೂ ಕಿತ್ತಾಟದಲ್ಲಿ ತೊಡಗಿರುವ ಮಾನವ ಜಗತ್ತಿನಲ್ಲಿ ಏಕತೆಯನ್ನೂ ಮಧುರ ಬಾಂಧವ್ಯವನ್ನೂ ಬೆಳೆಸಲು ಶಿಕ್ಷಣದಿಂದ ಸಾಧ್ಯವಾಗಬೇಕು. ಸದ್ಯದಲ್ಲಿ ಶಿಕ್ಷಣಕ್ಕೂ ಜೀವನಕ್ಕೂ ಇರುವ ಅಂತರ ಕಡಿಮೆಯಾಗಬೇಕು. ಶಿಕ್ಷಣ ಸಂಸ್ಥೆಗಳು ಸಮಾಜದ ಆಶೋತ್ತರಗಳನ್ನು ಅರಿತು ಅದರ ಪುರೋಭಿವೃದ್ಧಿಗೆ ನೆರವಾಗಬೇಕು. ಅವು ಸಮಾಜದ ಸಂಸ್ಕೃತಿ ಪರಂಪರೆಯ ಪ್ರತಿಬಿಂಬವೂ ಆಗಿರಬೇಕು. ಎಂದರೆ ಜೀವನ ಮತ್ತು ಶಿಕ್ಷಣ ಒಂದಕ್ಕೊಂದಕ್ಕೆ ಪೂರಕವಾಗಿ ಕೆಲಸಮಾಡಬೇಕು. ಶಿಕ್ಷಣದಿಂದ ಜೀವನಕ್ಕೆ ಅನುಕೂಲವಾಗಬೇಕು. ಸಂಶೋಧನೆಗಳ ಮೂಲಕ ಜೀವನವನ್ನು ಪರಿಪುಷ್ಟಿಗೊಳಿಸಬೇಕು. ಸಾಂಸ್ಕೃತಿಕ ಕಾರ್ಯಕ್ರಮಗಳು ಶಿಕ್ಷಣ ಸಂಸ್ಥೆಗಳಲ್ಲಿ ಚೈತನ್ಯವನ್ನು ತುಂಬಬೇಕು. ಸಮಾಜ ಜೀವನದೊಡನೆ ಸಂಪರ್ಕ ಸಾಧಿಸಬೇಕು.

ಮಾತೃಭಾಷೆಯನ್ನು ಶಿಕ್ಷಣ ಮಾಧ್ಯಮವನ್ನಾಗಿ ಎಲ್ಲ ಹಂತಗಳಲ್ಲೂ ಆಚರಣೆಗೆ ತರಬೇಕು. ಅನ್ಯಭಾಷೆಯ ಮೂಲಕ ಪಡೆಯುವ ಶಿಕ್ಷಣ ನಿಸ್ಸತ್ವ, ಪರಿಣಾಮರಹಿತ. ಭಾಷಾಬೋಧನೆಯಲ್ಲಿ ಭಾಷೆಯನ್ನು ಮೊದಲು ಕಲಿಸಿ ವ್ಯಾಕರಣವನ್ನು ಅನಂತರ ಕಲಿಸಬೇಕು. ಭಾರತೀಯ ಸಂಸ್ಕೃತಿಯ ಆಗರವಾಗಿರುವ ರಾಮಾಯಣ ಭಾರತಗಳನ್ನು ಮಾತೃಭಾಷೆಯಲ್ಲಿ ಪಠನಮಾಡಬೇಕು. ಹಲವಾರು ಭಾಷೆಗಳಿರುವ ಭಾರತದಲ್ಲಿ ಒಂದೊಂದು ಭಾಷೆಯ ಮೂಲಕವೂ ಆಯಾ ಸಂಸ್ಕೃತಿಯ ಅಭಿವೃದ್ಧಿಯಾಗಿ ಸಮಗ್ರ ಭಾರತದ ಸಂಸ್ಕೃತಿ ಮೆರುಗೇರಬೇಕು. ಮಾತೃಭಾಷೆಯನ್ನು ಕಲಿಸುವ ಮುನ್ನ ಇಂಗ್ಲಿಷ್ ಅಥವಾ ಇತರ ಭಾಷೆಯನ್ನು ಕಲಿಸುವ ಯತ್ನ ಅಪಾಯಕಾರಿ ಪ್ರವೃತ್ತಿ. ವಿಷಯವನ್ನು ವ್ಯಕ್ತಪಡಿಸುವುದಕ್ಕೂ ಗ್ರಹಿಸುವುದಕ್ಕೂ ಮಾತೃಭಾಷೆ ಹೆಚ್ಚು ಪರಿಣಾಮಕಾರಿಯಾದ್ದು.

—ಮೇಲಿನ ವಿವರಣೆಯಿಂದ ರವೀಂದ್ರರ ಶೈಕ್ಷಣಿಕ ಅಭಿಪ್ರಾಯಗಳನ್ನು ಸ್ಥೂಲವಾಗಿ ಗ್ರಹಿಸಬಹುದು. ಲೇಖಕರು ಈ ಅಭಿಪ್ರಾಯಗಳನ್ನು ಸೂಕ್ತವೆನಿಸುವ ಶೀರ್ಷಿಕೆಗಳಲ್ಲಿ ಅನುವಿಡಿಸಿ ಹೆಚ್ಚು ಶಾಸ್ತ್ರೀಯವೆನ್ನಬಹುದಾದ ರೀತಿಯಲ್ಲಿ ಪರಿಚಯ ಮಾಡಿಕೊಡಬಹುದಾಗಿತ್ತು. ಆದರೂ ಇರುವ

ಅವಕಾಶವಲ್ಲಿ, ರವೀಂದ್ರರು ತಳೆದಿದ್ದ ಅಭಿಪ್ರಾಯಗಳನ್ನೂ ಅವುಗಳನ್ನು ಆಧಾರ ಮಾಡಿಕೊಂಡು ವ್ಯವಸ್ಥೆಗೊಳಿಸಿದ ಶಿಕ್ಷಣ ಸಂಸ್ಥೆಗಳನ್ನೂ ಅಲ್ಲಿನ ಕಾರ್ಯಕ್ರಮಗಳನ್ನೂ ಸ್ಪಷ್ಟವಾಗಿ ಪರಿಚಯ ಮಾಡಿಕೊಟ್ಟಿರುವರು.

—ಡಾ. ಎಸ್. ಎಸ್. ವೀರಪ್ಪ

ವಿಕಾಸ ಮನೋವಿಜ್ಞಾನ: ಲೇ.: ಎ.ಎಸ್. ಧರಣೇಂದ್ರಯ್ಯ; ಪ್ರ.: ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ; ಪುಟ: 16 + 408; ಬೆಲೆ: ರೂ. 12

ಕನ್ನಡದಲ್ಲಿ ಮನೋವಿಜ್ಞಾನ ಗ್ರಂಥಗಳ ಸಂಖ್ಯೆ ತೀರ ಕಡಿಮೆ. ಮನೋವಿಜ್ಞಾನದ ಸಾಮಾನ್ಯ ಪರಿಚಯ ಮಾಡಿಕೊಡುವ—ಅಷ್ಟೇನೂ ಸಮರ್ಪಕವಲ್ಲದ—ಕೃತಿಗಳು ಅಲ್ಲೊಂದು ಇಲ್ಲೊಂದು ಪ್ರಕಟವಾಗಿದ್ದರೂ, ಅದರ ವಿಶಿಷ್ಟ ಶಾಖೆಗಳ ಬಗ್ಗೆ ಪುಸ್ತಕಗಳು ಇಲ್ಲವೇ ಇಲ್ಲ ಎಂದು ಹೇಳಬಹುದು. ಈ ಮಾತಿಗೆ ಅಪವಾದ ಎನ್ನುವಂತೆ ಕಳೆದ ಒಂದೆರಡು ವರುಷಗಳ ಅವಧಿಯಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆ ಮತ್ತು ಬೆಂಗಳೂರು ವಿಶ್ವವಿದ್ಯಾಲಯದ ಪ್ರಕಾಶನ ವಿಭಾಗಗಳ ಪ್ರೋತ್ಸಾಹದಿಂದ ವರ್ತನ ಚಿಕಿತ್ಸೆ, ಸಮಾಜ ಮನೋವಿಜ್ಞಾನ, ಶೈಕ್ಷಣಿಕ ಮನೋವಿಜ್ಞಾನ ಮೊದಲಾದ ವಿಚಾರಗಳನ್ನು ಕುರಿತ ಪ್ರಕಟಣೆಗಳು ಬೆಳಕಿಗೆ ಬಂದಿವೆ. ಪ್ರಕೃತ ವಿಮರ್ಶೆಗೊಳಗಾಗಿರುವ ಪುಸ್ತಕ ವಿಕಾಸ ಮನೋವಿಜ್ಞಾನದ ಬಗೆಗೆ ಹೊರಬಂದಿರುವ ಮೊದಲ ಕೃತಿ: ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆ ಏರ್ಪಡಿಸಿದ್ದ, ಕನ್ನಡದಲ್ಲಿ ಮನೋವೈಜ್ಞಾನಿಕ ಗ್ರಂಥ ರಚನೆಯ ಒಂದು ಸ್ಪರ್ಧೆಯಲ್ಲಿ ಬಹುಮಾನ ಪಡೆದ ಕೃತಿ. ಅಷ್ಟು ಮಾತ್ರವೇ ಅಲ್ಲ, ಒಂದು ಗಮನಾರ್ಹವಾದ ಕೃತಿ ಕೂಡ ಹೌದು. ಒಂದು ಕ್ಷೇತ್ರದಲ್ಲಿ ಹೊರಬಂದ ಮೊದಲ ಕೃತಿ ಅಥವಾ ಒಂದು ಸ್ಪರ್ಧೆಯಲ್ಲಿ ಬಹುಮಾನವಿಜೇತ ಕೃತಿ ಎನ್ನುವ ಕಾರಣಗಳಿಗಾಗಿ ಇದು ಗಮನಾರ್ಹವಾದದ್ದು ಎನ್ನುವುದು ಇದರ ಅರ್ಥವಲ್ಲ. ಕೆಲವು ಕೃತಿಗಳು ಗಮನಾರ್ಹವಾಗುವುದು ಹಾಗೆ! ಆದರೆ ಧರಣೇಂದ್ರಯ್ಯನವರ ವಿಕಾಸ ಮನೋವಿಜ್ಞಾನ ಬೇರೆ ಜಾತಿಗೆ ಸೇರಿದ, ಬೇರೆ ಕಾರಣಗಳಿಗಾಗಿ ಗಮನಾರ್ಹ ಎನ್ನಿಸಿಕೊಳ್ಳಬಲ್ಲ ವೈಜ್ಞಾನಿಕ ಗ್ರಂಥ.

ಮೊದಲನೆಯದಾಗಿ ಇದೊಂದು ವ್ಯಾಪಕವಾದ ಪಠ್ಯಪುಸ್ತಕ. ಹದಿನಾಲ್ಕು ಅಧ್ಯಾಯಗಳನ್ನು ಒಳಗೊಂಡಿರುವ ಈ ಪುಸ್ತಕ, ವ್ಯಕ್ತಿಯೊಬ್ಬ ಗರ್ಭಾಂಕದಿಂದ ಪ್ರಾರಂಭಗೊಂಡು ವೃದ್ಧಾಪ್ಯದವರೆಗೆ ಹಂತಹಂತವಾಗಿ ಹೇಗೆ ಮುಂದುವರಿದುಕೊಂಡು ಹೋಗುತ್ತಾನೆ ಎನ್ನುವ ಅಂಶವನ್ನು ವಿವರವಾಗಿ ಚಿತ್ರಿಸುತ್ತದೆ. ಪ್ರತಿ ಹಂತದಲ್ಲೂ ಕಾಣಬರುವ ವಿಶಿಷ್ಟ ಲಕ್ಷಣಗಳು, ವಿಕಾಸ ಕ್ರಿಯೆಗಳು, ವ್ಯಕ್ತಿ ವ್ಯತ್ಯಾಸಗಳು ಸಾಧಾರಣವಾಗಿ ನಿರೂಪಿತವಾಗಿವೆ. ಸಂಬಂಧಪಟ್ಟ ಸಂಶೋಧನ ಫಲಿತಾಂಶಗಳು ಪುಸ್ತಕದುದ್ದಕ್ಕೂ ಉಲ್ಲೇಖಿತವಾಗಿವೆ.

ತೀರ ಸಂಕೀರ್ಣವಾದ ವಿಚಾರಗಳನ್ನು ಅತಿ ಸುಲಭವಾಗಿ ಹೇಳುವ ಧರಣೇಂದ್ರಯ್ಯನವರ ಶೈಲಿ ಮೆಚ್ಚಬಹುದಾದ ಈ ಕೃತಿಯ ಇನ್ನೊಂದು ಲಕ್ಷಣ. ಇಲ್ಲಿ ಕಾಣಬರುವ ಸರಳವಾದ ಹಾಗೂ ನೇರ ವಿಷಯ ನಿರೂಪಣೆ ವೈಜ್ಞಾನಿಕ ವಿಚಾರಗಳನ್ನು ಕನ್ನಡದಲ್ಲಿ ತಿಳಿಸಿಹೇಳುವುದು ಕಷ್ಟ ಅಥವಾ ಆಗದು ಎನ್ನುವವರಿಗೊಂದು ಸವಾಲಾಗಿದೆ. ಮನೋವೈಜ್ಞಾನಿಕ ಪಾರಿಭಾಷಿಕ ಶಬ್ದಗಳನ್ನು ಸಮರ್ಪಕವಾಗಿ ರೂಪಿಸಿ, ಬಳಸಲಾಗಿದೆ.

ವಿಕಾಸ ಮನೋವಿಜ್ಞಾನ ಕ್ಷೇತ್ರದಲ್ಲಿ ನಮ್ಮ ದೇಶದಲ್ಲಿ ನಡೆದಿರುವ ಸಂಶೋಧನೆ ಬಲು ಕಡಿಮೆ. (ಇದು ಮನೋವಿಜ್ಞಾನದ ಯಾವುದೇ ಕ್ಷೇತ್ರಕ್ಕೂ ಅನ್ವಯಿಸಬಹುದಾದ ಮಾತು!) ಆದ್ದರಿಂದ ಈ ಗ್ರಂಥ ತನ್ನ ವಸ್ತುಗಳಿಗೆ ಪಾಶ್ಚಾತ್ಯ ದೇಶಗಳಲ್ಲಿ ನಡೆದ ಸಂಶೋಧನೆಗಳನ್ನೇ ಆಧಾರವಾಗಿಟ್ಟುಕೊಳ್ಳುವುದು ಅನಿವಾರ್ಯವಾಗಿದೆ. ಹಾಗಾದರೂ ಎಲ್ಲೆಲ್ಲಿ ಸಾಧ್ಯವೋ ಅಲ್ಲಲ್ಲಿ ದೇಶದಲ್ಲಿ ನಡೆದಿರುವ ಸಂಶೋಧನೆಗಳನ್ನೂ ಅವರ ಫಲಿತಾಂಶಗಳನ್ನೂ ಉಲ್ಲೇಖಿಸಲಾಗಿದೆ. ಜೊತೆಗೆ ನಮ್ಮ ದೇಶ ಈ ಕ್ಷೇತ್ರದಲ್ಲಿ ಸಾಕಷ್ಟು ಸಂಶೋಧನೆ ನಡೆದಿಲ್ಲ ಎನ್ನುವ ಕೊರತೆಯನ್ನು ಗಮನದಲ್ಲಿಟ್ಟುಕೊಂಡು, "ಒಟ್ಟಿನಲ್ಲಿ ವ್ಯಕ್ತಿ ವಿಕಾಸದ

ಬಗ್ಗೆ ವ್ಯವಸ್ಥಿತ ವೈಜ್ಞಾನಿಕ ಅಧ್ಯಯನಗಳು ನಮ್ಮ ಸಂಸ್ಕೃತಿಯ ಬೆಳಕಿನಲ್ಲೇ ಆಗಬೇಕಾಗಿದೆ" ಎಂಬ ವಿಚಾರವನ್ನು ಧರಣೇಂದ್ರಯ್ಯನವರು ಪ್ರತಿಪಾದಿಸಿದ್ದಾರೆ. ಭಾರತೀಯ ಸಾಮಾಜಿಕ ದರ್ಶನಗಳಲ್ಲಿ ಪ್ರತಿಪಾದಿತವಾಗಿರುವ ಕಲ್ಪಿತಭಾವಗಳು ನಾವು ನಡೆಸುವ ಅಧ್ಯಯನಗಳಿಗೆ ಸಂಪನ್ಮೂಲಗಳಾಗ ಬಹುದೆಂಬ ಅವರ ಸಲಹೆ ಪರಿಶೀಲನಾರ್ಹವಾಗಿದೆ.

ಉತ್ತಮ ಬರವಣಿಗೆ ಹಾಗೂ ವ್ಯಾಪಕ ವಸ್ತು ನಿರೂಪಣೆಗಳುಳ್ಳ ಈ ಪಠ್ಯಪುಸ್ತಕದಲ್ಲಿ ಒಂದೆರಡು ಅರೆಕೊರೆಗಳನ್ನು ಗಮನಿಸಬಹುದು. ವಿಕಾಸ ಮನೋವಿಜ್ಞಾನ ಹಿಂದೆಂದೂ ಕಾಣದ ಗತಿಯಲ್ಲಿ ಇಂದು ವಿಸ್ತರಣೆಗೊಳ್ಳುತ್ತಿದೆ. ಹೊಸ ಹೊಸ ಸಂಶೋಧನ ಕ್ಷೇತ್ರಗಳು ವಿಕಾಸ ಮನೋವಿಜ್ಞಾನಿಗಳ ಆಸಕ್ತಿಯನ್ನು ಕೆರಳಿಸಿವೆ; ಮತ್ತು ಅವುಗಳ ಬಗೆಗಿನ ಸಂಶೋಧನೆಗಳು 'ಚೈಲ್ಡ್ ಡೆವಲಪ್‌ಮೆಂಟ್', 'ಜರ್ನಲ್ ಆಫ್ ಎಕ್ಸ್‌ಪೆರಿಮೆಂಟಲ್ ಚೈಲ್ಡ್ ಸೈಕಾಲಜಿ', 'ಡೆವಲಪ್‌ಮೆಂಟಲ್ ಸೈಕಾಲಜಿ' ಈ ಮೊದಲಾದ ವೈಜ್ಞಾನಿಕ ನಿಯತಕಾಲಿಕೆಗಳಲ್ಲಿ ಪ್ರಕಟಣೆಗೊಳ್ಳುತ್ತಿವೆ. ಸಾಧನೆಯ ಅಭಿಪ್ರೇರಣೆ (ಅಚೀವ್‌ಮೆಂಟ್ ಮೋಟಿವೇಷನ್), ಸಂಸರ್ಗ (ಕಮ್ಯುನಿಕೇಷನ್), ಸೃಜನಶೀಲತೆ (ಕ್ರಿಯೇಟಿವಿಟಿ), ಮೇಲೆ ಬೀಳುವ ಪ್ರವೃತ್ತಿ (ಅಗ್ರೆಷನ್), ಸಂಬಂಧನ (ಅಫಿಲಿಯೇಷನ್) ಮೊದಲಾದ ಕಲ್ಪಿತಭಾವಗಳ ಬಗೆಗೆ ಕಳೆದ ದಶಕದಲ್ಲಿ ವಿಪುಲವಾದ ಸಂಶೋಧನೆಗಳು ನಡೆದಿವೆ. ಇಲ್ಲಿ ಪಟ್ಟಿ ಮಾಡಿರುವ ಕೆಲವು ಕ್ಷೇತ್ರಗಳು ಧರಣೇಂದ್ರಯ್ಯನವರ ಪುಸ್ತಕದ ಪರಿಗಣನೆಗೆ ಒಳಗಾಗಿಲ್ಲ ಅಥವಾ ಅವಕ್ಕೆ ಎಷ್ಟು ಪ್ರಾಮುಖ್ಯ ದೊರೆಯಬೇಕಾಗಿತ್ತೋ ಅಷ್ಟು ದೊರಕಿಲ್ಲ ಎಂದು ತೋರುತ್ತದೆ; ಸಾಂಪ್ರದಾಯಿಕ ಪಠ್ಯಪುಸ್ತಕವೊಂದರಲ್ಲಿ ಏನೇನು ಅಡಕವಾಗಿರುತ್ತದೋ ಅಷ್ಟಕ್ಕೆ ಮಾತ್ರ ಧರಣೇಂದ್ರಯ್ಯನವರು ತಮ್ಮ ಪುಸ್ತಕದ ವ್ಯಾಪ್ತಿಯನ್ನು ಸೀಮಿತಗೊಳಿಸಿದ್ದಾರೆ.

ಪುಸ್ತಕದ ಕೊನೆಯಲ್ಲಿರುವ ಅಧ್ಯಯನ ಗ್ರಂಥಸೂಚಿ 500ಕ್ಕೂ ಹೆಚ್ಚು ಶೀರ್ಷಿಕೆಗಳನ್ನೊಳಗೊಂಡಿದೆ. ಇದು ತುಂಬ ಉಪಯುಕ್ತ ಮೂಲ. ಆದರೆ ಇದರಲ್ಲಿ ಬಹುಪಾಲು ಪುಸ್ತಕಗಳು ಮತ್ತು ಲೇಖನಗಳು 1965ಕ್ಕೂ ಮೊದಲು ಪ್ರಕಟವಾದವು. ಆಧಾರಗಳ ಉಲ್ಲೇಖನದಲ್ಲಿ ಹಲಕೆಲವು ತಪ್ಪುಗಳು ಅಲ್ಲಲ್ಲಿ ಕಾಣಬರುತ್ತವೆ. ಪುಸ್ತಕದಲ್ಲಿ ಉದ್ಧರಿಸಲಾಗಿರುವ ಕೆಲವು ಮೂಲಗಳು ಅಧ್ಯಯನ ಗ್ರಂಥಸೂಚಿಯಲ್ಲಿ ಪತ್ತೆ ಇಲ್ಲವಾಗುತ್ತವೆ. (ಉದಾ: 19ನೆಯ ಪುಟದ Miles, 1960 ಗ್ರಂಥಸೂಚಿಯಲ್ಲಿ ಕಾಣದಾಗಿದೆ.) ಇನ್ನು ಕೆಲವೆಡೆಗಳಲ್ಲಿ ಪುಸ್ತಕದಲ್ಲಿ ಉದ್ಧರಿಸಲಾಗಿರುವ ಮೂಲಕ್ಕೂ ಅಧ್ಯಯನ ಗ್ರಂಥಸೂಚಿಯಲ್ಲಿರುವುದಕ್ಕೂ ಸಂಬಂಧ ಕಾಣಲಾರದಾಗಿದೆ. (ಉದಾ: 205ನೆಯ ಪುಟದ Amatova 1962ಕ್ಕೆ ಬದಲಾಗಿ ಸೂಚಿಯಲ್ಲಿ Amatova, 1960 ಕಾಣಬರುತ್ತದೆ.) ಇನ್ನೂ ಕೆಲವು ಸಂದರ್ಭಗಳಲ್ಲಿ ಹೆಸರುಗಳೇ ಬೇರೆಯಾದಂತೆ ಕಾಣಬರುತ್ತದೆ. (ಉದಾ: 301ನೆಯ ಪುಟದ Beitben, 1953 Belbin, 1953 ಆಗಿ ಪರಿವರ್ತನೆಗೊಂಡಿದೆ.) ಇವು ತೋರಿಕೆಗೆ ಮಹತ್ತರ ತಪ್ಪಾಗಿ ಕಂಡುಬಾರದಿದ್ದರೂ, ಮೂಲವನ್ನು ಅರಸಿಕೊಂಡು ಹೋಗುವ ಆಸಕ್ತ ಓದುಗನನ್ನು ತೊಂದರೆಗೀಡು ಮಾಡುತ್ತವೆ.

ಕನ್ನಡದಲ್ಲಿ ಪ್ರಕಟವಾಗಿರುವ ಬಹಳ ಕಡಿಮೆ ಉತ್ತಮ ಮನೋವೈಜ್ಞಾನಿಕ ಕೃತಿಗಳಲ್ಲಿ ಧರಣೇಂದ್ರಯ್ಯನವರ ವಿಕಾಸ ಮನೋವಿಜ್ಞಾನ ನಿಜವಾಗಿಯೂ ಒಂದಾಗಿದೆ. ಡಿಗ್ರಿ ತರಗತಿಯ ವಿದ್ಯಾರ್ಥಿಗಳಿಗೆ ಮಾತ್ರವಲ್ಲದೆ, ಮಾನವ ವರ್ತನೆಯ ವಿಕಾಸದ ಬಗೆಗೆ ಆಸಕ್ತಿಯುಳ್ಳ ಸಾಮಾನ್ಯ ಓದುಗನಿಗೂ ಉಪಯುಕ್ತವಾಗಿದೆ.

—ಡಾ. ಎಚ್. ಎಸ್. ಈಶ್ವರ್

ವರ್ತನ ಚಿಕಿತ್ಸೆ : ಲೇ.: ಎಂ. ಎನ್. ಹೆಗ್ಡೆ; ಪ್ರ.: ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, 1971; ಪು.: 11 + 395; ಬೆಲೆ: ರೂ. 12

1870ರಲ್ಲಿ ಜರ್ಮನಿಯ ವೂಂಟ್ ಎಂಬ ವಿಜ್ಞಾನಿಯಿಂದ ಮನೋವಿಜ್ಞಾನ ಪ್ರಾಯೋಗಿಕ ವಿಜ್ಞಾನವಾಗಿ ಪ್ರತ್ಯೇಕವಾಗಿ ರೂಪಗೊಂಡಿತು. ಆದರೆ ಆಗ ಅದಷ್ಟೇನೂ ಜನಾದರಣೀಯವಾಗಿರಲಿಲ್ಲ.

ವಾಗ ನೋಡಿದರೆ 1900ರಲ್ಲಿ ಪ್ರಾರಂಭವಾದ ಅದೇ ದೇಶದ ಫ್ರಾಯ್ಡನ ವಿಚಾರವೇ ಹಲವು ಸಾಮಾಜಿಕ ವಿಜ್ಞಾನಗಳ ವಿಚಾರದ ಮೇಲೆ ಹೆಚ್ಚು ಪ್ರಭಾವ ಬೀರಿತು. ಇದಕ್ಕೆ ಕಾರಣ ಇಷ್ಟೆ: ಫ್ರಾಯ್ಡನ ವಿಚಾರ ಕೇವಲ ನೈದಾನಿಕ ಅನುಭವ ಮತ್ತು ಅವರಲ್ಲಿ ತಾನು ಕಂಡ ಅರ್ಥಗಳ ಮೇಲೆ ರೂಪಿತ ವಾಗಿದ್ದರೂ ಅದು ಮನುಷ್ಯನ ಬಹು ವ್ಯಕ್ತಿತ್ವದ ಬಗ್ಗೆ ಯೋಚನೆ ಮಾಡಿ ಒಂದು ವಿವರಣೆ ನೀಡಿತು. ವೂಂಟನ ಪ್ರಾಯೋಗಿಕ ಮನೋವಿಜ್ಞಾನ ಯಾವುದೋ ಒಂದು ಅಂಶವನ್ನು ಮಾತ್ರ ತೆಗೆದುಕೊಂಡು ಅದರ ಮೇಲೆ ಪ್ರಯೋಗ ನಡೆಸುತ್ತಿತ್ತು. ಅದು ಒಟ್ಟಾಗಿ ಮನುಷ್ಯನ ಎಲ್ಲ ಮನೋವ್ಯಾಪಾರಗಳ ಬಗ್ಗೆ ಏನೂ ಹೇಳಲಾರದಂತಾಗಿತ್ತು. ಆದರೂ ಇದರಿಂದ ರೂಪಿತವಾದ ಪ್ರಾಯೋಗಿಕ ಮನೋವಿಜ್ಞಾನ ತನ್ನಷ್ಟಕ್ಕೆ ಪ್ರಬಲವಾಗಿಯೇ ವಿಶ್ವವಿದ್ಯಾನಿಲಯಗಳ ಅಧ್ಯಯನದಲ್ಲಿ ಬೆಳೆಯುತ್ತಿತ್ತು. ವರ್ತನ ವಿಜ್ಞಾನದ ಪರಿಮಿತಿಯಲ್ಲಿ. ಪ್ರಯೋಗ ಪ್ರಮಾಣಗಳ ತಳಹದಿಯ ಮೇಲೆ ಸುಭದ್ರವಾಗಿ ಬೇರೂರುತ್ತ ನಿಧಾನ ವಾಗಿ ಮನುಷ್ಯನ ಮನೋವ್ಯಾಪಾರಗಳ ಹಲವು ಮುಖ್ಯ ಅಂಶಗಳ ಮೇಲೆ. ಮಾನವನ ಪ್ರೇರಣೆ ಪ್ರವರ್ತನಗಳ ಮೇಲೆ. ದೃಷ್ಟಿ-ಚೇತನಗಳ ಮೇಲೆ ಚಿಂತನೆ ಮತ್ತು ವಿವೇಕ ಶಕ್ತಿಗಳ ಮೇಲೆ ಕಲ್ಪನೆ ಮತ್ತು ಇಂದ್ರಿಯಾನುಭವ-ಅವರ ಗ್ರಹಿಕೆಗಳ ಮೇಲೆ ನಿಶ್ಚಿತ ಪ್ರಮಾಣಗಳನ್ನು ಸಂಗ್ರಹಿಸುತ್ತ ಈ ಪ್ರಾಯೋಗಿಕ ಮನೋವಿಜ್ಞಾನ ಈಗ ಬೆಳೆದು ಬಂದಿದೆ. ಮನುಷ್ಯನ ಆ ಹಲವು ಮನೋವ್ಯಾಪಾರ ಗಳಲ್ಲಿ ಪ್ರವರ್ತನೆ ಮತ್ತು ಕಲಿಕೆಯಲ್ಲಿ ಮಾತ್ರವೇ ಹೆಚ್ಚು ಪ್ರಾಶಸ್ತ್ಯ ಕಂಡು ಅದರ ಮೇಲೆ ರೂಪಿತ ವಾದುದೇ ವರ್ತನ ಚಿಕಿತ್ಸೆ. ಕೆಲವು ರೀತಿಯ ಕಲಿಕೆಯನ್ನೇ ಕೇಂದ್ರವಾಗಿಟ್ಟುಕೊಂಡು ಆ ದೃಷ್ಟಿಯಿಂದ ಸ್ವಸ್ಥ-ಅಸ್ವಸ್ಥ ವರ್ತನೆಯನ್ನು ಕಂಡು. ಕಲಿಕೆಯಿಂದಲೇ ಅನನುಕೂಲ ಅಭ್ಯಾಸ (ಅಸ್ವಸ್ಥ ವರ್ತನೆ) ಗಳನ್ನು ನಿವಾರಿಸುವುದೇ ಇದರ ಸಾರವಾಗಿದೆ. ಇದನ್ನು ಫ್ರಾಯ್ಡನ ಮೂಲಕ ರೂಪಿತವಾದ ಮನೋ ಚಿಕಿತ್ಸೆಯೊಡನೆ ಹೋಲಿಸಿ. ವರ್ತನ ಚಿಕಿತ್ಸೆಯ ಆಧಾರ. ಬೆಳವಣಿಗೆ. ಚಿಕಿತ್ಸಾತತ್ವ ಮತ್ತು ಕ್ರಮಗಳನ್ನು ತಿಳಿಸುವುದೇ ಹೆಗ್ಡೆಯವರ 'ವರ್ತನ ಚಿಕಿತ್ಸೆ'.

ಮೊದಲನೆಯ ಭಾಗದಲ್ಲಿ ಸುಮಾರು 180 ಪುಟಗಳಲ್ಲಿ ಮನೋರೋಗವೆಂದರೇನು. ಅದರಲ್ಲಿ ಎಷ್ಟು ವಿಧ ಬಗೆಯನ್ನು ವಿವರಿಸಿ. ಅವನ್ನು ಅಂತು ಗುಣಪಡಿಸಲು ಇರುವ ವ್ಯವಸ್ಥೆಗಳಲ್ಲಿ ಅತಿ ಮುಖ್ಯವಾದ ಎರಡನ್ನು ಆಯ್ದು (ಫ್ರಾಯ್ಡನ ಹಾಗೂ ವರ್ತನ ವಿಜ್ಞಾನಗಳ). ಅವುಗಳ ಸಿದ್ಧಾಂತ. ಸಾಧನಗಳನ್ನು ಪರಿಚಯ ಮಾಡಿಕೊಟ್ಟಿದ್ದಾರೆ. ಸುಮಾರು 200 ಪುಟಗಳನ್ನೊಳಗೊಂಡ ಎರಡನೆಯ ಭಾಗ ಮನೋಚಿಕಿತ್ಸೆ ಮತ್ತು ವರ್ತನ ಚಿಕಿತ್ಸೆಗಳ ಹೋಲಿಕೆಯಿಂದ ಪ್ರಾರಂಭವಾಗಿ. ವರ್ತನ ಚಿಕಿತ್ಸೆಯ ಪ್ರಮುಖವಾದ ಆರು ವಿಧಾನಗಳನ್ನು ಸವಿವರವಾಗಿ ವಿವರಿಸಿದ್ದಾರೆ. ವರ್ತನ ಚಿಕಿತ್ಸೆಯ ವಿಮರ್ಶೆ ಮತ್ತು ಭವಿಷ್ಯದ ಬಗ್ಗೆಯೂ ಕೊನೆಯ ಅಧ್ಯಾಯದಲ್ಲಿ ವಿಚಾರ ಮಾಡಿದ್ದಾರೆ. ಶಬ್ದಾರ್ಥಕೋಶ. ಪದಕೋಶ ಮತ್ತು ವಿಷಯಸೂಚಿಗಳೊಡನೆ ಗ್ರಂಥ ಕೊನೆಗೊಳ್ಳುತ್ತದೆ.

ಒಂದು. ಮನೋರೋಗಿಗಳೊಡನೆ ಉಂಟಾದ ನೈದಾನಿಕ ಅನುಭವದಿಂದ ರಚಿತವಾದ ಮನೋ ಚಿಕಿತ್ಸೆ (ಫ್ರಾಯ್ಡ್ ಇತ್ಯಾದಿ). ಇನ್ನೊಂದು. ಪ್ರಾಣಿಗಳ ಮತ್ತು ಮನುಷ್ಯರ ಮೇಲೆ ಪ್ರಯೋಗದಿಂದ ಸಿದ್ಧವಾದ ವರ್ತನ ಚಿಕಿತ್ಸೆ (ಪಾವ್ಲೋವ್. ಉಲ್ಪೆ. ಸ್ಕಿನ್ನರ್ ಇತ್ಯಾದಿ)—ಈ ಎರಡರಿಂದ ಬರುವ ಎಲ್ಲ ಸಮಸ್ಯೆಗಳನ್ನೂ—ತಾತ್ವಿಕ ಹಿನ್ನೆಲೆಯಿಂದ ವಿಧಾನ ಅನುಸರಣೆಗಳ ವರೆಗೂ—ಕ್ರೋಡೀಕರಿಸಿ. ಅವನ್ನು ಒಂದೊಂದಾಗಿ ಎತ್ತಿಕೊಂಡು ಪ್ರೌಢವಾಗಿ ವಿವೇಚಿಸಿದ್ದಾರೆ. ಸ್ಪಷ್ಟವಾದ ವಿವರಣೆ. ಹೋಲಿಕೆ. ಪರಸ್ಪರ ವಾದವಿವಾದಗಳು. ಸಾಕ್ಷ್ಯ ಪುರಾವೆಗಳು ಎಲ್ಲವನ್ನೂ ಸಮರ್ಥವಾಗಿ ಹೇಳುತ್ತ ಈ ಎರಡೂ ಪಂಥಗಳ ಆದಿ-ಅಂತ್ಯವನ್ನೇ ಕಂಡು ನೋಡಿಬಿಡುವ ಅಪೂರ್ವ ದಾರ್ಢ್ಯ ತೋರಿಸುತ್ತಾರೆ. ಹೆಗ್ಡೆಯವರು. ಈ ಎರಡು ವ್ಯವಸ್ಥೆಗಳು ಯಾವ ವೈಜ್ಞಾನಿಕ ತಳಹದಿಯ ಮೇಲೆ ನಿಂತಿವೆ. ರೂಪುಗೊಳ್ಳುತ್ತಿವೆ ಎಂಬುದರ ಬಗ್ಗೆ ಸದಾ ಎಚ್ಚರವಾಗಿದ್ದು. ಅವನ್ನು ಶೋಧಿಸಿ ಹುಡುಕುವ ಇವರ ಛಲ ಅಸಾಧಾರಣ ವಾದುದೇ. ಇವರು ನೈದಾನಿಕ ಮನೋವಿಜ್ಞಾನದಲ್ಲಿ ತರಬೇತು ಪಡೆದುದಷ್ಟೇ ಅಲ್ಲದೆ ಅದರಲ್ಲಿ ಆಳವಾದ ಅಭ್ಯಾಸ. ಚಿಂತನೆ ಮಾಡಿದ್ದಾರೆ. ಸ್ವತಃ ಸಂಶೋಧನ ಕಾರ್ಯದಲ್ಲಿ ಸಕ್ರಿಯವಾಗಿ ತೊಡಗಿದ್ದಾರೆ ಎನ್ನುವುದು ಈ ಪುಸ್ತಕ ಓದಿದವರಿಗೆಲ್ಲ ಮನದಟ್ಟಾಗುತ್ತದೆ.

ಹೆಗ್ಡೆಯವರಿಗೆ ವಿಷಯದ ಮೇಲೆ. ಭಾಷೆಯ ಮೇಲೆ ಇರುವ ಪ್ರಭುತ್ವ ಬೆರಗುಗೊಳಿಸುವಂಥದು.

ಇವರ ಶೈಲಿ ಓದುಗನನ್ನು ಕೆಣಕಿ, ಅಚ್ಚರಿಸಿ, ಅರಿವು ಮೂಡಿಸುವಂತಹದು. ಸ್ಪಷ್ಟವಾಗಿ, ನಿಖರವಾಗಿ, ನಿಶ್ಚಿತವಾಗಿ ಹೇಳಲು ಹಿಂತೆಗೆಯರು. ಎಲ್ಲಿ ಆಧಾರ, ಶೋಧನೆ, ವಿಚಾರಗಳನ್ನು ಒಟ್ಟುಗೂಡಿಸಿ, ಸಮರ್ಥವಾಗಿ, ಯುಕ್ತಿಯುತವಾಗಿ, ಆಕರ್ಷಕವಾಗಿ ಹೇಳುವ ಇವರು ನಿಜಕ್ಕೂ ಪ್ರತಿಭಾವಂತರು—ಒಬ್ಬ ಕ್ರಿಯಾತ್ಮಕ ವಿಜ್ಞಾನಿ. ಇವರು ಕನ್ನಡಿಸಿದ ಹಲವು ಪಾರಿಭಾಷಿಕ ಶಬ್ದಗಳು ಬಹಳ ಸಮರ್ಪಕವಾಗಿವೆ, ಸತ್ವಪೂರ್ಣವಾಗಿವೆ.

ವರ್ತನ ಚಿಕಿತ್ಸೆ ಈಗಲೂ ಬಿರುಸಿನಿಂದ ಬೆಳೆಯುತ್ತಿದೆ. ಕೇವಲ ಕಲಿಕೆ, ಪ್ರವರ್ತನೆಗಳ ಮೇಲೆ ನಮ್ಮ ಸಿದ್ಧಾಂತ ಸಾಧನಗಳನ್ನು ರೂಪಿಸಿದರೆ ವ್ಯಕ್ತಿಯ ಸಮಗ್ರ ಸಂಪನ್ನತೆಗೆ, ಅವನ ಶಾಶ್ವತ ವರ್ತನ ಬದಲಾವಣೆಗಳಿಗೆ ಸಹಕಾರಿಯಾಗಲಾರವು ಎನ್ನುವ ವಿಚಾರ ಇತ್ತೀಚೆಗೆ ವರ್ತನ ಚಿಕಿತ್ಸಕರಲ್ಲಿ ಕಂಡು ಬರುತ್ತಿದೆ. ನಮ್ಮ ಸಿದ್ಧಾಂತ ಪ್ರಾಯೋಗಿಕವಾಗಿ ಸಿದ್ಧವಾದ ಎಲ್ಲ ವಿಚಾರಗಳನ್ನು ಒಳಗೊಂಡಿರಬೇಕು. ಕಲಿಕೆ, ಪ್ರವರ್ತನೆಯಂತೆಯೇ, ಪ್ರಜ್ಞೆ–ಚೇತನ, ಚಿಂತನೆ–ವಿವೇಕ, ಸ್ಮರಣೆ, ಕಲ್ಪನೆ ಮುಂತಾದವುಗಳ ಮೇಲೂ ಅಷ್ಟೇ ಪ್ರಮಾಣಿತವಾದ, ಪ್ರಯೋಗನಿರ್ದಿಷ್ಟ ಸಂಗತಿಗಳು ದೊರಕುತ್ತಿವೆ. ಇವೆಲ್ಲವನ್ನೂ ಸೇರಿಸಿ ಹೊರಬರುವ ದೃಷ್ಟಿಕೋನ ಇನ್ನೂ ಸಂಪದ್ಭರಿತವಾಗಿದ್ದು ಹೆಚ್ಚು ಫಲಕಾರಿಯಾಗುತ್ತದೆ. ಸರಳ ಸಾಮಾನ್ಯ ಸಂಗತಿಗಳನ್ನೆಲ್ಲ ಅತಿ ಕ್ಲಿಷ್ಟ, ಸಂಕೀರ್ಣ ಮಾಡಿ ಹಾಕಿಬಿಡುತ್ತಾರೆ ಎಂದು ವರ್ತನ ಚಿಕಿತ್ಸಕರು ಮನೋಚಿಕಿತ್ಸಕರನ್ನು ಟೀಕಿಸುತ್ತಿದ್ದರು. ಆದರೆ ವರ್ತನ ಚಿಕಿತ್ಸಕರು ನಿಜಕ್ಕೂ ಸಂಕೀರ್ಣವಾದ, ಗಹನವಾದ ಸಂಗತಿಗಳನ್ನು ಅತಿ ಸರಳ ಮಾಡಿಬಿಡುವುದಿಲ್ಲವೇ? ಇದನ್ನು ನಿವಾರಿಸಿಕೊಳ್ಳಲು ಮೇಲೆ ಎತ್ತಿದ, ಪ್ರಾಯೋಗಿಕವಾಗಿ ಸಿದ್ಧವಾದ ಎಲ್ಲ ವರ್ತನಪೂರ್ಣ ಮನೋವ್ಯಾಪಾರಗಳ ಮೇಲೆ ರಚಿತವಾದ ಸಿದ್ಧಾಂತ, ಚಿಕಿತ್ಸೆ ಅನಿವಾರ್ಯ. ಆ ದಿಸೆಯಲ್ಲಿ ಈ ಪಂಥ ಸಾಗುತ್ತಿದೆ. ಇದಕ್ಕೆ ಇತ್ತೀಚಿಗಿನ ಅಮೆರಿಕದ ಮನೋವಿಜ್ಞಾನಿಗಳ ಸಂಘದ ವಾರ್ಷಿಕಾಧಿವೇಶನದಲ್ಲಿ ಅಧ್ಯಕ್ಷಪೀಠದಿಂದ ಖ್ಯಾತ ವರ್ತನ ಚಿಕಿತ್ಸಕ ಲಜಾರಸ್ ಹೇಳಿದ ಮಾತುಗಳೇ ಸಾಕ್ಷಿಯಾಗಿವೆ. (ನೋಡಿ: A. A. Lazarus : Behaviour Therapy and Beyond; McGraw—Hill 1971) ವರ್ತನ ಚಿಕಿತ್ಸೆಯ ವಿಸ್ತರಣೆಯೂ ಹೆಚ್ಚುತ್ತಿದೆ. ಇದು ಮನೋಬೇನೆ, ಕೆಲವು ಮನೋವಿಕೃತಿಗಳನ್ನು ಪರಿಣಾಮಕಾರಿಯಾಗಿ ವಾಸಿ ಮಾಡುವುದಷ್ಟೇ ಅಲ್ಲದೆ, ಉಳಿದೆಲ್ಲ ಮನೋಚಿಕಿತ್ಸಕರೂ ಕೈ ಬಿಟ್ಟ ಮಾನಸಿಕ ಮಂದನವನ್ನು (ಮೆಂಟಲ್ ರಿಟಾರ್ಡೇಷನ್) ಕೂಡ ಫಲಕಾರಿಯಾಗಿ ನಿವಾರಿಸಿ, ಸಾರ್ಥಕ ಜೀವನ ನಡೆಸಲು ಸಹಾಯಕವಾಗುತ್ತದೆ ಎಂದು ಕಂಡುಬಂದಿದೆ. ನಿಜಕ್ಕೂ ಇದು ಜನತೆಗೆ ಮನೋವಿಜ್ಞಾನಿಗಳ ಸತತ ಪರಿಶ್ರಮದಿಂದ ಹೊರಬಂದ ಒಂದು ಅಮೂಲ್ಯ ಕಾಣಿಕೆ. ಇದರ ಪ್ರಾರಂಭ, ಬೆಳವಣಿಗೆ, ತತ್ವ, ವಿಧಾನಗಳ ಮೂಲಸಾರಗಳನ್ನೂ ಕೆಲವು ಚಿಕಿತ್ಸಾ ಕ್ರಮಗಳ ವಿಧಾನಗಳನ್ನೂ ಕನ್ನಡಕ್ಕೆ ಸಮರ್ಥವಾಗಿ, ಆಕರ್ಷಕವಾಗಿ ಕೊಟ್ಟ ಹೆಗ್ಡೆಯವರು ಅಭಿನಂದನೀಯರು. ಎಲ್ಲ ಕನ್ನಡ ಮನೋಚಿಕಿತ್ಸಕ ವರ್ತನ ಚಿಕಿತ್ಸಕರಿಗೂ, ಮನೋವಿಜ್ಞಾನಿ ಮನೋವೈದ್ಯರಿಗೂ, ಈ ವಿಷಯದ ವಿದ್ಯಾರ್ಥಿಗಳಿಗೂ, ಪ್ರಜ್ಞಾವಂತ–ಸೂಕ್ಷ್ಮಮತಿಯುಳ್ಳ ಸಾಮಾನ್ಯ ಓದುಗರಿಗೂ ಇದೊಂದು ಉಪಯುಕ್ತ ಗ್ರಂಥ. ಇದೊಂದು ಯೋಗ್ಯವಾದ ಪ್ರಕಟಣೆ. ಆದರೆ ಬಹಳಷ್ಟು ಮುದ್ರಣ ದೋಷಗಳಿವೆ. ಮುಂದಿನ ಮುದ್ರಣದಲ್ಲಿ ಇವನ್ನು ಅವಶ್ಯವಾಗಿ ತಿದ್ದಿಕೊಳ್ಳಬೇಕಾಗುತ್ತದೆ.

—ಡಾ. ಎಂ. ಎಸ್. ತಿಮ್ಮಪ್ಪ

ಅಪಸಾಮಾನ್ಯ ಮನೋವಿಜ್ಞಾನ: ಮೂಲ: ಜೇಮ್ಸ್ ಡಿ. ಪೇಜ್: ಅನುವಾದ: ಎಂ. ಎಸ್. ಹೆಗ್ಡೆ: ಪ್ರ.: ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು. 1971: ಒಟ್ಟು ಪು.: 583: ಬೆಲೆ: ಸಾದಾಪ್ರತಿ ರೂ. 20, ಉತ್ತಮಪ್ರತಿ ರೂ. 30

ಜೇಮ್ಸ್ ಡಿ. ಪೇಜ್ ಆಂಗ್ಲಭಾಷೆಯಲ್ಲಿ ಬರೆದಿರುವ 'ಅಬ್‌ನಾರ್ಮಲ್ ಸೈಕಾಲಜಿ' ಎಂಬ ಪುಸ್ತಕವನ್ನು ಕನ್ನಡಕ್ಕೆ ತಂದವರು ಎಂ. ಎಸ್. ಹೆಗ್ಡೆಯವರು. ಇತ್ತೀಚಿನ ವರೆಗೂ ಅನೇಕ ವರ್ಷಗಳ ಕಾಲ ಕಾಲೇಜು ತರಗತಿಗಳಿಗೆ ಪಠ್ಯಪುಸ್ತಕವಾಗಿರುತ್ತಿದ್ದ ಈ ಪುಸ್ತಕ ಅಪಸಾಮಾನ್ಯ ವರ್ತನೆಯನ್ನು

(ಅಬ್ನಾರ್ಮಲ್ ಬಿಹೇವಿಯರ್) ಸಮಗ್ರವಾಗಿ ಪರಿಚಯ ಮಾಡಿಕೊಡುತ್ತದೆ ಎಂಬ ಅಭಿಪ್ರಾಯ ಅಧ್ಯಾಪಕರು ಹಾಗೂ ಮನೋರೋಗ ಚಿಕಿತ್ಸಕರಲ್ಲಿ ಇತ್ತೀಚಿನ ವರೆಗೂ ಇತ್ತೆಂದು ಹೇಳಬಹುದು.

ಮುನ್ನುಡಿ. ಸಾರಣೆ ಮತ್ತು ಚಿತ್ರಗಳ ಪಟ್ಟಿಗಳಿಲ್ಲದೆ. ಈ ಪುಸ್ತಕದಲ್ಲಿ ಹದಿನೆಂಟು ಅಧ್ಯಾಯಗಳಲ್ಲಿ ಅಪಸಾಮಾನ್ಯ ವರ್ತನೆಯ ವಿವಿಧ ರೂಪಗಳು ನಿರೂಪಿತವಾಗಿವೆ. ಅಧ್ಯಾಯಗಳು: 1 ಸಾಮಾನ್ಯ ಮತ್ತು ಅಪಸಾಮಾನ್ಯ. 2 ಪ್ರವರ್ತನೆ ಮತ್ತು ಹೊಂದಾಣಿಕೆ. 3 ಮನೋತಂತ್ರ ಮತ್ತು ರೋಗ ಚಿಹ್ನೆಗಳು. 4 ಅಪಸಾಮಾನ್ಯ ವರ್ತನೆಯ ಸಾಧಾರಣ ಕಾರಣಗಳು. 5 ಮನೋಬೇನೆಗಳು. ಸಾಮಾನ್ಯ ಪರಿಚಯ. 6 ಹಿಸ್ಟೀರಿಯ. ಉದ್ವಿಗ್ನಸ್ಥಿತಿ ಮತ್ತು ನರದೌರ್ಬಲ್ಯ. 7 ಮನೋಬೇನೆಯ ಇತರ ರೂಪಗಳು. 8 ಮನೋಬೇನೆಯ ಚಿಕಿತ್ಸೆ. 9 ಮನೋವಿಶ್ಲೇಷಣೆ ಮತ್ತು ಅದಕ್ಕೆ ಸಂಬಂಧಪಟ್ಟ ವಿಚಾರ ಪಂಥಗಳು. 10 ಮನೋವಿಕೃತಿ: ಸಾಮಾನ್ಯ ಪರಿಚಯ. 11 ಇಚ್ಛಿತ್ತ. 12 ಉನ್ಮಾದ–ವಿಷಾದ ಮನೋವಿಕೃತಿ. 14 ಜರಾಜನ್ಯ ವಿಷಾದತೆ ಮತ್ತು ಸಂಭ್ರಾಂತಿ. 14 ಮದ್ಯಜನ್ಯ ಮನೋವಿಕಾರಗಳು. ಜೀವಿಷ ಮತ್ತು ಆಂಗಿಕ ಮನೋವಿಕೃತಿ. 16 ಅಪಸ್ಮಾರ. 17 ಬುದ್ಧಿಮಾಂದ್ಯ. 18 ಸಮಾಜಗೇಡಿಗಳು ಮತ್ತು ಅಪರಾಧ. ಕೊನೆಯಲ್ಲಿ. ಮೂಲದಲ್ಲಿರುವ ವಿಷಯಸೂಚಿಯ ಜೊತೆಗೆ. ಕನ್ನಡದಲ್ಲಿ ಶಬ್ದಾರ್ಥ ಕೋಶವನ್ನು ಕೊಡಲಾಗಿದೆ.

ಮೇಲೆ ಹೇಳಿದ ಹದಿನೆಂಟು ಅಧ್ಯಾಯಗಳನ್ನು ಅರ್ಥಗ್ರಹಣೆಯ ದೃಷ್ಟಿಯಿಂದ ಮುಖ್ಯವಾಗಿ ಎರಡು ವಿಭಾಗಗಳಾಗಿ ವಿಂಗಡಿಸಬಹುದು. 1. 2. 3. 4 ಮತ್ತು 9ನೆಯ ಅಧ್ಯಾಯಗಳು ಒಂದು ವಿಭಾಗಕ್ಕೆ ಸೇರಿವೆ. ಉಳಿದ ಅಧ್ಯಾಯಗಳು ಮತ್ತೊಂದು ವಿಭಾಗಕ್ಕೆ ಸೇರುತ್ತವೆ. ಮೊದಲ ವಿಭಾಗಕ್ಕೆ ಸೇರುವ ಅಧ್ಯಾಯಗಳಲ್ಲಿ. ಸಾಮಾನ್ಯ ಮತ್ತು ಅಪಸಾಮಾನ್ಯ ವರ್ತನೆಗಳ ನಡುವಣ ವ್ಯತ್ಯಾಸ. ಅಪಸಾಮಾನ್ಯವರ್ತನೆಯ ಬುಡದಲ್ಲಿರುವ ಸಾಮಾನ್ಯ ಮಾನಸಿಕಶಕ್ತಿಗಳು ಮತ್ತು ಅವುಗಳ ಸಿದ್ಧಾಂತ ಮುಂತಾದವುಗಳ ಬಗ್ಗೆ ಚರ್ಚಿಸಲಾಗಿದೆ. ಅದರಲ್ಲಿ. ಇತ್ತೀಚಿನ ಬೆಳವಣಿಗೆಗಳ ದೃಷ್ಟಿಯಿಂದ ನೋಡಿದಾಗ ಕೆಲವು ವಿಷಯಗಳ ಚರ್ಚೆ ಅಷ್ಟು ಸಮರ್ಪಕವಾಗಿರುವಂತೆ ಕಂಡುಬರುವುದಿಲ್ಲ. ಉದಾ: ಸಾಮಾನ್ಯ ಮತ್ತು ಅಪಸಾಮಾನ್ಯ ವರ್ತನೆಗಳ ನಡುವಣ ವ್ಯತ್ಯಾಸದ ನಿಕಷಗಳ ಬಗೆಗಿನ ಚರ್ಚೆ. ಆದರೆ. ಮನೋತಂತ್ರಗಳ ಬಗೆಗಿನ ನಿರೂಪಣೆ ಉತ್ತಮವಾಗಿದೆ. ಅಲ್ಲದೆ ಅಪಸಾಮಾನ್ಯ ವರ್ತನೆಯ ಸಾಧಾರಣ ಕಾರಣಗಳನ್ನು ತಿಳಿಸುವ ಪ್ರಯತ್ನವೂ ಸ್ವಲ್ಪಮಟ್ಟಿಗೆ ಸಫಲವಾಗಿದೆ ಎಂದು ಹೇಳಬಹುದು.

5ನೆಯ ಅಧ್ಯಾಯದಿಂದ 18ನೆಯ ಅಧ್ಯಾಯದ ವರೆಗೆ (9ನೆಯ ಅಧ್ಯಾಯವನ್ನುಳಿದು) ವಿವಿಧ ಮನೋವಿಕಾರಗಳ ಲಕ್ಷಣಗಳು. ಕಾರಣಗಳು ಮತ್ತು ಚಿಕಿತ್ಸಾ ವಿಧಾನಗಳ ಬಗ್ಗೆ ಸಂಕ್ಷಿಪ್ತ ನಿರೂಪಣೆಯಿದೆ. ಇಲ್ಲಿ ಕೊಡಲಾಗಿರುವ—ಮನೋಬೇನೆಗಳು (ಸೈಕೊನ್ಯೂರಾಸಿಸ್) ಮನೋವಿಕೃತಿಗಳು (ಸೈಕೋಸಿಸ್). ಬುದ್ಧಿಮಾಂದ್ಯ (ಮೆಂಟಲ್ ಡೆಫಿಷಿಯೆನ್ಸಿ) ಮತ್ತು ಸಮಾಜಗೇಡಿ ವರ್ತನೆ (ಆಂಟಿಸೋಷಿಯಲ್ ಬಿಹೇವಿಯರ್) ಎಂಬ ಅಪಸಾಮಾನ್ಯ ವರ್ತನೆ ರೂಪಗಳ ಬಗ್ಗೆ ಇಂದು ಬಹಳಷ್ಟು ಮಾರ್ಪಾಟಾಗಿವೆ. ಇಂದು ತಜ್ಞರು ಮೇಲಿನ ವರ್ಗೀಕರಣವನ್ನು ಒಪ್ಪುವುದಿಲ್ಲ. ಅಮೆರಿಕದ ಮನೋವೈದ್ಯಕೀಯ ಸಂಘ (ಅಮೆರಿಕನ್ ಸೈಕಿಯಾಟ್ರಿಕ್ ಅಸೋಸಿಯೇಷನ್) ಇತ್ತೀಚೆಗೆ ಒಂದು ವಿಶದವಾದ ವರ್ಗೀಕರಣ ಕೊಟ್ಟಿದೆ.

ಮನೋಬೇನೆಗಳು ಮತ್ತು ಮನೋವಿಕೃತಿಗಳ ಬಗ್ಗೆ ಮಾಡಲಾಗಿರುವ ನಿರೂಪಣೆ ಚೆನ್ನಾಗಿದೆ. ಆದರೂ ಇತ್ತೀಚೆಗೆ ಈ ವಿಷಯಗಳಿಗೆ ಸಂಬಂಧಿಸಿದಂತೆ ರೋಗಲಕ್ಷಣಗಳು. ಕಾರಣಗಳು ಮತ್ತು ಚಿಕಿತ್ಸೆಗಳಿಗೆ ಸಂಬಂಧಿಸಿದಂಥ ವಿಚಾರಗಳಲ್ಲಿ ಬಹಳಷ್ಟು ಬದಲಾವಣೆ ಕಂಡುಬರುತ್ತಿದೆ. ಆದರೂ ರೋಗ ನಿರೂಪಣೆ ಮತ್ತು ಸಮಂಜಸವಾದ ವ್ಯಕ್ತಿವೃತ್ತಾಂತಗಳ (ಕೇಸಸ್) ನಿರೂಪಣೆಗಳ ದೃಷ್ಟಿಯಿಂದ ಈ ಪುಸ್ತಕ ಉತ್ತಮವಾಗಿದೆ ಎಂದು ಹೇಳಬಹುದು.

ಕೊನೆಯ ಎರಡು ಅಧ್ಯಾಯಗಳಲ್ಲಿ ನಿರೂಪಿತವಾಗಿರುವ ಬುದ್ಧಿಮಾಂದ್ಯ ಮತ್ತು ಸಮಾಜಗೇಡಿಗಳನ್ನು ಕುರಿತ ವಿಷಯ ಬಹಳ ಸ್ವಲ್ಪ. ಈ ಮನೋವಿರೂಪಗಳ ಬಗ್ಗೆ ಇತ್ತೀಚೆಗೆ ಬಹಳ ವಿಷಯ

ಸಂಗ್ರಹವಾಗಿದೆ. ಆದರೂ, ವಿಕೃತಮಾನಸ ವ್ಯಕ್ತಿತ್ವದ (ಸೈಕೊಪತಿಕ್ ಪರ್ಸೊನಾಲಿಟಿ) ಕುರಿತ ವರ್ಣನೆ ಹೆಚ್ಚು ಸ್ಪಷ್ಟವೂ ಆಕರ್ಷಕವೂ ಆಗಿದೆ.

ಒಟ್ಟಿನಲ್ಲಿ ಅಪಸಾಮಾನ್ಯ ವರ್ತನೆಯ ಇತಿಮಿತಿಗಳ ಬಗ್ಗೆ ಈ ಪುಸ್ತಕ ಒಂದು ಸಂಕ್ಷಿಪ್ತ ಪರಿಚಯವನ್ನು ಓದುಗರಿಗೆ ಮಾಡಿಕೊಡಬಲ್ಲದು ಎಂದು ಹೇಳಬಹುದು.

ಅನುವಾದವನ್ನು ಕುರಿತು: ಕನ್ನಡಕ್ಕೆ ಮನೋವಿಜ್ಞಾನ ಗ್ರಂಥಗಳನ್ನು ತರುವ ಮೊದಲ ಪ್ರಯತ್ನಗಳಲ್ಲಿ ಒಂದೆಂಬ ದೃಷ್ಟಿಯಿಂದ ನೋಡಿದಾಗ, ಅನುವಾದ ಕಾರ್ಯ ತಕ್ಕಮಟ್ಟಿಗೆ ಸಫಲವಾಗಿದೆ ಎಂದರೆ ಬಹುಶಃ ತಪ್ಪಾಗಲಾರದು. ಈ ಕಾರ್ಯ ಇನ್ನೂ ಹೆಚ್ಚು ಸರಳವಾಗಿಯೂ ಸ್ಪಷ್ಟವಾಗಿಯೂ ಆಗುವ ಸಾಧ್ಯತೆ ಇತ್ತು ಎಂಬುದು ನನ್ನ ಅಭಿಮತ. ಕೆಲವು ಕಡೆ ವಾಕ್ಯಗಳು ಸುಲಭವಾಗಿ ಅರ್ಥವಾಗುವುದಿಲ್ಲ. ಉದಾ: (ಪುಟ 11, ಪ್ಯಾರ 3) "ಬುದ್ಧಿ ಮಾಂದ್ಯತೆ ಎಂಬುದು ಬುದ್ಧಿಶಕ್ತಿಯ ಬೆಳವಣಿಗೆ ಸರಾಸರಿಗಿಂತ ಕುಂಠಿತವಾಗಿ ಶಾಲೆಯಲ್ಲಿ ದಿನದಿನ ಪಾಠಕ್ರಮಗಳಿಂದ ಪ್ರಯೋಜನ ಪಡೆಯಲಾರದ ಮಕ್ಕಳು ಮತ್ತು ದೊಡ್ಡವರಾಗಿ ಸಮರ್ಪಕವಾದ ರೀತಿಯಲ್ಲಿ ತಮ್ಮನ್ನು ತಾವೇ ನಿಭಾಯಿಸಿಕೊಳ್ಳಲಾರದ ಅಥವಾ ಸ್ವಸಂಪಾದನೆ ಮಾಡಲಾರದ ಅನೇಕ ತರಹದ ವ್ಯಕ್ತಿಗಳನ್ನು ಒಳಗೊಳ್ಳುವ ಸಾಮಾನ್ಯ ವರ್ಗವಾಗಿದೆ." ಈ ವಾಕ್ಯದಲ್ಲಿ ಪ್ರತಿಪಾದಿತವಾಗಿರುವ ವಿಷಯವನ್ನು ಹೆಚ್ಚು ಸರಳವಾಗಿ ಮತ್ತು ಸ್ಪಷ್ಟವಾಗಿ ಹೇಳುವ ಸಾಧ್ಯತೆಯಿದೆ: "ಬುದ್ಧಿಶಕ್ತಿಯ ಬೆಳವಣಿಗೆ ಸರಾಸರಿಗಿಂತ ಕುಂಠಿತವಾಗಿದ್ದರೆ ಅದನ್ನು ಬುದ್ಧಿಮಾಂದ್ಯತೆ ಎಂದು ಕರೆಯುತ್ತಾರೆ. ಶಾಲೆಯಲ್ಲಿ ದಿನದಿನದ ಪಾಠಕ್ರಮಗಳಿಂದ ಪ್ರಯೋಜನ ಪಡೆಯಲಾರದ ಮಕ್ಕಳು ಮತ್ತು ವಯಸ್ಕರಾಗಿದ್ದರೂ ಸಮರ್ಪಕವಾದ ರೀತಿಯಲ್ಲಿ ತಮ್ಮನ್ನು ತಾವೇ ನಿಭಾಯಿಸಿಕೊಳ್ಳಲಾರದ ಅಥವಾ ಸ್ವಸಂಪಾದನೆ ಮಾಡಿಕೊಳ್ಳಲಾರದ ವಿವಿಧ ರೀತಿಯ ವ್ಯಕ್ತಿಗಳು ಬುದ್ಧಿಮಾಂದ್ಯರ ವರ್ಗಕ್ಕೆ ಸೇರುತ್ತಾರೆ." ಮತ್ತೊಂದು ಉದಾ (ಪುಟ 63, ವ್ಯಾಕ್ಯವೃಂದ 3): "ವ್ಯಕ್ತಿ ತನ್ನ ಅರಿವಿನಿಂದ ಬೇಕೆಂದೇ ಅಸುಖಕರವಾದ ಮತ್ತು ಜುಗುಪ್ಸೆ ನೆನಪುಗಳನ್ನು ಪ್ರಜ್ಞೆಯ ಕ್ಷೇತ್ರದಾಚೆಗೆ ತಳ್ಳಿಬಿಡುವುದನ್ನು ದಮನ ಅಥವಾ ದಮ್ಮಿಕ್ಕಿಕೊಳ್ಳುವುದು ಎಂದು ಕರೆಯುತ್ತಾರೆ." ಇದು ಹೆಚ್ಚು ಪದಶಃ (ಲಿಟರಲ್) ಅನುವಾದವಾಗಿದೆ. ಅದಕ್ಕೆ ಬದಲು "ಅಹಿತಕರವಾದ ಹಾಗೂ ಕಿರುಕುಳದಾಯಕ ನೆನಪುಗಳನ್ನು ವ್ಯಕ್ತಿ ತಾನಾಗಿಯೇ ಪ್ರಜ್ಞಾಪೂರ್ವಕವಾಗಿ, ಪ್ರಜ್ಞಾಕ್ಷೇತ್ರದಿಂದ ಹೊರದೂಡುವ ಕ್ರಿಯೆಗೆ 'ದಮನ' ಎಂದು ಕರೆಯುತ್ತಾರೆ". ಇದೇ ರೀತಿ ಅಸ್ಪಷ್ಟವಾದ ಹಾಗೂ ಕೇವಲ ಪದಶಃ ಅನುವಾದಗಳಾಗಿರುವ ಅನೇಕ ವಾಕ್ಯಗಳು ಪುಸ್ತಕದುದ್ದಕ್ಕೂ ಅಲ್ಲಲ್ಲಿ ಕಂಡುಬರುತ್ತವೆ.

ವಾಕ್ಯಗಳಲ್ಲಿ ಕಂಡುಬಂದಂತೆಯೇ ಸಮಾನಪದಗಳನ್ನು ಉಪಯೋಗಿಸುವುದರಲ್ಲಿಯೂ ಅನುವಾದಕರು ಅಲ್ಲಲ್ಲಿ ತಪ್ಪಿದ್ದಾರೆ ಎಂದು ಹೇಳಬಹುದು. ಉದಾ: ವಿಷಾದ (ಡಿಪ್ರೆಷನ್). ಮನೋಬೇನೆ (ಸೈಕೊ ನ್ಯುರಾಸಿಸ್) ಕಾಂಪ್ಲೆಕ್ಸ್ (ಕಾಂಪ್ಲೆಕ್ಸ್) ಗೀಳು ಮತ್ತು ಕಾರ್ಯಒತ್ತಡ (ಅಬ್ಸೆಷನ್ ಅಂಡ್ ಕಂಪಲ್ಷನ್). ಅಂಗಚೇಷ್ಟೆ (ಟಿಕ್) ಮುಂತಾದ ಪದಗಳಿಗೆ ಕ್ರಮವಾಗಿ ವಿಷಣ್ಣತೆ. ತಂತ್ರಿಕಾತಾಪ. ಭಾವಗ್ರಂಥಿ. ಚಿತ್ತಪೀಡೆ ಮತ್ತು ಕ್ರಿಯಾಪೀಡೆ. ಸ್ನಾಯುತುದಿತ ಮುಂತಾದ ಪದಗಳನ್ನು ಬಳಸಿದ್ದರೆ ಹೆಚ್ಚು ಸಮರ್ಪಕವಾಗುತ್ತಿತ್ತು ಎಂಬುದು ನನ್ನ ಅಭಿಮತ. ಆದರೂ, ಅಲ್ಲಲ್ಲಿ ಕೆಲವು ಹೆಚ್ಚು ಸಮರ್ಪಕವಾದ ಪದಗಳನ್ನು ಬಳಸಿರುವುದು ಅಭಿನಂದನೀಯ–ಉದಾ: ಚಿತ್ತಭ್ರಂಶ (ಡಿಮೆನ್ಷಿಯ) ವಿಸ್ಮರಣೆ (ಅಮ್ನೇಸಿಯ): ಚಿತ್ತದೌರ್ಬಲ್ಯ (ಸೈಕಾಸ್ತೆನಿಯ) ಸ್ವಾಸ್ವಯ ವಿಚಾರಗಳು (ಐಡಿಯಾಸ್ ಆಫ್ ರೆಫರೆನ್ಸ್). ಭಾವಾಂತರಣ (ಟ್ರಾನ್ಸ್‌ಫರೆನ್ಸ್) ಮತ್ತು ಜ್ವರಚಿಕಿತ್ಸೆ (ಫೀವರ್ ತೆರಪಿ)

ಒಟ್ಟಿನಲ್ಲಿ. ಅನುವಾದಕಾರ್ಯ ಕೆಲವು ನ್ಯೂನತೆಗಳಿಂದ ಕೂಡಿದ್ದರೂ. ಕನ್ನಡಕ್ಕೆ ಮತ್ತೊಂದು ಮನೋವಿಜ್ಞಾನ ಗ್ರಂಥವನ್ನು ತರುವ ಪ್ರಯತ್ನ ಮೆಚ್ಚತಕ್ಕದ್ದು. ಮುಂದಿನ ಆವೃತ್ತಿಯಲ್ಲಿ ಮೇಲೆ ಹೇಳಲಾದ ಕೆಲವು ನ್ಯೂನತೆಗಳನ್ನು ಸರಿಪಡಿಸಿದರೆ. ಓದುಗರಿಗೆ ಪುಸ್ತಕ ಹೆಚ್ಚು ಸರಳವಾಗಿ ಅರ್ಥವಾಗಲು ಸಾಧ್ಯವಾಗುತ್ತದೆ.

—ಎ. ಎಸ್. ಧರಣೇಂದ್ರಯ್ಯ

ಪ್ರವಾಸಿ ಕಂಡ ಇಂಡಿಯಾ (ಸಂಪುಟ 4): ಲೇಖಕರು: ಎಚ್. ಎಲ್. ನಾಗೇಗೌಡ: ಪ್ರಕಾಶಕರು: ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ. 1972: ಡೆಮ್ಮಿ ೮. ಪ. 504 ಪು.: ಬೆಲೆ: ರೂ. 13 (ಸಾದಾ). ರೂ. 16 (ಉತ್ತಮ)

ಈ ಬೃಹತ್ ಗ್ರಂಥಮಾಲೆಯ ಮೊದಲ ಸಂಪುಟಕ್ಕೆ (1964) ಮುನ್ನುಡಿ ಬರೆಯುತ್ತ ರಂಗನಾಥ ದಿವಾಕರರು 'ಭಾರತದ ಬಗೆಗೆ ನೂರಾರು ಪ್ರವಾಸಿಗಳು ಆಯಾ ಕಾಲಕ್ಕೆ ಬಂದು ವರ್ಣನೆಗಳನ್ನು ಬರೆದಿದ್ದಾರೆ. ಆದರೆ ಅವು ಆಯಾ ಭಾಷೆಗಳಲ್ಲಿವೆ. ನಮ್ಮ ಸುದೈವದಿಂದ ಅವೆಲ್ಲ ಬಹು ಅಂಶದಿಂದ ಈಗ ಇಂಗ್ಲಿಷ್ ಭಾಷೆಗೆ ಅನುವಾದಿಸಲಾಗಿದೆ. ಅವನ್ನು ಕನ್ನಡಿಸುವ ಮಹಾಕಾರ್ಯವನ್ನು ಶ್ರೀ ಎಚ್. ಎಲ್. ನಾಗೇಗೌಡರು ಬಹಳ ಪರಿಶ್ರಮಪೂರ್ವಕವಾಗಿ ಮಾಡುತ್ತ ಬಂದಿದ್ದಾರೆ...... ಈ ಪುಸ್ತಕವನ್ನು ಆಸ್ಥೆಯಿಂದ ಓದಿ ಕನ್ನಡಿಗರು ಗೌಡರ 'ಉಪಕಾರಸ್ಮರಣೆ' ಮಾಡಲಿ' ಎಂದು ಹೇಳಿರುವ ಮಾತುಗಳನ್ನು ಈ ನಾಲ್ಕನೆಯ ಸಂಪುಟದ ಪರಾಮರ್ಶೆಯ ಪ್ರಾರಂಭದಲ್ಲಿ ನೆನೆಯಬಹುದು. ಪ್ರಸ್ತುತ ಗ್ರಂಥದಲ್ಲಿ 1500 ರಿಂದ 1640ರ ವರೆಗಿನ ಕಾಲದಲ್ಲಿ ಭಾರತಕ್ಕೆ ಬಂದ 15 ಜನ ಪ್ರವಾಸಿಗರ ಬರೆಹಗಳನ್ನು ಸಂಗ್ರಹಿಸಲಾಗಿದೆ. ಈ ದೊಡ್ಡ ಕೆಲಸವನ್ನು ಮಾಡುವಾಗ ತಮಗೆ ಎದುರಾದ ಕಷ್ಟಗಳನ್ನು ಲೇಖಕರು ಪ್ರಸ್ತಾವನೆಯಲ್ಲಿ ಹೇಳಿಕೊಂಡಿದ್ದಾರೆ. 'ಬೇಕಾದ ಪುಸ್ತಕಗಳು ಸಕಾಲದಲ್ಲಿ ದೊರೆಯುತ್ತಿರಲಿಲ್ಲ. ಹಲವಾರು ಪುಸ್ತಕಗಳಂತೂ ಪುಸ್ತಕ ಭಂಡಾರದಿಂದ ಹೊರಗೆ ಕಳಿಸುವಂತಿಲ್ಲ: ಅವು ಅಷ್ಟು ಅಪೂರ್ವವೂ ಬೆಲೆಯುಳ್ಳವೂ ಆಗಿಹೋಗಿವೆ. ಆಗ ಅವುಗಳನ್ನು ಫೋಟೋಸ್ಟ್ಯಾಟ್ ಮಾಡಿ ತರಿಸಿಕೊಂಡು ಅವನ್ನು ಓದುವ ಯಂತ್ರದಲ್ಲಿ ಓದಿ, ಪ್ರತಿಮಾಡಿಕೊಂಡು ಆಮೇಲೆ ಕನ್ನಡಕ್ಕೆ ಅನುವಾದಿಸುವ ಕೆಲಸ ಆಗಬೇಕು. ಒಂದೆರಡು ಪುಸ್ತಕಗಳನ್ನು ಇಟಲಿ ದೇಶದಿಂದಲೇ ತರಿಸಿಕೊಳ್ಳಬೇಕಾಯಿತು. ಅವು ಇಟಲಿ ಭಾಷೆಯಲ್ಲಿಯೇ ಇವೆ. ಅವುಗಳನ್ನು ಇಂಗ್ಲಿಷಿಗೆ ಅನುವಾದಿಸಿ, ಆಮೇಲೆ ಕನ್ನಡಕ್ಕೆ ತರುವ ಕೆಲಸ ಮಾಡಬೇಕಾಯಿತು......' ಕಷ್ಟಸಾಧ್ಯವಾದ ಈ ಕೆಲಸವನ್ನು ಲೇಖಕರು ತಮ್ಮ ನಿವೃತ್ತಿಯ ನಂತರ ಕೆಲವು ವರ್ಷಗಳ ಮಧ್ಯೆ ನಿರ್ವಹಿಸಿರುವುದನ್ನು ಕಂಡರೆ ಯಾರಿಗಾದರೂ ಅಚ್ಚರಿಯಾಗದಿರದು. ಏಕೆಂದರೆ ಪೀಟರ್ ಮಂಡಿ ಎಂಬ ಒಬ್ಬ ಪ್ರವಾಸಿಯೊಬ್ಬನ ಬರೆಹಗಳನ್ನು ಸಂಪಾದಿಸಲು ರಿಚರ್ಡ್ ಟೆಂಪಲ್ ಅವರಿಗೆ 5 ವರ್ಷ ಹಿಡಿಯಿತಂತೆ (ಪುಟ 293).

ಭಾರತದ ಬಗ್ಗೆ ಇಲ್ಲಿನ ವಿದೇಶೀ ಜನ ಪ್ರವಾಸಿಗಳು ಹೇಳುವ ಮಾತುಗಳಲ್ಲಿ ಪುನರಾವರ್ತನೆ ಕಂಡುಬಂದರೂ ಬಹುಮಟ್ಟಿಗೆ ವೈವಿಧ್ಯವಿದೆ. ಇಂಥಲ್ಲಿ ಪುನರಾವರ್ತನೆ ಒಂದು ದೋಷವಾಗುವುದಿಲ್ಲ: ಗುಣವೇ ಆದೀತು. ಏಕೆಂದರೆ ಒಂದೇ ಅಭಿಪ್ರಾಯವನ್ನು ಒಬ್ಬರಿಗಿಂತ ಹೆಚ್ಚು ಮಂದಿ ಹೇಳಿದಲ್ಲಿ ಅದಕ್ಕೆ ಹೆಚ್ಚಿನ ಬೆಲೆ ದೊರೆತಂತಾಗುತ್ತದೆ. ಈಗ್ಗೆ ನೂರಾರು ವರ್ಷಗಳ ಹಿಂದೆ ನಮ್ಮ ದೇಶದ ಸ್ಥಿತಿಗತಿಗಳು ಹೇಗಿದ್ದುವೆಂದು ತಿಳಿಯಲು ಈ ಗ್ರಂಥ ಬಹು ಉಪಯುಕ್ತ ಸಾಧನವಾಗಿದೆ.

ಪ್ರವಾಸಿಗಳು ತಾವು ಕಂಡ ಸ್ಥಳದ ಸಾಮಾಜಿಕ ಪರಿಸರ, ಅರ್ಥಿಕ ಆಡಳಿತ ನೀತಿ, ವ್ಯಾಪಾರ ಸೌಲಭ್ಯಗಳು, ಮಳೆ ಬೆಳೆ ಇತ್ಯಾದಿಗಳು, ಜೀವನಕ್ರಮ, ಉಟೋಪಚಾರದ ವೈಖರಿ–ಇವೆಲ್ಲವನ್ನೂ ಹೇಳಲು ಯತ್ನಿಸಿದ್ದಾರೆ. ಬಹು ಮಂದಿ ತಮ್ಮ ಪ್ರಯಾಣಕಾಲದಲ್ಲಿ ಒದಗಿದ ಕಷ್ಟ ಸುಖಗಳನ್ನೂ ತಾವು ಭೇಟಿ ಮಾಡಿದ ರಾಜರುಗಳ ವಿವರಗಳನ್ನೂ ಕೊಟ್ಟಿದ್ದಾರೆ. ಬಹುಮಟ್ಟಿಗೆ ಅನೇಕರದು ವ್ಯಾಪಾರಿ ದೃಷ್ಟಿ. ಅನೇಕರು ಇಲ್ಲಿ ವ್ಯಾಪಾರದಲ್ಲಿದ್ದ ಸಾಮಗ್ರಿ ವಸ್ತುಗಳ ಬಗ್ಗೆ ತಾವು ಕಂಡದ್ದನ್ನು ವಿವರವಾಗಿ ಬರೆದಿದ್ದಾರೆ. ಕಪ್ಪವನ್ನು ತೀರಿಸಲು ಹೆಣ್ಣುಮಕ್ಕಳನ್ನು ವ್ಯಾಪಾರಿಗೆ ಮಾರಲು ಬಿಟ್ಟುಕೊಡುವುದು. ಅಲಂಕಾರಕ್ಕೆಂದು ಹಲ್ಲಿಗೆ ಕಪ್ಪು ಹಚ್ಚಿಕೊಳ್ಳುವುದು. ವೇಶ್ಯಾವೃತ್ತಿ. ವಿಚಿತ್ರವಾದ ಮೂಢನಂಬಿಕೆಗಳು. ಜನಾನಾಗಳಲ್ಲಿನ ಸ್ತ್ರೀಯರ ಜೀವನ. ಸೇವಕರ ಗುಲಾಮರುಗಳು–ಹೀಗೆ ಅನೇಕ ವಿಷಯಗಳು ಇಲ್ಲಿ ಬಂದಿವೆ. ಸೆಗಣಿಯಿಂದ ನೆಲ ಸಾರಿಸುವುದು. ಗೋಡೆಗೆ ಸುಣ್ಣ ಬಳಿಯುವುದು. ಬಾಳೆಯೆಲೆಯಲ್ಲಿ ಊಟ–ಮೊದಲಾದ ಸರಳ ಕ್ರಮಗಳನ್ನು ಪ್ರವಾಸಿಗಳು ಮೆಚ್ಚಿದಂತಿದೆ. ಹಿಂದೂಧರ್ಮದ ಮೌಢ್ಯವನ್ನು ಅನೇಕ ಪ್ರವಾಸಿಗಳು ಎತ್ತಿ ಆಡುತ್ತಾರಾದರೂ ಯಾರಿಗೂ ಅದರ ಅಂತರಾರ್ಥ ಆಗಿಲ್ಲವೆಂದು ತೋರುತ್ತದೆ. ಆದರೂ ಬಾಹ್ಯಾಚರಣೆ ಎಷ್ಟು ಕೆಟ್ಟುಹೋಗಿತ್ತು ಎಂಬಷ್ಟು ಮಟ್ಟಿಗೆ ಅವರು ಹೇಳಿರುವುದು ನಿಜ. ತಾವು ಹೇಳುವುದೇ ಸರಿ ಎಂಬ ಗರ್ವ ತಮಗಿಲ್ಲವೆಂದು

ಪ್ರವಾಸಿ ಫ್ರಾನ್ಸಿಸ್ಕೋ ಪೆಲ್ಸಾರ್ಟ್ ಒಂದು ಕಡೆ ಹೇಳಿದ್ದಾನೆ. ಮತ್ತೊಬ್ಬ ಪ್ರವಾಸಿ ಸೆಬ್ಯಾಸ್ಟಿಯನ್ ಮನ್ರಿಕ್ ಸಾಧ್ಯವಾದಷ್ಟು ನಿಜಾಂಶವನ್ನೇ ಬರೆಯುವುದಾಗಿ ಪಣತೊಡುತ್ತಾನೆ. ಪೀಟರ್ ಮಂಡಿ ಎಂಬ ಪ್ರವಾಸಿ ಉಪ್ಪನೆಯ ತನ್ನ ಕಥಾನಕಕ್ಕೆ ತಾನೇ ಕೆಲವು ಚಿತ್ರಗಳನ್ನು ಬರೆದು ಒದಗಿಸಿದ್ದಾನೆ. ಸತಿ. ಗೀಜಗನ ಗೂಡು. ಕಪ್ಪಿಹುಳುವಿನ ಗೂಡು. ಶಿರಸ್ತಂಭ. ಮೇಣೆ ಮುಂತಾದ ವಾಹನಗಳು--ಇವುಗಳ ಚಿತ್ರಗಳು ಬಹು ಸೊಗಸಾಗಿವೆ.

ಆಗಿನ ಆಡಳಿತದ ಬಗ್ಗೆ ಪ್ರವಾಸಿಗಳು ಒಳ್ಳೆಯ ಮಾಹಿತಿಗಳನ್ನು ಒದಗಿಸುತ್ತಾರೆ. ರಾಜನೆನಿಸಿಕೊಂಡವನು ತನ್ನ ಸುಖಸಂತೋಷಗಳನ್ನು ಮಾತ್ರ ಗಮನಿಸುತ್ತಿದ್ದ. ಅವನ ಕೈಕೆಳಗಿನ ಅಧಿಕಾರಿಗಳು ಅಪಾರವಾಗಿ ಆಸ್ತಿ ಮಾಡುವುದರಲ್ಲಿ ನಿರತರಾಗಿದ್ದರು. ಕೆಳಗಿನ ಅಧಿಕಾರಿಗಳು ರೈತಾಪಿ ಬಡ ಜನರಿಂದ ತೀರ ಹೆಚ್ಚಿನ ತೆರಿಗೆ ವಸೂಲಿ ಮಾಡುತ್ತಿದ್ದರು. ಅಂದಿಗೂ ಬಡವನ ಗೋಳು ಯಥಾಸ್ಥಿತಿ ಇತ್ತು. ಆದರೂ ಮೋಸಮಾಡಿದ ಅಧಿಕಾರಿಗಳ. ವ್ಯಾಪಾರಿಗಳ. ಕಳ್ಳರ ತಲೆಗಳನ್ನು ಕಡಿದು ಸಾರ್ವಜನಿಕ ಸ್ಥಳಗಳಲ್ಲಿ ನೇತುಹಾಕುತ್ತಿದ್ದುದೂ ಸುಳ್ಳಲ್ಲ.

ಚಾತುರ್ವರ್ಣ್ಯ ವ್ಯವಸ್ಥೆ ಆಗ್ಗೆ ಬಹಳ ಕಟ್ಟುನಿಟ್ಟಾಗಿತ್ತು. ಪರೆಯನ (ಹೊಲೆಯ) ಜೀವನ, ಅವನ ಸ್ಥಾನಮಾನಗಳ ಹೀನಸ್ಥಿತಿ ಇವುಗಳ ಬಗ್ಗೆ ಪ್ರವಾಸಿಗಳಿಗೆ ತೀವ್ರವಾದ ಆಸಕ್ತಿ ಇರುವುದನ್ನು ಗಮನಿಸಬೇಕು.

ಭಾರತದ ಜನರ ಸಹಜ ಸ್ನೇಹಪರತೆ, ಆತಿಥ್ಯದಲ್ಲಿ ಅವರು ತೋರುವ ಆಸಕ್ತಿ. ಸೇವಕರ ಪ್ರಾಮಾಣಿಕತೆ. ಸುಲಭವಾದರೂ ಸೊಗಸಾದ ನಿತ್ಯಜೀವನ ವಿಧಾನ—ಇವನ್ನು ಅನೇಕ ಪ್ರವಾಸಿಗಳು ಹೊಗಳುತ್ತಾರೆ. ಬಾಲಕರು ಮರಳಿನಲ್ಲಿ ತಿದ್ದಿ ಅಕ್ಷರ ಕಲಿಯುತ್ತಿದ್ದುದನ್ನುಕಂಡ ಒಬ್ಬ ಪ್ರವಾಸಿ ಕಾಸು ಖರ್ಚಿಲ್ಲದ ಆ ವಿಧಾನವನ್ನು ಬಾಯಿತುಂಬ ಹೊಗಳಿದ್ದಾನೆ. ಮತ್ತೊಬ್ಬನಿಗೆ ತನ್ನ ದೇಶದ ಪಾನೀಯಗಳಿಗಿಂತ ಭಾರತದ ನಾಟಿ ಹೆಂಡ ರುಚಿಕಂಡಿದೆ. ಇನ್ನೊಬ್ಬ ತಾನು ಕಂಡ ಸಿಡಿಯನ್ನು ಬಣ್ಣಿಸುತ್ತಾನೆ. ಅನೇಕರು ಭಾರತೀಯರ ತಾಂಬೂಲ ಪ್ರಿಯತೆಯನ್ನು ಕಂಡು ಅಚ್ಚರಿಪಟ್ಟಿದ್ದಾರೆ. ಪಿಯೆತ್ರೊ ದೆಲ್ಲಾ ವಲ್ಲೆ ಎಂಬ ಪ್ರವಾಸಿ ಕೋಲಾಟವನ್ನು ಬಣ್ಣಿಸಿದ್ದಾನೆ.

ಪ್ರವಾಸಿಗಳು ಮತ್ತೆ ಮತ್ತೆ ಗುಜರಾತು. ಸೂರತ್. ಆಗ್ರ. ಡೆಲ್ಲಿ. 'ಮೂಢನಂಬಿಕೆಗಳ ತವರಾದ ಬನಾರಸ್'. ಮಚಲಿಪಟ್ಟಣ—ಇತ್ಯಾದಿಗಳನ್ನು ಬಣ್ಣಿಸುತ್ತಾರೆ. ಒಬ್ಬಿಬ್ಬರು ಕನ್ನಡ ನಾಡಿನ ಬಗ್ಗೆ ಮಾಹಿತಿ ನೀಡಿದ್ದಾರೆ. ಇವುಗಳಲ್ಲಿ ಗುಜರಾತಿನಲ್ಲಿ ಒಮ್ಮೆ ಬಂದ ಕ್ಷಾಮದ ವರ್ಣನೆ ವಿಶದವಾಗಿ. ಆದರೆ ಅತಿ ದಾರುಣವಾಗಿ, ಬರುತ್ತದೆ.

ಪ್ರವಾಸಿ ಕಂಡ ಇಂಡಿಯಾದಂತೆ ಪ್ರವಾಸಿ ಕಂಡ ಕರ್ನಾಟಕ ಎಂಬ ಒಂದು ಗ್ರಂಥಸರಣಿಗೆ ಇನ್ನೂ ಅವಕಾಶವಿದ್ದಂತೆ ತೋರುತ್ತದೆ. ಡಾ. ಶ್ರೀಕಂಠಶಾಸ್ತ್ರಿಗಳ ಸೋರ್ಸಸ್ ಆಫ್ ಕರ್ನಾಟಕ ಹಿಸ್ಟರಿ ಗ್ರಂಥಮಾಲೆಯಿಂದ (ಅದು ಪೂರ್ಣ ಅಚ್ಚಾದಾಗ) ಅಲ್ಪಸ್ವಲ್ಪ ಪ್ರಯೋಜನವಾಗಬಹುದಾದರೂ ಪ್ರವಾಸಿಗಳ ವಿವರವಾದ ಅನುಭವಗಳನ್ನು ಒಳಗೊಂಡ ಪ್ರತ್ಯೇಕವಾದ ಒಂದು ಗ್ರಂಥ ಎಂದಿಗೂ ಅಗತ್ಯವೆಂದು ತೋರುತ್ತದೆ.

ಒಬ್ಬ ಪ್ರವಾಸಿ ತನ್ನ ಕಥಾನಕದಲ್ಲಿ ತಮ್ಮ ಬಗ್ಗೆ ಭಾರತೀಯ ಅಭಿಪ್ರಾಯವೇನೆಂಬುದನ್ನೂ ಒಂದು ಕಡೆ ಹೇಳುತ್ತಾನೆ. "ನಿಜವಾಗಿಯೂ ಫರಂಗಿಯವರು ದೊಡ್ಡ ಜನಾಂಗವಾಗುವುದರಲ್ಲಿ ಸಂದೇಹವಿಲ್ಲ. ಆದರೆ, ಅವರಲ್ಲಿರುವ ಮೂರು ದುರ್ಗುಣಗಳು ಇಲ್ಲದಿದ್ದರೆ ಚೆನ್ನಾಗಿತ್ತು. ಒಂದು ಅವರು ಕಾಫರ್‌ಗಳಾಗಿರುವುದು. ಎರಡನೆಯದು. ಅವರು ಹಂದಿಮಾಂಸ ತಿನ್ನುವುದು. ಮೂರನೆಯದು. ಮಲಮೂತ್ರ ಮಾಡಿದಾಗ ತೊಳೆದುಕೊಳ್ಳದಿರುವುದು." (ಸೆಬಾಸ್ಟಿಯನ್ ಮನ್ರಿಕನಿಗೆ ಚಕ್ರವರ್ತಿ ಅಸಫ್‌ಖಾನ್ ಹೇಳಿದ ಮಾತು)

ಪ್ರವಾಸಿ ಕಂಡ ಇಂಡಿಯಾ ಸಂಪುಟಗಳು ಓದಲು ಹೃದ್ಯವಾಗಿವೆ. ಲೇಖಕರು ನೇರವಾಗಿ ವಿಷಯಗಳನ್ನು ತಿಳಿಸಿದ್ದಾರೆ. ಅಲ್ಲಲ್ಲಿ ಯುಕ್ತವಾದೆಡೆ ಅಡಿಟಿಪ್ಪಣಿಗಳನ್ನೂ ಕೊಟ್ಟಿದ್ದಾರೆ. ಪ್ರತಿಯೊಬ್ಬ ಪ್ರವಾಸಿಯ ಬಗ್ಗೆ ಅವರು ಒದಗಿಸುವ ಟಿಪ್ಪಣಿ ಉಪಯುಕ್ತವಾಗಿದೆ. ಪುಸ್ತಕದ ಹಿಂದಿನ ವಿಷಯಾನುಬಂಧವೂ ಅಷ್ಟೆ. ತುಂಬ ಪ್ರಯೋಜನಕಾರಿಯಾಗಿದೆ.

ಭಾರತದ ಹಿಂದಿನ ಜೀವನವನ್ನು ಹಿನ್ನೆಲೆಯಾಗಿಟ್ಟುಕೊಂಡು ಕಥೆ ಕಾದಂಬರಿಗಳನ್ನು ರಚಿಸಬೇಕು ಎನ್ನುವವರಿಗಂತೂ ಈ ಸಂಪುಟಗಳು ಅಗಾಧ ಸಾಮಗ್ರಿಗಳನ್ನು ಒದಗಿಸುತ್ತವೆ. ನಾಲ್ಕನೆಯ ಸಂಪುಟದಲ್ಲಿ ಪಿಯಿತ್ರೊ ದೆಲ್ಲಾ ವಲ್ಲೆಯ ಪ್ರವಾಸ ಕಥನದಲ್ಲಿ ಬರುವ ವೆಂಕಪ್ಪನಾಯಕ ಗುಟ್ಟಾಗಿ ಮುಸಲ್ಮಾನ ತರುಣಿಯೊಂದಿಗೆ ನಡೆಸುವ ಪ್ರಣಯ. ಗೇರುಸೊಪ್ಪೆಯ ಕೊನೆಯ ರಾಣಿಯ ವಿಷಯ– ಇವು ಎರಡು ಉತ್ತಮ ಸಣ್ಣಕಥೆಗಳಿಗೆ ಆಗುವಷ್ಟು ವಿಷಯವನ್ನು ಒದಗಿಸುತ್ತವೆ.

ಕೊನೆಯದಾಗಿ ಒಂದು ಮಾತು. ಈ ಸರಣಿಯಲ್ಲಿನ ಏಳು ಸಂಪುಟಗಳೂ ಪ್ರಕಟವಾದ ಮೇಲೆ ಆ ಏಳಕ್ಕೂ ಅನ್ವಯವಾಗುವಂಥ ವಿಷಯ ಶಬ್ದ ಸೂಚಿಯೊಂದನ್ನು ಕೊಟ್ಟರೆ ಒಳ್ಳೆಯದು. ಸೂರತ್, ಸತಿ, ಬೊಂಬಾಯಿ, ಪರೆಯ–ಮುಂತಾದ ಯಾವುದೇ ವಿಷಯವಾಗಿ ಎಲ್ಲ ಪ್ರವಾಸಿಗಳೂ ಏನು ಹೇಳುತ್ತಾರೆ ಎಂಬುದನ್ನರಿಯಲು ಇಂಥ ಸಾಮಾನ್ಯ ಅನುಬಂಧದಿಂದ ಸಾಧ್ಯ. ಇದರಿಂದ ಗ್ರಂಥಗಳ ಉಪಯುಕ್ತತೆ ಇನ್ನೂ ಹೆಚ್ಚುತ್ತದೆ.

ಒಂದೆರಡು ಕಡೆ ಪ್ರವಾಸಗಳು ನೇರವಾಗಿ ಇಂಡಿಯಾಕ್ಕೆ ಸಂಬಂಧ ಪಡದೆ ಅತ್ತ ಇತ್ತ ಹೋಗುತ್ತವೆ. ಲೊಡೊವಿಕೊ ವರ್ತೆಮಾ ಇಂಡಿಯಾಕ್ಕೆ ಬರುವ ಮೊದಲಿನ ಅವನ ಪ್ರವಾಸ 15 ಪುಟಗಳಷ್ಟು ಬೆಳೆದಿದೆ. ಪಿಯಿತ್ರೊ ದೆಲ್ಲಾ ವಲ್ಲೆಯ ಕಥನದಲ್ಲೂ ಟೀಕಿಕಾ ಭಾಗ 20 ಪುಟಗಳಷ್ಟು ಬೆಳೆದಿದೆ. ಇಂಥವನ್ನು ಕಡಿಮೆ ಮಾಡಬಹುದು.

ಶ್ರೀಮಾನ್ ನಾಗೇಗೌಡರದು ಬಹು ಶ್ರದ್ಧೆಯ, ಬಹು ಶ್ರಮದ ಕೆಲಸ. "ಕನ್ನಡ ಸಾಹಿತ್ಯವಾಹಿನಿಗೆ ಒಂದು ಹೊಸ ಕಳೆ ಸಂಗಮಿಸುವಂತೆ ಮಾಡಿ, ಕನ್ನಡಿಗರ ಹೃದಯಶ್ರೀ ನೆರೆಯುಕ್ಕುವಂತೆ ಮಾಡಿ"ರುವ ಲೇಖಕರಿಗೆ ಕನ್ನಡದ ಜನ ಕೃತಜ್ಞರು.

—ಎನ್. ಪ್ರಹ್ಲಾದರಾವ್

ದಿ ಹೊಯ್ಸಳ ಡೈನಾಸ್ಟಿ: ಸಂ.: ಡಾ. ಬಿ. ಷೇಕ್ ಅಲಿ. ಪ್ರಾಧ್ಯಾಪಕರು. ಇತಿಹಾಸ ವಿಭಾಗ. ಮೈಸೂರು ವಿಶ್ವವಿದ್ಯಾನಿಲಯ : ಪು.: 8 + 376 : ಬೆಲೆ: ಸಾಮಾನ್ಯ ಪ್ರತಿ ರೂ 20. ಉತ್ತಮ ಪ್ರತಿ ರೂ. 25

1969 ಮತ್ತು 1970ರಲ್ಲಿ ಕರ್ನಾಟಕ ಇತಿಹಾಸಕ್ಕೆ ಸಂಬಂಧಿಸಿದಂತೆ ಮೂರು ಸಮ್ಮೇಳನಗಳು ನಡೆದುವು. ಮೊದಲನೆಯದು ಕೆಳದಿ ಇತಿಹಾಸಕ್ಕೆ ಸಂಬಂಧಿಸಿದುದು. ಸಮ್ಮೇಳನದ ಸ್ಥಳ ಶಿವಮೊಗ್ಗ. ಎರಡನೆಯದು ವಿಜಯನಗರದ ಇತಿಹಾಸಕ್ಕೆ ಸಂಬಂಧಿಸಿದುದು. ಇದು ನಡೆದುದು ಹೊಸಪೇಟೆ. ಹಂಪಿಗಳಲ್ಲಿ. ಕರ್ನಾಟಕ ವಿಶ್ವವಿದ್ಯಾನಿಲಯದ ಆಶ್ರಯದಲ್ಲಿ. ಕೊನೆಯದು 1970ರ ಡಿಸೆಂಬರ್‌ನಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಆಶ್ರಯದಲ್ಲಿ. ಹೊಯ್ಸಳವಂಶ ಸ್ಥಾಪನೆಯಾದ ಸಾವಿರ ವರ್ಷಗಳ ಸ್ಮರಣೆಗಾಗಿ ನಡೆದ ಸಮ್ಮೇಳನ. ಇದರಲ್ಲಿ ದಕ್ಷಿಣ ಭಾರತದ ವಿಶ್ವವಿದ್ಯಾನಿಲಯಗಳಲ್ಲಿ ಇತಿಹಾಸ ಹಾಗೂ ಕನ್ನಡದ ಪ್ರಾಧ್ಯಾಪಕರೂ. ಪುರಾತತ್ವ ಹಾಗೂ ಶಾಸನ ಇಲಾಖೆಗಳ ಅಧಿಕಾರಿಗಳೂ ಇತರ ಸಂಶೋಧಕರೂ ಭಾಗವಹಿಸಿದ್ದರು.

ಈ ಮೂರು ಸಮ್ಮೇಳನಗಳಲ್ಲಿ ಹಲವಾರು ಪ್ರೌಢ ಲೇಖನಗಳನ್ನು ಪಂಡಿತರು ಓದಿ ಚರ್ಚಿಸಿದರು. ಆದರೆ ಈ ಸಮ್ಮೇಳನಗಳಲ್ಲಿ ಓದಲಾದ ಲೇಖನಗಳನ್ನು ಪ್ರಕಟಿಸುವ ಹೊಣೆ ಹೊತ್ತು ಅದನ್ನು ಯಶಸ್ವಿಗೊಳಿಸಿದ ಹೆಮ್ಮೆ ಮೈಸೂರು ವಿಶ್ವವಿದ್ಯಾನಿಲಯದ್ದಾಗಿದೆ. ಪ್ರಸ್ತುತ ಗ್ರಂಥದಲ್ಲಿ ಈ ಸಮ್ಮೇಳನದಲ್ಲಿ ಓದಲಾದ 36 ಲೇಖನಗಳನ್ನು ಕ್ರೋಢೀಕರಿಸಲಾಗಿದೆ.

ಲಂಡನ್ ವಿಶ್ವವಿದ್ಯಾಲಯದ ಡಾ. ಡೆರ್ರೆಟ್‌ರವರು ಬಹಳ ಹಿಂದೆಯೇ 'ದಿ ಹೊಯ್ಸಳಾಸ್' ಎಂಬ ತಮ್ಮ ಪ್ರೌಢ ಪ್ರಬಂಧವನ್ನು ಪ್ರಕಟಿಸಿದ್ದಾರೆ. ಇದಕ್ಕೂ ಮೊದಲು ಡಾ. ಕೊಯೆಲ್ಹೊರವರ 'ಹೊಯ್ಸಳವಂಶ' (Hoysala Vamsa)ವೆಂಬ ತಮ್ಮ ಪ್ರಬಂಧವನ್ನು ಮುಂಬಯಿಯಲ್ಲಿರುವ ಭಾರತೀಯ ಇತಿಹಾಸ ಸಂಶೋಧನ ಸಂಸ್ಥೆ ಪ್ರಕಟಿಸಿತ್ತು. ಇವುಗಳು ಹೊರತು ಹೊಯ್ಸಳರನ್ನು

ಕುರಿತಾದ ಗ್ರಂಥಗಳಿಲ್ಲವೆಂದೇ ಹೇಳಬೇಕು. ಈ ದೃಷ್ಟಿಯಲ್ಲಿ ಪ್ರಸ್ತುತ ಲೇಖನಸಂಚಯ ಸ್ವಾಗತಾರ್ಹವಾಗಿದೆ.

ಸಮ್ಮೇಳನವನ್ನು ಉದ್ಘಾಟಿಸುತ್ತ ಕುಲಪತಿಗಳಾದ ಪ್ರೊ. ದೇ. ಜವರೇಗೌಡರು, ಹೊಯ್ಸಳ ಎಂಬ ಹೆಸರು ಕನ್ನಡಿಗರಿಗೆ ಸ್ಫೂರ್ತಿದಾಯಕವಾಗಿದೆ. ಕರ್ನಾಟಕ–ಹಾಗೂ ಭಾರತದ–ಸಂಸ್ಕೃತಿ ಹಾಗೂ ವಿಶಿಷ್ಟವಾಗಿ ಕಲೆಗೆ ಹೊಯ್ಸಳರ ಕೊಡುಗೆ ಅಮೋಘವಾದದ್ದಾಗಿದೆ. ಸರ್ವಧರ್ಮ ಸಮನ್ವಯ ಕನ್ನಡಿಗರ ಉಸಿರು. ಆ ನೀತಿಯನ್ನೇ ಹೊಯ್ಸಳರು ಅವಲಂಬಿಸಿದ್ದುದಲ್ಲದೆ, ಅದರ ಹಿರಿಮೆಯನ್ನು ಕೊಂಡಾಡಿ 'ಯಂ ಶೈವಾಸ್ಸಮುಪಾಸತೇ' ಎಂಬ ಪ್ರಖ್ಯಾತವಾದ ಪ್ರಾರ್ಥನೆಗಳನ್ನು ತಮ್ಮ ಶಾಸನಗಳಲ್ಲೂ ಅಳವಡಿಸುವುದರ ಮೂಲಕ ಆ ತತ್ವದ ಪ್ರಚಾರ ಮಾಡಿದ್ದಾರೆ ಎಂದು ಹೇಳಿ ಸಮ್ಮೇಳನಕ್ಕೆ ಯಶಸ್ಸನ್ನು ಕೋರಿದ್ದಾರೆ.

ಡಾ. ಟಿ. ವಿ. ಮಹಾಲಿಂಗಮ್‌ರವರು ತಮ್ಮ ಅಧ್ಯಕ್ಷ ಭಾಷಣದಲ್ಲಿ ಹೊಯ್ಸಳರ ಇತಿಹಾಸಕ್ಕೆ ಸಂಬಂಧಿಸಿದ ಹಲವಾರು ಚರ್ಚಾಸ್ಪದ ವಿಷಯಗಳನ್ನು ಉಲ್ಲೇಖಿಸಿ ಇವುಗಳ ಮೇಲೆ ವಿದ್ವಾಂಸರು ತಮ್ಮ ಸಂಶೋಧನೆಗಳ ಮೂಲಕ ಹೊಸ ಬೆಳಕನ್ನು ಚೆಲ್ಲಿ ಸತ್ಯಾನ್ವೇಷಣೆಯಲ್ಲಿ ನೆರವಾಗಬೇಕಾದ ಅಗತ್ಯವನ್ನು ಒತ್ತಿ ಹೇಳಿದ್ದಾರೆ.

ಇಲ್ಲಿಯ ಅನೇಕ ವಿಷಯಗಳನ್ನು ಕುರಿತು ಭಿನ್ನಾಭಿಪ್ರಾಯಗಳಿವೆ ಎಂಬುದನ್ನು ಈ ಪುಸ್ತಕವನ್ನು ಓದಿದ ಯಾರಾದರೂ ಅರಿಯಬಹುದು. ಡೆರ‍್ರೆಟ್‌ರವರ ಚಿಕ್ಕ ಲೇಖನದಲ್ಲಿ ವಿಚಾರಾರ್ಹವಾದ ಒಂದೆರಡು ಮಾತುಗಳಿವೆ. ಹೊಯ್ಸಳರ ಕಾಣಿಕೆ ಏನು? ಅವರಿಗೆ ಲಭಿಸಿದಾದ್ದರೂ ಏನು ಎನ್ನುವ ಪ್ರಶ್ನೆಗಳನ್ನು ಕೇಳಿ, ಅಂದಿನ ಕರ್ನಾಟಕದ ಭಾಗದಲ್ಲಿ ನೆಲಸಿದ್ದ, ಬಹಳ ಮಟ್ಟಿಗೆ ಬೆರೆತುಹೋಗಿದ್ದ, ಅಸಂಸ್ಕೃತ ಗುಡ್ಡಗಾಡಿನ ಜನರನ್ನು ಒಟ್ಟುಗೂಡಿಸಿ, ಅವರನ್ನು ಸಂಘಟಿಸಿದುದು ಹೊಯ್ಸಳರ ಹಿರಿಯ ಸಾಧನೆ. ತಮ್ಮಲ್ಲಿಯ ಅಪಾರ ಸಂಪತ್ತನ್ನು ರೂಢಿಸಿಕೊಂಡು, ದೂರದ, ಉತ್ತರದ, ಚಾಲುಕ್ಯ ಅರಸರಿಗೆ ಸಲಿಸುವ ಬದಲು ಅದರಿಂದ ತಮ್ಮ ಶಕ್ತಿಯನ್ನೇ ಸಂಘಟಿಸಿಕೊಂಡು, ತಮ್ಮ ಜೀವನ ಹೆಚ್ಚು ಆನಂದದಾಯಕವಾಗುವಂತೆ ಮಾಡಿ ಶೋಷಣೆಯಿಂದ ಮುಕ್ತರಾಗುವಂತೆ ಅಲ್ಲಿಯ ಜನರಿಗೆ ವಿಷ್ಣುವರ್ಧನ ಹಾದಿತೋರಿಸಿಕೊಟ್ಟನೆಂಬುದು ಅವನ–ಹೊಯ್ಸಳರ–ವೈಶಿಷ್ಟ್ಯ ಎನ್ನುತ್ತಾರೆ ಡಾ. ಡೆರ‍್ರೆಟ್. ಆದರೆ ಮುಂದೆ ಶಕ್ತಿಸಾಮರ್ಥ್ಯಗಳು ಹೆಚ್ಚಿದಂತೆಲ್ಲಾ ಮದೋನ್ಮತ್ತರಾಗಿ ತಮ್ಮದರಲ್ಲಿ ತೃಪ್ತಿಕಾಣದೆ. ದಕ್ಷಿಣದ–ತಮಿಳುನಾಡಿನ–ರಾಜಕೀಯದಲ್ಲಿ ಕೈಹಾಕಿದ್ದರಿಂದ ಅವರ ರಾಜ್ಯದಲ್ಲಿಯೇ ಅತೃಪ್ತಿ, ಅಶಾಂತಿಗಳು ತಲೆದೋರುವಂತಾಯಿತು. ಅಣ್ಣ ತಮ್ಮಂದಿರ ಜಗಳದ ಪರಿಣಾಮವಾಗಿ ರಾಜ್ಯ ಇಬ್ಭಾಗವಾಯಿತು. ಇದು ರಾಜ್ಯಕ್ಕೆ ಕುತ್ತಾಯಿತು. ಇದು ಹೊಯ್ಸಳರ ಕತೆ. ಇದನ್ನು ಹೊಯ್ಸಳರ ಸಾಹಿತ್ಯ, ಶಾಸನಗಳು ಇತ್ಯಾದಿ ಎಷ್ಟರಮಟ್ಟಿಗೆ ಪ್ರತಿಬಿಂಬಿಸಿವೆ ಎಂಬುದನ್ನು ಇನ್ನೂ ಕಾದುನೋಡಬೇಕಾಗಿದೆ. ಇದು. ಡಾ. ಡೆರ‍್ರೆಟರ ಲೇಖನದ ತಿರುಳು.

ಈ ಸಂದರ್ಭದಲ್ಲಿ ಕೆಲವು ಪ್ರಶ್ನೆಗಳು ಸಹಜವಾಗಿ ಏಳುತ್ತವೆ. ಅವರೇ ಹೇಳುವಂತೆ ಭಾರತ ಸಾಮ್ರಾಜ್ಯ ಚಕ್ರದ ಗುಂಬ ಭಾರತೀಯ. ಭಾರತೀಯ ಸಮಾಜದ ಮನುಷ್ಯ. ಭಾರತೀಯ ಸಂಸಾರ ಹೊಂದರ ಸದಸ್ಯ. ಆ ಸಾಮ್ರಾಜ್ಯದ ಆರೋಗ್ಯ. ಒಳಿತು ಇವು ಆ ಸಮಾಜದ. ಸಂಸಾರದ. ಆರೋಗ್ಯ ಮನ್ನವಲಂಬಿಸಿರುತ್ತದೆ ಎನ್ನುವಾಗ ಈ ಪ್ರಶ್ನೆ ಭಾರತಕ್ಕೆ ಮಾತ್ರವೇ ಅನ್ವಯಿಸುತ್ತದೆಯೇ ಅಥವಾ ಇದು ವಿಶ್ವದ ಎಲ್ಲೆಡೆಗಳಲ್ಲಿಯೂ ಕಾಣುವ ಮಾನವನಿಗೂ. ಮಾನವ ಸಮಾಜಕ್ಕೂ ಅನ್ವಯಿಸುತ್ತದೆಯೇ ಎಂಬುದು ಗಮನಾರ್ಹ. ಡೆರ‍್ರೆಟ್‌ರವರು ಮಾಪನ ಮಾಡಿರುವ ಮೌಲ್ಯ ಹೊಯ್ಸಳರಿಗಷ್ಟೇ. ಕರ್ನಾಟಕಕ್ಕಷ್ಟೇ. ಭಾರತಕ್ಕಷ್ಟೇ ಸೀಮಿತವಲ್ಲ. ಇದು ವಿಶ್ವಮಾನವನ ಇತಿಹಾಸದಲ್ಲಿ ಎಂದೆಂದೂ ಕಾಣುವ ಚಿತ್ರಣವಲ್ಲವೇ? ಆರ್ಥಿಕವಾಗಿ ಸಂಪನ್ನನಾದ ಮನುಷ್ಯ, ಸಮಾಜ. ಹೆಚ್ಚಿನ ದಾಹದಿಂದ ದುರಾಕ್ರಮಣ ಮನೋಭಾವವನ್ನು–ಶರಣಾಗತರನ್ನು ರಕ್ಷಿಸಲು, ದುಷ್ಟರನ್ನು ಶಿಕ್ಷಿಸಲು ಇತ್ಯಾದಿ ಯಾವುದೇ ಕಾರಣ ಇರಲಿ–ಬೆಳಸಿಕೊಂಡು. ತದನಂತರ ಅವನತಿಯ ಹಾದಿಯನ್ನು ಹಿಡಿಯುವುದು ಇತಿಹಾಸದಲ್ಲಿ ಸಾಮಾನ್ಯವಾಗಿ ಕಂಡುಬರುವ ಚಿತ್ರವಲ್ಲವೇ? ಇದು ಹೊಯ್ಸಳರದೇ ವೈಶಿಷ್ಟ್ಯವೇಕಾಗಬೇಕು? ಡೆರ‍್ರೆಟ್‌ರವರ ಅಭಿಪ್ರಾಯ ಸರ್ವಸಮ್ಮತವಾದುದಲ್ಲವೆನಿಸುತ್ತದೆ.

ಇವರ 'ಹೊಯ್ಸಳರ ರಾಜತ್ವ ಸಂದರ್ಭಾನುಸಾರವಾಗಿ ಬದಲಾಗುತ್ತಿದ್ದ ದಬ್ಬಾಳಿಕೆ'(ಟಿರನಿ ಮಾಡಿಫೈಡ್ ಬೈ ಎಕ್ಸ್‌ಪೀಡಿಯೆನ್ಸಿ) ಎಂಬ ಇನ್ನೊಂದು ಅಭಿಪ್ರಾಯವನ್ನು ಡಾ ಷೇಕ್ ಅಲಿಯವರು ತಮ್ಮ ಲೇಖನದಲ್ಲಿ ಅಲ್ಲಗಳೆದಿದ್ದಾರೆ. ವೈಯಕ್ತಿಕ ಹಾಗೂ ಸಾಮಾಜಿಕ ವಿಷಯಗಳಿಗೆ ಸಂಬಂಧಿಸಿದಂತೆ ಭಾರತೀಯ ಮತ್ತು ಪಾಶ್ಚಾತ್ಯ ಸಮಾಜಗಳ ಮನೋಧರ್ಮ ಭಿನ್ನವಾದುದಾಗಿದೆ. ಪಾಶ್ಚಾತ್ಯರು ಸಾರ್ವಜನಿಕ ವ್ಯವಹಾರಗಳನ್ನು ಗಡುಸಾಗಿ, ನಿರ್ದಾಕ್ಷಿಣ್ಯವಾಗಿ, ವಾಸ್ತವಿಕ ದೃಷ್ಟಿಯಿಂದ ಕಂಡರೆ, ಭಾರತೀಯರು ಅವನ್ನು ವಾತ್ಸಲ್ಯಪೂರ್ಣವಾಗಿ, ಭಾವಪರವಶರಾಗಿ ಕಾಣುತ್ತಾರೆ. ಸಹಜವಾಗಿಯೇ ಇಂತಹ ವ್ಯವಹಾರಗಳಲ್ಲಿ ಇವರು ಹಿಡಿಯುವ ಮಾರ್ಗವೇ ಬೇರೆ. ಭಾರತೀಯ ದೊರೆ ತಾತ್ವಿಕವಾಗಿ ನಿರಂಕುಶನೆಂದು ಕಂಡರೂ, ವಾಸ್ತವಿಕವಾಗಿ ಅವನು ಅನೇಕ ಕಟ್ಟುಪಾಡುಗಳಿಂದ ಬಂಧಿತನಾಗಿದ್ದ. ಇವುಗಳಲ್ಲಿ ಬಹಳ ಮುಖ್ಯವಾದದ್ದು ಧರ್ಮ. ಅವನೊಡನೆ ಮಂತ್ರಿ, ಪುರೋಹಿತ, ಸೇನೆ ಇತ್ಯಾದಿ ಸಪ್ತಾಂಗಗಳೂ ಪರಿಭಾವಿಸಿದಾಗಷ್ಟೇ ಆತನ ನಿರಂಕುಶತ್ವ ಚಾಲನೆ ಹೊಂದುತ್ತಿತ್ತು. ಧರ್ಮದ ಬಂಧನವಂತೂ ವಿಚಿತ್ರವಾದ, ಆದರೆ ಅಷ್ಟೇ ಗಡುಸಾದ ಬಂಧನವಾಗಿತ್ತು–ಎಂದೆಲ್ಲ ಡಾ. ಷೇಕ್ ಅಲಿಯವರು ವಾದಿಸಿ ಡೆರ್ರೆಟ್‌ರವರ ಅಭಿಪ್ರಾಯವನ್ನು ಬದಿಗೆ ಸರಿಸಿದ್ದಾರೆ. ಇದು ಇತಿಹಾಸ ಸಂಶೋಧಕರಿಗೆ ಮಾರ್ಗದರ್ಶಿಯಾಗಬಲ್ಲಂತಹ ವಾದಗಳನ್ನೊಳಗೊಂಡ ಒಂದು ಲೇಖನವಾಗಿದೆ.

ಹೊಯ್ಸಳರ ಮೂಲಸ್ಥಾನ ಶಶಕಪುರ, ಶಶಪುರ, ಶಾಶಕಪುರ, ಶಾಶಕಪುರಿ ಎಂಬ ಹೆಸರುಗಳ ಪ್ರಯೋಗವನ್ನು ಶಾಸನಗಳಲ್ಲಿ ಕಾಣುತ್ತೇವೆ. ಇದನ್ನು ಸೊಸೆವೂರು ಎಂದೂ ಕರೆಯಲಾಗಿದೆ. ಈಗಿನ ಚಿಕ್ಕಮಗಳೂರು ಜಿಲ್ಲೆಯಲ್ಲಿಯ ಅಂಗಡಿಯೇ ಈ ಸೊಸೆವೂರು ಎಂದು ಗುರುತಿಸಲಾಗಿದೆ. ಸೊಸೆವೂರು ಎಂಬ ಹೆಸರನ್ನು ವಿಶ್ಲೇಷಿಸುತ್ತ ಶ್ರೀ ಹನುಮಂತರಾಯರು ಚಾಲುಕ್ಯ ಸೋಮೇಶ್ವರ 1ನೆಯ ಹೊಯ್ಸಳ ವಿನಯಾದಿತ್ಯನ ಸೋದರಿಯಾದ ಹೊಯ್ಸಳ ಮಹಾದೇವಿಯನ್ನು ಮದುವೆಯಾಗಿದ್ದ ಕಾರಣ, ಆಕೆ ಚಾಲುಕ್ಯರ ಸೊಸೆಯಾದಳೆಂದೂ, ಆ ಸೊಸೆಯ ತವರೂರಾದ ಶಶಕಪುರ ಸೊಸೆಯ ಊರು–ಸೊಸೆವೂರು–ಆಯಿತೆಂದೂ ಸೂಚಿಸಿದ್ದಾರೆ. ಇದು ಊಹೆಯೇ ಆದರೂ, ಪರಿಶೀಲನಾರ್ಹವಾಗಿದೆ. ಆದರೆ ಇವರ ಮುಂದಿನ ಲೇಖನದಲ್ಲಿ ಡಾ. ಕೃಷ್ಣಸ್ವಾಮಯ್ಯಂಗಾರ್ಯರು ಶಶಕಪುರ ಸೊಸೆವೂರು ಆಗಿರಲಾರದೆಂದೂ ಹೊಯ್ಸಳರ ಪ್ರಥಮ ರಾಜಧಾನಿಯಾದ ಶಶಕಪುರ ಈಗಿನ ಹಳೇಬೀಡು ಆಗಿರಬಹುದೆಂದೂ ಸೂಚಿಸಿರುವುದು ಇತಿಹಾಸದಲ್ಲಿ ಇಂತಹ ಸಣ್ಣ ವಿಷಯಗಳಲ್ಲಿಯೂ ಇದಮಿತ್ಥಂ ಎಂದು ಹೇಳಲು ಸಾಧ್ಯವಿಲ್ಲವೆಂಬುದನ್ನು ತೋರಿಸುತ್ತದೆ.

ಡಾ. ಎನ್. ಸುಬ್ರಹ್ಮಣ್ಯಂರವರು ತಮಿಳಿನ ಸಂಗಂ ಸಾಹಿತ್ಯದಲ್ಲಿ ಉಲ್ಲೇಖವಾಗಿರುವ ಹೇಳಿಕೆಗಳನ್ನು ಅವಲಂಬಿಸಿ ಕೆಲವು ಸ್ವಾರಸ್ಯವಾದ ಸೂಚನೆಗಳನ್ನು ಮಾಡಿದ್ದಾರೆ. ಹೊಯ್ಸಳ ಅರಸರು ಧರಿಸಿದ ಬಲ್ಲಾಳ ಎಂಬ ಬಿರುದು ತಮಿಳು ಜನಾಂಗಗಳಲ್ಲೊಂದಾದ ವೇಳಿರ್‌ಗೆ ಸಂಬಂಧಿಸಿದುದು; ಬಲ್ಲಾಳ ಎಂಬುದು ಮೂಲ ವೆಲ್ಲಾಳದಿಂದ ಬಂದುದು (ವೆಲ್ಲಾಳ–ವೇಲ್‌ಆಳರ್, ಅಶುದ್ಧವಾಗಿ ವಲ್ಲಾಳ್–ವಲ್ ಆಳರ್ ಆಗಿದೆ); ಹೊಯ್ಸಳ ಎಂಬ ಪದಕ್ಕೂ ಅರ್ಥವಿವರಣೆಯನ್ನು ಕೊಡುತ್ತಾ ಪೊಯ್ ಎಂಬ ಕನ್ನಡ ಪದದ ಹೊಡೆ ಎಂಬ ಅರ್ಥಕ್ಕೆ ಬದಲು, ಪೊಯ್ ಎಂದರೆ ತಮಿಳಿನಲ್ಲಿ ಸುಳ್ಳು ಎಂಬ ಅರ್ಥದಲ್ಲಿ ಪೊಯ್ಸೊಲರ್ ಎಂದರೆ ಸುಳ್ಳನ್ನು ಹೇಳದವರು ಎಂದು ಅರ್ಥೈಸಿ ಇವರು ತುಳುನಾಡಿನಿಂದ ಕೊಂಗುನಾಡಿನ ವರೆಗಿನ ಪ್ರದೇಶದಲ್ಲಿ ನೆಲಸಿದ್ದ ಮೆಯ್ಮಲಿ ಕೋಶರ್ ಅಥವಾ ಸತ್ಯಪುತ್ರ (ಅಶೋಕನ ಶಾಸನಗಳ ಸತಿಯಪುತ್ರ)ರೆಂದೂ ಮಾಡಿರುವ ಇವರ ಸೂಚನೆಗಳು ಕುತೂಹಲಕಾರಿಯಾಗಿವೆ.

ಈ ಗ್ರಂಥದಲ್ಲಿ ಹೊಯ್ಸಳರು ಚಾಲುಕ್ಯರೊಡನೆ, ಸೇಉಣರೊಡನೆ, ಆಂಧ್ರಪ್ರದೇಶದ ಹಾಗೂ ತಮಿಳುನಾಡಿನ ಇತರ ಅರಸು ಮನೆತನಗಳೊಡನೆ ಹೊಂದಿದ್ದ ಸಂಬಂಧಗಳನ್ನು ವಿಶ್ಲೇಷಿಸುವ, ಇವರ ಆಡಳಿತ ಪದ್ಧತಿ, ಆರ್ಥಿಕ ಧೋರಣೆ ಇತ್ಯಾದಿಗಳಿಗೆ ಸಂಬಂಧಿಸಿದ, ಇವರ ಕಾಲದ ವಾಸ್ತುಶಿಲ್ಪ, ಕಲೆ, ಸಾಹಿತ್ಯ, ಧರ್ಮಗಳನ್ನು ಕುರಿತಾದ ಲೇಖನಗಳಿವೆ. ಕೊನೆಯ ಎರಡು ಲೇಖನಗಳು ಮುಮ್ಮಡಿ ವೀರಬಲ್ಲಾಳ ವಿಜಯನಗರದ ಸ್ಥಾಪನೆಯಲ್ಲಿ ವಹಿಸಿದ ಪಾತ್ರವನ್ನು ಕುರಿತವಾಗಿವೆ.

ಡಾ. ಎಂ. ವಿ. ಕೃಷ್ಣರಾಯರ ಲೇಖನದಲ್ಲಿ ಹೊಸತೇನೂ ಇಲ್ಲ. ಆದರೆ ಡಾ. ದೇಸಾಯರ ಲೇಖನ ವಿಚಾರಪೂರಿತವಾಗಿದೆ. ಸಂದಿಗ್ಧ ಪರಿಸ್ಥಿತಿಯಲ್ಲಿ ಸಿಲುಕಿದ ಬಲ್ಲಾಳ ತನ್ನ ರಾಜ್ಯವನ್ನು ಮಹ

ಮಾಮೀಯರ ಹಿಡಿತಕ್ಕೆ ಸಿಗದಂತೆ ಮಾಡಲು ಪಟ್ಟ ಬವಣೆಗಳನ್ನು, ಅವನಿಗೆ ಬೆಂಬಲಿಗರಾಗಿ ನಿಂತ ಅವನ ಸಂಬಂಧಿಕರೂ ಅಧೀನಾಧಿಕಾರಿಗಳೂ ಆಗಿದ್ದ ಹರಿಹರ, ಬುಕ್ಕರು ಅವನಿಗೆ ನೀಡಿದ ಪ್ರೋತ್ಸಾಹಗಳನ್ನೂ ಚರ್ಚಿಸಿ, ಈ ಸಂಬಂಧದಲ್ಲಿ ಹಲವಾರು ಶಾಸನಗಳನ್ನು ಅಪಾರ್ಥಮಾಡಿ ಬಲ್ಲಾಳನಿಗೂ ಈ ಸೋದರರಿಗೂ ವೈರತ್ವವಿದ್ದಿತೆಂದು ಮಾಡಿದ್ದ ಊಹೆಯನ್ನು ನಿರಾಧಾರವೆಂದು ತೋರಿಸಿಕೊಟ್ಟಿದ್ದಾರೆ. ವಿಜಯನಗರ ಸಾಮ್ರಾಜ್ಯದ ಸ್ಥಾಪನೆಯಲ್ಲಿ ಬಲ್ಲಾಳನ ಮಹತ್ವವಾದ ಪಾತ್ರವನ್ನು ರೂಪಿಸಿದ್ದಾರೆ. ಇದೊಂದು ವಿಶಿಷ್ಟ ಲೇಖನ.

ಪ್ರಸ್ತುತ ಲೇಖನಸಂಚಯದಲ್ಲಿಯ ಎಲ್ಲ ಲೇಖನಗಳನ್ನೂ ದೀರ್ಘವಾಗಿ ವಿಮರ್ಶಿಸಲಾಗದು. ಹೊಯ್ಸಳರ ಇತಿಹಾಸದ ವಿವಿಧ ಮುಖಗಳಿಗೆ ಸಂಬಂಧಿಸಿದ ಲೇಖನಗಳು ಹಲವಾರು ಇಲ್ಲಿವೆ. ಲೇಖಕರ ಪಟ್ಟಿಯಲ್ಲಿ ಡಾ. ಶೆಟ್ಟರ್‌ರವರ ಹೆಸರು ಕೈತಪ್ಪಿ ಹೋಗಿದೆ. ಡಾ. ದೀಕ್ಷಿತರ ಹೆಸರಿದೆ, ಆದರೆ ಅವರ ಲೇಖನವಿಲ್ಲ; ಡಾ. ಮಹಾಲಿಂಗಮ್‌ರವರು ಮಾಡಿದ ಅಧ್ಯಕ್ಷಭಾಷಣ ಇದರಲ್ಲಿ ಸೇರಿದ್ದರೂ, ಲೇಖಕರ ಪಟ್ಟಿಯಲ್ಲಿ ಅವರ ಹೆಸರೂ ಕಾಣಬರದು; ಇವು ಕಣ್ತಪ್ಪಿನಿಂದಾದ ದೋಷಗಳು. ಮುದ್ರಣ ಚೆನ್ನಾಗಿದೆ. ಆದರೆ ಅಲ್ಲಲ್ಲಿ ಕಾಗುಣಿತದ ತಪ್ಪುಗಳು ಉಳಿದುಕೊಂಡಿವೆ. ಪುಸ್ತಕದ ಮುಖಪುಟ ಆಕರ್ಷಣೀಯವಾಗಿದೆ. ಕರ್ನಾಟಕದ ಉತ್ತಮ ಇತಿಹಾಸ ಗ್ರಂಥಗಳಲ್ಲಿ ಇದೂ ಒಂದು ಎನ್ನಬಹುದು.

—ಡಾ. ಬಾ. ರಾ. ಗೋಪಾಲ್

ಭಾರತೀಯ ಶಾಸನಶಾಸ್ತ್ರ ಪರಿಚಯ : ಲೇ. ಜೆ. ಎಫ್. ಫ್ಲೀಟ್; ಅನುವಾದ: ಸಿ.ಪಿ.ಕೆ. ಪ್ರ.: ಸುರುಚಿ ಪ್ರಕಾಶನ, ಸರಸ್ವತೀಪುರಂ, ಮೈಸೂರು–9; ರೂ. 3.50 ಮತ್ತು ರೂ. 7.50

ಇಂಪಿರೀಯಲ್ ಗೆಜೆಟಿಯರ್ ಆಫ್ ಇಂಡಿಯ ಗ್ರಂಥದ ದ್ವಿತೀಯ ಸಂಪುಟದಲ್ಲಿ ಫ್ಲೀಟ್‌ರವರು ಬರೆದ 'ಎಪಿಗ್ರಫಿ' ಎಂಬ ದೀರ್ಘ ಲೇಖನದ ಕನ್ನಡಾನುವಾದವೇ ಈ ಪುಸ್ತಕ. ಈ ಇಂಗ್ಲಿಷ್ ಗ್ರಂಥ ಭಾರತೀಯ ಇತಿಹಾಸ–ಸಂಸ್ಕೃತಿಗಳನ್ನು ಅಭ್ಯಾಸ ಮಾಡುವವರಿಗೆ ಮುಖ್ಯವಾದ ಆಕರವಾಗಿದ್ದಿತು. ಅದರಲ್ಲಿಯೂ ಭಾರತೀಯ ಶಾಸನವನ್ನು ಅಭ್ಯಾಸ ಮಾಡುವವರಿಗೆ ಫ್ಲೀಟರ ಈ ಲೇಖನ ಬಹು ಮುಖ್ಯವಾಗಿದ್ದು, ಶಾಸನ ಪರಿಚಯಕ್ಕೆ ಮುನ್ನುಡಿಯಂತಿದ್ದಿತು. ಆದರೆ ಈ ಗ್ರಂಥ ವಿದ್ಯಾರ್ಥಿಗಳಿಗೂ ಇತಿಹಾಸಾಭ್ಯಾಸಿಗಳಿಗೂ ಸುಲಭವಾಗಿ ದೊರೆಯುತ್ತಿರಲಿಲ್ಲ. (ಈಗ ಇದರ ಪುನರ್ಮುದ್ರಣವಾಗಿದೆ) ಹೀಗಾಗಿ ವಿದ್ಯಾರ್ಥಿಗಳಿಂದಲೂ ಸಾಮಾನ್ಯ ಓದುಗರಿಂದಲೂ ಫ್ಲೀಟರ ಈ ಲೇಖನಕ್ಕೆ ಬಹಳ ಬೇಡಿಕೆಯಿತ್ತು. ಇದು ಇಂಗ್ಲಿಷಿನಲ್ಲಿದ್ದುದು ಮತ್ತೊಂದು ಕೊರತೆಯಾಗಿದ್ದಿತು. ಇದನ್ನು ಮನಗಂಡ ಸಿ.ಪಿ.ಕೆ. ಯವರು ಇದನ್ನು ಕನ್ನಡಕ್ಕೆ ಅನುವಾದಿಸಿ ಪುಸ್ತಕರೂಪದಲ್ಲಿ ಕೊಟ್ಟು, ಭಾರತೀಯ ಶಾಸನ ಶಾಸ್ತ್ರಕ್ಕೆ ಮಹದುಪಕಾರಮಾಡಿದ್ದಾರೆ. ಯಾವ ಯೋಚನೆಯೂ ಇಲ್ಲದೆ ಈ ಚೊಕ್ಕ ಪುಸ್ತಕವನ್ನು ನಮ್ಮ ವಿದ್ಯಾರ್ಥಿಗಳಿಗೂ ಶಾಸನಶಾಸ್ತ್ರ ಅಭ್ಯಾಸಿಗಳಿಗೂ ಮೊದಲ ಪುಸ್ತಕವಾಗಿ ಶಿಫಾರಸು ಮಾಡಬಹುದು.

ಫ್ಲೀಟರು ಭಾರತೀಯ ಶಾಸನಶಾಸ್ತ್ರ ಪಿತಾಮಹನೆನಿಸಿಕೊಂಡಿದ್ದಾರೆ. ನಮ್ಮ ಸಂಸ್ಕೃತಿಯ ಅಭ್ಯಾಸ ಇನ್ನೂ ಶೈಶವಾವಸ್ಥೆಯಲ್ಲಿದ್ದ ಕಾಲದಲ್ಲಿ ಮತ್ತು ಭಾರತೀಯ ಸಂಸ್ಕೃತಿಯ ವಿಷಯದಲ್ಲಿ ಗೌರವಾನ್ವಿತ ಭಾವನೆ ಇನ್ನೂ ಬೆಳೆಯದೇ ಇದ್ದ ಕಾಲದಲ್ಲಿ, ನಮ್ಮ ಇತಿಹಾಸ–ಸಂಸ್ಕೃತಿಗಳ ಶ್ರೀಮಂತಿಕೆಯನ್ನು ಜಗತ್ತಿಗೆ ಎತ್ತಿ ತೋರಿದವರು ಫ್ಲೀಟ್. ಅದರಲ್ಲಿಯೂ ಕರ್ನಾಟಕದ ಇತಿಹಾಸ–ಸಂಸ್ಕೃತಿಯ ಅಧ್ಯಯನಕ್ಕೆ ಇವರು ಮಾಡಿರುವ ಸೇವೆ ಅಪಾರವಾದುದು. ಅನೇಕ ಹೊಸ ವಿಷಯಗಳು ಬೆಳಕಿಗೆ ಬಂದಿದ್ದರೂ, 1859ರಲ್ಲಿ ಇವರು ರಚಿಸಿದ 'ಬೊಂಬಾಯಿ ಪ್ರಾಂತದ ಕನ್ನಡ ಜಿಲ್ಲೆಗಳ ರಾಜವಂಶಗಳು' ಎಂಬ ಕೃತಿ ಕರ್ನಾಟಕ ಇತಿಹಾಸಕ್ಕೆ ಇಂದಿಗೂ ಅಮೂಲ್ಯ ಆಕರ ಗ್ರಂಥವಾಗಿದೆ. ಫ್ಲೀಟರ ಬರವಣಿಗೆಯಲ್ಲಿ ಖಚಿತತೆ ಎದ್ದು ಕಾಣುತ್ತದೆ. ಕ್ಲಿಷ್ಟ ವಿಷಯಗಳನ್ನು ಸರಳವಾಗಿ ಹೇಳುವ ಕಲೆಯನ್ನು ಈ ಲೇಖನದಲ್ಲಿ ಕಾಣಬಹುದು. ಕನ್ನಡ ಅನುವಾದ ಕಲೆಯಲ್ಲಿ ಪ್ರಸಿದ್ಧರಾಗಿರುವ ಸಿ.ಪಿ.ಕೆಯವರು ಇಂಗ್ಲಿಷ್ ಲೇಖನದ ಸರಳತೆ, ಖಚಿತತೆಯನ್ನು ತಮ್ಮ ಅನುವಾದದಲ್ಲಿಯೂ ತೋರ್ಪಡಿಸಿದ್ದಾರೆ.

ಸಾಮಾನ್ಯವಾಗಿ ಕನ್ನಡದಲ್ಲಿ ಅನುವಾದ ಮಾಡಲು ಹೊರಟಾಗ ತಾಂತ್ರಿಕ ಪದಗಳನ್ನು ಕನ್ನಡ

ದಲ್ಲಿ ರೂಪಿಸುವುದು ಕಷ್ಟವಾಗುತ್ತದೆ. ವಂಶಾವಳಿ, ವಂಶಪತ್ರ, ದಾಖಲೆ, ಕೂಟಶಾಸನ, ಅನುಪ್ರಾಪ್ತಿ ಮುಂತಾದ ನೂರಾರು ಪದಗಳನ್ನು ಬಳಕೆಗೆ ತಂದಿದ್ದಾರೆ ಸಿ.ಪಿ.ಕೆ.ಯವರು. ಇವು ಹೀಗೆಯೇ ಬಳಕೆಯಲ್ಲಿ ಉಳಿಯುವುದರಲ್ಲಿ ಸಂದೇಹವಿಲ್ಲ. ಒಟ್ಟಿನಲ್ಲಿ ಹೇಳುವುದಾದರೆ ಇದೊಂದು ಉತ್ತಮ ಅನುವಾದ. ಸುಂದರ ರಕ್ಷಾಕವಚ ಮತ್ತು ಮುದ್ರಣದಿಂದ ಕೂಡಿದ (ಮತ್ತು ಹಿತವಾದ ಬೆಲೆಯ) ಈ ಪುಸ್ತಕ ಹೊರಬರಲು ಕಾರಣರಾದ ಅನುವಾದಕ ಸಿ.ಪಿ.ಕೆ. ಯವರಿಗೂ ಸುರುಚಿ ಪ್ರಕಾಶನದವರಿಗೂ ಕನ್ನಡ ಅಭಿಮಾನಿಗಳ ಕೃತಜ್ಞತೆಗಳು ಸಲ್ಲಬೇಕು.

—ಎ. ವಿ. ಎನ್.

ಶಾಸನಸಭೆಯ ಕಾರ್ಯವಿಧಾನ: ಲೇ.: ಟಿ. ಹನುಮಂತಪ್ಪ, ಕಾರ್ಯದರ್ಶಿ, ಮೈಸೂರು ಶಾಸನಸಭೆ; ಪು. 24; ಬೆಲೆ: ರೂ.1

ಟಿ. ಹನುಮಂತಪ್ಪ ಅವರು ಬೆಂಗಳೂರಿನ ಗೋಖಲೆ ಸಾರ್ವಜನಿಕ ವಿಚಾರಸಂಸ್ಥೆಯ ಆಶ್ರಯದಲ್ಲಿ ಮಾಡಿದ ಉಪನ್ಯಾಸ ಆ ಸಂಸ್ಥೆಯ ಜನೋಪಯುಕ್ತ ಗ್ರಂಥಮಾಲೆಯಲ್ಲಿ ಪುಸ್ತಕರೂಪದಲ್ಲಿ ಪ್ರಕಟವಾಗಿದೆ. ಮದ್ರಾಸು ಮತ್ತು ಮೈಸೂರಿನ ಶಾಸನಸಭೆಗಳ ಕಾರ್ಯದರ್ಶಿಯಾಗಿ ಅಪಾರ ಅನುಭವ ಪಡೆದಿರುವ ಲೇಖಕರು ಜನಸಾಮಾನ್ಯರಿಗೂ ಅರ್ಥವಾಗುವಂತೆ ಅತ್ಯಂತ ಸರಳವಾಗಿ ನಮ್ಮ ಶಾಸನಸಭೆಯ ಕಲಾಪಗಳ ಪರಿಚಯ ಮಾಡಿಕೊಟ್ಟಿರುವುದು ಶ್ಲಾಘನೀಯ. ಪುಸ್ತಕದಲ್ಲಿ ಸಭಾನಿಯಮಗಳು, ಅಧ್ಯಕ್ಷರ ಕರ್ತವ್ಯ, ಚರ್ಚೆ, ಪ್ರಶ್ನೋತ್ತರ, ರಾಜ್ಯಪಾಲರ ಭಾಷಣ, ಶಾಸನಸಭೆ ರಚನೆಯ ವಿಧಾನ, ಆಯ-ವ್ಯಯ, ಸದಸ್ಯರ ಹಕ್ಕುಗಳು ಇವೇ ಮುಂತಾದವುಗಳ ಸ್ಥೂಲ ಪರಿಚಯ ದೊರಕುತ್ತದೆ. ಲೇಖಕರು ಇಂಗ್ಲೆಂಡಿನ ಲಾರ್ಡ್ಸ್ ಮತ್ತು ಕಾಮನ್ಸ್ ಸಭೆಗಳಲ್ಲೂ ಮದ್ರಾಸಿನ ಶಾಸನಸಭೆಗಳಲ್ಲೂ ನಡೆದ ಹಲವಾರು ರಸಪ್ರಸಂಗಗಳನ್ನು ಸಂದರ್ಭೋಚಿತವಾಗಿ ಉದಾಹರಿಸಿದ್ದಾರೆ.

ಶಾಸನಸಭೆಯ ಸದಸ್ಯರಾಗುವವರ ಅರ್ಹತೆಯನ್ನೂ ಅವರ ಕರ್ತವ್ಯಗಳನ್ನೂ ಲೇಖಕರು ಪುಸ್ತಕ ಪ್ರಾರಂಭದಲ್ಲಿ ವಿವರಿಸಿದ್ದರೆ ಚೆನ್ನಾಗಿರುತ್ತಿತ್ತು. ಸಂಪುಟದ ಸಂಯುಕ್ತ ಹೊಣೆಗಾರಿಕೆಯ ಬಗ್ಗೆ ಪುಸ್ತಕದಲ್ಲಿ ಪ್ರಸ್ತಾಪವಿಲ್ಲ. ಸಂಪುಟ ರಚನೆಯ ಬಗ್ಗೆಯೂ ಸ್ವಲ್ಪ ಹೇಳಬಹುದಿತ್ತು. ರಾಜ್ಯಪಾಲರು ಹೊರಡಿಸುವ ಆರ್ಡಿನೆನ್ಸಿಗೆ ಅಧ್ಯಾದೇಶ ಎಂಬ ಪದವನ್ನು ಬಳಸುವ ಬಗ್ಗೆ ಅಭ್ಯಂತರವಿಲ್ಲವಾದರೂ ಸುಗ್ರೀವಾಜ್ಞೆ ಎಂಬ ಪದ ಕನ್ನಡದಲ್ಲಿ ಬಳಕೆಯಲ್ಲಿರುವುದನ್ನು ಗಮನಿಸಬಹುದು. ಹಾಗೇ 'ಜೀರೋ ಅವರ್'ಗೆ ಪ್ರತಿಯಾಗಿ ಕನ್ನಡದಲ್ಲಿ ಸೂಕ್ತವಾದ ಪದವೊಂದನ್ನು (ಶೂನ್ಯ ಘಳಿಗೆ?) ಬಳಸಬಹುದಿತ್ತು. ಕನ್ನಡದಲ್ಲಿ ಇಂಥ ಉಪಯುಕ್ತವಾದ ಕಿರುಹೊತ್ತಗೆಯನ್ನು ಪ್ರಕಟಿಸಿರುವ ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆ ಅಭಿನಂದನೆಗೆ ಅರ್ಹ. ಈ ಪುಸ್ತಕ ಬರೆದ ಟಿ. ಹನುಮಂತಪ್ಪನವರಿಗೆ ಕನ್ನಡಿಗರ ಕೃತಜ್ಞತೆ ಸಲ್ಲಬೇಕು.

—ಜಿ. ಎಸ್. ಭಟ್ಟ

wo 11715 – MUPM—copies 1025—9-8-73

ಈ ಸಂಚಿಕೆಯ ಲೇಖಕರು

1 ಡಾ. ಎ. ವಿ. ನರಸಿಂಹಮೂರ್ತಿ (ಎ.ವಿ.ಎನ್.), ಮಾನಸ ಗಂಗೋತ್ರಿಯ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ವಿಭಾಗದ ರೀಡರ್, ಮಾನವಿಕ ಕರ್ಣಾಟಕದ ಸಂಪಾದಕರಲ್ಲೊಬ್ಬರು

2 ಕೆ. ಎಸ್. ನಾರಾಯಣಸ್ವಾಮಿ, ಗಾಂಧಿ ಶಾಂತಿ ಪ್ರತಿಷ್ಠಾನ, ಗಾಂಧಿ ಭವನ, ಕುಮಾರ ಪಾರ್ಕ್, ಬೆಂಗಳೂರು

3 ಸೀತಾರಾಮ ಜಾಗೀರದಾರ್, ಶಾಸನ ಸಹಾಯಕರು, ಎಪಿಗ್ರಾಫಿಯ ಕರ್ನಾಟಿಕ, ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ

4 ಎಚ್. ಎಂ. ನಾಗರಾಜರಾವ್, ಶಾಸನ ಸಹಾಯಕರು, ಎಪಿಗ್ರಾಫಿಯ ಕರ್ನಾಟಿಕ, ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ

5 ಡಾ. ಬಿ. ಎಸ್. ಶ್ರೀಕಂಠಾರಾಧ್ಯ, ಮಾನಸಗಂಗೋತ್ರಿಯ ಅರ್ಥಶಾಸ್ತ್ರ ವಿಭಾಗದಲ್ಲಿ ರೀಡರ್

6 ಎ. ಆರ್. ರಂಗನಾಥರಾವ್, ಬೆಂಗಳೂರಿನ ಭಾರತ ಟೆಲಿಫೋನ್ ಕಾರ್ಖಾನೆಯಲ್ಲಿ ಕ್ಷೇಮಪಾಲರು

7 ಡಾ. ಬಿ. ಜಿ. ಎಲ್. ಸ್ವಾಮಿ, ಮದರಾಸಿನ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಸಸ್ಯಶಾಸ್ತ್ರ ಪ್ರಾಧ್ಯಾಪಕರು

8 ಪಿ. ಕೆ. ಪಾಟೀಲ್, ಮಾನಸಗಂಗೋತ್ರಿಯ ವಿಶ್ವವಿದ್ಯಾನಿಲಯ ಗ್ರಂಥಾಲಯದಲ್ಲಿ ಗ್ರಂಥಪಾಲರು

9 ವಿಲ್ಯಂ ಮಾಡ್ತಾ, ಭಾಷಾ ವಿಜ್ಞಾನ ಅಧ್ಯಾಪಕರು, ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

10 ದಾಮೋದರ ಕೃಷ್ಣ ಪೊದುವಾಳ್, ಮಂಗಳೂರಿನ ಮಂಗಳ ಗಂಗೋತ್ರಿಯಲ್ಲಿ ವಾಣಿಜ್ಯಶಾಸ್ತ್ರ ಅಧ್ಯಾಪಕರು

11 ಎನ್. ಕೆ. ಸಿಂಘಿ, ರಾಜಸ್ಥಾನ ವಿಶ್ವವಿದ್ಯಾಲಯದಲ್ಲಿ ಸಮಾಜಶಾಸ್ತ್ರ ಅಧ್ಯಾಪಕರು

12 ಬಿ. ಎಂ. ರುದ್ರಪ್ಪ, ಸಮಾಜಶಾಸ್ತ್ರ ಅಧ್ಯಾಪಕರು, ಬಿ. ಎಂ. ಎಸ್. ಪ್ರಥಮ ದರ್ಜೆ ಕಾಲೇಜು, ಕೋಣನೂರು

13 ರಘುಸುತ, ಕೆ. ಆರ್. ರಂಗಾಚಾರ್, ಮಿರ್ಲೆಯ ಜ್ಯೂನಿಯರ್ ಕಾಲೇಜಿನಲ್ಲಿ ಭೂಗೋಳಶಾಸ್ತ್ರ ಅಧ್ಯಾಪಕರು

14 ಡಾ. ಸೀತಾರಾಂ, ಮಾನಸಗಂಗೋತ್ರಿಯ ಶಿಕ್ಷಣ ವಿಭಾಗದಲ್ಲಿ ಅಧ್ಯಾಪಕರು

15 ಡಾ. ಎಂ. ಮಾದಯ್ಯ, ಮಾನಸಗಂಗೋತ್ರಿಯ ಅರ್ಥಶಾಸ್ತ್ರ ವಿಭಾಗದಲ್ಲಿ ರೀಡರ್

16 ಜಿ. ಎಸ್. ಭಟ್ಟ, ಮಾನಸಗಂಗೋತ್ರಿಯ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಕನ್ನಡ ವಿಶ್ವಕೋಶದ ಉಪಸಂಪಾದಕರು

17 ಡಾ. ಎನ್. ಎಸ್. ವೀರಪ್ಪ, ಮೈಸೂರಿನ ಶಿಕ್ಷಣ ಕಾಲೇಜಿನ ನಿವೃತ್ತ ಪ್ರಾಧ್ಯಾಪಕರು, ಕನ್ನಡ ವಿಶ್ವಕೋಶದ ಜೀವಶಾಸ್ತ್ರ ವಿಭಾಗದ ಗೌರವ ಸಂಪಾದಕರು

18 ಡಾ. ಎಚ್. ಎಸ್. ಈಶ್ವರ್, ಮಾನಸಗಂಗೋತ್ರಿಯ ಮನಶ್ಶಾಸ್ತ್ರ ವಿಭಾಗದಲ್ಲಿ ರೀಡರ್

19 ಡಾ. ಎಂ. ಎಸ್. ತಿಮ್ಮಪ್ಪ, ಮಾನಸಗಂಗೋತ್ರಿಯ ಮನಶ್ಶಾಸ್ತ್ರ ವಿಭಾಗದಲ್ಲಿ ಅಧ್ಯಾಪಕರು

20 ಎ. ಎಸ್. ಧರಣೇಂದ್ರಯ್ಯ, ಅಧ್ಯಾಪಕರು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

21 ಎನ್. ಪ್ರಹ್ಲಾದರಾವ್, ಮಾನಸಗಂಗೋತ್ರಿಯ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಕನ್ನಡ ವಿಶ್ವಕೋಶದ ಸಂಯೋಜಕ ಸಂಪಾದಕರು

22 ಡಾ. ಬಾ. ರಾ. ಗೋಪಾಲ್, ಮಾನಸಗಂಗೋತ್ರಿಯ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಎಪಿಗ್ರಾಫಿಯ ಕರ್ನಾಟಿಕದ ಶಾಸನತಜ್ಞರು

23 ವಿ. ಜಿ. ಕೃಷ್ಣಮೂರ್ತಿ, ಭಾಷಾಂತರ ವಿಭಾಗ, ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ

ಮಾನವಿಕ ಕರ್ಣಾಟಕ

ವಾರ್ಷಿಕ ಚಂದಾ

(ಅಂಚೆವೆಚ್ಚ ಸೇರಿ)

ವಿದ್ಯಾರ್ಥಿಗಳಿಗೆ	೪ ರೂ.
ಸಾಮಾನ್ಯ ಚಂದಾದಾರರಿಗೆ	೬ ರೂ.
ಸಂಸ್ಥೆಗಳಿಗೆ	೮ ರೂ.
ಆಜೀವ ಸದಸ್ಯತ್ವ	೧೦೦ ರೂ.

ಡೈರೆಕ್ಟರ್
'ಪ್ರಸಾರಾಂಗ'
ಮಾನಸಗಂಗೋತ್ರಿ
ಮೈಸೂರು–೫೭೦೦೧೨